ಎಲ್.ಟಿ. 6 ನೀ.ಸ./ಬಿ.ದೀ.	45,783.17	5.79	26,842.20	3.53
ಎಲ್.ಟಿ. 7 ತಾತ್ಕಾಲಿಕ	7,894.80	1.00	7,246.93	0.95
ಎಚ್.ಟಿ.	1,25,716.18	15.90	1,28,985.44	16.97
ಇತರೆ	15,601.73	1.97	10,136.34	1.33
ಒಟ್ಟು	**7,90,459.59**	**100.00**	**7,60,276.30**	**100.00**



ಪ್ರವರ್ಗ	ಗ್ರಾಹಕರಿಂದ ಬರಬೇಕಾಗಿರುವ ಬಾಕಿ (ಅಂತಿಮಶಿಲ್ಕು ಡಿ.ಸಿ.ಬಿ. ಪ್ರಕಾರ)			
	2020-21		2019-20	
	ಲಕ್ಷ ರೂ.ಗಳಲ್ಲಿ	%	ಲಕ್ಷ ರೂ.ಗಳಲ್ಲಿ	%
ಎಲ್.ಟಿ. 1 ಬಿ.ಜೆ/ಕೆ.ಜೆ	3,307.32	1.56	2,830.10	1.32
ಎಲ್.ಟಿ. 2 ಗೃಹಬಳಕೆ	8,929.13	4.21	8,215.88	3.83
ಎಲ್.ಟಿ. 3 ವಾಣಿಜ್ಯ	1,317.18	0.62	2,144.16	1.00
ಎಲ್.ಟಿ. 4 ನೀರಾವರಿ ಪಂಪ್ ಸೆಟ್‌ಗಳು	1,46,779.26	69.18	1,46,211.85	68.12
ಎಲ್.ಟಿ. 5 ಕೈಗಾರಿಕೆ	1,486.86	0.70	1,711.60	0.80
ಎಲ್.ಟಿ. 6 ನೀ.ಸ./ಬಿ.ದೀ.	29,692.05	14.00	36,321.21	16.92
ಎಲ್.ಟಿ. 7 ತಾತ್ಕಾಲಿಕ	(1,533.66)	(0.72)	(1,703.54)	(0.79)
ಎಚ್.ಟಿ.	22,230.64	10.48	18,962.57	8.83
ಇತರೆ	(52.87)	(0.02)	(52.53)	(0.02)
ಒಟ್ಟು	**2,12,155.90**	**100.00**	**2,14,641.30**	**100.00**



8. ಹುವಿಸಕಂಪನಿಯಲ್ಲಿ ವಿದ್ಯುತ್ ಖರೀದಿ:

ಹು.ವಿ.ಸ.ಕಂ.ನಿ.ಯು ಎಲ್ಲಾ ಮೂಲಗಳಿಂದ ಎಪ್ರೀಲ್ 2020 ರಿಂದ ಮಾರ್ಚ 2021 ರವರೆಗೆ ಖರೀದಿಸಿದ ವಿದ್ಯುಚ್ಛಕ್ತಿಯ ವಿವರಣೆ

ಅ ನಂ	ವಿದ್ಯುಚ್ಛಕ್ತಿಯ ಮೂಲ	ವಿದ್ಯುತ್ (ಮಿ.ಯುಗಳಲ್ಲಿ)	ವಿದ್ಯುತ್ ಖರೀದಿ ವೆಚ್ಚ (ರೂ. ಕೋಟಿಗಳಲ್ಲಿ)	ಖರೀದಿ ವೆಚ್ಚ (ಪ್ರತಿ ಯುನಿಟಿಗೆ)
1	ಕೇಂದ್ರ ವಿದ್ಯುತ್ ಉತ್ಪಾದನಾ ಘಟಕಗಳು	3490.39	1800.57	5.16
2	ಕರ್ನಾಟಕ ವಿದ್ಯುತ್ ನಿಗಮ ನಿಯಮಿತ –ಜಲ ವಿದ್ಯುತ್	2836.79	309.75	1.09
3	ಕರ್ನಾಟಕ ವಿದ್ಯುತ್ ನಿಗಮ ನಿಯಮಿತ –ಸೌರ ವಿದ್ಯುತ್	1.79	1.04	5.80
4	ಕರ್ನಾಟಕ ವಿದ್ಯುತ್ ನಿಗಮ ನಿಯಮಿತ- ಉಷ್ಣ ವಿದ್ಯುತ್	1266.18	880.17	6.95
5	ಆರ್.ಪಿ.ಸಿ.ಎಲ್	536.58	393.50	7.33
6	ಪ್ರಮುಖ ಸ್ವತಂತ್ರ ವಿದ್ಯುತ್ ಉತ್ಪಾದಕರು (ಯು.ಪಿ.ಸಿ.ಎಲ್.)	258.77	222.70	8.61
7	ಕಿರು ಜಲ ವಿದ್ಯುತ್	80.26	27.33	3.41
8	ಪವನ ವಿದ್ಯುತ್	2150.12	879.58	4.09
9	ಸಹ ವಿದ್ಯುತ್	890.74	383.47	4.31
10	ಸೌರ ವಿದ್ಯುತ್	1831.82	829.60	4.53
	ಒಟ್ಟು	**13343.45**	**5727.72**	**4.29**
	ಇತರೆ			
11	ಕ.ವಿ.ಪ್ರ.ನಿ.ನಿ. ಪ್ರಸರಣ ವೆಚ್ಚ		749.28	-
12	ಪಿಜಿಸಿಆಯ್ಎಲ್ ಪ್ರಸರಣ ವೆಚ್ಚ		485.97	-
13	ಎಸ್.ಎಲ್.ಡಿ.ಸಿ. ವೆಚ್ಚ		3.95	-
14	ಪೊಸೋಕೊ ವೆಚ್ಚ		0.63	-
15	ಓಪನ್ ಆಕ್ಸಿಸ್ ವೆಚ್ಚ		4.85	-
16	ಟಾನಟ್ರಾಸ್ಕೋ ವೆಚ್ಚ		0.24	-
17	ಎಲ್. ಸಿ ವೆಚ್ಚಗಳು		2.51	-
18	ಪಿ ಸಿ ಕೆ ಎಲ್ (ಓ& ಎಮ್)		0.95	-
	ಒಟ್ಟು	**13343.45**	**6976.1**	**5.23**
19	ಅಂತರ ಕಂಪನಿಗಳ ವಿದ್ಯುತ್ ವಿನಿಮಯ	344.87	195.05	5.66
20	ವಿನಿಮಯ ಕೇಂದ್ರದಿಂದ ವಿದ್ಯುತ್ ಮಾರಾಟ	(-336.18)	(-111.23)	3.31
	ಒಟ್ಟು ಮೊತ್ತ	**13352.14**	**7059.92**	**5.29**
ಕಳೆಯುವುದು	ಹುಕ್ಕೇರಿ ಸೊಸೈಟಿಗೆ ನೀಡಿದ ವಿದ್ಯುತ್	326.3	188.01	**5.76**
ಕಳೆಯುವುದು	ವಿದ್ಯುತ್ ಉತ್ಪಾದಕರಿಂದ ಪಡೆದ ರಿಯಾಯಿತಿ		36.41	-
	ನಿವ್ವಳ ಒಟ್ಟು ಮೊತ್ತ	**13025.84**	**6835.50**	**5.25**

ಘನ ಕರ್ನಾಟಕ ಸರಕಾರ08.05.2020 ರ ಆದೇಶದಲ್ಲಿ ವಿವಿಧ ಮೂಲಗಳಿಂದ ಆರ್ಥಿಕ ವರ್ಷ 2021 ರಲ್ಲಿ ವಿದ್ಯುತ್ ಹಂಚಿಕೆಯನ್ನು ಈ ಕೆಳಕಂಡಂತೆ ಮಾಡಿರುತ್ತದೆ.

ಆರ್ಥಿಕ ವರ್ಷ 2021 ರಲ್ಲಿ ವಿದ್ಯುಚ್ಛಕ್ತಿಯ ಹಂಚಿಕೆ ಈ ಕೆಳಗಿನಂತಿದೆ:

ಕ್ರ ಸಂ.	ಮೂಲಗಳು	ಆರ್ಥಿಕ ವರ್ಷ 2020	ಆರ್ಥಿಕ ವರ್ಷ 2021
1	ಕರ್ನಾಟಕ ವಿದ್ಯುತ್ ನಿಗಮ ನಿಯಮಿತ –ಜಲ ವಿದ್ಯುತ್	32.04%	28.77%
2	ಕರ್ನಾಟಕ ವಿದ್ಯುತ್ ನಿಗಮ ನಿಯಮಿತ– ಉಷ್ಣ ವಿದ್ಯುತ್	12.00%	18.18%
3	ಸಿಜಿಎಸ್	17.79%	17.90%
4	ಪ್ರಮುಖ ಸ್ವತಂತ್ರ ವಿದ್ಯುತ್ ಉತ್ಪಾದಕರು (ಯುಪಿಸಿಎಲ್)	5.00%	12.00%

ವಿದ್ಯುತ್ ರವಾನೆ ಮಾಡಿದ್ದಕ್ಕಾಗಿ ಕಂಪನಿಯು ತಯಾರಿಸುವ ಬಿಲ್ಲುಗಳಲ್ಲಿ ಕಂಪನಿಯು ಪಡೆದಿರುವ ವಿದ್ಯುಚ್ಛಕ್ತಿಯಲ್ಲಿ ಅಂತರ ಸಂಪರ್ಕ ಬಿಂದುವಿನಲ್ಲಿ ದಾಖಲಾಗಿರುವ 33 ಕೆ.ವ್ಹಿ. ಮತ್ತು ಮೇಲಿನ ವೋಲ್ಟೆಜ್ ವರ್ಗಕ್ಕೆ ಸಂಬಂಧಿಸಿದ ಇ.ಎಚ್.ಟಿ. ವಿದ್ಯುತ್ ಸರಬರಾಜುವಿನ ಪ್ರಮಾಣವು ಒಳಗೊಂಡಿರುತ್ತದೆ.

ದಿನಾಂಕ 10.06.2005 ರಿಂದ ಕರ್ನಾಟಕ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಆದೇಶಗಳನುಸಾರ ವಿದ್ಯುತ್ ಉತ್ಪಾದನಾ ಕ್ರೋಢೀಕೃತ ಲೆಕ್ಕದಿಂದ ನೇರವಾಗಿ ಸರ್ಕಾರವು ಹಂಚಿಕೆ ಮಾಡಿರುವಂತೆ ಕಂಪನಿಯು ವಿದ್ಯುತ್ ಖರೀದಿ ವೆಚ್ಚವನ್ನು ಲೆಕ್ಕಪತ್ರದಲ್ಲಿ ಅಳವಡಿಸಿಕೊಳ್ಳುತ್ತದೆ, ಈ ವಿದ್ಯುತ್ ಖರೀದಿ ಹಂಚಿಕೆಯ ದರಗಳನ್ನು ವಾಣಿಜ್ಯ ದರಗಳು/ ಮುಂಚೆಯೇ ನಿರ್ಣಯಿಸಿರುವ ದರಗಳನ್ನು ಆಧರಿಸಿ ಪಿಪಿಎ/ಕೆಇಆರ್ಸಿ/ಕರ್ನಾಟಕ ಸರ್ಕಾರಗಳು ಮಾಡಿರುವಂತೆ ಇರುತ್ತದೆ.

ವಿದ್ಯುತ್ ಉತ್ಪಾದಕರಿಂದ ಖರೀದಿಸಿದ ವಿದ್ಯುತ್ ನ್ನು ಉತ್ಪಾದನಾ ಕೇಂದ್ರದಿಂದ ಇಂಟರ್ ಫೇಸ್ ಕೇಂದ್ರದ ವರೆಗೆ ರವಾನಿಸುವಾಗ ಉಂಟಾಗುವ ಪ್ರಸರಣಾ ನಷ್ಟವನ್ನು ಪರಿಗಣಿಸಲಾಗಿರುತ್ತದೆ. ಅಂತರ ವಿದ್ಯುತ್ ಕಂಪನಿಗಳ ನಡುವೆ ಆಗುವ ಎನರ್ಜಿ ಬ್ಯಾಲೆನಸಿಂಗ್ (ಓವರ್ ಡ್ರಾವಲ್ /ಅಂತರ ಡ್ರಾವಲ್) ವಿದ್ಯುತ್ ಪ್ರಮಾಣವನ್ನು ಕೆ.ಪಿ.ಟಿ.ಸಿ.ಎಲ್ ಎಸ್.ಎಲ್.ಡಿ.ಸಿ ಬೆಂಗಳೂರುರವರು ಸೂಚಿಸಿರುವಂತೆ ಪರಿಗಣಿಸಲಾಗಿರುತ್ತದೆ.

ಅಂತರ ವಿದ್ಯುತ್ ಕಂಪನಿಗಳ ಮಧ್ಯ ಜರುಗಿರುವ ವಿದ್ಯುತ್ತಿನ ಆಮದು ಮತ್ತು ರಫ್ತುಗಳನ್ನು ನಿವ್ವಳ ವಿದ್ಯುತ್ ಮಾರಾಟ ಅಥವಾ ಖರೀದಿ ಎಂದು ಲೆಕ್ಕೀಕರಿಸಿದೆ.

9. 31.03.2021 ಕ್ಕೆ ವಿದ್ಯುತ್ ಉಪ–ಕೇಂದ್ರಗಳು :

ಹುವಿಸಕಂನಿಯು ಈ ಕೆಳಗಿನ ಪ್ರಸರಣ ಜಾಲಗಳು ಹಾಗೂ ವಿದ್ಯುತ್ ಉಪ ಕೇಂದ್ರಗಳ ಮೂಲಕ ವಿದ್ಯುಚ್ಛಕ್ತಿ ಪಡೆಯಲಾಗುತ್ತಿದೆ.

ಕ್ರಮ ಸಂಖ್ಯೆ	31.03.2021 ಕ್ಕೆ ವಿದ್ಯುತ್ ಉಪ–ಕೇಂದ್ರಗಳು (ಹುಕ್ಕೇರಿ ಸೊಸೈಟಿ ಸೇರಿಸಿ)	ಸಂಖ್ಯೆ
1	400 ಕೆ.ವ್ಹಿ	02
2	220 ಕೆ.ವ್ಹಿ	22
3	110 ಕೆ.ವ್ಹಿ	209
4	66 ಕೆ.ವ್ಹಿ	01
5	33 ಕೆ.ವ್ಹಿ	180

*400 ಕೆವ್ಹಿಯ ಒಂದು ಉಪಕೇಂದ್ರವನ್ನು ಪಿಜಿಸಿಆಯ್ಎಲ್ ನಿರ್ವಹಿಸುತ್ತಿದೆ.

10. ವಿದ್ಯುಚ್ಛಕ್ತಿಯ ಒಳ ಹರಿವು/ಹೊರ ಹರಿವು (ಮಾರಾಟ):

ಮಾಪಿಸಿದ ಮತ್ತು ಮಾಪಿಸದ ವಿದ್ಯುತ ಬಳಕೆಯ ವಿವರ :

ಕ್ರಮ ಸಂಖ್ಯೆ	ವಿವರಗಳು	ವಿದ್ಯುತ್ ಪ್ರಮಾಣ ದಶಲಕ್ಷ ಯುನಿಟ್‌ಗಳಲ್ಲಿ 2020-21
1	ಒಟ್ಟಾರೆ ಮಾಪಿಸಿದ ಮಾರಾಟ (ಮೀಟರ್ಡ್)	5072.75
2	ಒಟ್ಟಾರೆ ಮಾಪಿಸದ ಮಾರಾಟ (ಅನ್ ಮೀಟರ್ಡ್)	5901.60

ಪ್ರಸ್ತುತ ವರ್ಷದಲ್ಲಿ ಕಂಪನಿಯ ಒಳಹರಿವು 12650.23 ದಶಲಕ್ಷ ಯೂನಿಟ್‌ಗಳು ಆಗಿದ್ದು ಹೊರಹರಿವು 10974.35 ದಶಲಕ್ಷ ಯೂನಿಟ್‌ಗಳಾಗಿರುತ್ತದೆ.

11. ವಿತರಣಾ ನಷ್ಟ :

ಪ್ರಸ್ತುತ ವರ್ಷದಲ್ಲಿ ಕಂಪನಿಯ ವಿತರಣಾ ನಷ್ಟವು ಕಳೆದ ವರ್ಷದ ನಷ್ಟ ಶೇ. 14.10 ರ ಪ್ರತಿಯಾಗಿ ಶೇ. 13.25 ರಷ್ಟು ಆಗಿರುತ್ತದೆ. ವಿವರಗಳು ಈ ಕೆಳಗಿನಂತಿವೆ:

ಕ್ರ.ಸಂ.	ವಿವರಗಳು	ವಿದ್ಯುತ್ ಪ್ರಮಾಣ ದಶಲಕ್ಷಯುನಿಟ್‌ಗಳಲ್ಲಿ	
		2019–20	**2020–21**
	ವಿದ್ಯುತ್ ಮಾರಾಟ :		
ಎ)	ಮಾರಾಟಕ್ಕಾಗಿ ಲಭ್ಯವಾದ ಒಟ್ಟು ವಿದ್ಯುಚ್ಛಕ್ತಿ	12832.13	12650.23
ಬಿ)	ಒಟ್ಟಾರೆ ಮಾಪಿಸಿದ ಮಾರಾಟ (ಮೀಟರ್ಡ್)	5093.04	5072.75
ಸಿ)	ಒಟ್ಟಾರೆ ಮಾಪಿಸದ ಮಾರಾಟ (ಅನ್ ಮೀಟರ್ಡ್)	5930.28	5901.60
ಡಿ)	ಒಟ್ಟು ಮಾರಾಟ	11023.33	10974.35
ಇ)	ವಿತರಣ ನಷ್ಟ	1808.8	1675.88
ಎಫ್)	ಶೇಕಡಾವಾರು ವಿತರಣಾ ನಷ್ಟ	**14.10%**	**13.25%**

ವಿತರಣಾ ನಷ್ಟ / ಸರಾಸರಿ ತಾಂತ್ರಿಕ ಮತ್ತು ವಾಣಿಜ್ಯ ನಷ್ಟಗಳ ಇಳಿಕೆ:

ವಿತರಣಾ ನಷ್ಟವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಹು.ವಿ.ಸ.ಕಂ.ನಿ.ಯು ಸಾಕಷ್ಟು ವಿಸ್ತರಣೆ ಹಾಗೂ ಸುಧಾರಣೆ ಕಾಮಗಾರಿಯನ್ನು ಕೈಗೆತ್ತಿಕೊಂಡಿದೆ. ಹು.ವಿ.ಸ.ಕಂ.ನಿ.ಯ ವ್ಯಾಪ್ತಿ ಪ್ರದೇಶದಲ್ಲಿ ನಷ್ಟವನ್ನು ಕಡಿಮೆಗೊಳಿಸಲು ಈ ಕೆಳಗಿನ ಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

- ಕ.ವಿ.ಪ್ರ.ನಿ.ನಿ. ಇಂದ ಹು.ವಿ.ಸ.ಕಂ.ನಿ. ಮಧ್ಯ ಇರುವ ಎಲ್ಲಾ 609 ಅಂತರ್ಮುಖ ಅಂಕಗಳಿಗೆ ಮಾಪಕ ಅಳವಡಿಸಲಾಗಿದೆ ಹಾಗೂ ಈ ಅಂಕಗಳಿಂದ ಪಡೆಯಲಾಗುತ್ತಿದ್ದ ವಿದ್ಯುಚ್ಛಕ್ತಿಯನ್ನು ಅಳೆಯಲಾಗುತ್ತಿದ್ದು ದಾಖಲಿಸಿಡಲಾಗುತ್ತಿದೆ.
- ಆರ್ಥಿಕ ವರ್ಷ 2021 ರಲ್ಲಿ ಒಟ್ಟು 59972 ಎಮ್.ಎನ್.ಆರ್. ಮಾಪಕಗಳನ್ನು ಬದಲಾಯಿಸಲಾಗಿದೆ. ಡಿ.ಸಿ ಅಥವಾ ಎಮ್.ಎನ್.ಆರ್. ಸ್ಥಾವರಗಳನ್ನು ಶೇ. 1 ರ ಒಳಗೆ ಇರುವಂತೆ ಖಾತರಿಪಡಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.
- ಜಾಗೃತದಳ ತಂಡದವರಿಂದ ನಿಯಮಿತವಾಗಿ ವಿದ್ಯುತ್ ಕಳ್ಳತನ ಮತ್ತು ಸಂಭವನೀಯ ವಿದ್ಯುತ್ ಕಳ್ಳತನವನ್ನು ತಡೆಗಟ್ಟಲು ದಾಳಿಗಳನ್ನು ನಡೆಸಲಾಗುತ್ತಿದೆ. ಪ್ರಸ್ತುತ ಆರ್ಥಿಕ ವರ್ಷ 2021ರಲ್ಲಿ 1504 ಸಂಖ್ಯೆ ಸಂಜ್ಞ ಮತ್ತು 4436 ಸಂಖ್ಯೆಯ ಅಸಂಜ್ಞ ಪ್ರಕರಣಗಳನ್ನು ಪರಿಶೀಲನೆಯಲ್ಲಿ ಗುರುತಿಸಲಾಗಿದೆ.

- ವಿದ್ಯುತ್‌ಮಾಪಕಗಳನ್ನು ಎಮ್‌ಟಿ ಸಿಬ್ಬಂದಿಗಳಿಂದ ನಿರಂತರವಾಗಿ ಹೆಚ್.ಟಿ. ಮತ್ತು ಎಲ್.ಟಿ. ಸ್ಥಾವರಗಳ ರೇಟಿಂಗ್ ಕಾರ್ಯಗತಿಯಲ್ಲಿರುತ್ತದೆ.
- ವಿತರಣಾ ಪರಿವರ್ತಕ ಘಟಕಗಳ ಮೇಲಿನ ವಿದ್ಯುತ್ ಹೊರೆಯ ಸಮತೋಲನೆ.
- ಬಾಗಿಲು ಮುಚ್ಚಿದ ಹಾಗೂ ಮಾಪಕ ಓದದ ಸ್ಥಾವರಗಳ ಸಂಖ್ಯೆ ಕಡಿಮೆ ಮಾಡುವುದು ಅಂದರೆ ಮುಂದಿನ ದಿನಗಳಲ್ಲಿ ಮಾಪಕಗಳನ್ನು ಓದುವುದು.
- ವಿದ್ಯುತ್ ಬಳಕೆಯನ್ನು ನಿಯಂತ್ರಿಸಲು ಬೀದಿ ದೀಪಗಳ ಹಾಗೂ ನೀರು ಸರಬರಾಜು (ಎಲ್.ಟಿ.6) ಸ್ಥಾವರಗಳಿಗೆ ಸರಿಯಾದ ಮಾಪಕಗಳನ್ನು ಅಳವಡಿಸುವುದು.
- ಮಾಪಕ ಬಳಕೆಯನ್ನು ಹೆಚ್ಚಿಸಲು ಹಾಗೂ ಶತಪ್ರತಿಶತ ಬಿಲ್ಲುಗಳನ್ನು ನೀಡಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮುಂದುವರೆಸುವುದು.

ವಿದ್ಯುತ್ ಪರಿಶೋಧನೆ:

- ವಿತರಣಾ ನಷ್ಟವನ್ನು ಕಂಡು ಹಿಡಿಯಲು ಕಂಪನಿಯು ಪ್ರತಿ ತಿಂಗಳು ಎಲ್ಲಾ 26 ವಿಭಾಗಗಳ ವಿಭಾಗವಾರು ವಿದ್ಯುತ್ ಪರಿಶೋಧನೆ ಕಾರ್ಯವನ್ನು ಕೈಗೆತ್ತಿಕೊಂಡಿದೆ.
- ಪ್ರತಿ ತಿಂಗಳು 73 ಪ್ರಮುಖ ನಗರಗಳಲ್ಲಿ ವಿದ್ಯುತ್ ಪರಿಶೋಧನಾ ಕಾರ್ಯವನ್ನು ಮಾಡುತ್ತಿದ್ದು, 11 ಕೆ.ವ್ಹಿ ಫೀಡರ್‌ಗಳ ಮೇಲೆಯು ವಿದ್ಯುತ್ ಪರಿಶೋಧನೆಯ ಕುರಿತು ನಿಗಾವಹಿಸಲಾಗುತ್ತಿದೆ.
- 31.03.2021 ರ ಅಂತ್ಯಕ್ಕೆ ಒಟ್ಟು 3530 ಫೀಡರುಗಳಿದ್ದು, ಅದರಲ್ಲಿ 397 ಸಂಖ್ಯೆ ನಗರ ಫೀಡರುಗಳು, 136 ಸಂಖ್ಯೆ ಕೈಗಾರಿಕಾ ಫೀಡರುಗಳು, 672 ಎನ್ ಜೆ ವಾಯ್ ಫೀಡರುಗಳು, 2061 ಸಂಖ್ಯೆ ಇ ಆಯ್ ಪಿ ಫೀಡರುಗಳು ಮತ್ತು 264 ಸಂಖ್ಯೆ ಇತರೆ ಫೀಡರುಗಳ ವಿದ್ಯುತ್ ಪರಿಶೋಧನೆಯನ್ನು ನಡೆಸಲಾಗುತ್ತಿದೆ. ಹಾಗೂ 15% ಕ್ಕಿಂತ ಹೆಚ್ಚಿನ ವಿದ್ಯುತ್ ನಷ್ಟವಿರುವ ಫೀಡರುಗಳನ್ನು ಗುರುತಿಸಿ ವಿದ್ಯುತ್ ನಷ್ಟ ಸುಧಾರಣಾ ಕಾರ್ಯಾಚರಣೆಯನ್ನು ಕೈಗೊಳ್ಳಲಾಗುತ್ತಿದೆ.

12. ಬಂಡವಾಳ ವೆಚ್ಚಗಳು :

ಕಂಪನಿಯು ಕಳೆದ ವರ್ಷದ ಬಂಡವಾಳ ವೆಚ್ಚವಾದ ರೂ. 1,317.94 ಕೋಟಿಗಳಿಗೆ ಪ್ರತಿಯಾಗಿ ಈ ವರ್ಷದಲ್ಲಿ ರೂ. 1,165.59 ಕೋಟಿಗಳಷ್ಟು ವೆಚ್ಚ ಮಾಡಿರುತ್ತದೆ. ಪ್ರಮುಖ ವೆಚ್ಚಗಳ ವಿವರ ಈ ಕೆಳಕಂಡಂತಿರುತ್ತದೆ.

ರೂ. ಕೋಟಿಗಳಲ್ಲಿ

ಕ್ರಮ ಸಂಖ್ಯೆ	ಯೋಜನೆ	2020-21	2019-20
1	ಸೇವಾ ಸಂಪರ್ಕ	5.08	6.31
2	ಗಂಗಾ ಕಲ್ಯಾಣ	46.03	87.21
3	ವಿಸ್ತರಣೆ ಮತ್ತು ಸುಧಾರಣೆ	32.39	61.43
4	ವೈಫಲ್ಯಗೊಂಡ ವಿತರಣಾ ಪರಿವರ್ತಕಗಳ ಬದಲಾವಣೆ	179.98	174.54
5	ವಾಹಕಗಳ ಬದಲಾವಣೆ	54.47	24.06
6	ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳ ಮೂಲ ಸೌಕರ್ಯವನ್ನು ಒದಗಿಸುವುದು	115.05	42.84
7	ಐ.ಪಿ ಪಂಪಸೆಟ್ ಗಳಿಗೆ ವಿದ್ಯುತ್ ಸಂಪರ್ಕ ನೀಡುವುದು	42.05	67.27
8	ಮಾಪಕ ಅಳವಡಿಕೆ	87.34	31.14
9	ಗ್ರಾಮೀಣ ವಿದ್ಯುಧೀಕರಣ ಕಾಮಗಾರಿಗಳು (ನಿರಂತರ ಜ್ಯೋತಿ	53.52	27.18

ಕ್ರಮ ಸಂಖ್ಯೆ	ಯೋಜನೆ	2020-21	2019-20
	ಯೋಜನೆ, ಆರ್.ಎಲ್.ಎಮ್.ಎಸ್., ಹ್ಯಾಮಲೆಟ್ಸ್ ಮುಂತಾದವುಗಳು)		
10	ಐ.ಪಿ.ಡಿ.ಎಸ್/ಡಿಡಿಯುಜೆವಾಯ್/ಸೌಭಾಗ್ಯ	180.39	316.45
11	ಬರ ಪರಿಹಾರ ಕಾರ್ಯ	55.54	84.63
12	ಒಂದು ಬಾರಿ ನಿರ್ವಹಣೆ ಕಾರ್ಯ	33.18	48.02
10	ಆರ್.ಎ.ಪಿ.ಡಿ.ಆರ್.ಪಿ.	1.54	1.38
11	ಎ.ಎಲ್.ಡಿ.ಸಿ/ ಸ್ಸಾಡಾ	0.00	0.00
12	ವಿದ್ಯುತ್ ಉಪಕೇಂದ್ರಗಳು	30.29	32.00
13	ಸಿವಿಲ್ ಕಾಮಗಾರಿಗಳು	25.70	22.85
14	ನೆರೆ ಪ್ರಭಾವಿತ ಕಾಮಗಾರಿಗಳು	1.10	14.91
15	ಭೂಗತ ಕೇಬಲ್	124.82	197.64
16	ಇತರೆ	97.11	78.08
	ಒಟ್ಟು	**1,165.59**	**1,317.94**

13. ಎಚ್. ಟಿ./ಎಲ್.ಟಿ ಮಾರ್ಗಗಳು :

ಪ್ರಸಕ್ತ ಸಾಲಿನಲ್ಲಿ ಕಂಪನಿಯು 3017.50 ಕಿ.ಮಿ. ಹೊಸ ಎಚ್. ಟಿ ಮಾರ್ಗಗಳನ್ನು ಹಾಗೂ 2717.15 ಕಿ.ಮಿ. ಎಲ್. ಟಿ. ಮಾರ್ಗಗಳನ್ನು ನಿರ್ಮಿಸಿದೆ. ದಿನಾಂಕ 31.03.2021 ರ ಅಂತ್ಯಕ್ಕೆ ಒಟ್ಟು ಎಚ್. ಟಿ. ಹಾಗೂ ಎಲ್. ಟಿ. ಮಾರ್ಗಗಳು ಅನುಕ್ರಮವಾಗಿ 90363.63 ಕಿ.ಮಿ. ಹಾಗೂ 139279.67 ಕಿ.ಮಿ. ಗಳಾಗಿರುತ್ತವೆ.

14. 2020–21 ನೇ ಸಾಲಿನಲ್ಲಿ ಉಪಕೇಂದ್ರಗಳ ಪ್ರಗತಿ:

ಕ್ರ.ಸಂ.	ವಿವರಗಳು	ಸಂಖ್ಯೆ
1	2020–21 ರ ಅವಧಿಯಲ್ಲಿ ವಿಸ್ತರಿಸಿದ, ಕಾರ್ಯಾದೇಶಗೊಂಡ ಹಾಗೂ ಕಾಮಗಾರಿ ಪ್ರಗತಿಯಲ್ಲಿರುವ ಸ್ಟೇಷನ್‌ಗಳ ಸಂಖ್ಯೆ (ಸಾಮರ್ಥ್ಯ ವಿಸ್ತರಣ ಸ್ಟೇಷನ್‌ಗಳ ಸಂಖ್ಯೆ ಒಳಪಟ್ಟು)	**03**
2	ಹಂಚಿಕೆಯ ವೆಚ್ಚ (ರೂ. ಕೋಟಿಗಳಲ್ಲಿ)	**13.92**
3	ಕಾರ್ಯಾರಂಭಗೊಳಿಸಿದ ಉಪಕೇಂದ್ರಗಳ ಸಂಖ್ಯೆ	**01**
4	2020–21 ರಲ್ಲಿ ಸ್ಥಾಪಿಸಿದ ಉಪಕೇಂದ್ರಗಳ ಹಾಗೂ ಬಲಪಡಿಸುವಿಕೆ ಒಳಗೊಂಡಂತೆ ಸಂಖ್ಯೆ	**00**

2020–21 ನೇ ಸಾಲಿನಲ್ಲಿ ಸಾಮರ್ಥ್ಯ ವಿಸ್ತರಣಗೊಂಡ ಉಪಕೇಂದ್ರಗಳು:

ಕ್ರ.ಸಂ.	ಉಪಕೇಂದ್ರಗಳ ಹೆಸರು	ಜಿಲ್ಲೆ	ಸಾಮರ್ಥ್ಯ	ಹಂಚಿಕೆಯ ವೆಚ್ಚ (ರೂ. ಕೋಟಿಗಳಲ್ಲಿ)	ಸ್ಥಾಪಿತ ದಿನಾಂಕ
1	0				

2020–21 ನೇ ಸಾಲಿನಲ್ಲಿ ಕಾರ್ಯಾರಂಭಗೊಂಡ ಉಪಕೇಂದ್ರಗಳು:

ಕ್ರ.ಸಂ.	33/11 ಕೆವ್ಹಿ ಉಪಕೇಂದ್ರದ ಹೆಸರು	ಜಿಲ್ಲೆ	ಸಾಮರ್ಥ್ಯ	ಹಂಚಿಕೆಯ ವೆಚ್ಚ (ರೂ. ಕೋಟಿಗಳಲ್ಲಿ)	ಸ್ಥಾಪಿತ ದಿನಾಂಕ
1	33/11ಕೆವಿ ಉಪಕೇಂದ್ರ, ಹಿಂಡಲಗಾ	ಬೆಳಗಾವಿ	2X5	5.80	21.03.2021

15. ಪುನ:ರಚಿತ ತ್ವರಿತ ವಿದ್ಯುತ್ ಅಭಿವೃದ್ಧಿ ಹಾಗೂ ಸುಧಾರಣೆ ಯೋಜನೆ (R-APDRP)

ಪ್ರಸ್ತಾವನೆ

- **ಪುನ:ರಚಿತ ತ್ವರಿತ ವಿದ್ಯುತ್ ಅಭಿವೃದ್ಧಿ ಹಾಗೂ ಸುಧಾರಣೆ ಯೋಜನೆಯು** ಭಾರತ ಸರ್ಕಾರದ ಮಹತ್ವಾಕಾಂಕ್ಷಿಯ ಯೋಜನೆಯಾಗಿದ್ದು ಕರ್ನಾಟಕ ರಾಜ್ಯದಲ್ಲಿ ಜಾರಿಗೊಂಡಿದ್ದು ನಮ್ಮ ಹೆಸ್ಕಾಂ ಕಂಪನಿಯು ಸಹ ಈ ಯೋಜನೆಯನ್ನು ಕೈಗೆತ್ತಿ ಕೊಂಡಿದ್ದು ವಿದ್ಯುತ್ ವಿತರಣಾ ಕ್ಷೇತ್ರವನ್ನು ಬಲ ಪಡಿಸುವ ಯೋಜನೆಯಾಗಿದೆ.
- ಈ ಯೋಜನೆಯ ಮುಖ್ಯ ಉದ್ದೇಶವು ಶೇಕಡಾ 15 ಕ್ಕಿಂತ ಹೆಚ್ಚಿರುವ ಸಮಗ್ರ ತಾಂತ್ರಿಕ ಮತ್ತು ವಾಣಿಜ್ಯ ನಷ್ಟವನ್ನು ಯೋಜನೆ ಪ್ರಾರಂಭವಾದ 5 ವರ್ಷಗಳ ಅವಧಿಯಲ್ಲಿ ಕನಿಷ್ಟ ವಾರ್ಷಿಕ ಶೇಕಡಾ 3 ರ ದರದಲ್ಲಿ ಕಡಿಮೆ ಗೊಳಿಸುವುದು..
- ಈ ಯೋಜನೆಯು 2001 ನೇ ಜನಗಣತಿ ಪ್ರಕಾರ 30 ಸಾವಿರ ಜನಸಂಖ್ಯೆ ಹೊಂದಿದ ನಗರ ಪ್ರದೇಶದಲ್ಲಿ ಪ್ರಾರಂಭಿಸಲಾಗಿದೆ.
- ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ವ್ಯಾಪ್ತಿಯಲ್ಲಿ ಒಟ್ಟು 7 ಜಿಲ್ಲೆಗಳು ಇದ್ದು ಈ ಜಿಲ್ಲೆಗಳ ವ್ಯಾಪ್ತಿಯಲ್ಲಿರುವ 29 ನಗರ ಪ್ರದೇಶಗಳನ್ನು ಆಯ್ದುಕೊಳ್ಳಲಾಗಿದೆ.
- ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲು ಮತ್ತು ಅನುಷ್ಠಾನಗೊಳಿಸಲು PFC ಅನ್ನು ನೋಡಲ್ ಏಜೆನ್ಸಿಯಾಗಿ ಗೊತ್ತುಪಡಿಸಲಾಗಿದೆ ಮತ್ತು MOP ಯ ಒಟ್ಟಾರೆ ಮಾರ್ಗದರ್ಶನದಲ್ಲಿ ಸಿಂಗಲ್ ವಿಂಡೋ ಸೇವೆಯಾಗಿ ಕಾರ್ಯನಿರ್ವಹಿಸುತ್ತದೆ.

1. ಭಾಗ–ಎ ದಲ್ಲಿ

- ವಿವಿಧ ರೀತಿಯ ಕಾರ್ಯಾಚರಣೆಗೆ ವಿವಿಧ ಮಾನಕಗಳಿಗೆ ಪರಿಹಾರ ಸೂಚಿಸುವುದು.(Module):

1. ವಿದ್ಯುತ್ ಮಾಪಕಗಳು ದಾಖಲಿಸಿದ ಮಾಹಿತಿಯನ್ನು ತಂತ್ರಜ್ಞಾನದ ಮೂಲಕ ಸ್ವೀಕರಿಸುವ ವ್ಯವಸ್ಥೆ. 2. ವಿದ್ಯುತ್ ಪರಿಶೀಲನೆ. (Audit) 3. ಹೊಸ ವಿದ್ಯುತ್ ಸಂಪರ್ಕಗಳ ನೀಡುವಿಕೆ. 4. ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ನಿಲುಗಡೆ ಹಾಗೂ ವಿದ್ಯುತ್ ಸ್ಥಾವರಗಳ ರದ್ದತಿಗೊಳಿಸುವುದು. 5. ಗ್ರಾಹಕರ ಮಾಹಿತಿಯನ್ನು ಅಭಿವೃದ್ಧಿಗೊಳಿಸುವುದು, ಹಾಗೂ ದಾಖಲೆಗಳನ್ನು ತಾಂತ್ರಿಕವಾಗಿ ಕಾಯ್ದಿಡುವುದು. 6. ಮಾಪಕಗಳ ಅಳವಡಿಕೆ. 7. ಬಿಲ್ಲು ತಯಾರಿಕೆ. 8. ಕಂದಾಯ ಸಂಗ್ರಹ. 9. ಕೇಂದ್ರೀಕೃತವಾದ ಗ್ರಾಹಕರ ಸೇವಾ ಕೇಂದ್ರ. 10. ಜಾಲತಾಣಗಳ ಮೂಲಕ ಗ್ರಾಹಕರು ಸೇವೆ ಪಡೆಯುವ ಸೌಲಭ್ಯ.	11) ವಿದ್ಯುತ್ ಸಾಮಗ್ರಿಗಳ ನಿರ್ವಹಣೆ. 12) ವಿದ್ಯುತ್ ಸಾಮಗ್ರಿಗಳ ಪಾಲನೆ. 13) ಭೌಗೋಳಿಕ ಸಂಕೇತಗಳ ಮಾಹಿತಿಯ ಮೂಲಕ ಗ್ರಾಹಕರ ಮಾಹಿತಿಯ ಸಂಗ್ರಹ. 14) ಭೌಗೋಳಿಕ ಸಂಕೇತಗಳ ಮಾಹಿತಿಯ ಮೂಲಕ ಗ್ರಾಹಕರ ಮಾಹಿತಿಯ ವಿಶ್ಲೇಷಣೆ 15) ಆಡಳಿತ ಮಾಹಿತಿ ವ್ಯವಸ್ಥೆ. 16) ಅಳವಡಿಸಿಕೊಂಡ ತಂತ್ರಜ್ಞಾನದ ಸಂರಕ್ಷಣೆಯ ವ್ಯವಸ್ಥೆ, 17) ಈ ಯೋಜನೆಯಲ್ಲಿ ಪಾಲ್ಗೊಂಡಿರುವ ಅಧಿಕಾರಿ ಹಾಗೂ ಸಿಬ್ಬಂದಿಗಳ ಮಾಹಿತಿಯನ್ನು ಸಂಗ್ರಹಿಸುವದು ಮತ್ತು ಅವರು ನಿರ್ವಹಿಸಿದ ಕಾರ್ಯಗಳನ್ನು ಗುರುತಿಸುವದು ಮತ್ತು ನಿರ್ವಹಣೆ ಮಾಡುವದು.

3. **ಭಾಗ–ಎ ದ ಪ್ರಗತಿ:**

- ✓ ಎಲ್ಲ ಮಾಡ್ಯೂಲ್‌ಗಳನ್ನು ಕಾರ್ಯಾಚರಣೆಗೊಳಿಸಲಾಗಿದೆ,
- ✓ ಆರ್.ಎ.ಪಿ.ಡಿ.ಆರ್.ಪಿ. ಭಾಗ–ಎ ಯೋಜನೆಯನ್ನು ಎಲ್ಲ 29 ನಗರಗಳಲ್ಲಿ ಅನುಷ್ಠಾನಗೊಳಿಸಲಾಗಿದೆ ಹಾಗೂ 23.03.2016 ರಂದು ಪಿಎಫ್‌ಸಿ ಗೆ ಎಂಟರ್ ಪ್ರೈಸಸ್ "ಗೋಲೈವ್" ಎಂದು ಘೋಷಿಸಲಾಗಿದೆ.
- ✓ ಹೆಸ್ಕಾಂನಲ್ಲಿ ಆರ್.ಎ.ಪಿ.ಡಿ.ಆರ್.ಪಿ. ಭಾಗ–ಎ ಯೋಜನೆಯ ಮುಕ್ತಾಯವನ್ನು ದಿನಾಂಕ 18.06.2018 ರಂದು 12ನೇ ಮಾನಿಟರಿಂಗ್ ಸಮಿತಿಯ ಸಭೆಯಲ್ಲಿ ಅನುಮೋದನೆ ನೀಡಿದೆ. ದಿನಾಂಕ 06.07.2018 ರಂದು ಮೆ:ಪಿಎಫ್‌ಸಿಯು ಹೆಸ್ಕಾಂಗೆ ರೂ.64.79 ಕೋಟಿಗಳನ್ನು ಯೋಜನೇಯ ಮುಕ್ತಾಯ ಮತ್ತು ಅಂತಿಮ ಅವಧಿ ನಿರ್ಮಿಸಿದ ಡಿಪಿಆರ್‌ಗಳಿಗೆ ಅನುಮೋದಿಸಲಾಗಿದೆ.
- ✓ ವಾರ್ಷಿಕ ತಾಂತ್ರಿಕ ಬೆಂಬಲ ಪರವಾನಗಿ, ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ನ ವಾರ್ಷಿಕ ತಾಂತ್ರಿಕ ಬೆಂಬಲವನ್ನು ನಿಯಮಿತವಾಗಿ ಆರ್.ಎ.ಪಿ.ಡಿ.ಆರ್.ಪಿ. ವ್ಯವಸ್ಥೆಯಲ್ಲಿ ನವೀಕರಿಸಲಾಗುತ್ತದೆ.
- ✓ **ಆನ್‌ಲೈನ್ ಪೇಮೆಂಟ್:**
  - ಆರ್.ಎ.ಪಿ.ಡಿ.ಆರ್.ಪಿ. ನ ಗ್ರಾಹಕರು ತಮ್ಮ ವಿದ್ಯುತ್ ಬಿಲ್ಲ್ ASD, ISD ಮತ್ತು MSD ಮೊತ್ತವನ್ನು ಆನ್ ಲೈನ್ hescom.karnataka.gov.in ಮೂಲಕ ಪಾವತಿಸಬಹುದು ಹಾಗೂ ಗ್ರಾಹಕರು ವಿದ್ಯುತ್ ಸಂಬಂಧಿತ ಹೆಚ್ಚಿನ ಮಾಹಿತಿ ಪಡೆಯಬಹುದು.
  - ಆರ್.ಎ.ಪಿ.ಡಿ.ಆರ್.ಪಿ. ನ ಗ್ರಾಹಕರು ತಮ್ಮ ವಿದ್ಯುತ್ ಬಿಲ್ಲನ್ನು ಕರ್ನಾಟಕ ಮೊಬೈಲ್ ಒನ್ ಮೂಲಕ ಹಾಗೂ ಬಿಬಿಪಿಎಸ್ ಆನ್‌ಲೈನ್ ಮೂಲಕ ಗ್ರಾಹಕರು ತಮ್ಮ ಬಿಲ್ಲನ್ನು ಪಾವತಿಸಬಹುದು.
- ✓ ಆಪ್ಟಿಕಲ್ ಬಿಲ್ಲಿಂಗ್: 01.08.2021 ರಿಂದ ಆಪ್ಟಿಕಲ್ ಬಿಲ್ಲಿಂಗ್ ಎಲ್ & ಟಿ ಸಿಂಗಲ್ ಪೇಜ್ ಮತ್ತು ಮೂರು ಪೇಜ್ ಮೀಟರ್‌ಗಳಿಗೆ ಆರಂಭಿಸಲಾಗಿದೆ.
- ✓ ಎಂಐಎಸ್ ವರದಿಗಳು: ಡಿಸಿಬಿ ಮತ್ತು ಎನರ್ಜಿ ಆಡಿಟ್‌ಗಾಗಿ ಎಂಐಎಸ್ ವರದಿಗಳು ಲಭ್ಯವಿದೆ.

II. ಹೆಸ್ಕಾಂ ನಲ್ಲಿ ಐಪಿಡಿಎಸ್ ಐಟಿ ಹಂತ–2 ಯೋಜನೆ:

1. ಐಪಿಡಿಎಸ್ ಐಟಿ ಹಂತ–2 ಅವಲೋಕನ

ಎ) ಸರ್ಕಾರ ಈ ಕೆಳಗಿನ ಉದ್ದೇಶಗಳೊಂದಿಗೆ 5000 ಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ನಗರ ಪ್ರದೇಶಗಳಿಗಾಗಿ ಭಾರತದ ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆ (ಐಪಿಡಿಎಸ್) ಅನ್ನು ಪ್ರಾರಂಭಿಸಿತು.

- ➢ ಉಪ ಪ್ರಸರಣ ಮತ್ತು ವಿತರಣಾ ಜಾಲವನ್ನು ಬಲಪಡಿಸುವುದು
- ➢ ವಿತರಣಾ ಟ್ರಾನ್ಸಫಾರ್ಮರ್ ಗಳು/ಫೀಡರ್ ಗಳು/ಗ್ರಾಹಕರ ಮೀಟರಿಂಗ್
- ➢ ವಿತರಣಾ ಕ್ಷೇತ್ರದ ಐಟಿ ಸಕ್ರಿಯಗೊಳಿಸುವಿಕೆ ಮತ್ತು ವಿತರಣಾ ಜಾಲವನ್ನು ಬಲಪಡಿಸುವುದು
- ➢ ಆರ್.ಎ.ಪಿ.ಡಿ.ಆರ್.ಪಿ. ಈ ಯೋಜನೆಯಲ್ಲಿ ಸೇರಿಕೊಳ್ಳುತ್ತದೆ.
- ➢ ಆರ್.ಎ.ಪಿ.ಡಿ.ಆರ್.ಪಿ. ಮತ್ತು ಐಪಿಡಿಎಸ್ ಪ್ರದೇಶಗಳಿಗೆ ಸಾಮಾನ್ಯ ಐಟಿ ಪರಿಹಾರ
- ➢ ಪವರ್ ಫೈನಾನ್ಸ್ ಕಾರ್ಪೋರೇಷನ್ (ಪಿಎಫ್‌ಸಿ) ಐಪಿಡಿಎಸ್ ಐಟಿ ಸಕ್ರಿಯಗೊಳಿಸುವಿಕೆಗಾಗಿ ನೊಡಲ್ ಏಜೆನ್ಸಿಯಾಗಿದೆ.
- ➢ ಕರ್ನಾಟಕದ ಎಲ್ಲಾ ಎಸ್ಕಾಂ ಗಳ ಪರವಾಗಿ ಬೆಸ್ಕಾಂ ನೋಡಲ್ ಏಜೆನ್ಸಿಯಾಗಿದೆ.
- ➢ ಹೆಸ್ಕಾಂನಲ್ಲಿ ಐಪಿಡಿಎಸ್ ಐಟಿ ಹಂತ–2 ಯೋಜನೆಯಡಿ 44 ಪಟ್ಟಣಗಳನ್ನು ಆಯ್ಕೆ ಮಾಡಲಾಗಿದೆ.

2. ಧನ ಸಹಾಯ ಮತ್ತು ಟೈಮ್ ಲೈನ್

ಭಾರತ ಸರ್ಕಾರದಿಂದ ಅನುದಾನವೆಂದು ಪರಿವರ್ತಿಸಬಹುದಾದ ಅನುಮೋದಿತ ಡಿಪಿಆರ್‌ನ 60% ನಷ್ಟು ಆರ್ಥಿಕ ನೆರವು (ಯೋಜನೆಯು ಕಾಲಮಿತಿಯೊಳಗೆ ಪೂರ್ಣಗೊಂಡರೆ ಗರಿಷ್ಟ 75%), ಪಿಎಫ್‌ಸಿಯಿಂದ ಅನುಮೋದನೆಗೊಂಡ ಹೆಸ್ಕಾಂನ ಡಿಪಿಆರ್ ವೆಚ್ಚ ರೂ.10.22 ಕೋಟಿ.16 ನೇ MCM ಪ್ರಕಾರ ಯೋಜನೆಯ ಅನುಷ್ಠಾನಕ್ಕೆ 31.12.2022 ರವರೆಗೆ ಮತ್ತು ಹಣಕಾಸು ಮುಚ್ಚುವಿಕೆಗೆ 31.03.2021 ರವರೆಗೆ ಕಾಲಮಿತಿಯನ್ನು ನಿಗದಿಪಡಿಸಿದೆ.

3. ಐಪಿಡಿಎಸ್ ಐಟಿ ಹಂತ–2 : ವಿಭಿನ್ನ ಪ್ಯಾಕೇಜುಗಳು ಕೆಲಸದ ವ್ಯಾಪ್ತಿ :

ಕ್ರ. ಸಂ.	ಪ್ಯಾಕೇಜುಗಳು	ಕೆಲಸದ ವ್ಯಾಪ್ತಿ	ಪ್ರಶಸ್ತಿ ಪಡೆದ ಸಂಸ್ಥೆ	ನೀಡಲಾದ ದಿನಾಂಕ	ಒಪ್ಪಂದದ ಅವಧಿ
1	ಡೇಟಾ ಸೆಂಟರ (ಡಿಸಿ)/ ವಿಪತ್ತುಮರುಪಡಿಯುವಿಕೆ ಕೇಂದ್ರ (ಡಿಆರ್‌ಸಿ) ಹಾರ್ಡವೇರ್ ಮತ್ತು ಸಾಫ್ಟವೇರ್ ರಿಫ್ರೇಶ್	ಡೇಟಾ ಸೆಂಟರ (ಡಿಸಿ) ಹಾರ್ಡವೇರ್ ಮತ್ತು ಸಾಫ್ಟವೇರ್ ರಿಫ್ರೇಶ್ • ವಿಪತ್ತು ಮರು ಪಡಿಯುವಿಕೆ ಕೇಂದ್ರ (ಡಿಆರ್ ಸಿ) ಫೆಸಲಿಟಿ ಮ್ಯಾನೇಜಮೆಂಟ ಸರ್ವೀಸಸ್ (ಎಫ್‌ಎಂಎಸ್) :ಅನುಷ್ಠಾನ ಮುಗಿದ ನಂತರ 5 ವರ್ಷಗಳ ಕಾಲ ಡಿಸಿ ಮತ್ತು ಡಿಆರ್‌ಸಿಗೆ ಎಫ್ ಎಂಎಸ್ • ವಾರ್ಷಿಕ ನಿರ್ವಹಣೆ ವೆಚ್ಚ (ಎಎಂಸಿ) ಮತ್ತು ವಾರ್ಷಿಕ ತಾಂತ್ರಿಕ ಬೆಂಬಲ (ಎಟಿಎಸ್) ತಂತ್ರಾಂಶ ಮೂಲ ಸೌಕರ್ಯಕ್ಕಾಗಿ ಎಎಂಸಿ ಮತ್ತು ಸಾಫ್ಟವೇರ್ ಉತ್ಪನ್ನಗಳಿಗೆ ಎಟಿಎಸ್ ಖಾತರಿ /ಬೆಂಬಲದ ಅವಧಿ ಮುಗಿದ ನಂತರ 5 ವರ್ಷ ಗಳ ನಂತರ ಸ್ಥಾಪನೆಯ ದಿನಾಂಕದಿಂದ 3 ವರ್ಷಗಳ ವರೆಗೆ	ಮೆ. ಇನಪನ್ಟೈಟ್ ಕಂಪ್ಯೂಟರ್ ಸೊಲ್ಯುಷನ್ಸ್ ಎನ್ ಸಿಆರ್	26.03.2020	ಡಿಡಬ್ಲ್ಯೂಎ ವಿತರಣೆಯಿಂದ 24 ತಿಂಗಳು
2	ಐಪಿಡಿಎಸ್ ಪಟ್ಟಣಗಳು ಜಿಐಎಸ್ ಸಮೀಕ್ಷೆ	• ಮೂಲ ನಕ್ಷೆ ರಚನೆಗಾಗಿ ಉಪಗ್ರಹ ಚಿತ್ರಣದ ಸಂಗ್ರಹ • ಜಿಪಿಎಸ್ ಆಧಾರಿತ ಸಮೀಕ್ಷೆ ಮತ್ತು ಆಸ್ತಿ ಮ್ಯಾಪಿಂಗ್ • ಗ್ರಾಹಕ ಸೂಚ್ಯಂಕ ದತ್ತಾಂಶ ಏಕೀಕರಣ • ಆಸ್ತಿ ID ಚಿತ್ರಕಲೆ ಗೋ–ಲೈವ್ ವರೆಗೆ ಹೆಚ್ಚುತ್ತಿರುವ ಡೇಟಾ ಸೆರೆ	ಮೆ. ಸೈಬರ್ ಶೀಫ್ಟ್ ಇನ್ಫೋಟೆಕ್ ಪ್ರೈ. ಲಿಮಿಟೆಡ್ ಕೋಲ್ಕತ್ತಾ	26.03.2020	ಡಿಡಬ್ಲ್ಯೂಎ ವಿತರಣೆಯಿಂದ 18 ತಿಂಗಳು

ಕ್ರ. ಸಂ.	ಪ್ಯಾಕೇಜುಗಳು	ಕೆಲಸದ ವ್ಯಾಪ್ತಿ	ಪ್ರಶಸ್ತಿ ಪಡೆದ ಸಂಸ್ಥೆ	ನೀಡಲಾದ ದಿನಾಂಕ	ಒಪ್ಪಂದದ ಅವಧಿ
		ಹಿಡಿಯುವಿಕೆ ಮತ್ತು ನವೀಕರಣ			
3	ಐಪಿಡಿಎಸ್ ಟೌನ್ ಮೊಡೆಮ್ ಫಿಕ್ಸಿಂಗ್	• ಡಿಟಿ. ಎಚ್‌ಟಿ. ಬ್ರೌಂಡರಿ ಮತ್ತು ಫೀಡರ್ ಗಳಿಗಾಗಿ ಮೋಡೆಮ್‌ಗಳ ಪೂರೈಕೆ ಮತ್ತು ಸ್ಥಾಪನೆ • ಎಎಂಆರ್ ಅನ್ನು ಸಕ್ರಿಯಗೊಳಸಲಾಗುತ್ತಿದೆ.	ಮೆ. ಅನುಲಾಜಿಕ್ಸ್ ಪ್ರೈ. ಲಿಮಿಟೆಡ್.	30.03.2020	ಬೆಸ್ಕಾಂಗೆ ಸಂಸ್ಥೆಗೆ ತಿಳಿಸಿದ ದಿನಾಂಕದಿಂದ 9 ತಿಂಗಳುಗಳು
4	ಐಪಿಡಿಎಸ್ ಗಳು ಐಟಿ ಮೂಲಸೌಕರ್ಯ	ಕಂಪ್ಯೂಟರ್ ಮುದ್ರಕಗಳು, ಎಸ್.ಬಿಡಿ ಬಾರ್ ಕೋಡ್ ರೀಡರ್, ಐಪಿ ಫೋನ್ ಗಳು, ಸ್ವಿಚ್‌ಗಳು ಇತ್ಯಾದಿಗಳ ಪೂರೈಕೆ ಮತ್ತು ಸ್ಥಾಪನೆ, ಕಾರ್ಯಕ್ಷೇತ್ರಗಳ ಪೂರೈಕೆ	ಮೆ. ಐಡಿಯಾ ಪ್ರೈ. ಲಿಮಿಟೆಡ್	10.09.2020	ಬೆಸ್ಕಾಂಗೆ ಸಂಸ್ಥೆಗೆ ತಿಳಿಸಿದ ದಿನಾಂಕದಿಂದ 6 ತಿಂಗಳುಗಳು

3. ಐಪಿಡಿಎಸ್ ಐಟಿ ಹಂತ–2 : ಪ್ರಸ್ತುತ ಸ್ಥಿತಿ:

➢ **ಐಪಿಡಿಎಸ್ ಪಟ್ಟಣಗಳು ಜಿಐಎಸ್ ಸಮೀಕ್ಷೆ : ಜಿಐಎಸ್ ಆಸ್ತಿ ಮ್ಯಾಪಿಂಗ್ ಅಡಿಯಲ್ಲಿ ಪೂರ್ಣಗೊಂಡ ಚಟುವಟಿಕೆಗಳ ಸ್ಥಿತಿ ಕೆಳಕಂಡಂತಿದೆ:**

ಕ್ರ.ಸಂ.	ಚಟುವಟಿಕೆ	ಚಟುವಟಿಕೆ ಪೂರ್ಣಗೊಂಡ ಪಟ್ಟಣಗಳು	ಸಮತೋಲನ ಪಟ್ಟಣಗಳು
1	ಜಿಪಿಎಸ್ ವಿಧಾನವನ್ನು ಬಳಸಿಕೊಂಡು ನೆಟ್ ವರ್ಕ ಘಟಕಗಳ ಮತ್ತು ಸಮೀಕ್ಷೆ ಮತ್ತು ಮ್ಯಾಪಿಂಗ್	38	06
2	ಡೇಟಾ ಮೌಲ್ಯಮಾಪನ	24	14
3	AOI ಧೃಡೀಕರಣ	32	06
4	ಸ್ವತ್ತನ್ನು ಸ್ವೀಕರಿಸಲಾಗಿದೆ	24	14
5	ಉಪಗ್ರಹ ಚಿತ್ರಗಳ ಸಂಗ್ರಹಣೆ	09	23
6	ಮೊಬೈಲ್ ಆಪ್ ಮೂಲಕ ಸಿಐ ಸಮೀಕ್ಷೆ	13	11

➢ **ಐಪಿಡಿಎಸ್ ಟೌನ್ ಮೊಡೆಮ್ ಫಿಕ್ಸಿಂಗ್:**

ಹೆಸ್ಕಾಂ	ಪಟ್ಟಣಗಳ ಸಂಖ್ಯೆ	ಜಿಐಎಸ್ ಸಮೀಕ್ಷೆ ಪೂರ್ಣಗೊಂಡ ಪಟ್ಟಣಗಳು	ಡಿಡಬ್ಲ್ಯೂಎ ಪ್ರಕಾರ ಮೊಡೆಮ್ ಗಳ ಸಂಖ್ಯೆ	ಮಾಹಿತಿಯ ಪ್ರಕಾರ ತಪಾಸಣೆ ಪೂರ್ಣಗೊಂಡ ದಿನಾಂಕ	ಸಂಸ್ಥೆಯು ನೀಡುವ ತಪಾಸಣೆ ವೇಳಾಪಟ್ಟಿ	ತಪಾಸಣೆ ಪೂರ್ಣಗೊಂಡ ದಿನಾಂಕ	ಟೀಕೆಗಳು*
ಹೆಸ್ಕಾಂ	44	33	1310	15.02.2021	13.03.2021	06.04.2021	ಇ–ತಪಾಸಣೆ ಪೂರ್ಣ ಗೊಂಡಿದೆ ಡಿಐ ಅನ್ನು 500 ಸಂಖ್ಯೆಗಳಿಗೆ ನೀಡಲಾಗಿದೆ.

*ಇ–ತಪಾಸಣೆ ಪೂರ್ಣಗೊಂಡಿದೆ ಡಿಐ ಅನ್ನು 500 ಸಂಖ್ಯೆಗಳಿಗೆ ನೀಡಲಾಗಿದೆ. 28.07.2021 ರಂದು ಹೆಸ್ಕಾಂ ಸ್ಟೋರ್ 100 ಸಂಖ್ಯೆಯ ಮೊಡೆಮ್‌ಗಳು ಸ್ವೀಕರಿಸಿದ.ಮೊಡೆಮ್‌ಗಳ ಪಿಜಿಕಲ್ ತಪಾಸಣೆಯನ್ನು EE, TA&QC ರವರು 25.08.2021ರಂದು ಪೂರ್ಣಗೊಳಿಸಿದ್ದಾರೆ.

ಎಲ್ಲಾ 38 ಜಿಐಎಸ್ ಸಮೀಕ್ಷೆ ಪೂರ್ಣಗೊಂಡ ಪಟ್ಟಣಗಳ ಮೀಟರ್ ಮಾಸ್ಟರ್ ಡೇಟಾವನ್ನು ಮೆ॥ ಅನಾಲಾಜಿಕ್ಸ್ ಗೆ ಕಳುಹಿಸಲಾಗಿದೆ ಮತ್ತು ಮೊಡೆಮ್‌ಗಳ ಸ್ಥಾಪನೆಯನ್ನು ಪ್ರಾರಂಭಿಸಬೇಕು.

➢ **ಐಪಿಡಿಎಸ್ ಗಳು ಐಟಿ ಮೂಲಸೌಕರ್ಯ:**

- ಏಜೆನ್ಸಿ ಮೆ॥ ಐಡಿಯಾ ಇನ್ಫಿನಿಟಿ ಪ್ರೈ. ಲಿಮಿಟೆಡ್ ಇವರು ಸೆಂಟ್ರಲ್ ಸ್ಟೋರ್‌ಗಳಿಗೆ ಮತ್ತು ಸೆಂಟ್ರಲ್ ಸ್ಟೋರ್‌ಗಳಿಂದ ವಿಭಾಗ ಸ್ಟೋರ್‌ಗಳಿಗೆ ಹಾರ್ಡ್‌ವೇರ್ ವಸ್ತುಗಳನ್ನು ಹೆಸ್ಕಾಂ ಕೋರಿಕೆಯಂತೆ ಪೂರೈಸಿದೆ.
- ಆಯಾ ಉಪವಿಭಾಗದ ಅಧಿಕಾರಿಗಳಿಂದ ವಿಭಾಗೀಯ ಸ್ಟೋರ್‌ಗಳಿಂದ ಹಾರ್ಡ್‌ವೇರ್ ವಸ್ತುಗಳನ್ನು ಹಂಚಿಕೆ ಬಿಓಎಮ್ ಪ್ರಕಾರ ಡ್ರಾ ಮಾಡಲಾಗಿದೆ.
- ಎಲ್ಲಾ 44 ಪಟ್ಟಣಗಳಲ್ಲಿ ಐಟಿ ಹಾರ್ಡ್‌ವೇರ್ ಸ್ಥಾಪನೆ ಪೂರ್ಣಗೊಂಡಿದೆ.

➢ **ಎಲ್ಲಾ ಎಸ್ಕಾಂಗಳಲ್ಲಿ ಡಿಸಿ–ಡಿಆರ್‌ಸಿ ಹಾರ್ಡವೇರ್ ಮತ್ತು ಸಾಫ್ಟವೇರ್ ರಿಫ್ರೇಶ :**

19.08.2021 ರಂದು ನಡೆದ 11 ನೇ ಸ್ಟೀರಿಂಗ್ ಕಮೀಟಿಯಲ್ಲಿ, ಪೈಲಟ್ ಪಟ್ಟಣವಾದ ನವಲಗುಂದದ ಗೋ–ಲೈವ್‌ನ ಗುರಿ ದಿನಾಂಕ: 01.09.2021 ಎಂದು ಸಮಿತಿಯು ಮೌಲ್ಯಮಾಪನ ಮಾಡಿದೆ ಆದರೆ ಸಿಸ್ಟಮ್ ಇಂಟಿಗ್ರೇಟರ್ ಮೆ॥ ಇನ್ಫೈನೈಟ್ ಕಂಪ್ಯೂಟರ್ ಸೊಲ್ಯೂಷನ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಡೆಮೊವನ್ನು ಇಂದಿನವರೆಗೆ ಆರಂಭಿಸಿಲ್ಲ. ಸಮೀತಿಯು ಸಿಸ್ಟಮ್ ಇಂಟಿಗ್ರೇಟರ್‌ಗೆ ಬೇಗನೆ ಡೆಮೊ ಆರಂಭಿಸಲು ಮತ್ತು ತಕ್ಷಣವೇ ಅಪ್ಲಿಕೇಶನ್ ಡೆಮೊಕ್ಕಾಗಿ ಯೋಜನೆಯನ್ನು ಸಲ್ಲಿಸಲು ಮತ್ತು ಯುಎಟಿ, ರೋಲ್ ಔಟ್ ವಿಧಾನ ಮತ್ತು ಗೋ–ಲೈವ್ ಅನ್ನು ಆರಂಭಿಸಲು ಸೂಚಿಸಲಾಗಿದೆ.

16. ನಿರಂತರ ಜ್ಯೋತಿ ಯೋಜನೆ (ಎನ್.ಜೆ.ವೈ.)

ಗ್ರಾಮೀಣ ಪ್ರದೇಶಗಳಲ್ಲಿ ನೀರಾವರಿ ಪಂಪಸೆಟ್‌ಗಳನ್ನು ಹೊರತು ಪಡಿಸಿ ಗೃಹಬಳಕೆ ಮತ್ತು ಇನ್ನಿತರ ಸ್ಥಾವರಗಳಿಗೆ ನಿರಂತರ 24 ತಾಸು ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವ ಉದ್ದೇಶದಿಂದ ಕರ್ನಾಟಕ ಸರಕಾರದ ಆದೇಶದ ಮೇರೆಗೆ ಹೆಸ್ಕಾಂ ವ್ಯಾಪ್ತಿಯಲ್ಲಿ ನಿರಂತರ ಜ್ಯೋತಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯ ಅನುಷ್ಠಾನದಿಂದ ಗ್ರಾಮೀಣ ಗೃಹಬಳಕೆ ಮತ್ತು ಇನ್ನುಳಿದ ಕೃಷಿಯೇತರ ಸ್ಥಾವರಗಳಿಗೆ ನಿರಂತರ ಮತ್ತು ಗುಣಮಟ್ಟದ ವಿದ್ಯುತ್ ಸರಬರಾಜು ಮಾಡಲಾಗುವುದು.ಇದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆ ಹೊಂದಲು ಅನುಕೂಲವಾಗುವುದು.ಮುಂದುವರೆದು ಈ ಯೋಜನೆಯಲ್ಲಿ ಹೊಸ 11ಕೆವ್ಹಿ ನಿರಂತರ ಜ್ಯೋತಿ ಮಾರ್ಗಗಳನ್ನು ನಿರ್ಮಿಸಿ ಗ್ರಾಮೀಣ ಭಾಗದಲ್ಲಿ ಬರುವ ಎಲ್ಲ ಕೃಷಿಯೇತರ ಸ್ಥಾವರಗಳನ್ನು ಬೇರ್ಪಡಿಸಿ ನಿರಂತರ ವಿದ್ಯುತ್ ಸರಬರಾಜು ಕಲ್ಪಿಸುವುದು ಮತ್ತು ಇದ್ದ ಹಳೆಯ 11ಕೆವ್ಹಿ ಮಾರ್ಗದ ಮೂಲಕ ನಿರಾವರಿ ಪಂಪ್‌ಸೆಟ್‌ಗಳಿಗೆ ಲಭ್ಯತೆಯ ಆಧಾರದ ಮೇಲೆ ವಿದ್ಯುತ್ ಸರಬರಾಜು ನೀಡುವುದು.

ದಿನಾಂಕ 21.01.2009 ರಂದು ಮಾನ್ಯ ಇಂಧನ ಸಚಿವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ಜರುಗಿದ ಕರ್ನಾಟಕ ಸರ್ಕಾರದ ಅಧಿವೇಶನದಲ್ಲಿ ನಿರಂತರಜ್ಯೋತಿ ಯೋಜನೆಯನ್ನು ಗುಜರಾತ ರಾಜ್ಯದಲ್ಲಿ ಅನುಷ್ಠಾನಗೊಳಿಸಿರುವ ಗ್ರಾಮಜ್ಯೋತಿ ಯೋಜನೆಯ ಮಾದರಿಯಲ್ಲಿ ನಿರಂತರಜ್ಯೋತಿ ಯೋಜನೆಯನ್ನು ಅನುಷ್ಠಾನಗೊಳಿಸಲು ನಿರ್ಧರಿಸಲಾಯಿತು. ಸರ್ಕಾರದ ಆದೇಶ ಸಂಖ್ಯೆ: EN166; EMC2010; BENGALURU Dt.20-10-2010, ರಂತೆ ನಿರಂತರಜ್ಯೋತಿ ಯೋಜನೆಯನ್ನು ಬೆಸ್ಕಾಂ, ಸೆಸ್ಕ, ಜೆಸ್ಕಾಂ ಮತ್ತು ಹೆಸ್ಕಾಂದಲ್ಲಿ ಎರಡು ಹಂತಗಳಲ್ಲಿ ಅನುಷ್ಠಾನಗೊಳಿಸಲು ನಿರ್ದೇಶನ ನೀಡಲಾಯಿತು. 40% ಕರ್ನಾಟಕ ಸರ್ಕಾರದ ಇಕ್ವಿಟಿ ಹಾಗೂ 60% ಹಣಕಾಸು ಸಂಸ್ಥೆಗಳಿಂದ ನೆರವು ಪಡೆದು ಯೋಜನೆಯನ್ನು ತೆಗೆದುಕೊಳ್ಳಲು ನಿರ್ಧರಿಸಲಾಯಿತು.

ಬೆಸ್ಕಾಂನ ಪತ್ರ ಸಂಖ್ಯೆ: BESCOM/BC-46/F-3551/2008-09/48 Dt;10.06.2009, ರನ್ವಯ ಸದರೀ ಕೆಲಸವನ್ನು ಭಾಗಶ: ಗುತ್ತಿಗೆ ಆಧಾರದಲ್ಲಿ ಕಾರ್ಯಗತಗೊಳಿಸಲು ನಿರ್ಧರಿಸಲಾಯಿತು ಮತ್ತು ಬೆಸ್ಕಾಂನ್ನು ನೋಡಲ್ ಸಂಸ್ಥೆಯಾಗಿ ಮಾಡಲಾಯಿತು. ಮತ್ತು ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳ ಪರವಾಗಿ ಪ್ರಮುಖ ಸಾಮಗ್ರಿಗಳಾದ ಕಂಬಗಳು, ವಾಹಕ ಮತ್ತು ಇನ್ಸುಲೇಟರ್‌ಗಳನ್ನು ಟೆಂಡರ್ ಕರೆಯಲು ಅಧಿಕಾರವನ್ನು ಬೆಸ್ಕಾಂಗೆ

ನೀಡಲಾಯಿತು. ಮುಂದುವರೆದು ಸದರೀ ಯೋಜನೆಗೆ ಬೇಕಾಗುವ ವಿದ್ಯುತ್ ಪರಿವರ್ತಕಗಳು ಮತ್ತು 11ಕೆವ್ಹಿ ಸ್ವಿಚ್‌ಗೇರ್‌ಗಳನ್ನು ಕ್ರಮವಾಗಿ ಮೇ॥ ಕವಿಕಾ ಮತ್ತು ಮೇ॥ ಎಮ್‌ಈಆಯ್ ಗಳಿಂದ ಖರೀದಿಸಲು ನಿರ್ಧರಿಸಲಾಯಿತು.

ಹೆಸ್ಕಾಂ ವ್ಯಾಪ್ತಿಯಲ್ಲಿದ್ದ 48 ತಾಲ್ಲೂಕುಗಳ ಪೈಕಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಬರುವ 11 ತಾಲ್ಲೂಕುಗಳಿಗೆ ಈಗಾಗಲೇ 24 ತಾಸುಗಳ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಆದ್ದರಿಂದ ಉತ್ತರಕನ್ನಡ ಜಿಲ್ಲೆಯಲ್ಲಿ ಬರುವ 11 ತಾಲ್ಲೂಕುಗಳನ್ನು ಎನ್‌ಜೆವಾಯ್ ಯೋಜನೆಯಿಂದ ಹೊರಗಿಡಲಾಗಿದೆ.ಪ್ರಾಯೋಗಿಕ ಯೋಜನೆಯಾಗಿ ಮೂರು ತಾಲ್ಲೂಕುಗಳಲ್ಲಿ ಅಂದರೆ ಬೆಳಗಾವಿ ಜಿಲ್ಲೆಯ ಬೈಲಹೊಂಗಲ್, ಹಾವೇರಿ ಜಿಲ್ಲೆಯ ಶಿಗ್ಗಾಂವ ಮತ್ತು ಸವಣೂರ ತಾಲ್ಲೂಕುಗಳಲ್ಲಿ ಈಗಾಗಲೇ ಅನುಷ್ಠಾನಗೊಳಿಸಲಾಗಿದೆ.ಈ ಕೆಳಗಿನಂತೆ ಉಳಿದ 34 ತಾಲ್ಲೂಕುಗಳಲ್ಲಿ ನಿರಂತರಜ್ಯೋತಿ ಯೋಜನೆಯನ್ನು ಎರಡು ಹಂತಗಳಲ್ಲಿ ಅನುಷ್ಠಾನಗೊಳಿಸಲು ನಿರ್ಧರಿಸಲಾಯಿತು.

ಹಂತ–1: 20 ತಾಲ್ಲೂಕುಗಳು ಮತ್ತು ಪ್ರಸ್ತಾಪಿತ 242 ಮಾರ್ಗಗಳು.

ಹಂತ–2: 14 ತಾಲ್ಲೂಕುಗಳು ಮತ್ತು ಪ್ರಸ್ತಾಪಿತ 202 ಮಾರ್ಗಗಳು.

ನಿರಂತರಜ್ಯೋತಿ ಯೋಜನೆಯ ಹಂತ–1 ರ ಟೆಂಡರ್ ಕಾಮಗಾರಿಯನ್ನು ಐಟಂವಾರು ಧರ ಆಧಾರದ ಮೇಲೆ ಟೆಂಡರ್ ಕರೆಯಲಾಗಿದ್ದು ಹಾಗೂ ನಿರಂತರಜ್ಯೋತಿ ಯೋಜನೆಯ ಹಂತ–2ರ ಟೆಂಡರ್ ಕಾಮಗಾರಿಯನ್ನು ಒಟ್ಟಾರೆ ಗುತ್ತಿಗೆ ಆಧಾರದ ಮೇಲೆ ಟೆಂಡರ್‌ಕರೆಯಲಾಗಿದೆ.ನಿರಂತರಜ್ಯೋತಿ ಯೋಜನೆಯ ಹಂತ–1 ರಲ್ಲಿನ ಕಾಮಗಾರಿಯನ್ನು ನಿರ್ವಹಿಸಲು ಪ್ರಮುಖ ಸಾಮಗ್ರಿಗಳಾದ ಕಂಬಗಳು, ವಾಹಕ, ಪರಿವರ್ತಕಗಳು, ಸ್ವಿಚ್‌ಗೇರ್‌ಗಳು ಮತ್ತು ಇನ್ಸುಲೇಟರ್‌ಗಳನ್ನು ಹೆಸ್ಕಾಂವತಿಯಿಂದ ಖರೀದಿ ಮಾಡಿ ಸರಬರಾಜು ಮಾಡಲಾಗಿರುತ್ತದೆ ಮತ್ತು ಹಂತ–2ರಲ್ಲಿ ಪರಿವರ್ತಕಗಳು, ವಾಹಕ ಮತ್ತು ಸ್ವಿಚ್‌ಗೇರ್‌ಗಳನ್ನು ಹೆಸ್ಕಾಂವತಿಯಿಂದ ಖರೀದಿ ಮಾಡಿ ಸರಬರಾಜು ಮಾಡಲಾಗಿರುತ್ತದೆ.ಎಸ್.ಆರ್.2009–10ರಲ್ಲಿ ನಮೂದಿಸಿದ ದರಗಳನ್ನು ಅಳವಡಿಸಿ ಅಂದಾಜು ಪತ್ರಿಕೆಯನ್ನು ತಯಾರಿಸಲಾಗಿದೆ ಮತ್ತು ಗುತ್ತಿಗೆದಾರನು ನಮೂದಿಸಿದ ದರವನ್ನು ಎಸ್.ಆರ್.2010–11ರಲ್ಲಿ ನಮೂದಿಸಿದ ದರಗಳನ್ನು ಅಳವಡಿಸಿ ಅಪ್‌ಡೇಟ್ ಆದ ಅಂದಾಜು ಪತ್ರಿಕೆಯ ಜೊತೆ ಹೊಲಿಕೆ ಮಾಡಲಾಯಿತು. ಹಂತ–1 ರಲ್ಲಿಯ ಕಾಮಗಾರಿಗಳಿಗೆ ಮುಕ್ತಾಯದ ಅವಧಿಯಾಗಿ DWA ನೀಡಿದ ದಿನಾಂಕದಿಂದ9 ತಿಂಗಳು & ಹಂತ–2 ರಲ್ಲಿಯ ಕಾಮಗಾರಿಗಳಿಗೆ ಮುಕ್ತಾಯದ ಅವಧಿಯಾಗಿ 6 ತಿಂಗಳು ಎಂದು ನಮೂದಿಸಿ DWA ನ್ನು ನೀಡಲಾಗಿದೆ. ROW ಸಮಸ್ಯೆಗಳು, ರೈಲ್ವೆ ಕ್ರಾಸಿಂಗ ಪರವಾನಗೆ, ಅರಣ್ಯಇಲಾಖೆಯ ಪರವಾನಗೆ, ಹೊಲಗಳಲ್ಲಿ ಕಂಬಗಳನ್ನು ಹಾಕಲು ರೈತರತಕರಾರು, ಕಾರ್ಮಿಕರ ಸಮಸ್ಯೆಗಳು ಮತ್ತು ಇತರೆ ಕಾರಣಗಳಿಂದ ನಿಗದಿತ ಸಮಯದೊಳಗೆ ಕಾಮಗಾರಿ ಪೂರ್ಣಗೊಳಿಸಲು ವಿಳಂಬವಾಗಿರುತ್ತದೆ.

ಮೇ॥ ಸಿ.ಪಿ.ಆರ್.ಆಯ್.ಬೆಂಗಳೂರರವರನ್ನು ಮೌಲ್ಯಮಾಪನ ಮಾಡಲು ಮೂರನೇಯ ಸ್ವತಂತ್ರ ಸಂಸ್ಥೆಯಾಗಿ ನೇಮಿಸಲಾಗಿದ್ದು, ಒಟ್ಟು ಕೆಲಸದ ಶೇ.50 ರಷ್ಟು ಮಾರ್ಗಗಳ ವಿವರವಾದ ದಾಸ್ತಾನು ತಪಾಸಣೆಮಾಡಿ, ನಿರಂತರಜ್ಯೋತಿ ಯೋಜನೆಯ ಅನುಷ್ಠಾನದ ನಂತರ ಸಾಧಿಸಿದ ಪ್ರಯೋಜನೆಗಳನ್ನು ಮೌಲ್ಯ ಮಾಪನ ಮಾಡಲು ಆದೇಶ ನೀಡಲಾಗಿದೆ.ಮೇ॥ ಸಿ.ಪಿ.ಆರ್.ಆಯ್.ಬೆಂಗಳೂರ ರವರು ನಿರಂತರಜ್ಯೋತಿ ಯೋಜನೆಯಿಂದ ಗ್ರಾಮೀಣ ಪ್ರದೇಶಗಳಿಗೆ 24 ಗಂಟೆಗಳ ಉತ್ತಮ ಗುಣಮಟ್ಟದ ವಿದ್ಯುತ್ ಸರಬುರಾಜು ಮಾಡಲು ಸಹಕಾರಿಯಾಗಿದ್ದು ಗ್ರಾಮೀಣ ಪ್ರದೇಶಗಳ ಸಾಮಾಜಿಕ ಆರ್ಥಿಕ ಬದಲಾವಣೆಗಳಾಗುತ್ತವೆ ಹಾಗೂ ಇದರಿಂದ ವಿದ್ಯುತ್ ವ್ಯವಸ್ಥೆಯಲ್ಲಿನ ಪೀಕ್ ಲೋಡ್ ಕಡಿಮೆಯಾಗುತ್ತದೆ ಎಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಜುಲೈ–2017 ರ ಅಂತ್ಯಕ್ಕೆ ಹಂತ–1 ಮತ್ತು ಹಂತ–2 ರ ಕಾಮಗಾರಿಗಳು ಮುಕ್ತಾಯಗೊಂಡಿದ್ದು ಪ್ರಗತಿಯು ಈ ಕೆಳಗಿನಂತಿರುತ್ತದೆ.

ಪ್ರಾಯೋಗಿಕ ಹಂತ: ಒಟ್ಟು ಮಾರ್ಗಗಳು –22

ಒಟ್ಟು ಪೂರ್ಣಗೊಂಡ ಮಾರ್ಗಗಳು–22

ಒಟ್ಟು ಮುಕ್ತಾಯಗೊಂಡ ಮಾರ್ಗಗಳು–22

ಹಂತ–1; ಒಟ್ಟು ಮಾರ್ಗಗಳು –242

ಒಟ್ಟು ಪೂರ್ಣಗೊಂಡ ಮಾರ್ಗಗಳು–242

ಒಟ್ಟು ಮುಕ್ತಾಯಗೊಂಡ ಮಾರ್ಗಗಳು–242

ಹಂತ–2; ಒಟ್ಟು ಮಾರ್ಗಗಳು –202

ಒಟ್ಟು ಪೂರ್ಣಗೊಂಡ ಮಾರ್ಗಗಳು–202

ಒಟ್ಟು ಮುಕ್ತಾಯಗೊಂಡ ಮಾರ್ಗಗಳು–202

ಶೇ 100% ರಷ್ಟು ಕಾಮಗಾರಿಯು ದಿನಾಂಕ: 24.07.2017 ರಂದು ಪೂರ್ಣಗೊಂಡಿದೆ.

ಎನ್‌ಜೆವಾಯ್ ಕಾಮಗಾರಿಯು ಪೂರ್ಣಗೊಳಿಸಲು ಗಣನೀಯ ವಿಳಂಬ ಇದ್ದರೂ, ಕಾಮಗಾರಿಯನ್ನು ಪೂರ್ಣಗೊಳಿಸದೇ ಇರುವದಕ್ಕೆ ಸಹ ಹೊಸ ಟೆಂಡರ್‌ನ್ನು ಕರೆದಿಲ್ಲದಿರುವುದರ ಬಗ್ಗೆ ಅಥವಾ ಕಾರ್ಯ ಪೂರ್ಣಗೊಳಿಸಲು ಪರ್ಯಾಯ ಕ್ರಮಗಳನ್ನು ಈ ಕೆಳಕಂಡ ಕಾರಣಗಳಿಂದ ತೆಗೆದುಕೊಂಡಿರುವುದಿಲ್ಲ.

1. ಸದರಿ ಕಾಮಗಾರಿಯನ್ನು ಎಸ್‌ಆರ್–2009–10ರ ದರಗಳನ್ನು ಅಳವಡಿಸಿ ತಯಾರಿಸಲಾದ ಅಂದಾಜು ಪತ್ರಿಕೆ ಮೇಲೆ ನೀಡಲಾಗಿರುವದರಿಂದ ಸದರಿ ಕಾಮಗಾರಿಯನ್ನು ಮಿತವ್ಯಯವಾದ ಆರ್ಥಿಕ ರೀತಿಯಿಂದ ಮಾಡಲಾಗುವ ಉದ್ದೇಶದಿಂದ.
2. ಇತರೆ ಎಸ್ಕಾಂಗಳಲ್ಲಿ ಹೋಲಿಸಿದಲ್ಲಿ, ಹೆಸ್ಕಾಂ ನೀಡಿದ ದರಗಳು ಸಮಂಜಸವಾಗಿದೆ.
3. ಹೊಸದಾಗಿ ಟೆಂಡರ್ ಕರೆಯುವುದರಿಂದ ಧೀರ್ಘ ಕಾಲ ತೆಗೆದುಕೊಳ್ಳುವುದು ಮತ್ತು ಹೆಚ್ಚಿನ ದರದಲ್ಲಿ ಫಲಿತಾಂಶ ನಿರೀಕ್ಷಣೆ ಆಗಿ ಕಾಮಗಾರಿಯು ಇನ್ನೂ ವಿಳಂಬವಾಗುವುದು.
4. ಕಾಮಗಾರಿಯ ಜಂಟಿದಾಸ್ತಾನು ಪರಿಶೀಲನೆ ಮತ್ತು ಟೆಂಡರ್‌ನಲ್ಲಿ ಅಳವಡಿಸಲಾದ ಪರಿಮಾಣಗಳನ್ನು ಅಂತಿಮಗೊಳಿಸುವ ಕಾರ್ಯದಿಂದ ಕಾಮಗಾರಿಯು ಇನ್ನೂ ವಿಳಂಬವಾಗುವುದು.
5. ಈ ರೀತಿ ಕಾಮಗಾರಿಗಳನ್ನು ಮಾಡುವ ಸಂಸ್ಥೆಗಳು ಸೀಮಿತವಾಗಿರುತ್ತದೆ ಮತ್ತು ಮರುಟೆಂಡರ್ ಆದ ಪಕ್ಷದಲ್ಲಿ ಸದರಿ ಕಾಮಗಾರಿಯು ತಾಂತ್ರಿಕ ಕೌಶಲ್ಯ ಪರಿಣಿತ ಕಾರ್ಮಿಕ ಕೆಲಸವಾಗಿರುವುದರಿಂದ ಅದೇ ಪರಿಸ್ಥಿತಿ ಹೆಚ್ಚು ವೆಚ್ಚದೊಂದಿಗೆ ಮುಂದುವರೆಯುವುದು.
6. ಎನ್‌ಜೆವಾಯ್ ಯೋಜನೆಯು ಕರ್ನಾಟಕ ಘನ ಸರ್ಕಾರದ ಪ್ರತಿಷ್ಠಿತ ಯೋಜನೆಯಾಗಿರುತ್ತದೆ ಮತ್ತು ಹೊಸದಾಗಿ ಟೆಂಡರ್‌ಕರೆಯುವುದರ ಬದಲಾಗಿ ಈಗಿರುವ ಅವಾರ್ಡ ಆದ ಸಂಸ್ಥೆಗಳಿಂದ ನಿಗದಿತ ಸಮಯದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸುವುದು.

ಈ ಯೋಜನೆಯ ಅನುಷ್ಠಾನದಿಂದ, ಎನ್.ಜೆ.ವಾಯ್ ಅನುಷ್ಠಾನಿತ ಪ್ರದೇಶದಲ್ಲಿ, ಗ್ರಾಮೀಣ ಗೃಹಬಳಕೆ ಮತ್ತು ಇನ್ನುಳಿದ ಕೃಷಿಯೇತರ ಸ್ಥಾವರಗಳಿಗೆ ನಿರಂತರ ಮತ್ತು ಗುಣಮಟ್ಟದ ವಿದ್ಯುತ್ ಸರಬರಾಜು ಮಾಡಲಾಗುವುದು ಮತ್ತು ಎನ್‌ಜೆವಾಯ್ ಅನುಷ್ಠಾನಗೊಳಿಸಿದ ಕ್ಷೇತ್ರಗಳಲ್ಲಿ ನೀರಾವರಿ ಪಂಪ್‌ಸೆಟ್ ಗ್ರಾಹಕರಿಗೆ ನಿಗದಿ ಪಡಿಸಿದ ಕಾಲದಲ್ಲಿ ವಿದ್ಯುತ್ ಪೂರೈಕೆಯನ್ನು ಮಾಡಲಾಗುವುದು. ಇಲ್ಲಿಯವರೆಗೆ **3520 ಸಂಖ್ಯೆಯ** ಗ್ರಾಮಗಳಿಗೆ ನಿರಂತರ ಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ.ಎನ್‌ಜೆವಾಯ್ ಯೋಜನೆಯ ಅನುಷ್ಠಾನದ ನಂತರ ವಿದ್ಯುತ್ ಅಡಚಣೆಗಳು ಗಣನೀಯ ಮಟ್ಟದಲ್ಲಿ ಕಡಿಮೆಯಾಗಿದೆ.ಈಗ ಸಧ್ಯ ಎಲ್ಲಾ ಎನ್‌ಜೆವಾಯ್ ಮಾರ್ಗಗಳಿಗೆ 24 ತಾಸುಗಳ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.ಎನ್‌ಜೆವಾಯ್ ಅನುಷ್ಠಾನವಾದ ನಂತರ ಮೀಟರನಲ್ಲಿ ದಾಖಲಿತ ಎನರ್ಜಿ ಮಾರಾಟ ಹೆಚ್ಚಾಗಿರುತ್ತದೆ, ತಾಂತ್ರಿಕ ನಷ್ಟ ಕಡಿಮೆ ಆಗಿರುತ್ತದೆ ಮತ್ತು ವಿದ್ಯುತ್ ಪರಿವರ್ತಕಗಳ ವಿಫಲತೆ ಕಡಿಮೆಯಾಗಿರುತ್ತದೆ.ಕೃಷಿ ಮತ್ತು ಕೃಷಿಯೇತರ ಭಾರವನ್ನು ಬೇರ್ಪಡಿಸುವುದರಿಂದ ಮೀಟರ್ ದಾಖಲಿತ ಬಳಕೆ ಹೆಚ್ಚಾಗಿರುತ್ತದೆ. ಹಾಗೂ ಉಪ ಕೇಂದ್ರಗಳಲ್ಲಿ ಲಭ್ಯವಿರುವ ಮಾಪಕದಿಂದಲೆ ಕೃಷಿ ಚಟುವಟಿಕೆಗಳಿಗೆ ಬಳಕೆಯಾದ ವಿದ್ಯುತ್ ಪ್ರಮಾಣವನ್ನು ನಿರ್ಣಯಿಸಬಹುದಾಗಿದೆ. ಇದರಿಂದ ಅತೀ ಕೊನೆಯಲ್ಲಿರುವ ಕೃಷಿ ಮತ್ತು ಕೃಷಿಯೇತರ ಗ್ರಾಹಕರಿಗೆ ವೋಲ್ಟೆಜ್‌ನಲ್ಲಿ ಗಣನೀಯ ಸುಧಾರಣೆ ಕಂಡುಬಂದಿದೆ.ಎನ್‌ಜೆವಾಯ್ ಯೋಜನೆಯ ಅನುಷ್ಠಾನದಿಂದ ಗ್ರಾಹಕರಿಗೆ ವಿದ್ಯುತ್ ಅಡಚಣೆ ಕಡಿಮೆಯಾಗಿರುತ್ತದೆ.ಈ ವರೆಗೆರೂ ಹಂತ–1 ಮತ್ತು 2 ಕಾಮಗಾರಿಗಳಿಗೆ **469.85** ಕೋಟಿ ವೆಚ್ಚ ಮಾಡಲಾಗಿದೆ.

ಎನ್‌ಜೆವಾಯ್ ಹಂತ–3:

ಆರಂಭದಲ್ಲಿ ಎನ್‌ಜೆವಾಯ್ ಯೋಜನೆಯನ್ನು ಆರ್‌ಎಲ್‌ಎಮ್‌ಎಸ್ ಯೋಜನೆಯನ್ನು ಅನುಷ್ಠಾನಗೊಳಿಸಿದ ಕ್ಷೇತ್ರವನ್ನು ಹೊರತು ಪಡಿಸಿ ಹಂತ–1 ಮತ್ತು 2 ರಲ್ಲಿ ಒಟ್ಟು 34 ತಾಲ್ಲೂಕುಗಳಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿತ್ತು.ನಂತರ ಆರ್‌ಎಲ್‌ಎಮ್‌ಎಸ್ ಯೋಜನೆಯನ್ನು ಅನುಷ್ಠಾನಗೊಳಿಸಿದ ಕ್ಷೇತ್ರಗಳಿಗೆ ಎನ್‌ಜೆವಾಯ್ ಯೋಜನೆಯನ್ನು ತೆಗೆದುಕೊಳ್ಳಲು ಅಗತ್ಯವೆಂದು ಭಾವಿಸಲಾಯಿತು.ಆದ್ದರಿಂದ ಒಟ್ಟು ರೂ. 117.03 ಕೋಟಿಗಳ ಅಂದಾಜು ಪತ್ರಿಕೆಯ ಡಿಪಿಆರ್‌ನ್ನು ತಯಾರಿಸಿ ಎನ್‌ಜೆವಾಯ್ ಯೋಜನೆಯನ್ನು ಹಂತ–3 ರಲ್ಲಿ ತೆಗೆದುಕೊಳ್ಳಲು ನಿರ್ಧರಿಸಲಾಯಿತು ಮತ್ತು ಅದರಂತೆ ಆರ್‌ಇಸಿ ರವರು ಒಟ್ಟುರೂ. 101.76 ಕೋಟಿಗಳಿಗೆ ಸಾಲವನ್ನು ಮಂಜೂರು ಮಾಡಿರುತ್ತಾರೆ ಹಾಗೂ ಈ ವರೆಗೆರೂ ಹಂತ–3 ರ ಕಾಮಗಾರಿಗಳಿಗೆ **91.10** ಕೋಟಿ ವೆಚ್ಚ ಮಾಡಲಾಗಿದೆ.

ಪ್ರಸ್ತಾಪಿತ ಕೆಲಸದ ವಿವರಗಳು ಈ ಕೆಳಗಿನಂತಿವೆ.

ಒಟ್ಟು ಪ್ರಸ್ತಾವಿತ ಮಾರ್ಗಗಳು–92

ಒಟ್ಟು ಗ್ರಾಮಗಳು–575

ಮುಂದುವರೆದು ಏಕ ರೂಪದ ಪಿಕ್ಯೂಆರ್ ಗಳನ್ನು ಸದರಿ ಟೆಂಡರ್‌ನಲ್ಲಿ ಅಳವಡಿಸಲು ಕರ್ನಾಟಕ ಘನ ಸರ್ಕಾರದ ಒಪ್ಪಿಗೆ ಪಡೆದು ನಿರ್ಧರಿಸಲಾಯಿತು.ಅದರಂತೆ ಜಿಲ್ಲಾವಾರು ಟೆಂಡರ್‌ಗಳನ್ನು ಬೆಳಗಾವಿ, ಧಾರವಾಡ, ಹಾವೇರಿ ಮತ್ತು ಗದಗ ಜಿಲ್ಲೆಗಳಲ್ಲಿ ಕರೆಯಲಾಯಿತು.ಈಗಾಗಲೇ ಎಲ್ಲಾ 4 ಜಿಲ್ಲೆಗಳ ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿದ್ದು ಕೆಲಸ ಪ್ರಗತಿಯಲ್ಲಿರುತ್ತದೆ.

ಜುಲೈ–2019 ರ ಅಂತ್ಯಕ್ಕೆ ಕಾಮಗಾರಿಯ ಪ್ರಗತಿಯು ಈ ಕೆಳಗಿನಂತಿರುತ್ತದೆ.

ಒಟ್ಟು ಪ್ರಸ್ತಾವಿತ ಮಾರ್ಗಗಳು –92

ಒಟ್ಟು ಚಾಲನೆಗೊಂಡ ಮಾರ್ಗಗಳು–92

ಒಟ್ಟು ವಿದ್ಯುದ್ಧೀಕರಣಗೊಂಡ ಹಳ್ಳಿಗಳ ಸಂಖ್ಯೆ–575

ಶೇ 100% ರಷ್ಟು ಕಾಮಗಾರಿಯು ದಿನಾಂಕ: 31.07.2019 ರಂದು ಪೂರ್ಣಗೊಂಡಿದೆ.

17. ಗಂಗಾ ಕಲ್ಯಾಣ ಯೋಜನೆ:

ಗಂಗಾ ಕಲ್ಯಾಣ ಯೋಜನೆಯು 1983 ರಲ್ಲಿ ಅನುಷ್ಠಾನಗೊಂಡಿರುತ್ತದೆ.ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊರೆದ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು, ನಿಗಮ ಅಭಿವೃದ್ಧಿ ನಿಗಮಗಳು ಹಾಗೂ ಕರ್ನಾಟಕ ಸರ್ಕಾರದ ಸಾಮಾಜಿಕ ಜವಾಬ್ದಾರಿಯೂ ಆಗಿರುತ್ತದೆ.ಸದರಿ ಯೋಜನೆಯು ಒಟ್ಟು 5 ಅಭಿವೃದ್ಧಿ ನಿಗಮಗಳಾದ ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಹಿಂದುಳಿದ ವರ್ಗ, ಅಲ್ಪ ಸಂಖ್ಯಾತ ಹಾಗೂ ವಿಶ್ವಕರ್ಮ ಅಭಿವೃದ್ಧಿ ನಿಗಮಗಳನ್ನು ಒಳಗೊಂಡಿರುತ್ತದೆ.ಫಲಾನುಭವಿಗಳ ವಿವರಗಳನ್ನು ಸಂಬಂಧಪಟ್ಟ ಅಭಿವೃದ್ಧಿ ನಿಗಮಗಳ ಜಿಲ್ಲಾಧಿಕಾರಿಗಳು ನೀಡಬೇಕಾಗಿರುತ್ತದೆ.

ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು ಸಾಮಾಜಿಕವಾಗಿ ಕಡ್ಡಾಯ ಕೆಲಸವಾಗಿದ್ದು ಸದರಿ ಪ್ರಗತಿಯನ್ನು ಇಂಧನ ಇಲಾಖೆ ಹಾಗೂ ಮಾನ್ಯ ಮುಖ್ಯಮಂತ್ರಿಯವರ ಕಚೇರಿಯಿಂದಲೇ ಪರಿಶೀಲಿಸಲಾಗುತ್ತಿದೆ.

ಮೇಲ್ಕಾಣಿಸಿದ ಅಭಿವೃದ್ಧಿ ನಿಗಮಗಳಿಗೆ ಸಂಬಂಧಿಸಿದ ಅರ್ಜಿಗಳು ಪ್ರತಿ ವರ್ಷ ನೊಂದಣಿಯಾಗುತ್ತಿದ್ದು ಕರ್ನಾಟಕ ಘನ ಸರ್ಕಾರದಿಂದ ನಿಗಧಿಪಡಿಸಲಾದ ಗುರಿಯನ್ನು ತಲುಪುವ ಹಾಗೂ ಪ್ರಥಮ ಆದ್ಯತೆಯ ಮೇರೆಗೆ ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ದರ ಗುತ್ತಿಗೆ ಆಧಾರದ ಮೇಲೆ ಟೆಂಡರುಗಳನ್ನು ಕರೆಯಲಾಗಿದೆ.

ಗಂಗಾ ಕಲ್ಯಾಣ ಸಮನ್ವಯ ಸಭೆಯನ್ನು ಸಂಬಂಧಪಟ್ಟ ಅಭಿವೃದ್ಧಿ ನಿಗಮಗಳ ಜಿಲ್ಲಾಧಿಕಾರಿಗಳೊಂದಿಗೆ ನಡೆಸಿ ಮಾಸಿಕ ಗಂಗಾ ಕಲ್ಯಾಣ ಅಂಕಿ ಅಂಶಗಳನ್ನು ಜಂಟಿ ಸಹಿಯೊಂದಿಗೆ ನಿಗಮ ಕಚೇರಿಗೆ ಸಲ್ಲಿಸುತ್ತಾರೆ.ಸದರಿ ಮಾಹಿತಿಯ ಆಧಾರದ ಮೇಲೆ ಮಾಸಿಕ ಪ್ರಗತಿಯನ್ನು ಕವಿಪ್ರನಿನಿ, ಪ್ರತಿ ತಿಂಗಳು ನಡೆಯುವ ಎಮ್‌ಎಮ್‌ಆರ್ ಸಭೆಗೆ ಮತ್ತು ಸಿಎಮ್ ರವರ ಕಛೇರಿಗೆ ಸಲ್ಲಿಸಲಾಗುವುದು.

ಆರ್ಥಿಕ ವರ್ಷ 2020–21 ನೇ ಸಾಲಿನಲ್ಲಿ ಒಟ್ಟು **2682 ಸಂಖ್ಯೆಯ** ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

18. ಕುಡಿಯುವ ನೀರಿನ ಕಾಮಗಾರಿಗಳು:

ಹುವಿಸಕಂನಿ ಯಲ್ಲಿ ಕುಡಿಯುವ ನೀರಿನ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಗಳನ್ನು ಪ್ರಥಮ ಆಧ್ಯತೆಯ ಮೇರೆಗೆ ಕೈಗೊಳ್ಳಲಾಗಿದೆ. ಸ್ಥಳೀಯ ಸಂಸ್ಥೆಗಳಿಂದ ನೊಂದಣಿಗೊಂಡ ಕುಡಿಯುವ ನೀರಿನ ಸ್ಥಾವರಗಳಿಗೆ ಹೆಚ್‌ಟಿ/ ಎಲ್‌ಟಿ ಮಾರ್ಗವನ್ನು ವಿಸ್ತರಿಸಿ ಪರಿವರ್ತಕವನ್ನು ಜೋಡಿಸಿ ಬೇಕಾಗಿರುವ ಮೂಲಭೂತ ಸೌಕರ್ಯವನ್ನು ಒದಗಿಸಲು ಬೇಕಾಗಿರುವ ಕ್ರಮವನ್ನು ಕೈಗೊಳ್ಳಲಾಗುವುದು.

ಮೂಲಭೂತ ಸೌಕರ್ಯವನ್ನು ಒದಗಿಸುವ ಉದ್ದೇಶದಿಂದ ವಿಭಾಗಾವಾರು ಭಾಗಶಃ ದರ ಗುತ್ತಿಗೆ ಆಧಾರದ ಮೇಲೆ ಟೆಂಡರುಗಳನ್ನು ಕರೆಯಲಾಗಿದೆ.

ಆರ್ಥಿಕ ವರ್ಷ 2020–21 ನೇ ಸಾಲಿನಲ್ಲಿ ಒಟ್ಟು **1060 ಸಂಖ್ಯೆಯ** ಕುಡಿಯುವ ನೀರಿನ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

19. ದೀನದಯಾಳ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ (DDUGJY)

ಭಾರತ ಸರ್ಕಾರವು ಗ್ರಾಮೀಣ ಪ್ರದೇಶಗಳಲ್ಲಿ ನಿರಂತರ ವಿದ್ಯುತ್ ಸೌಲಭ್ಯ ಕಲ್ಪಿಸಲು ದೀನದಯಾಳ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯನ್ನು (DDUGJY) ಹೊರತಂದಿದೆ.

ದೀನದಯಾಳ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯಡಿಯಲ್ಲಿ, ಗ್ರಾಮೀಣ ಭಾಗದಲ್ಲಿ ***ಕೃಷಿ ಹಾಗೂ ಇತರ ಫೀಡರ್‌ಗಳನ್ನು ಬೇರ್ಪಡಿಸುವುದು (ಗೃಹ ಮತ್ತು ಕೃಷಿ), ಉಪ ಪ್ರಸರಣ ಹಾಗೂ ಸರಬರಾಜು ಮಾರ್ಗಗಳನ್ನು ಬಲಪಡಿಸುವುದು ಹಾಗೂ ಉನ್ನತೀಕರಣಗೊಳಿಸುವುದು, ಗ್ರಾಮೀಣ ವಿದ್ಯುದ್ಧೀಕರಣ ಹಾಗು ಎಲ್ಲಾ ಹಂತಗಳಲ್ಲಿ ಮಾಪಕೀಕರಣ ಮಾಡುವುದು.***ಇದರಿಂದ ಗೃಹಬಳಕೆಗೆ ನಿರಂತರ ವಿದ್ಯುತ್ ಹಾಗು ಕೃಷಿ ಚಟುವಟಿಕೆಗೆ ಉತ್ತಮವಾದ ವಿದ್ಯುತ್ ನೀಡಲು ಅನುಕೂಲವಾಗುವುದು.

ಗ್ರಾಮೀಣ ವಿದ್ಯುದ್ದೀಕರಣದ ಹಿಂದಿನ ಯೋಜನೆಯಾದ ರಾಜೀವಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯನ್ನು ಹೊಸ ಯೋಜನೆಗೆ ಗ್ರಾಮೀಣ ವಿದ್ಯುದ್ದೀಕರಣ ಘಟಕವಾಗಿ ಸೇರಿಸಲಾಯಿತು.

ಹಂಚಿಕೆಯ ಅನುಸಾರ ಹುವಿಸ ಕಂಪನಿಯು ಅಂತಿಮ ಜಿಲ್ಲಾವಾರು ಹಾಗು ಘಟಕವಾರು ಯೋಜನೆಯ ವರದಿ ತಯಾರಿಸಿ ಮತ್ತು ರೂ.332.12 ಕೋಟಿಯ ದೀನದಯಾಳ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯ (DDUGJY) ಡಿಪಿಆರ್‌ಗಳನ್ನು DDUGJYಪೋರ್ಟ್‌ಲ್‌ನಲ್ಲಿ ದಿನಾಂಕ 01.12.2016 ರಂದು ಅಪ್‌ಲೋಡ್ ಮಾಡಲಾಗಿದೆ.

ಅದರಂತೆ ಹೆಸ್ಕಾಂನಲ್ಲಿ ಘಟಕವಾರು ಹಾಗು ಜಿಲ್ಲಾವಾರು ಹಂಚಿಕೆ ವಿವರ ಈ ಕೆಳಗಿನಂತೆ ಇದೆ:

ಕ್ರ. ಸಂ	ಜಿಲ್ಲೆ	ಗ್ರಾಮೀಣ ವಿದ್ಯುಧೀಕರಣ	ಮಾರ್ಗ ಬೇರ್ಪಡಿಸುವುದು	ವಿದ್ಯುತ ರಹಿತ ಮನೆಗಳಿಗೆ ವಿದ್ಯುತ್ ಒದಗಿಸುವುದು	ಮಾಪಕ ಅಳವಡಿಕೆ	ವಿದ್ಯುತ ಜಾಲ ಬಲ ಪಡಿಸುವುದು	ಸಂಸದ ಆದರ್ಶ ಗ್ರಾಮ	ಒಟ್ಟು
1	ಬಾಗಲಕೋಟೆ	**0.00**	3.50	4.66	**11.17**	11.79	3.62	**34.74**
2	ಬೆಳಗಾವಿ	**1.23**	3.50	12.27	**26.66**	35.94	3.24	**82.84**
3	ವಿಜಯಪುರ	**0.00**	5.30	7.59	**24.48**	9.93	0.42	**47.72**
4	ಧಾರವಾಡ	**0.00**	7.03	2.06	**21.86**	5.46	0.74	**37.15**
5	ಗದಗ	**0.00**	9.21	3.98	**8.75**	1.87	0.93	**24.74**
6	ಹಾವೇರಿ	**0.00**	10.00	6.19	**7.08**	25.66	0.00	**48.93**
7	ಉತ್ತರ ಕನ್ನಡ	**21.94**	0.00	11.58	**12.24**	9.28	0.96	**56.00**
ಒಟ್ಟು		**23.17**	**38.54**	**48.33**	**112.24**	**99.93**	**9.91**	**332.12**

- ಅದರಂತೆ, ಹು.ವಿ.ಸ.ಕಂ.ನಿ. ಯು ಪೂರ್ಣಗುತ್ತಿಗೆ ಆಧಾರದಲ್ಲಿ ಫೀಡರ್ ಬೇರ್ಪಡಿಸುವಿಕೆ, ಸಂಸದರ ಆದರ್ಶ ಗ್ರಾಮ, ವಿದ್ಯುತ್ ರಹಿತ ಗ್ರಾಹಕರಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು ವ್ಯವಸ್ಥೆ ಜಾಲವನ್ನು ಬಲಪಡಿಸುವುದು

ಹಾಗೂ 33/11 ಕೆ.ವಿ. ಉಪ–ಕೇಂದ್ರಗಳ ಕಾಮಗಾರಿಗಳ ಜಿಲ್ಲಾವಾರು ಟೆಂಡರ್ (12 ಪ್ಯಾಕೇಜ್‌ಗಳು) ಗಳನ್ನು ದಿನಾಂಕ: 26.09.2016 ರಂದು ರೂ.196.76 ಕೋಟಿಗಳಿಗೆ ಟೆಂಡರ್ ಕರೆಯಲಾಗಿದೆ.

- ಸದರಿ ಯೋಜನೆಯಲ್ಲಿ ಹೆಸ್ಕಾಂ ವ್ಯಾಪ್ತಿಯ ಒಟ್ಟು **88707** ಸಂಖ್ಯೆಯ ವಿದ್ಯುತ್ ರಹಿತ ಬಿ.ಪಿ.ಎಲ್. ಫಲಾನುಭವಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ಯೋಜನೆ ರೂಪಿಸಲಾಗಿದೆ.
- ಅಲಗವಾಡಿ, ಹಳಿಹಾಳ ಮತ್ತು ಜಂಬಗಿಯಲ್ಲಿ ಹೆಚ್ಚುವರಿಯಾಗಿ 3 ಸಂಖ್ಯೆಯ 5 ಎಮ್.ವಿ.ಎ. ಪರಿವರ್ತಕವನ್ನು ಅಳವಡಿಸುವ ಕಾಮಗಾರಿಗೆ ದಿನಾಂಕ: 03.02.2017 ರಂದು ಟೆಂಡರ್ ಕರೆದು ದಿನಾಂಕ: 27.05.2017 ರಂದು ಅವಾರ್ಡ್ ನೀಡಲಾಗಿದೆ.
- ಮುಂದುವರೆದು ವಲಯವಾರು ಮಾಪಕೀಕರಣಕ್ಕಾಗಿ ರೂ. 102 ಕೋಟಿ ಗಳಿಗೆ ದಿನಾಂಕ: 03.03.2018 ರಂದು ಟೆಂಡರ್ ಕರೆಯಲಾಗಿತ್ತು.
- ರೂ.8.45 ಕೋಟಿಗಳ ಫೀಡರ್‌ಗಳ ಮಾಪಕೀಕರಣ ಕೆ.ಪಿ.ಟಿ.ಸಿ.ಎಲ್. ಕೈಗೆತ್ತಿಕೊಂಡಿದೆ.
- ಯೋಜನೆಯ ಉದ್ದೇಶಗಳು: ಪ್ರಮುಖವಾಗಿ ಗ್ರಾಮೀಣ ಪ್ರದೇಶಗಳಲ್ಲಿ ನಿರಂತರ ಮತ್ತು ಗುಣಮಟ್ಟದ ವಿದ್ಯುತ್ ಪೊರೈಕೆ ದಿನನಿತ್ಯದ ಪ್ರಮುಖ ಅಂಶವಾಗಿದೆ ಹಾಗು ತಾಂತ್ರಿಕ ಹಾಗು ವಾಣಿಜ್ಯ (AT&C) ನಷ್ಟವನ್ನು ಕಡಿತಗೊಳಿಸುವದು.
- DDUGJY ಯೋಜನೆಯು 31.12.2020 ಕ್ಕೆ ಪೂರ್ಣಗೊಂಡಿದೆ.
- 31ನೇ ಡಿಸೆಂಬರ್ 2020 ಕ್ಕೆ ಇರುವಂತೆ, ದೀನದಯಾಳ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯಡಿಯಲ್ಲಿರುವ ಕಾಮಗಾರಿಗಳ ಪ್ರಗತಿಯು ಈ ಕೆಳಗಿನಂತಿರುತ್ತದೆ.

ಕ್ರ. ಸಂ.	ಮೈಲಿಗಲ್ಲು	ಪ್ರಮಾಣ	ಹುವಿಸಕಂನಿ	
			ಗುರಿ	ಸಾಧನೆ
1	ಹೊಸ 11 ಕೆವಿ ಲೈನ್ ಎಳೆಯುವುದು	ಕಿ.ಮಿ.	1433	1433
2	11 ಕೆವಿ ಲೈನ್ ರಿ–ಕಂಡಕ್ಟರಿಂಗ್	ಕಿ.ಮಿ.	3164.67	3164.67
3	ಹೊಸ ಎಲ್‌ಟಿ ಲೈನ್ ಎಳೆಯುವುದು	ಕಿ.ಮಿ.	454.46	454.46
4	ಎಲ್‌ಟಿ ಲೈನ್ ರಿ–ಕಂಡಕ್ಟರಿಂಗ್	ಕಿ.ಮಿ.	178.64	178.64
5	ಹೊಸ ವಿತರಣಾ ಪರಿವರ್ತಕಗಳನ್ನು ಒದಗಿಸುವುದು	ಸಂ.	702	702
6	ವಿತರಣಾ ಪರಿವರ್ತಕಗಳ ಬಲಪಡಿಸುವಿಕೆ	ಸಂ.	5	5
7	ಬಿಪಿಎಲ್ ಮನೆಗಳಿಗೆ ಸೇವಾ ಸಂಪರ್ಕವನ್ನು ಒದಗಿಸುವುದು	ಸಂ.	88442	88442
8	ಹೆಚ್‌ಟಿ ಎಬಿ ಕೇಬಲ್	ಕಿ.ಮಿ.	41.35	41.35
9	ಎಲ್‌ಟಿ ಎಬಿ ಕೇಬಲ್	ಕಿ.ಮಿ.	87.84	87.84
10	ಸಧ್ಯಕ್ಕಿರುವ ಡಿಟಿಸಿ(ಆರ್&ಎಂ)ಗಳಿಗೆ ಅರ್ಥಿಂಗ್ ಒದಗಿಸುವುದು	ಸಂ.	62	62
11	ಹೊಸ 33/11 ಕೆವಿ ಉಪ–ವಿದ್ಯುತ್ ಕೇಂದ್ರಗಳು	ಸಂ.	04	04
12	ಸಧ್ಯಕ್ಕಿರುವ 33/11 ಕೆವಿ ಉಪ–ವಿದ್ಯುತ್ ಕೇಂದ್ರಗಳಿಗೆ ಹೆಚ್ಚುವರಿ 5 ಎಂವಿಎ	ಸಂ.	03	03

20. ಹೆಸ್ಕಾಂನಲ್ಲಿ ಕೇಂದ್ರ ಸರ್ಕಾರದ ಸಮಗ್ರ ಇಂಧನ ಅಭಿವೃದ್ಧಿ ಯೋಜನೆ (IPDS)

1. ವಿದ್ಯುತ್ ರಾಷ್ಟ್ರದ ಆರ್ಥಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ಗ್ರಾಹಕರ ತಳಹದಿ ಹೆಚ್ಚಳದಿಂದಾಗಿ, ಜೀವನಶೈಲಿ ಮತ್ತು ಬಳಕೆಯ ಮಾದರಿಯಲ್ಲಿ ಬದಲಾವಣೆಗಳಿಂದಾಗಿ ನಿರಂತರ ಮತ್ತು ಗುಣಮಟ್ಟದ ವಿದ್ಯುತ್ ಪೊರೈಕೆ ದಿನನಿತ್ಯದ ಪ್ರಮುಖ ಅಂಶವಾಗಿದೆ.

2. ವಿದ್ಯುತ್ ಕ್ಷೇತ್ರದ ಮೂರು ಪ್ರಮುಖ ಪದರಗಳಾದ ವಿದ್ಯುತ್ ಉತ್ಪಾದನೆ, ಸಾಗಣೆ ಮತ್ತು ವಿತರಣೆಯಲ್ಲಿ, ವಿದ್ಯುತ್ ವಿತರಣಾ ಕಂಪನಿಗಳು ಅತ್ಯಂತ ದೂರದ ಗ್ರಾಹಕರ ಜೊತೆ ನೇರ ಸಂಪರ್ಕ ಹೊಂದಿದ್ದು, ನಿರಂತರ ಮತ್ತು ಗುಣಮಟ್ಟದ ವಿದ್ಯುತ್ ಪೊರೈಕೆ ಸರಬರಾಜು ಮಾಡುವುದರ ಜೊತೆಗೆ ವಿದ್ಯುತ್ ಕ್ಷೇತ್ರದ ಆರ್ಥಿಕ ಹರಿವಿನ ಬಗ್ಗೆ ಜವಾಬ್ದಾರರಾಗಿರುತ್ತವೆ.

3. ವಿದ್ಯುತ್ ವಿತರಣಾ ಕಂಪನಿಗಳ ಸಧ್ಯದ ಆರ್ಥಿಕ ವಿಷಯವನ್ನು ಗಮನದಲ್ಲಿರಿಸಿಕೊಂಡು ನಗರ ಪ್ರದೇಶಗಳಲ್ಲಿ ಉಪ ಪ್ರಸರಣ ಮತ್ತು ವಿತರಣ ಜಾಲವನ್ನು ಬಲಪಡಿಸಿ ಮೀಟರಿಂಗ ಸಲುವಾಗಿ ಅಗತ್ಯವಿರುವ ಹಣಕಾಸಿನ ನೆರವು ವಿಸ್ತರಿಸಲು ಭಾರತ ಸರ್ಕಾರವು ಸಮಗ್ರ ಇಂಧನ ಅಭಿವೃದ್ಧಿ ಯೋಜನೆ (IPDS) ಜಾರಿಗೆ ತಂದಿರುತ್ತದೆ.

4. ಈ ಯೋಜನೆಯಡಿಯಲ್ಲಿ ಕೆಳಕಂಡ ಪ್ರಮುಖ ಘಟಕಗಳು ಒಳಗೊಂಡಿರುತ್ತವೆ.

   ಅ) ನಗರ ಪ್ರದೇಶಗಳಲ್ಲಿ ಉಪ ಪ್ರಸರಣ ಮತ್ತು ವಿತರಣ ಜಾಲವನ್ನು ಬಲಪಡಿಸುವುದು.

   ಬ)ನಗರ ಪ್ರದೇಶಗಳಲ್ಲಿ ಫೀಡರ್ ಮತ್ತು ಗ್ರಾಹಕರಿಗೆ ಮಾಪಕಗಳನ್ನು ಅಳವಡಿಸುವುದು.

   ಕ)ಸರ್ಕಾರಿ ಕಛೇರಿಗಳ ಕಟ್ಟಡದ ಮೇಲ್ಛಾವಣಿಯಲ್ಲಿ ಸೌರಶಕ್ತಿ ಘಟಕಗಳನ್ನು ನೆಟ್ ಮಾಪಕಗಳ ಸಹಿತ ಅಳವಡಿಸುವುದು.

5. ಈ ಮೊದಲಿನ RAPDRP ಯೋಜನೆಯು IPDS ನಲ್ಲಿ ವಿಲೀನಗೊಂಡಿರುತ್ತದೆ.

6. ಪ್ರಸ್ತುತ ಯೋಜನೆಯು ಹೆಸ್ಕಾಂ ವ್ಯಾಪ್ತಿಯ 7 ವೃತ್ತಗಳ 73 ಸಂಖ್ಯೆಯ ನಗರ ಪ್ರದೇಶಗಳಿಗೆ ವಿಸ್ತರಿಸಲಾಗಿದೆ.

7. ಇಂಧನ ಸಚಿವಾಲಯದ ಸಂಪೂರ್ಣ ಮಾರ್ಗದರ್ಶನದಲ್ಲಿ IPDS ಯೋಜನೆಯ ಕಾರ್ಯಾಚರಣೆ ಮತ್ತು ಅನುಷ್ಠಾನಕ್ಕೆ ಮೆ: ಪವರ್ ಫೈನಾನ್ಸ್ ಕಾರ್ಪೊರೇಷನ್ ನೋಡಲ್ ಎಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದೆ.

8. ಪಿ.ಎಫ್.ಸಿ. ಯು ಹೆಸ್ಕಾಂ ವ್ಯಾಪ್ತಿಯ 7 ವೃತ್ತಗಳ 73 ಸಂಖ್ಯೆಯ ನಗರ ಪ್ರದೇಶಗಳ ಯೋಜನಾ ವೆಚ್ಚಕ್ಕೆ ದಿನಾಂಕ 16.03.2016 ರಂದು ರೂ.170.35 ಕೋಟಿ ಮತ್ತು ದಿನಾಂಕ 01.02.2018 ರಂದು ರೂ.35.00 ಕೋಟಿ ಮೊತ್ತಕ್ಕೆ ಹಣಕಾಸಿನ ನೆರವನ್ನು ತಿಳಿಸಿದೆ. ಈ ಅನುಮೋದನೆಯ ವಿವರಗಳು ಕೆಳಗಿನಂತಿವೆ.

   I. 7 ವೃತ್ತಗಳಿಗಾಗಿ ಅನುಮೋದಿತ ಡಿಪಿಆರ್ ಮೊತ್ತ – 205.35 ಕೋಟಿ.

   II. ಭಾರತ ಸರ್ಕಾರದ ಅನುದಾನ ಮೊತ್ತ – 123.21 ಕೋಟಿ. (ಕ್ರ.ಸಂ. iರ 60%.)

   III. ಯೋಜನಾ ನಿರ್ವಾಹಣೆ ಸಂಸ್ಥೆಗೆ ಭಾರತ ಸರ್ಕಾರದ ಅನುದಾನ ಮೊತ್ತ – 1.075 ಕೋಟಿ (ಕ್ರ.ಸಂ. i ರ 0.5%).

9. ಸದರಿ IPDSಯೋಜನೆಯ ನಿರ್ವಹಣೆಗೆ ನೆರವಾಗಲು ಮತ್ತು ಸಕಾಲದಲ್ಲಿ ಜಾರಿಗೊಳಿಸಲು ಹೆಸ್ಕಾಂ M/s. RECPDCL, ಬೆಂಗಳೂರು ಇವರನ್ನು ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಏಜೆನ್ಸಿಯಾಗಿ ನೇಮಿಸಲಾಗಿದೆ.

10. ಸಮಗ್ರ ಇಂಧನ ಅಭಿವೃದ್ಧಿ ಯೋಜನೆಯಡಿಯಲ್ಲಿ (IPDS) ಹೆಸ್ಕಾಂನ ಘಟಕವಾರು ವಿವರ ಈ ಕೆಳಗಿನಂತಿದೆ:

ಕ್ರ ಸಂ	ವಿಷಯ	ಮೊತ್ತ ರೂ (ಕೋಟಿಗಳಲ್ಲಿ
1.	33 ಕೆ.ವಿ. ಉಪ–ಕೇಂದ್ರಗಳ ನಿರ್ಮಾಣ	37.91
2.	ವಿದ್ಯುತ ಜಾಲ ಬಲವರ್ಧನೆ	93.81
3.	ಮಾಪಕೀಕರಣ (ಫೀಡರ್ ಹಾಗು ಗ್ರಾಹಕರ ಮಾಪಕಗಳು)	60.89
4.	ಸರ್ಕಾರಿ ಕಛೇರಿಗಳ ಕಟ್ಟಡದ ಮೇಲ್ಛಾವಣಿಯಲ್ಲಿ ಸೌರಶಕ್ತಿ ಘಟಕಗಳನ್ನು ನೆಟ್ ಮಾಪಕಗಳ ಸಹಿತ ಅಳವಡಿಸುವುದು	12.74
	ಒಟ್ಟು	**205.35**

11. ನಗರ ಪ್ರದೇಶಗಳಲ್ಲಿ ನಿರಂತರ ಮತ್ತು ಗುಣಮಟ್ಟದ ವಿದ್ಯುತ್ ಪೊರೈಕೆಯನ್ನು ಒದಗಿಸಲು ಮತ್ತು ತಾಂತ್ರಿಕ ಹಾಗೂ ವಾಣಿಜ್ಯ ನಷ್ಟವನ್ನು ಕಡಿತಗೊಳಿಸುವಲ್ಲಿ ಈ ಯೋಜನೆಯು ಸಹಕಾರಿಯಾಗಿದೆ.

12. ಹುವಿಸಕಂಪನಿಯು ಪೂರ್ಣ ಗುತ್ತಿಗೆ ಆಧಾರದ ಮೇಲೆ ಟೆಂಡರ್ ಆಹ್ವಾನಿಸಿದೆ ಹಾಗೂ ಎಲ್ಲಾ ಕಾಮಗಾರಿಗಳಿಗೆ ಕಾರ್ಯಾದೇಶಗಳನ್ನು ಜಾರಿಗೊಳಿಸಿದೆ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿವೆ.

13. ಐಪಿಡಿಎಸ್ ಯೋಜನೆಯು 31.12.2019 ಕ್ಕೆ ಪೂರ್ಣಗೊಂಡಿದೆ.

14. ಐಪಿಡಿಎಸ್ – ಭೌತಿಕ ಪ್ರಗತಿ (ಮಾರ್ಚ್–2020 ರವರೆಗೆ)

ಕ್ರ. ಸಂ.	ಮೈಲಿಗಲ್ಲು	ಪ್ರಮಾಣ	ಹುವಿಸಕಂನಿ	
			ಗುರಿ	ಸಾಧನೆ
1	ಹೊಸ ಉಪಕೇಂದ್ರ	ಎಂವಿಎ	55	55
2	ಹೊಸ ಉಪಕೇಂದ್ರಗಳ ಸಂಖ್ಯೆ	ಸಂ.	5	1
3	33 ಕೆವಿ ಹೊಸ ಫೀಡರ್‌ಗಳು	ಕಿ.ಮಿ.	7.35	7.35
4	11 ಕೆವಿ ಹೊಸ ಫೀಡರ್‌ಗಳು	ಕಿ.ಮಿ.	189	189
5	11 ಕೆವಿ ಫೀಡರ್ ರಿಕಂಡಕ್ಟರಿಂಗ್	ಕಿ.ಮಿ.	197	197
6	ಏರಿಯಲ್ ಬಂಚಡ್ ಕೇಬಲ್	ಕಿ.ಮಿ.	215	215
7	ಭೂಗತ ಕೇಬಲ್	ಕಿ.ಮಿ.	27.5	27.5
8	11 ಕೆವಿ ಬೇ ಎಕ್ಸ್‌ಟೆನ್ಷನ್	ಸಂ.	4	4
9	ಹೊಸ ವಿತರಣಾ ಪರಿವರ್ತಕಗಳ ಸ್ಥಾಪನೆ	ಎಂವಿಎ	42	42
10	ಹೊಸ ವಿತರಣಾ ಪರಿವರ್ತಕಗಳ ಸ್ಥಾಪನೆ	ಸಂ.	514	514
11	ಪರಿವರ್ತಕಗಳ ಸಾಮರ್ಥ್ಯ ವರ್ಧನೆ	ಎಂವಿಎ	10	10
12	ಪರಿವರ್ತಕಗಳ ಸಾಮರ್ಥ್ಯ ವರ್ಧನೆ ಸಂಖ್ಯೆ	ಸಂ.	264	264
13	ಹೊಸ ಎಲ್‌ಟಿ ಲೈನ್	ಕಿ.ಮಿ.	85	85
14	ಎಲ್‌ಟಿ ಲೈನ್ ರಿಕಂಡಕ್ಟರಿಂಗ್	ಕಿ.ಮಿ.	1327	1327
15	ಬೌಂಡರಿ ಮೀಟರಿಂಗ್	ಸಂ.	9	9
16	ಗ್ರಾಹಕ ಮಾಪಕ	ಸಂ.	203801	203801
17	ಸೌರ ಫಲಕಗಳು	ಕೆಡಬ್ಲುಪಿ	1821	1817

ಮೇಲಿನವುಗಳ ಜೊತೆಗೆ ಉಣಕಲ್, ಹುಬ್ಬಳ್ಳಿ, ಧಾರವಾಡ ಮತ್ತು ರಾಣೆಬೆನ್ನೂರು ನಗರಗಳಲ್ಲಿ 3 ಸಂಖ್ಯೆ ಜಿಐಎಸ್ ಉಪಕೇಂದ್ರಗಳಿಗೆ ಪಿಎಫ್‌ಸಿ ರೂ.23.06 ಕೋಟಿಗಳನ್ನು ಮಂಜೂರು ಮಾಡಲಾಗಿದೆ.

2x8 ಎಮ್.ವಿ.ಎ 33/11ಕೆವಿ ಜಿಐಎಸ್ ಉಣಕಲ್ ಮತ್ತು 2x5 ಎಮ್.ವಿ.ಎ 33/11ಕೆವಿ ಜಿಐಎಸ್ ಧಾರವಾಡ ಉಪಕೇಂದ್ರಗಳಿಗೆ ಅನುಕ್ರಮವಾಗಿ ದಿನಾಂಕ: 01.02.2020 ಮತ್ತು 24.02.2020 ರಂದು ಕಾರ್ಯಾದೇಶವನ್ನು ನೀಡಲಾಗಿದೆ. ಸದರಿ ಕಾಮಗಾರಿಗಳನ್ನು ನವೆಂಬರ್ 21 ರೊಳಗೆ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ.

21. ಹೆಸ್ಕಾಂನಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ, ಸೇರಿಸಲಾದ, ವಿಫಲವಾದ ಪರಿವರ್ತಕಗಳ ಮತ್ತು ಪರಿವರ್ತಕಗಳ ದುರಸ್ಥಿ ಕೇಂದ್ರಗಳ ವಿವರ:–

ಹೆಸ್ಕಾಂನಲ್ಲಿ ವಿದ್ಯುತ್ ವಿತರಣಾ ಜಾಲದಲ್ಲಿ ಆಗಸ್ಟ–2021 ರ ನಂತರ ಸುಮಾರು 2,24,565 ಸಂಖ್ಯೆ ಪರಿವರ್ತಕಗಳಿವೆ. ವಾರ್ಷಿಕವಾಗಿ ಸುಮಾರು 10,000 ಸಂಖ್ಯೆ ಪರಿವರ್ತಕಗಳು ವಿವಿಧ ಕಾಮಗಾರಿಗಳ ಸಲುವಾಗಿ ಅಂದರೆ UNIP, NJY, IPDS, ಗಂಗಾ ಕಲ್ಯಾಣ, ಸ್ವಯಂ ಕಾರ್ಯನಿರ್ವಹಣೆ ಯೋಜನೆಗಳು, ಕಟ್ಟಡ ಕಾಮಗಾರಿಗಳು, ವಸತಿ ಬಡಾವಣೆಗಳು ಇತ್ಯಾದಿ ಹೆಸ್ಕಾಂನ ವಿತರಣಾ ಜಾಲಕ್ಕೆ ಜೋಡಿಸಲಾಗುತ್ತದೆ.ವ್ಯವಸ್ಥೆಯಲ್ಲಿ ಅಸ್ತಿತ್ವದಲ್ಲಿರುವ ಪರಿವರ್ತಕಗಳಲ್ಲಿ ಶೇಕಡಾವಾರು 13% ನಷ್ಟು ವಿತರಣಾ ಪರಿವರ್ತಕಗಳು ವಾರ್ಷಿಕವಾಗಿ ವಿಫಲವಾಗುತ್ತಿವೆ. ವಿದ್ಯುತ್ ಸರಬರಾಜಿನಲ್ಲಿ ವಿಶ್ವಾಸಾರ್ಹತೆಯನ್ನು ಕಾಪಾಡಿಕೊಳ್ಳಲು ವಿಫಲವಾದ ಪರಿವರ್ತಕಗಳನ್ನು ಆದಷ್ಟು ಬೇಗ ಬದಲಾಯಿಸಲಾಗುತ್ತಿದೆ.

ವಿಫಲವಾದ ಟ್ರಾನ್ಸ್‌ಫಾರ್ಮರ್‌ಗಳನ್ನು ನಗರ ಪ್ರದೇಶಗಳಲ್ಲಿ 24 ಗಂಟೆಗಳಲ್ಲಿ ಮತ್ತು ಗ್ರಾಮೀಣ ಪ್ರದೇಶದಲ್ಲಿ 72 ಗಂಟೆಗಳಲ್ಲಿ ಕೆಇಆರ್‌ಸಿ ಮಾರ್ಗಸೂಚಿಯಂತೆ ಬದಲಾಯಿಸಲಾಗುತ್ತಿದೆ.ಉತ್ತಮ ಪರಿವರ್ತಕಗಳನ್ನು ತುರ್ತು ಸಂಗ್ರಹ ಅಗಿ ನಿರ್ವಹಿಸಲು 26 ಸಂಖ್ಯೆಯ ಪರಿವರ್ತಕಗಳ ಬ್ಯಾಂಕ್‌ಗಳನ್ನು ಸ್ಥಾಪಿಸಲಾಗಿದೆ.

ಸಮರ್ಪಕ ವಿದ್ಯುತ್‌ನ್ನು ಗ್ರಾಹಕರಿಗೆ ನೀಡುವ ಸಲುವಾಗಿ ವಿಫಲವಾದ ಪರಿವರ್ತಕಗಳನ್ನು ದುರಸ್ಥಿ ಮಾಡುವ ಮತ್ತು ಬದಲಾಯಿಸಲು ಅನುಕೂಲವಾಗುವಂತೆ ವಿವಿಧ ತಾಲ್ಲೂಕುಗಳಲ್ಲಿ 45 ಸಂಖ್ಯೆಯ ಪರಿವರ್ತಕ ದುರಸ್ಥಿ ಕೇಂದ್ರಗಳನ್ನು ಮತ್ತು ಮೂರು ಬೃಹತ್ ದುರಸ್ಥಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು 2 ಬೃಹತ್ ದುರಸ್ಥಿ ಕೇಂದ್ರಗಳು ಹುಬ್ಬಳ್ಳಿಯಲ್ಲಿ ಹಾಗೂ ಒಂದು ಬೃಹತ್ ದುರಸ್ಥಿ ಕೇಂದ್ರವು ಬೆಳಗಾವಿಯಲ್ಲಿ ಕಾರ್ಯನಿರ್ವಹಿಸುತ್ತಿವೆ.

ಹೆಸ್ಕಾಂ ವ್ಯಾಪ್ತಿಯಲ್ಲಿ ವಿಫಲವಾದ ಪರಿವರ್ತಕಗಳ ತ್ವರಿತವಾಗಿ ಬದಲಾಯಿಸಲು ವಿಫಲವಾದ ಟ್ರಾನ್ಸ್‌ಫಾರ್ಮರ್‌ನ ವರದಿಗಾಗಿ ಪ್ರತ್ಯೇಕ ಹೆಸ್ಕಾಂ ಟೋಲ್ ಫ್ರೀ ಸೇವೆಗಳನ್ನು (ಟೋಲ್ ಫ್ರೀ ನಂ: 1800–4254754) ಆರಂಭಿಸಲಾಗಿದೆ.

22. ನೀರಾವರಿ ಪಂಪ್‌ಸೆಟ್‌ಗಳ ವಿದ್ಯುದೀಕರಣ:

ಸರ್ಕಾರದ ಸುತ್ತೋಲೆ ಸಂಖ್ಯೆ: ಇಎನ್ 41 ವಿಎಸ್‌ಸಿ 2014/ಪಿ1 ದಿ: 14–07–2014 ರ ಪ್ರಕಾರ ನೋಂದಾಯಿತ ನೀರಾವರಿ ಪಂಪಸೆಟ್‌ಗಳಿಗೆ ವಿದ್ಯುತ್ ಮೂಲಭೂತ ಸೌಕರ್ಯವನ್ನು ರಚಿಸುವ ಕುರಿತು.

a. ಸರಕಾರದ ಸುತ್ತೋಲೆ/ಆದೇಶ ಸಂಖ್ಯೆ: ಇಎನ್41 ವಿಎಸ್‌ಸಿ 2014/ಪಿ1 ದಿನಾಂಕ: 14–07–2014 ಮತ್ತು ಇಎನ್ 41/ವಿಎಸ್‌ಸಿ/2014 ದಿನಾಂಕ 17.11.2016 ರನ್ವಯ ಅನಧಿಕೃತ ಹಾಗೂ ಹೊಸ ನೀರಾವರಿ ಪಂಪ್‌ಸೆಟ್‌ಗಳಿಗೆ ಯಾವುದೇ ಭೇದವಿರದೆ ಎಲ್ಲಾ ನೊಂದಾಯಿತ ಕೃಷಿ ಪಂಪ್‌ಸೆಟ್‌ಗಳಿಗೆ ಆದ್ಯತೆ ಮೇರೆಗೆ ರೂ. 10,000/–ಗಳನ್ನು ಮೂಲಭೂತ ಸೌಕರ್ಯ ಶುಲ್ಕವೆಂದು ಅರ್ಜಿದಾರರಿಂದ ಪಾವತಿಸಿಕೊಂಡು ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುವುದು.

b. ಈ ಯೋಜನೆಯಿಂದ ವಿತರಣಾ ವ್ಯವಸ್ಥೆಯನ್ನು ಸುಧಾರಿಸಲಾಗುವುದು ಅಂದರೆ, ಅಕ್ರಮ ವಿದ್ಯುತ್‌ನ್ನು ಖಾತೆಗೆ ಜೋಡಿಸುವುದು, ಪರಿವರ್ತಕದ ಓವರ್ ಲೋಡವನ್ನು ತಪ್ಪಿಸುವುದು, ಪರಿವರ್ತಕದ ವೈಫಲ್ಯವನ್ನು ತಗ್ಗಿಸುವುದು, ಪರಿವರ್ತಕದ ನಷ್ಟವನ್ನು ಕಡಿಮೆಗೊಳಿಸುವುದು ಮತ್ತು ಮಾನವರು/ಪ್ರಾಣಿಗಳು/ಸಾರ್ವಜನಿಕ ಆಸ್ತಿ ಸಂಬಂಧಿಸಿದಂತೆ ವಿದ್ಯುತ್ ಅಪಘಾತವನ್ನು ತಪ್ಪಿಸುವುದು ಹಾಗು ನೀರಾವರಿ ಪಂಪಸೆಟ್‌ಗಳಿಗೆ ಮೂಲಭೂತ ಸೌಕರ್ಯವನ್ನು ಒದಗಿಸುವ ಮೂಲಕ ಗುಣಮಟ್ಟದ ವಿದ್ಯುತ್ತನ್ನು ನೀರಾವರಿ ಪಂಪಸೆಟ್‌ಗಳಿಗೆ ಒದಗಿಸುವುದು.

- ಒಟ್ಟು ನೊಂದಾಯಿತ ಅರ್ಜಿಗಳು : 360386 ಸಂಖ್ಯೆಗಳು
- ಒಟ್ಟು ಮಾನ್ಯಗೊಂಡ ಅರ್ಜಿಗಳು : 351754 ಸಂಖ್ಯೆಗಳು

- ವಿದ್ಯುತ್ ಮೂಲಭೂತ ಸೌಕರ್ಯ ಶುಲ್ಕ ಪಾವತಿಸಿರುವ ಫಲಾನುಭವಿಗಳ ಸಂಖ್ಯೆ : 138512 ಸಂಖ್ಯೆಗಳು
- ಸರ್ವಿಸ್ ಮೇನ್ ಮುಖಾಂತರ ವಿದ್ಯುತ್ ಸಂಪರ್ಕ ಸಲ್ಲಿಸಲಾದ ಫಲಾನುಭವಿಗಳ ಸಂಖ್ಯೆ : 25284 ಸಂಖ್ಯೆಗಳು
- ವಿದ್ಯುತ್ ಮೂಲಭೂತ ಸೌಕರ್ಯ ಒದಗಿಸಲಾದ ಫಲಾನುಭವಿಗಳ ಸಂಖ್ಯೆ : 78410 ಸಂಖ್ಯೆಗಳು

ವಿದ್ಯುತ್ ಮೂಲಭೂತ ಸೌಕರ್ಯ ಒದಗಿಸಲು ಬಾಕಿ ಇರುವ ಫಲಾನುಭವಿಗಳು 34818 ಸಂಖ್ಯೆಗಳು.

ಬಾಕಿ ಇರುವ 34818 ಸಂಖ್ಯೆ ನೀರಾವರಿ ಪಂಪ್‌ಸೆಟ್‌ಗಳ ಪೈಕಿ 16502 ಸಂಖ್ಯೆಯ ನೀರಾವರಿ ಪಂಪ್‌ಸೆಟ್‌ಗಳಿಗೆ 2019–20 ರಲ್ಲಿ ವಿದ್ಯುತ್ ಮೂಲಭೂತ ಸೌಕರ್ಯ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ.11639 ಸಂಖ್ಯೆಯ ಫಲಾನುಭವಿಗಳಿಗೆ ವಿದ್ಯುತ್ ಮೂಲಭೂತ ಸೌಕರ್ಯವನ್ನು ಕಲ್ಪಿಸಲಾಗಿದೆ & ಬಾಕಿ ಉಳಿದ ಕಾಮಗಾರಿ ಪ್ರಗತಿಯಲ್ಲಿದೆ.

2020–21 ರಲ್ಲಿ 24084 ಸಂಖ್ಯೆಯ ಫಲಾನುಭವಿಗಳಿಗೆ ವಿದ್ಯುತ್ ಮೂಲಭೂತ ಸೌಕರ್ಯವನ್ನು ಒದಗಿಸುವ ಕಾಮಗಾರಿಗೆ ಕಾರ್ಯದೇಶಗಳನ್ನು ನೀಡಲಾಗಿದೆ.880 ಸಂಖ್ಯೆಯ ಫಲಾನುಭವಿಗಳಿಗೆ ವಿದ್ಯುತ್ ಮೂಲಭೂತ ಸೌಕರ್ಯ ಒದಗಿಸಲಾಗಿದೆ & ಬಾಕಿ ಉಳಿದ ಕಾಮಗಾರಿ ಪ್ರಗತಿಯಲ್ಲಿದೆ.

ಶೀಘ್ರ ಸಂಪರ್ಕ ಯೋಜನೆ (SSY) ಅಡಿಯಲ್ಲಿ ಜೂನ್ 2021 ರಲ್ಲಿರುವಂತೆ ಒಟ್ಟು 18820 ಸಂಖ್ಯೆಯ ಅರ್ಜಿದಾರರು ನೊಂದಾಯಿಸಲ್ಪಟ್ಟಿರುತ್ತಾರೆ.ಅವುಗಳಲ್ಲಿ 16117 ಸಂಖ್ಯೆಯ ಅರ್ಜಿದಾರರು ಮೂಲಸೌಕರ್ಯವನ್ನು ನಿರ್ಮಿಸಿರುತ್ತಾರೆ ಹಾಗೂ ಹುವಿಸಕಂಪನಿಯು 14455 ಸಂಖ್ಯೆಯ ವಿತರಣಾ ಪರಿವರ್ತಕಗಳನ್ನು ಒದಗಿಸಿರುತ್ತದೆ.ಬಾಕಿ ಉಳಿದ 1733 ಸಂಖ್ಯೆಯ ಅರ್ಜಿದಾರರು ಮೂಲಸೌಕರ್ಯವನ್ನು ನಿರ್ಮಿಸಬೇಕಾಗಿದೆ.

23. ಸೌಭಾಗ್ಯ

(ಸಹಜ ಬಿಜಲಿ ಹರ್ ಘರ್ ಯೋಜನಾ)

1. ಪ್ರಧಾನ ಮಂತ್ರಿ ಸಹಜ ಬಿಜಲಿ ಹರ್ ಘರ್ ಯೋಜನಾ –ಸೌಭಾಗ್ಯ ಯೋಜನೆಯನ್ನು ಅಧಿಕೃತ ಜ್ಞಾಪನಾ ಪತ್ರ: 11 ಅಕ್ಟೋಬರ್ 2017 ರಂದು ಕೇಂದ್ರ ಸರ್ಕಾರದ, ಇಂಧನ ಸಚಿವಾಲಯ ಆದೇಶ ಹೊರಡಿಸಿತು.
2. **ಉದ್ದೇಶ:** ಒಟ್ಟು ರೂ. 16,320 ಕೋಟಿ ಬಜೆಟ್ ವೆಚ್ಚದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಎಲ್ಲಾ ಮನೆಗಳಿಗೆ ಕೊನೆಯ ಮೈಲಿ ಸಂಪರ್ಕ ಮತ್ತು ವಿದ್ಯುತ್ ಸಂಪರ್ಕವನ್ನು ಒದಗಿಸುವ ಮೂಲಕ ಸಾರ್ವತ್ರಿಕ ಗೃಹ ವಿದ್ಯುದೀಕರಣಗೊಳಿಸವುದು.
3. **ಅರ್ಹತೆ:** ಖಾಸಗಿ ವಿತರಣಾ ಕಂಪನಿಗಳು ಸೇರಿದಂತೆ ಎಲ್ಲಾ ವಿತರಣಾ ಕಂಪನಿಗಳು, ರಾಜ್ಯ ವಿದ್ಯುತ್ ಇಲಾಖೆಗಳು ಮತ್ತು ಗ್ರಾಮೀಣ ವಿದ್ಯುತ್ ಸಹಕಾರ ಸಂಘಗಳು.
4. ಸದರಿ ಯೋಜನೆಯಡಿಯಲ್ಲಿ ಎಸ್.ಇ.ಸಿ.ಸಿ.–2011 ರ ಅಂಕಿ ಅಂಶ ದ ಮಾಹಿತಿಯನ್ನು ಅನುಸರಿಸಿ ಕನಿಷ್ಟ ಒಂದು ಅರ್ಹತೆಯನ್ನು ಹೊಂದಿದ ವಿದ್ಯುತ ರಹಿತ ಕುಟುಂಬಗಳನ್ನು ಗುರುತಿಸಲಾಗುವುದು.
5. ಗ್ರಾಮೀಣ ಮತ್ತು ನಗರ ಪ್ರದೇಶಗಳ ಪ್ರತ್ಯೇಕ ವಿವರವಾದ ಯೋಜನೆಯ ವರದಿಯನ್ನು ಸಲ್ಲಿಸುವುದು.
6. ಸದರಿ ಯೋಜನೆಯಡಿಯಲ್ಲಿರುವ ಹಣಕಾಸಿನ ಬೆಂಬಲದ ವಿವರಗಳು ಈ ಕೆಳಗಿನಂತಿರುತ್ತದೆ:

ಏಜನ್ಸಿ	ಬೆಂಬಲದ ಪ್ರಕಾರ	ಬೆಂಬಲದ ಮಿತಿ (ಪ್ರೋಜೆಕ್ಟ್ ವೆಚ್ಚದ ಶೇಕಡಾವಾರು)
ಕೇಂದ್ರ ಸರ್ಕಾರ	ಅನುದಾನ	60%
ವಿತರಣಾ ಕಂಪನಿಗಳ ಕೊಡುಗೆ	ಸ್ವಂತ ನಿಧಿ	10%
ಸಾಲಗಾರ (ಹಣಕಾಸು ಸಂಸ್ಥೆಗಳು/ಬ್ಯಾಂಕ್)/ ವಿತರಣಾ ಕಂಪನಿಗಳ ಸ್ವಂತ ನಿಧಿ	ಸಾಲ/ಸ್ವಂತ ನಿಧಿ	30%

ಸೂಚಿಸಲಾದ ಮೈಲಿಗಲ್ಲುಗಳ ಸಾಧನೆಯಿಂದ ಕೇಂದ್ರ ಸರ್ಕಾರದಿಂದ ಹೆಚ್ಚುವರಿ ಅನುದಾನ	ಅನುದಾನ	ಒಟ್ಟು ಸಾಲದ 50% / ಸ್ವಂತ ನಿಧಿಯ 30% ಅಂದರೆ 15%
ಕೇಂದ್ರ ಸರ್ಕಾರದಿಂದ ಗರಿಷ್ಟ ಅನುದಾನ (ನಿಗದಿತ ಮೈಲಿಗಲ್ಲುಗಳ ಸಾಧನೆಯಿಂದ ಹೆಚ್ಚುವರಿ ಅನುದಾನ ಸೇರಿದಂತೆ).	ಅನುದಾನ	75%

7. ದೂರದ ಪ್ರದೇಶ ಮತ್ತು ಪ್ರವೇಶಿಸಲಾಗದ ಪ್ರದೇಶಗಳಲ್ಲಿ ನೆಲೆಗೊಂಡಿರುವ ವಿದ್ಯುತ್ ರಹಿತ ಮನೆಗಳಿಗೆ ಬ್ಯಾಟರಿ ಬ್ಯಾಕ್‌ಅಪ್ ಗರಿಷ್ಟ 5 ಎಲ್.ಇ.ಡಿ. ಲೈಟ್, 1 ಡಿ.ಸಿ. ಫ್ಯಾನ್, 1 ಡಿ.ಸಿ. ಪವರ್ ಪ್ಲಗ್‌ನೊಂದಿಗೆ 200 ರಿಂದ 300 ವ್ಯಾಟ್‌ಗಳ ವಿದ್ಯುತ್ ಪ್ಯಾಕಗಳೊಂದಿಗಿನ ಸೌರ ಫೋಟೋ ವೋಲ್ಟಾಯಿಕ್ (ಎಸ್‌ಪಿಸಿ) ಆಧಾರಿತ ಸ್ಟಾಂಡಅಲೋನ ವ್ಯವಸ್ಥೆಯ ಮೂಲಕ 5 ವರ್ಷಗಳ ಕಾಲ ದುರಸ್ತಿ ಮತ್ತು ನಿರ್ವಹಣೆಯ ಜೊತೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು.

8. ಕೆಲಸದ ವ್ಯಾಪ್ತಿ:

i. ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲಾ ವಿದ್ಯುತ್ ರಹಿತ ಮನೆಗಳಿಗೆ ಕೊನೆಯ ಮೈಲಿ ಸಂಪರ್ಕ ಮತ್ತು ವಿದ್ಯುತ್ ಸಂಪರ್ಕವನ್ನು ಒದಗಿಸುವುದು.

ii. ದೂರದ ಪ್ರದೇಶ ಮತ್ತು ಪ್ರವೇಶಿಸಲಾಗದ ಪ್ರದೇಶಗಳಲ್ಲಿ ನೆಲೆಗೊಂಡಿರುವ ವಿದ್ಯುತ್ ರಹಿತ ಮನೆಗಳಿಗೆ ಬ್ಯಾಟರಿ ಬ್ಯಾಕ್‌ಅಪ್ ಗರಿಷ್ಟ 5 ಎಲ್.ಇ.ಡಿ. ಲೈಟ್, 1 ಡಿ.ಸಿ. ಫ್ಯಾನ್, 1 ಡಿ.ಸಿ. ಪವರ್ ಪ್ಲಗ್‌ನೊಂದಿಗೆ 200 ರಿಂದ 300 ವ್ಯಾಟಗಳ ವಿದ್ಯುತ್ ಪ್ಯಾಕಗಳೊಂದಿಗಿನ ಸೌರ ಫೋಟೋ ವೋಲ್ಟಾಯಿಕ್ (ಎಸ್‌ಪಿಸಿ) ಆಧಾರಿತ ಸ್ಟಾಂಡಅಲೋನ ವ್ಯವಸ್ಥೆಯ ಮೂಲಕ 5 ವರ್ಷಗಳ ಕಾಲ ದುರಸ್ತಿ ಮತ್ತು ನಿರ್ವಹಣೆಯ ಜೊತೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು.

iii. ನಗರ ಪ್ರದೇಶಗಳಲ್ಲಿ ಎಲ್ಲಾ ವಿದ್ಯುತ್ ರಹಿತ ಮನೆಗಳಿಗೆ ಕೊನೆಯ ಮೈಲಿ ಸಂಪರ್ಕ ಮತ್ತು ವಿದ್ಯುತ್ ಸಂಪರ್ಕವನ್ನು ಒದಗಿಸುವುದು. ಮತ್ತು ನಗರ ಪ್ರದೇಶದ ಬಡವನಲ್ಲದ ಮನೆಗಳನ್ನು ಈ ಯೋಜನೆಯಿಂದ ಹೊರಗಿಡಲಾಗಿದೆ.

9. ಮನೆಗಳ ಆಯ್ಕೆಗಳನ್ನು 3 ಹಂತಗಳಲ್ಲಿ ಮಾಡಲಾಗಿದೆ.

i. ಹಂತ –**I : 14** ಹೊರಗಿಡುವ ಮಾನದಂಡಗಳು (ಸಂಪಾದನೆ/ಸ್ವತ್ತುಗಳು/ವಾಹನ ಇತ್ಯಾದಿ).

ii. ಹಂತ –**II : 5** ಸೇರ್ಪಡೆ ಮಾನದಂಡಗಳು (ಆಶ್ರಯರಹಿತ ಮನೆಗಳು / ಬುಡಕಟ್ಟು ಗುಂಪು / ಬಿಡುಗಡೆಯಾದ ಬಂದಿತ ಕಾರ್ಮಿಕರು).

iii. ಹಂತ–**III : 7** ಬೈನರಿ ಸ್ಕೋರಿಂಗ್ ಮಾನದಂಡಗಳು (1 ಕೋಣೆ, ಕಚ್ಚಾ ಗೋಡೆ & ಕಚ್ಚಾ ಮೇಲ್ಛಾವಣೆ/ಸ್ತ್ರೀ ಮುಖ್ಯಸ್ಥರಾಗುವ/ಅಂಗವಿಕಲ ಸದಸ್ಯರಿರುವ ಕುಟುಂಬ / ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮನೆಗಳು / ಅನಕ್ಷರಸ್ಥರ ಮನೆಗಳು / ಸ್ವಂತ ಭೂಮಿ ಇಲ್ಲದ ದಿನಗೂಲಿ ಮೇಲೆ ಅವಲಂಬಿತವಾಗಿರುವ ಮನೆಗಳು ಇತ್ಯಾದಿ).

10. ದೀನದಯಾಳ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯಡಿಯಲ್ಲಿ ಈಗಾಗಲೇ ಮಂಜೂರು ಮಾಡಲಾದ ಬಿಪಿಎಲ್ ಕುಟುಂಬಗಳಿಗೆ ಉಚಿತ ವಿದ್ಯುತ್ ಸಂಪರ್ಕಗಳನ್ನು ಒದಗಿಸಬೇಕಾಗಿದೆ. ಅಂತಹ ಘಟಕಗಳು ಡಿಡಿಯುಜಿಜೆವೈ ಅಡಿಯಲ್ಲಿ ಸಾಕಷ್ಟು ಸಂಖ್ಯೆ ಬಿಪಿಎಲ್ ಕುಟುಂಬಗಳನ್ನು ಕಂಡುಹಿಡಿಯಲು ಸಾಧ್ಯವಾಗದಿದ್ದಲ್ಲಿ, ಸೌಭಾಗ್ಯ ಯೋಜನೆಯಡಿಯಲ್ಲಿ ಗುರುತಿಸಲಾದ ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಅವಕಾಶವಿರುತ್ತದೆ.

11. ಕಾರ್ಯದರ್ಶಿ (ಇಂಧನ) ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಡಿಡಿಯುಜಿಜೆವೈ ಮೇಲ್ವಿಚಾರಣಾ ಸಮಿತಿಗೆ, ನಿಧಿ ಬಿಡುಗಡೆ ಮತ್ತು ಸಮಯಕ್ಕೆ ತಕ್ಕಂತೆ ವಿವಿಧ ಕೆಲಸಗಳ ವೆಚ್ಚ ಸೇರಿದಂತೆ ವೇಗವಾಗಿ ಮತ್ತು ಸಕಾಲಿಕ ಅನುಷ್ಠಾನಕ್ಕೆ ಅನುಕೂಲವಾಗುವಂತೆ ಸಿಸಿಇಎ ಯಿಂದ ಅನುಮೋದಿಸಲ್ಪಟ್ಟ ಅನುದಾನ ಮಾರ್ಗದರ್ಶಿ

ಸೂತ್ರಗಳನ್ನು ಅನುಮೋದಿಸಲು ಅಧಿಕಾರವನ್ನು ನೀಡಲಾಗುವುದು. ಯೋಜನೆಯ ಅನುಷ್ಠಾನವನ್ನು ಸದರಿ ಸಮಿತಿಯು ಮೇಲ್ವಿಚಾರಣೆ ಮಾಡುತ್ತದೆ.

12. ಸಂಪರ್ಕ ಕಡಿತಗೊಂಡ ಬಾಕಿದಾರರಿಗೆ ಈ ಯೋಜನೆಯು ಲಾಭ ನೀಡಲಾಗುವುದಿಲ್ಲ. ಈ ಯೋಜನೆಯ ಮಾರ್ಗದರ್ಶಿ ಸೂತ್ರಗಳ ಅಡಿಯಲ್ಲಿ ಅಗತ್ಯ ಸುರಕ್ಷತೆಗಳನ್ನು ಮಾಡಲಾಗುವುದು.

13. ಡಿಡಿಯುಜಿಜೆವೈ ಯಲ್ಲಿ ಅನುಸರಿಸಬೇಕಾದಂತೆ ಮಾನಿಟರಿಂಗ್ ವ್ಯವಸ್ಥೆಯನ್ನು ಅನುಸರಿಸಬೇಕು, ಇದರಲ್ಲಿ ಡಿಶಾದ ಸಾಂಸ್ಥಿಕ ಕಾರ್ಯವಿಧಾನವು ಸೇರಿರುತ್ತದೆ. ಜಿಲ್ಲಾ ಆಡಳಿತವು ಈ ಯೋಜನೆಯ ಅನುಷ್ಠಾನ ಮತ್ತು ನಿಯಮಿತವಾಗಿ ಮೇಲ್ವಿಚಾರಣೆಯಲ್ಲಿ ತೊಡಗಿಕೊಂಡಿರುತ್ತದೆ. ಈಗಾಗಲೇ ಅಸ್ತಿತ್ವದಲ್ಲಿರುವ ಡಿಡಿಯುಜಿಜೆವೈಯ ವೆಬ್ ಆಧಾರಿತ ಮೇಲ್ವಿಚಾರಣಾ ವ್ಯವಸ್ಥೆಯನ್ನು ಸೌಭಾಗ್ಯ ಯೋಜನೆಯನ್ನು ಸೇರಿಸಲು ವಿಸ್ತರಿಸಲಾಗುವುದು. ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಪಂಚಾಯತ್/ಸಾರ್ವಜನಿಕ ಸಂಸ್ಥೆಗೆ ಅರ್ಜಿ ಸ್ವೀಕರಣೆ, ಸಂಪೂರ್ಣ ದಾಖಲಾತಿ ಸಂಗ್ರಹಿಸಲು ಮತ್ತು ಬಿಲ್‌ಗಳ ವಿತರಣೆಗಾಗಿ ಅಧಿಕಾರ ನೀಡಬಹುದು. ಅಗತ್ಯವಿದ್ದರೆ ಅನ್ವಯವಾಗುವಂತೆ ಆದಾಯ ಮತು ಇತರ ಚಟುವಟಿಕೆಗಳ ಸಂಗ್ರಹಣೆ ಅನುಷ್ಠಾನ ಪ್ರಕ್ರಿಯೆ ಮತ್ತು ಮೇಲ್ವಿಚಾರಣಾ ಕಾರ್ಯವಿಧಾನಗಳನ್ನು ಮಾರ್ಗದರ್ಶಿ ಸೂತ್ರಗಳಲ್ಲಿ ವಿವರಿಸಲಾಗಿದೆ.

14. ವಿತರಣಾ ಕಂಪನಿಗಳು ಗ್ರಾಹಕರ ಹೆಸರು ಮತ್ತು ಆಧಾರ ಸಂಖ್ಯೆ/ಮೊಬೈಲ್ ಸಂಖ್ಯೆ/ಬ್ಯಾಂಕ ಖಾತೆ/ಡ್ರೈವಿಂಗ್ ಪರವಾನಿಗೆ/ಮತದಾರರ ಗುರುತಿನ ಚೀಟಿ ಇತ್ಯಾದಿಗಳ ವಿವರಗಳನ್ನು ಸಂಗ್ರಹಿಸುವುದು. ಆದಾಗ್ಯೂ, ಸಂಪರ್ಕ ಬಿಡುಗಡೆಗೆ ಯಾವುದೇ ನಿರ್ದಿಷ್ಟ ದಾಖಲೆಗಳನ್ನು ಹೊಂದಿರುವಲ್ಲಿ ನಿಶ್ಚಿತವಾಗಿರುವುದಿಲ್ಲ.

15. **ಅನುಷ್ಠಾನ ವಿಧಾನ:** ಸೌಭಾಗ್ಯ ಯೋಜನೆಯಡಿಯಲ್ಲಿ ಮಂಜೂರಾದ ಮನೆಗಳ ವಿದ್ಯುದ್ಧೀಕರಣ ಕಾಮಗಾರಿಗಳನ್ನು ಪೂರ್ಣ ಗುತ್ತಿಗೆ ಆಧಾರದ ಮೇಲೆ ಅಥವಾ ಭಾಗಶಃ ಗುತ್ತಿಗೆ ಆಧಾರ ಮೇಲೆ ಇಲಾಖೆಯಿಂದ ಕಾರ್ಯಗತಗೊಳಿಸುವುದು.

16. **ನೇರ ಸಂಪರ್ಕಸ್ಥಾವರಗಳು:** ಈ ಯೋಜನೆಯಲ್ಲಿ ನೇರ ಸಂಪರ್ಕ ಸ್ಥಾವರಗಳ ಮೀಟರಿಂಗಿಗೆ ಯಾವುದೇ ಅನುದಾನ ನೀಡುವುದಿಲ್ಲ.

17. ಕೊನೆಯ ಸಂಪರ್ಕವನ್ನು ಕಲ್ಪಿಸಲು ಕಂಬಗಳು, ವಾಹಕ ಹಾಗು ಅದಕ್ಕೆ ಅಗತ್ಯವಿರುವ ಸಾಮಾಗ್ರಿಗಳನ್ನು ಒಳಗೊಂಡಿರುತ್ತದೆ.

18. ಗ್ರಾಮೀಣ ಮತ್ತು ನಗರ ಪ್ರದೇಶಗಳ ಡಿಪಿಆರ್ ಗಳನ್ನು ರೂ. 98.37 ಕೋಟಿಗೆ ತಯಾರಿಸಿದ್ದು ಹಾಗೂ ಸೌಭಾಗ್ಯ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲಾಗಿದೆ.

19. ಸಲ್ಲಿಸಿದ ಡಿಪಿಆರ್ ವಿವರಗಳು ಈ ಕೆಳಗಿನಂತಿವೆ.

ಜಿಲ್ಲಾವಾರು ವಿವರ									
ಕ್ರ ಸಂ	ಜಿಲ್ಲೆ	ಗ್ರಾಮೀಣ ಯೋಜನಾ ವಿವರ				ನಗರ ಯೋಜನಾ ವಿವರ			ಒಟ್ಟು ವೆಚ್ಚ
		ಒಳಗೊಂಡ ಗ್ರಾಮಗಳು	ಒಳಗೊಂಡ ವಸತಿಪ್ರದೇಶಗಳು	ಫಲಾನುಭವಿಗಳು	ವೆಚ್ಚ	ಒಳಗೊಂಡ ನಗರ	ಒಳಗೊಂಡ ಮನೆಗಳು	ವೆಚ್ಚ	
		ಸಂಖ್ಯೆ	ಸಂಖ್ಯೆ	ಸಂಖ್ಯೆ	ರೂ. (ಕೋಟಿ ಗಳಲ್ಲಿ)	ಸಂಖ್ಯೆ	ಸಂಖ್ಯೆ	ರೂ. (ಕೋಟಿ ಗಳಲ್ಲಿ)	ರೂ. (ಕೋಟಿ ಗಳಲ್ಲಿ)
1	ಬೆಳಗಾವಿ	1090	1387	31115	25.03	35	1074	0.75	25.78
2	ಬಾಗಲಕೋಟೆ	544	568	12263	6.06	15	1707	0.69	6.75
3	ವಿಜಯಪುರ	591	750	5619	5.4	13	461	0.57	5.97
4	ಗದಗ	304	424	7182	6.29	9	269	0.40	6.69
5	ಧಾರವಾಡ	331	351	7942	5.79	6	84	0.03	5.82
6	ಉತ್ತರ ಕನ್ನಡ	856	1420	9830	30.79	12	332	0.36	31.15
7	ಹಾವೇರಿ	562	575	12862	15.43	9	1024	0.78	16.21
Total		**4278**	**5475**	**86813**	**94.79**	**99**	**4951**	**3.58**	**98.38**

20. ಶೇಕಡ 100 ರಷ್ಟು ವಿದ್ಯುದೀಕರಣ ಗುರಿಯನ್ನು ಸಾಧಿಸಲು ಒಟ್ಟು 48 ಸಂಖ್ಯೆ (ತಾಲ್ಲೂಕು ವಾರು) ಕಾಮಗಾರಿಗಳು ಮುಕ್ತಾಯಗೊಂಡಿದೆ.

21. ಸೌಭಾಗ್ಯ ಯೋಜನೆಯು 31.03.2020 ಕ್ಕೆ ಪೂರ್ಣಗೊಂಡಿದೆ.

22. 31ನೇ ಮಾರ್ಚ್ 2020 ಕ್ಕಿರುವಂತೆ, ಸೌಭಾಗ್ಯ ಯೋಜನೆಯಡಿಯಲ್ಲಿ ಕಾಮಗಾರಿಗಳ ಪ್ರಗತಿಯು ಈ ಕೆಳಗಿನಂತಿದೆ.

ಕ್ರ. ಸಂ	ಜಿಲ್ಲೆ	ಸೌಭಾಗ್ಯ ಯೋಜನೆಯಡಿಯಲ್ಲಿ ಪ್ರಸ್ತಾಪಿಸಲಾದ ವಿದ್ಯುದ್ಧೀಕರಣಗೊಳ್ಳದ ಮನೆಗಳ ಸಂಖ್ಯೆ	31.03.2020 ರ ಅಂತ್ಯಕ್ಕೆ ಪ್ರಗತಿ
1	ಬಾಗಲಕೋಟೆ	11404	11404
2	ಬೆಳಗಾವಿ	28211	28211
3	ವಿಜಯಪುರ	4682	4682
4	ಹಾವೇರಿ	12938	12938
5	ಉತ್ತರ ಕನ್ನಡ	7516	7516
6	ಧಾರವಾಡ	7389	7389
7	ಗದಗ	7871	7871
ಒಟ್ಟು		80011	80011

24. ನಿಯಂತ್ರಣ ವ್ಯವಹಾರಗಳು:

ಹುವಿಸಕಂನಿಯು ವಿತರಣಾ ಲೈಸೆನ್ಸಿಯಾಗಿದ್ದು, ವಿದ್ಯುಚ್ಛಕ್ತಿ ಅಧಿನಿಯಮ 2003ರ ನಿಯಮಗಳ ಪ್ರಕಾರ ದಿನಾಂಕ : 30.11.2020 ರಂದು ಈ ಕೆಳಗಿನಂತೆ ಅರ್ಜಿಗಳನ್ನು ಪರಿಗಣಿಸುವುದಕ್ಕಾಗಿ ಮತ್ತು ಆದೇಶಕ್ಕಾಗಿ ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಸಲ್ಲಿಸಿದೆ.

ಎ) ಆರ್ಥಿಕ ವರ್ಷ 2019–20 ರ ವಾರ್ಷಿಕ ಕಾರ್ಯಕ್ಷಮತೆ ಪರಾಮರ್ಶೆ ವರದಿ (ಎ.ಪಿ.ಆರ್.Annual Performance Review) ಹಾಗೂ ಆರ್ಥಿಕ ವರ್ಷ 2021–22 ಅವಧಿಗೆ ವಾರ್ಷಿಕ ಕಂದಾಯ ಅವಶ್ಯಕತೆ(ಎ.ಆರ್.ಆರ್.Annual Revenue Requirement) ಗಾಗಿ ಅನುಮೋದನೆ.

ಬಿ) ಆರ್ಥಿಕ ವರ್ಷ 2021–22 ಕ್ಕೆ ಪರಿಷ್ಕೃತ ವಿತರಣೆ ಹಾಗೂ ರಿಟೇಲ್ ಸರಬರಾಜು ದರದ ಅನುಮೋದನೆ.

ವಿದ್ಯುಚ್ಛಕ್ತಿ ಅಧಿನಿಯಮ 2003ರ ಖಂಡ 62 ಹಾಗೂ 64 ರಲ್ಲಿ ದತ್ತವಾದ ನಿಯಮಗಳ ಅನ್ವಯ ಮತ್ತು ಜೊತೆಗೆ ಓದಲಾದ ಕೆ.ಇ.ಆರ್.ಸಿ. ಯ ವಿದ್ಯುಚ್ಛಕ್ತಿ ವಿತರಣೆ ಹಾಗೂ ರಿಟೇಲ್ ಮಾರಾಟದ ಕುರಿತಾಗಿನ ನಿಯಮಗಳು ಹಾಗೂ ಷರತ್ತುಗಳು ಹಾಗೂ ಸಂಬಂಧಪಟ್ಟ ಇತರ ನಿಯಮಗಳ ಅನುಸಾರ ಮಾನ್ಯ ಆಯೋಗವು ಗ್ರಾಹಕರು ಹಾಗೂ ಇತರೆ ಹೂಡಿಕೆದಾರರು ಸಲ್ಲಿಸಿದ ಅಭಿಪ್ರಾಯಗಳನ್ನು ಹಾಗೂ ಆಕ್ಷೇಪಣೆಗಳನ್ನು ಹಾಗೂ ಅರ್ಜಿಯನ್ನು ಪರಿಗಣಿಸಿದೆ.

ಮಾನ್ಯ ಆಯೋಗದ ನಿರ್ಧಾರಗಳನ್ನು ದಿನಾಂಕ : 09.06.2021 ರ ಆದೇಶದಲ್ಲಿ ಈ ಕೆಳಗೆ ತಿಳಿಸಿದಂತೆ ನೀಡಲಾಗಿದೆ. ವಾರ್ಷಿಕ ಕಾರ್ಯಕ್ಷಮತೆ ಪರಾಮರ್ಶೆ ವರದಿ(ಎ.ಪಿ.ಆರ್.) ಯ ಪ್ರಕಾರ ಆರ್ಥಿಕ ವರ್ಷ 2019–20 ಕ್ಕೆ ಅನುಮೋದಿತ ವಾರ್ಷಿಕ ಸರಾಸರಿ ಅವಶ್ಯಕತೆ (ಎ.ಆರ್.ಆರ್.):

ಕ್ರ.ಸಂ	ವಿವರಗಳು	ಆರ್ಥಿಕ ವರ್ಷ 2019–20		
		30.05.2019 ಕ್ಕೆ ಅನುಮೋದಿಸಿದಂತೆ	30.11.2020 ಕ್ಕೆ ಅರ್ಜಿ ಸಲ್ಲಿಸಿದಂತೆ	ವಾರ್ಷಿಕ ಕಾರ್ಯಾಧಾರಿತ ಪರಾಮರ್ಶೆಯಂತೆ (ಟ್ಯಾರಿಫ್ ಆರ್ಡರ್ ದಿ.09.06.2021)
1	ಎ.ಆರ್.ಆರ್. (ವಾರ್ಷಿಕ ಕಂದಾಯ ಅವಶ್ಯಕತೆ) (ರೂ. ಕೋಟಿಗಳಲ್ಲಿ)	7547.35	7627.44	7174.31
2	ಆರ್ಥಿಕ ವರ್ಷ 18 ರ ಕೊರತೆ ಕೊಂಡೊಯ್ದದ್ದು) (ರೂ. ಕೋಟಿಗಳಲ್ಲಿ)	762.45	0.00	0.00
3	ನಿವ್ವಳ ವಾರ್ಷಿಕ ಕಂದಾಯ ಅವಶ್ಯಕತೆ (ರೂ. ಕೋಟಿಗಳಲ್ಲಿ)	**8309.80**	**7627.44**	**7174.31**

ಆರ್ಥಿಕ ವರ್ಷ –22 ಕ್ಕೆ ಪರಿಷ್ಕೃತ ಪ್ರಸ್ತಾವಿತ ವಾರ್ಷಿಕ ಕಂದಾಯ ಅವಶ್ಯಕತೆ (ಎ.ಆರ್.ಆರ್)

ಕ್ರ. ಸಂ	ವಿವರಗಳು	ಆರ್ಥಿಕ ವರ್ಷ 22		
		30.05.2019 ರ ದರ ಆದೇಶದಂತೆ	30.11.2020 ಕ್ಕೆ ಅರ್ಜಿ ಸಲ್ಲಿಸಿದಂತೆ	ಪರಿಷ್ಕೃತ ಹಾಗೂ ಅನುಮೋದಿತ 09.06.2021 ದರ ಆದೇಶ
1	ವಾರ್ಷಿಕ ಕಂದಾಯ ಅವಶ್ಯಕತೆ) (ರೂ ಕೋಟಿಗಳಲ್ಲಿ)	9624.43	10028.32	10137.55
2	ಆರ್ಥಿಕ ವರ್ಷ 20 ಕ್ಕೆ ಕೊರತೆ ಕೊಂಡೊಯ್ದದ್ದು (ರೂ ಕೋಟಿಗಳಲ್ಲಿ)	0.00	137.60	617.95
3	ನಿವ್ವಳ ಎ.ಆರ್.ಆರ್. (ರೂ ಕೋಟಿಗಳಲ್ಲಿ)	**9624.43**	**9890.72**	**9519.60**

ಆರ್ಥಿಕ ವರ್ಷ 2021–22 ಕ್ಕೆ ಕಂದಾಯ ಕೊರತೆ:

ವಿವರಗಳು	ಆರ್ಥಿಕ ವರ್ಷ 2021–22
ಆರ್ಥಿಕ ವರ್ಷ 2019–20ಕ್ಕೆ ಕಂದಾಯ ಕೊರತೆ ಸೇರಿ ನಿವ್ವಳ ಎ.ಆರ್.ಆರ್ (ಕೋಟಿಗಳಲ್ಲಿ)	9519.60
ಅನುಮೋದಿತ ಮಾರಾಟ (ಮಿ.ಯುಗಳಲ್ಲಿ)	11904.04
ಸರಾಸರಿ ಸರಬರಾಜು ವೆಚ್ಚ (ರೂ / ಯುನಿಟ್)	8.00
ಹಾಲಿ ವಿದ್ಯುತ್ ದರದಲ್ಲಿ ಕಂದಾಯ (ರೂ. ಕೋಟಿಗಳಲ್ಲಿ)	9162.48
ಆರ್ಥಿಕ ವರ್ಷ 2021–22 ಕ್ಕೆ ಕಂದಾಯ ಕೊರತೆ (ರೂ. ಕೋಟಿಗಳಲ್ಲಿ)	357.12

ದಿನಾಂಕ :09.06.2021 ವಿದ್ಯುತ್ ದರ ಆದೇಶದ ಸಾರಾಂಶ :

- ಹುವಿಸಕಂನಿಯ ಪ್ರಸ್ತಾವಿತ ವಾ.ಕಂ.ಅ. (ಎ.ಆರ್.ಆರ್) ರೂ. 9890.72 ಕೋಟಿ ಇದ್ದು, ಇದಕ್ಕೆ ಪ್ರತಿಯಾಗಿ ಮಾನ್ಯ ಆಯೋಗವು ಆರ್ಥಿಕ ವರ್ಷ 22 ಕ್ಕೆ ರೂ. 9519.60 ಕೋಟಿ ವಾರ್ಷಿಕ ಸರಾಸರಿ ಅವಶ್ಯಕತೆಯನ್ನು ಅನುಮೋದಿಸಿದೆ. ಇದರಲ್ಲಿ ಆರ್ಥಿಕ ವರ್ಷ 2019–20 ರ ಉಳಿತಾಯ (surplus) ರೂ. 137.60 ಕೋಟಿ ಸೇರಿರುತ್ತದೆ.
- ಮಾನ್ಯ ಆಯೋಗವು ಲೆಕ್ಕಾಚಾರ ಮಾಡಿದಂತೆ ಆರ್ಥಿಕ ವರ್ಷ 2019–20 ಕ್ಕೆ ಉಳಿತಾಯ (surplus) ರೂ. 617.95 ಕೋಟಿ ಆಗಿರುತ್ತದೆ.
- ಆರ್ಥಿಕ ವರ್ಷ 2021–22 ಕ್ಕೆ ಕೊರತೆ ನೀಗಿಸಲು ಹೆಸ್ಕಾಂನ ಪ್ರಸ್ತಾವಿತ ಕೊರತೆ ರೂ. 974.77 ಕೋಟಿಗೆ ಪ್ರತಿಯಾಗಿ ಮಾನ್ಯ ಆಯೋಗವು ರೂ. 357.12 ಕೋಟಿ ಹೆಚ್ಚುವರಿ ಆದಾಯವನ್ನು ಮಂಜೂರು ಮಾಡಿ ದರಗಳನ್ನು ಪರಿಷ್ಕರಿಸಿದೆ.
- ಪರಿಷ್ಕೃತ ದರವು ದಿ.01.04.2021 ರಿಂದ ಅನ್ವಯವಾಗುವುದರಿಂದ ಮಾನ್ಯ ಆಯೋಗವು ಏಪ್ರಿಲ್–21 ಮತ್ತು ಮೇ–21 ತಿಂಗಳ ಬಳಕೆಯ ಬಾಕಿ ಮೊತ್ತವನ್ನು ಬಡ್ಡಿ ವಿಧಿಸದೇ ಕ್ರಮವಾಗಿ ಅಕ್ಟೋಬರ್–21 ಮತ್ತು ನವೆಂಬರ್–21 ತಿಂಗಳಿನಲ್ಲಿ ವಸೂಲಿ ಮಾಡಲು ಅನುಮೋದಿಸಿದೆ.
- ಹೆಸ್ಕಾಂನ ಪ್ರಸ್ತಾಪಿತ ಹೆಚ್ಚಳ ಯುನಿಟ್ ಗೆ ಸರಾಸರಿ 83 ಪೈಸೆ ಗೆ ಪ್ರತಿಯಾಗಿ ಮಾನ್ಯ ಆಯೋಗವು ಪ್ರತಿ ಯುನಿಟ್ ಗೆ ಸರಾಸರಿ 30 ಪೈಸೆ ದರ ಪರಿಷ್ಕರಣೆಗೆ ಅನುಮೋದನೆ ನೀಡಿದೆ.

- ಮಾನ್ಯ ಆಯೋಗವು ಎಲ್ಲ ವರ್ಗದ ಗ್ರಾಹಕರಿಗೆ ಅನ್ವಯಿಸುವಂತೆ ನಿಗದಿತ ಶುಲ್ಕದಲ್ಲಿ ರೂ. 10/– KW/HP/KVAದಿಂದರೂ.20/– /KW/HP/KVAರವರೆಗೆ ಹಾಗೂ ತಾತ್ಕಾಲಿಕ ವಿದ್ಯುತ್ ಸರಬರಾಜಿಗೆ ಸಂಬಂದಿಸಿದಂತೆ 25/– KW/HPಭಾಗಶಃ ಹೆಚ್ಚುವರಿ ಕಂದಾಯ ವಸೂಲಿಗೆ ಅನುಮತಿ ನೀಡಿದೆ.
- ಮಾನ್ಯ ಆಯೋಗವು ಎಲ್ಲ ವರ್ಗದ ಗ್ರಾಹಕರಿಗೆ ಅನ್ವಯಿಸುವಂತೆ ಯುನಿಟ್ ಗೆ 10 ಪೈಸೆ ಹಾಗೂ **BJ/KJ** ಸ್ಥಾವರಗಳಿಗೆ ವಿದ್ಯುತ್ ಸರಬರಾಜಿಗೆ ಸಂಬಂದಿಸಿದಂತೆ ಯುನಿಟ್ ಗೆ 40 ಪೈಸೆ ವಿದ್ಯುತ್ ಶುಲ್ಕವನ್ನು ಹೆಚ್ಚುವರಿ ಕಂದಾಯವಾಗಿ ವಸೂಲಿ ಮಾಡಲು ಅನುಮತಿ ನೀಡಿದೆ.
- ಹಿಂದಿನ ದರ ಆದೇಶಗಳಲ್ಲಿರುವಂತೆ 500 ಕೆ.ವಿ.ಎ. ಮತ್ತು ಮೇಲ್ಪಟ್ಟು ಒಪ್ಪಂದ ಬೇಡಿಕೆ ಇರುವ ಹೆಚ್.ಟಿ.–2(ಎ), ಹೆಚ್.ಟಿ.–2(ಬಿ) ಮತ್ತು ಹೆಚ್.ಟಿ.–2(ಸಿ) ಸ್ಥಾವರಗಳಿಗೆ ಸಮಯಾಧಾರಿತ ವಿದ್ಯುತ್ ದರ (ಟಿ.ಓ.ಡಿ.) ವನ್ನು ಕಡ್ಡಾಯ ಮಾಡಿರುವುದನ್ನು ಮುಂದುವರೆಸಲಾಗಿದೆ. (ರೈಲ್ವೆ ಟ್ರಾಕ್ಷನ್ ಸ್ಥಾವರಗಳನ್ನು ಹೊರತು ಪಡಿಸಿ). ಮಾನ್ಯ ಆಯೋಗವು ಸಮಯಾಧಾರಿತ ಬಿಲ್ಲಿಂಗ್ ನಲ್ಲಿ ಮುಂಜಾನೆ ಪೀಕ್ ಅವಧಿ 06.00 ಗಂಟೆ ಯಿಂದ 10.00 ಗಂಟೆ ವರೆಗಿನ ಅವಧಿಯಲ್ಲಿನ ಬಳಕೆಗೆ ವಿಧಿಸಲಾಗುತ್ತಿದ್ದ ಪ್ರತಿ ಯೂನಿಟ್ ಗೆ 1 ರೂ ದಂಡವನ್ನು ಟ್ಯಾರಿಫ ಆರ್ಡರ್ 2020 ನಲ್ಲಿ ತೆಗೆದು ಹಾಕಿದ್ದು, ಅದನ್ನು ಟ್ಯಾರಿಫ ಆರ್ಡರ್ 2021 ನಲ್ಲಿಯೂ ಮುಂದುವರೆಸಲಾಗಿದೆ. ಆದರೆ ಸಾಯಂಕಾಲ ಪೀಕ್ ಅವಧಿ 06.00 ಗಂಟೆ ಯಿಂದ 10.00 ಗಂಟೆ ವರೆಗಿನ ಅವಧಿಯಲ್ಲಿನ ಬಳಕೆಗೆ ಪ್ರತಿ ಯೂನಿಟ್ ಗೆ 1 ರೂ ದಂಡವನ್ನು ಮಾನ್ಸೂನ್ ಅವಧಿ ಜುಲೈ ಯಿಂದ ನವೆಂಬರ್ ವರೆಗೆ ತೆಗೆದು ಹಾಕಲಾಗಿದೆ ಮತ್ತು ಡಿಸೆಂಬರ್ ನಿಂದ ಜೂನ್ ವರೆಗೆ ಮುಂದುವರೆಸಲಾಗಿದೆ. ರಾತ್ರಿ ಅವಧಿ 22.00 ಗಂಟೆ ಯಿಂದ 06.00 ಗಂಟೆವರೆಗಿನ ಅವಧಿಯ ಬಳಕೆಗೆ ಪ್ರತಿ ಯೂನಿಟ್ ಗೆ 1 ರೂ ಪ್ರೋತ್ಸಾಹಕ ದರವನ್ನು ಮಾನ್ಸೂನ್ ಅವಧಿ ಜುಲೈ ಯಿಂದ ನವೆಂಬರ್ ವರೆಗೆ ತೆಗೆದು ಹಾಕಲಾಗಿದೆ ಮತ್ತು ಡಿಸೆಂಬರ್ ನಿಂದ ಜೂನ್ ವರೆಗೆ ಮುಂದುವರೆಸಲಾಗಿದೆ.
- ಗೃಹಬಳಕೆ ಪ್ರವರ್ಗದಲ್ಲಿನ ಬಳಕೆಗೆ]
- ಮೊದಲ ಹಂತವನ್ನು 30 ಯೂನಿಟ್‌ಗಳಿಂದ 50 ಯೂನಿಟ್‌ಗಳಿಗೆ ಹೆಚ್ಚಿಸಲಾಗಿದೆ.
- ಮಾನ್ಯ ಆಯೋಗವು ಜುಲೈ–21 ನಿಂದ ಡಿಸೆಂಬರ್–21 ಮಾನ್ಸೂನ್ ಅವಧಿಯಲ್ಲಿ ಲಭ್ಯವಿರುವ ಹೆಚ್ಚುವರಿ ವಿದ್ಯುಚ್ಛಕ್ತಿ ಬಳಕೆ ಮಾಡುವಂತೆ ಪ್ರೋತ್ಸಾಹಿಸಲು ಹೆಚ್ ಟಿ 2(a), ಹೆಚ್ ಟಿ 2(b), ಹೆಚ್ ಟಿ 2(c) (i) ಮತ್ತು ಹೆಚ್ ಟಿ 2(c) (ii) ಪ್ರವರ್ಗದ ಗ್ರಾಹಕರಿಗೆ ಅನ್ವಯವಾಗುವಂತೆ ಮಾಸಿಕ ಸರಾಸರಿ ಮೂಲ ಬಳಕೆಗಿಂತ (Base Consumption) ಅಧಿಕವಾಗಿ ಬಳಕೆ ಮಾಡಲಾದ ವಿದ್ಯುಚ್ಛಕ್ತಿಗೆ "ರಿಯಾಯಿತಿ ವಿದ್ಯುಚ್ಛಕ್ತಿ ದರ ಯೋಜನೆ (Discounted Energy Rate Scheme)" ನ್ನು ಅನುಮೋದಿಸಿದೆ.
- ಮಾನ್ಯ ಆಯೋಗವು ಗ್ರಾಹಕರನ್ನು ಆಕರ್ಷಿಸಿ ಹೆಚ್ಚಿನ ವಿದ್ಯುತ್ ಬಳಕೆ ಮಾಡಲು ತಂದಿದ್ದ ಹೆಚ್. ಟಿ. ಗ್ರಾಹಕರಿಗೆ ವಿಶೇಷ ಪ್ರೋತ್ಸಾಹ ಯೋಜನೆಯನ್ನು ಆರ್ಥಿಕ ವರ್ಷ 2020–21 ರಲ್ಲಿ ಮುಂದುವರೆಸಿದೆ.
- ಮಾನ್ಯ ಆಯೋಗವು ರೈಲ್ವೆ ಟ್ರಾಕ್ಷನ್ ಸ್ಥಾವರಗಳಿಗೆ ರಿಯಾಯತಿ ದರ ಪ್ರತಿ ಯೂನಿಟ್‌ಗೆ ರೂ. 6.45 ಅನುಮೋದಿಸಿದೆ.
- ಗ್ರಾಹಕರ ವಿದ್ಯುತ್ ಸ್ಥಾವರಗಳ ಆವರಣದಲ್ಲಿ ಸ್ಥಾಪಿತವಾದ ಎಫ್ಲುಯೆಂಟ್ ಟ್ರೀಟ್ಮೆಂಟ್ ಪ್ಲಾಂಟ್ ಗಳಿಗೆ ಮತ್ತು ಕೊಳಚೆ ನೀರು ಶುದ್ಧೀಕರಿಸುವ ಘಟಕಗಳಿಗೆ, ಆಯಾ ಸ್ಥಾವರಗಳಿಗೆ ಅನ್ವಯವಾಗುವ ವಿದ್ಯುತ್ ದರ ಅನ್ವಯಿಸುವುದನ್ನು ಮುಂದುವರೆಸಲಾಗಿದೆ.
- ಮಾನ್ಯ ಆಯೋಗವು ಘನತ್ಯಾಜ್ಯ ಸಂಸ್ಕರಣೆಯಿಂದಾಗುವ ಪರಿಸರ ಮತ್ತು ಸಾಮಾಜಿಕ ಅನುಕೂಲಗಳನ್ನು ಪರಿಗಣಿಸಿ, ಘನತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ (Solid waste processing plants), ಎಲ್.ಟಿ. ಮತ್ತು ಹೆಚ್.ಟಿ. ಕೈಗಾರಿಕಾ ವರ್ಗದ ದರ ಅನ್ವಯಿಸುವುದನ್ನು ಮುಂದುವರೆಸಿದೆ.
- ಮಾನ್ಯ ಆಯೋಗವು ಕರ್ನಾಟಕ ಸರ್ಕಾರದ ವಿದ್ಯುತ್ ವಾಹನ ಮತ್ತು ಇಂಧನ ಸಂಗ್ರಹ ನೀತಿಯನ್ನು, ಪರಿಶುದ್ಧ ವಿದ್ಯುತ್ ಬಳಕೆಯನ್ನು ಪ್ರೋತ್ಸಾಹಿಸಲು ಹಾಗೂ ಶೇಕಡ 100 ರಷ್ಟು ವಿದ್ಯುತ್ ಚಲನಶೀಲತೆಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ, ಹಾಗೂ ಪರಿಸರ ಕಾಳಜಿಯ ದೃಷ್ಟಿಯಿಂದ, 2018 ರಲ್ಲಿ ಹೊಸದಾಗಿ ಜಾರಿಗೊಳಿಸಿದ್ದ,

ವಿದ್ಯುತ್ ವಾಹನಗಳ ಚಾರ್ಜಿಂಗ್ ಸ್ಟೇಷನ್ ಗಳಿಗಾಗಿ, LT6(C) ಜಕಾತಿಯನ್ನು ಮುಂದುವರೆಸಿದೆ. ಈ ಜಕಾತಿಯು, LT ಹಾಗೂ HT ಎರಡೂ ವರ್ಗಗಳಿಗೆ ಅನ್ವಯವಾಗಲಿದೆ. ವಿದ್ಯುತ್ ವಾಹನಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ, ಪ್ರತಿ ಯುನಿಟ್ಟಿಗೆ 5.00 ರೂಪಾಯಿಯ ಹಾಲಿ ಇರುವ ರಿಯಾಯಿತಿ ದರವನ್ನು ಮುಂದುವರೆಸಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ, ಬ್ಯಾಟರಿ ಸ್ವಾಪಿಂಗ್ ಇರುವಂತಹ ವಿದ್ಯುತ್ ವಾಹನಗಳಿಗೆ ಬಳಸುವ ಬ್ಯಾಟರಿಗಳನ್ನು ಚಾರ್ಜ್ ಮಾಡುವ ಘಟಕಗಳಿಗೂ ರಿಯಾಯಿತಿ ದರವನ್ನು ವಿಸ್ತರಿಸಿದೆ.

- ಎಸ್ಕಾಂ ಗಳಿಂದ ನವೀಕರಿಸಬಹುದಾದ ವಿದ್ಯುತ್ ಖರೀದಿ ಪ್ರೋತ್ಸಾಹಿಸಲು ಹೆಚ್.ಟಿ. ಕೈಗಾರಿಕೆಗಳು ಹಾಗೂ ಹೆಚ್.ಟಿ. ವಾಣಿಜ್ಯ ಗ್ರಾಹಕರಿಗೆ ಸ್ವ ಇಚ್ಛೆಯ ಮೇರೆಗೆ ಅನ್ವಯವಾಗುವ ಸಾಮಾನ್ಯ ದರಕ್ಕಿಂತ ಯುನಿಟ್ ಗೆ 50 ಪೈಸೆ ಹೆಚ್ಚಿನ ಹಸಿರು ದರವನ್ನು (Green Tariff) ಈ ಆದೇಶದಲ್ಲಿಯೂ ಮುಂದುವರೆಸಿದೆ.
- LT 4C(i)ಮತ್ತು LT4C(ii) ನ್ನು ಒಂದುಗೂಡಿಸಿ LT 4C ಪ್ರವರ್ಗದಲ್ಲಿ ತರಲಾಗಿದೆ.
- ಹಿಂದಿನ ಆದೇಶದಲ್ಲಿದ್ದಂತೆ ಆಯೋಗವು ಗ್ರಾಹಕ ಸಂಬಂಧ/ ಗ್ರಾಹಕರ ಶಿಕ್ಷಣ/ ತರಬೇತು ಬಗೆಗಿನ ಕಾರ್ಯಗಳಿಗೆ ಪ್ರತ್ಯೇಕ ನಿಧಿಯನ್ನು ಒದಗಿಸಿದೆ.
- ಕನಿಷ್ಠ 3 ತಿಂಗಳಿಗೊಮ್ಮೆ ಗ್ರಾಹಕರೊಂದಿಗಿನ ಸಂವಾದ ಸಭೆಯನ್ನು ಜರುಗಿಸಲು ವಿಫಲವಾದ ಹೆಸ್ಕಾಂನ ಉಪ ವಿಭಾಗಕ್ಕೆ ರೂ. ಒಂದು ಲಕ್ಷ ದಂಡವನ್ನು ವಿಧಿಸಲು ಹಾಗೂ ಸಂಬಂಧಿಸಿದ ಹೆಸ್ಕಾಂನ ಅಧಿಕಾರಿಗಳು ಈ ದಂಡವನ್ನು ಪಾವತಿಸುವ ಕ್ರಮವನ್ನು ತೆಗೆಕೊಳ್ಳಲು ಮಾನ್ಯ ಆಯೋಗವು ತೀರ್ಮಾನಿಸಿದೆ.

ಗ್ರಾಹಕರ ಕುಂದುಕೊರತೆ ನಿವಾರಣಾ ಕಾರ್ಯವಿಧಾನ: ಜಿಲ್ಲಾ ಗ್ರಾಹಕ ಕುಂದುಕೊರತೆ ಪರಿಹಾರ ವೇದಿಕೆಗಳು:

ಗ್ರಾಹಕ ಕುಂದುಕೊರತೆ ಪರಿಹಾರ ವೇದಿಕೆಯು ಹೆಸ್ಕಾಂ ಕಾರ್ಯವ್ಯಾಪ್ತಿಯ ಧಾರವಾಡ, ಹಾವೇರಿ, ಉತ್ತರ ಕನ್ನಡ, ಬೆಳಗಾವಿ, ಬಾಗಲಕೋಟೆ, ವಿಜಯಪುರ ಮತ್ತು ಗದಗ ಜಿಲ್ಲೆಗಳ ಪ್ರತಿ ಜಿಲ್ಲಾಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದೆ.

2020–21 ನೇ ಸಾಲಿನ ಪ್ರಗತಿಯು ಈ ಕೆಳಗಿನಂತಿದೆ:

ಗ್ರಾಹಕ ಕುಂದುಕೊರತೆ ಪರಿಹಾರ ವೇದಿಕೆ ಕಂದಾಯ ಜಿಲ್ಲೆಯ ಹೆಸರು	ಹಿಂದಿನ ವರ್ಷಾಂತ್ಯಕ್ಕೆ ಬಾಕಿ ಉಳಿದ ಕುಂದುಕೊರತೆಗಳ ಸಂಖ್ಯೆ (31.03.2019)	ಸದರಿ ವರ್ಷದಲ್ಲಿ ಸ್ವೀಕರಿಸಿದ ಕುಂದುಕೊರತೆಗಳ ಸಂಖ್ಯೆ	ಸದರಿ ವರ್ಷದಲ್ಲಿ ವಿಲೇವಾರಿಯಾದ ಕುಂದುಕೊರತೆಗಳ ಸಂಖ್ಯೆ	ವರ್ಷಾಂತ್ಯಕ್ಕೆ ಬಾಕಿ ಉಳಿದ ಕುಂದುಕೊರತೆಗಳ ಸಂಖ್ಯೆ (31.03.2020)	31.03.2020 ರಂತೆ ಇರುವಂತೆ ಬಾಕಿಯ ವಿವರಗಳು					ಸದರಿ ವರ್ಷದಲ್ಲಿ ನಡೆದ ಗ್ರಾಹಕ ಕುಂದುಕೊರತೆ ಪರಿಹಾರ ವೇದಿಕೆ ಸಭೆಗಳ ಸಂಖ್ಯೆ	ಲೈಸೆನ್ಸಿದ್ಧಾರರ (ಹೆಸ್ಕಾಂ) ಪರವಾಗಿ ನಿರ್ಣಯಗೊಂಡ ಪ್ರಕರಣಗಳು/ಕುಂದುಕೊರತೆಗಳ ಸಂಖ್ಯೆ	ಅರ್ಜಿದಾರರ (ಗ್ರಾಹಕರು) ಪರವಾಗಿ ನಿರ್ಣಯಗೊಂಡ ಪ್ರಕರಣಗಳು/ಕುಂದುಕೊರತೆಗಳ ಸಂಖ್ಯೆ
					ಎರಡು ತಿಂಗಳಿನ ಒಳಗೆ	ಎರಡು ತಿಂಗಳು ಮೇಲ್ಪಟ್ಟು ಆರು ತಿಂಗಳೊಳಗೆ	ಆರು ತಿಂಗಳು ಮೇಲ್ಪಟ್ಟು, ಒಂದು ವರ್ಷದ ಒಳಗೆ	ಒಂದು ವರ್ಷ ಮೇಲ್ಪಟ್ಟು, ಎರಡು ವರ್ಷಗಳ ಒಳಗೆ	ಎರಡು ವರ್ಷ ಮೇಲ್ಪಟ್ಟು				
1	*2*	*3*	*4*	*5*	*6*	*7*	*8*	*9*	*10*	*11*	*12*	*13*
ಧಾರವಾಡ	3	4	4	3	3	0	0	0	0	4	3	1
ಗದಗ	0	3	3	0	0	0	0	0	0	4	3	0
ಹಾವೇರಿ	0	0	0	0	0	0	0	0	0	1	0	0
ಉತ್ತರ ಕನ್ನಡ	3	1	4	0	0	0	0	0	0	3	3	1
ಬೆಳಗಾವಿ	1	1	2	0	0	0	0	0	0	6	2	0
ಬಾಗಲಕೋಟೆ	0	10	8	2	1	1	0	0	0	9	6	2
ವಿಜಯಪುರ	0	1	1	0	0	0	0	0	0	1	0	1
ಒಟ್ಟು	**7**	**20**	**22**	**5**	**4**	**1**	**0**	**0**	**0**	**28**	**17**	**5**

30 ಜೂನ್, 2021 ನೇ ಅಂತ್ಯಕ್ಕೆ ಸಾಲಿನ ಪ್ರಗತಿಯು ಈ ಕೆಳಗಿನಂತಿದೆ:

ಗ್ರಾಹಕ ಕುಂದುಕೊರತೆ ಪರಿಹಾರ ವೇದಿಕೆ ಕಂದಾಯ ಜಿಲ್ಲೆಯ ಹೆಸರು	ಹಿಂದಿನ ವರ್ಷಾಂತ್ಯಕ್ಕೆ ಬಾಕಿ ಉಳಿದ ಕುಂದುಕೊರತೆಗಳ ಸಂಖ್ಯೆ (31.03.2019)	ಸದರಿ ವರ್ಷದಲ್ಲಿ ಸ್ವೀಕರಿಸಿದ ಕುಂದುಕೊರತೆಗಳ ಸಂಖ್ಯೆ	ಸದರಿ ವರ್ಷದಲ್ಲಿ ವಿಲೇವಾರಿಯಾದ ಕುಂದುಕೊರತೆಗಳ ಸಂಖ್ಯೆ	ವರ್ಷಾಂತ್ಯಕ್ಕೆ ಬಾಕಿ ಉಳಿದ ಕುಂದುಕೊರತೆಗಳ ಸಂಖ್ಯೆ (31.03.2020)	31.03.2020 ಕ್ಕೆ ಇರುವಂತೆ ಬಾಕಿಯ ವಿವರಗಳು					ಸದರಿ ವರ್ಷದಲ್ಲಿ ನಡೆದ ಗ್ರಾಹಕ ಕುಂದುಕೊರತೆ ಪರಿಹಾರ ವೇದಿಕೆ ಸಭೆಗಳ ಸಂಖ್ಯೆ	ಲೈಸೆನ್ಸಿದಾರರ (ಹೆಸ್ಕಾಂ) ಪರವಾಗಿ ನಿರ್ಣಯಗೊಂಡ ಪ್ರಕರಣಗಳು/ಕುಂದುಕೊರತೆಗಳ ಸಂಖ್ಯೆ	ಅರ್ಜಿದಾರರ (ಗ್ರಾಹಕರು) ಪರವಾಗಿ ನಿರ್ಣಯಗೊಂಡ ಪ್ರಕರಣಗಳು/ಕುಂದುಕೊರತೆಗಳ ಸಂಖ್ಯೆ
					ಎರಡು ತಿಂಗಳ ಒಳಗೆ	ಎರಡು ತಿಂಗಳು ಮೇಲ್ಪಟ್ಟು, ಆರು ತಿಂಗಳಗಳೊಳಗೆ	ಆರು ತಿಂಗಳು ಮೇಲ್ಪಟ್ಟು, ಒಂದು ವರ್ಷದ ಒಳಗೆ	ಒಂದು ವರ್ಷ ಮೇಲ್ಪಟ್ಟು, ಎರಡು ವರ್ಷಗಳ ಒಳಗೆ	ಎರಡು ವರ್ಷ ಮೇಲ್ಪಟ್ಟು,				
1	*2*	*3*	*4*	*5*	*6*	*7*	*8*	*9*	*10*	*11*	*12*	*13*
ಧಾರವಾಡ	3	0	3	0	0	0	0	0	0	0	3	0
ಗದಗ	0	0	0	0	0	0	0	0	0	0	0	0
ಹಾವೇರಿ	0	0	0	0	0	0	0	0	0	0	0	0
ಉತ್ತರ ಕನ್ನಡ	0	1	0	1	0	0	0	0	0	0	0	0
ಬೆಳಗಾವಿ	0	0	0	0	0	0	0	0	0	0	0	0
ಬಾಗಲಕೋಟೆ	2	0	0	2	0	0	0	0	0	1	0	0
ವಿಜಯಪುರ	0	0	0	0	0	0	0	0	0	0	0	0
ಒಟ್ಟು	**5**	**1**	**3**	**3**	**0**	**0**	**0**	**0**	**0**	**1**	**3**	**0**

25. ಮಾಹಿತಿ ತಂತ್ರಜ್ಞಾನ ಉಪಕ್ರಮಗಳು :

ಎ) **ಹುವಿಸಕಂನಿಯ ಜಾಲತಾಣ :**

ಹು.ವಿ.ಸ.ಕಂ.ನಿ. ಯು ತನ್ನದೇ ಆದ ಜಾಲತಾಣ ಹೊಂದಿದ್ದು ಇದನ್ನು ಮಾಹಿತಿ ಮತ್ತು ತಂತ್ರಜ್ಞಾನ (ಐಟಿ&ಎಂಟಿ) ಶಾಖೆಯಿಂದ ನಿರ್ವಹಿಸಲಾಗುತ್ತಿದೆ. ಹೆಸ್ಕಾಂ ಇಲಾಖೆಯು ಇ–ಆಡಳಿತ ಇಲಾಖೆ ವತಿಯಿಂದ ಅಭಿವೃದ್ಧಿಪಡಿಸಿದ ನೂತನ ಟೆಂಪ್ಲೇಟ್ ಅನ್ನು ಅಳವಡಿಸಿಕೊಂಡು ಹೆಸ್ಕಾಂ ಜಾಲತಾಣವನ್ನು ಅಭಿವೃದ್ಧಿಪಡಿಸಿದೆ. ಹೆಸ್ಕಾಂ ಜಾಲತಾಣವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಶಿಫಾರಸ್ಸು, ಕೇಂದ್ರ ಸರ್ಕಾರದ**GIGW (Government of India Guidelines for Website)**ನಿರ್ದೇಶನಗಳು ಹಾಗೂ**Accessibility Compliance**ದಿವ್ಯಾಂಗ ವರ್ಗದವರು ಸಹಾ ಜಾಲತಾಣವನ್ನು ಉಪಯೋಗಿಸಿಕೊಳ್ಳುವಂತೆ ಹೆಸ್ಕಾಂ ಇಲಾಖೆಯ ಜಾಲತಾಣವನ್ನು ಅಭಿವೃದ್ಧಿಪಡಿಸಿ ಪ್ರಕಟಿಸಲಾಗಿರುತ್ತದೆ. ಹೆಸ್ಕಾಂ ಜಾಲತಾಣ https://hescom.karnataka.gov.in/ಯಶಸ್ವಿಯಾಗಿ ಚಾಲನೆಯಲ್ಲಿರುತ್ತದೆ. ಹೆಸ್ಕಾಂ ಜಾಲತಾಣದಲ್ಲಿ ಮಾಹಿತಿಯನ್ನು ನಿಯಮಿತವಾಗಿ ನವೀಕರಿಸಲು ಅಂತರ್ಗತ ಕರ್ಮ ವಿಧಾನವನ್ನು ಹೊಂದಿರುತ್ತದೆ.ಸದರಿ ಜಾಲತಾಣವನ್ನು ನಿಯಮಿತವಾಗಿ ಅಪಡೇಟ್ ಮಾಡಲಾಗುತ್ತದೆ.

ಬಿ) **ಪಿ.ಎಲ್.ಓ (ಕಾಗದ ರಹಿತ) ಕಛೇರಿ:**

ಕಾಗದ ಬಳಕೆ ಪ್ರಮಾಣವನ್ನು ಕಡಿಮೆ ಮಾಡುವುದು, ಸಮಯದ ನಷ್ಟವಿಲ್ಲದೇ ತ್ವರಿತ ಗತಿಯಲ್ಲಿ ಕಡತಗಳನ್ನು ಮತ್ತು ಪತ್ರಗಳನ್ನು ವಿಲೇವಾರಿ ಮಾಡುವುದಕ್ಕಾಗಿ ಕಾಗದ ರಹಿತ ಕಛೇರಿ ವ್ಯವಸ್ಥೆಯನ್ನು ಹೆಸ್ಕಾಂನಲ್ಲಿ ದಿ: 08.01.2012 ರಿಂದ ಪ್ರಾರಂಭಿಸಲಾಗಿದೆ. ಕಾಗದ ರಹಿತ ಕಛೇರಿಯ ಸಾಫ್ಟವೇರನ್ನು ಯಶಸ್ವಿಯಾಗಿ ನಿಗಮ ಕಛೇರಿಯಲ್ಲಿ ಅಳವಡಿಸಲಾಗಿದೆ.ಸದರಿ ವ್ಯವಸ್ಥೆಯ ಪ್ರಮುಖ ಪ್ರಯೋಜನಗಳೆಂದರೆ ಖರ್ಚುವೆಚ್ಚ & ಸ್ಥಳದ

ನಿರ್ವಹಣೆ, ಮಾಹಿತಿಯ ಮರುಪಡೆಯುವಿಕೆ, ಎಲ್ಲಿಯಿಂದಾದರೂ ಮಾಹಿತಿಯ ವೀಕ್ಷಣೆ ಹಾಗೂ ಮಾಹಿತಿಯ ಸುರಕ್ಷತೆ.

ಸಿ) **ಬಯೋಮೆಟ್ರಿಕ್ ಸಾಧನೆಗಳು:**

ಅಂತರ್ಜಾಲ ಆಧಾರಿತ ಬಯೋಮೇಟ್ರಿಕ್ ಸಾಧನಗಳನ್ನು 26 ಸ್ಥಳಗಳಲ್ಲಿ ಮೊದಲನೇ ಹಂತದಲ್ಲಿ ಅನುಸ್ಥಾನಗೊಳಿಸಲಾಗಿದ್ದು 2 ನೇ ಹಂತದಲ್ಲಿ 97 ಸ್ಥಳಗಳಲ್ಲಿ ಬಯೋಮೆಟ್ರಿಕ್ ಸಾಧನಗಳನ್ನು ಅಳವಡಿಸಲಾಗಿದೆ. ಬಯೋಮೆಟ್ರಿಕ್ ಸಾಧನವು ಬೆರಳಚ್ಚಿನ ಮೂಲಕ ಒಳಬರುವುದು, ಹೊರಗೆ ಹೋಗುವ ಸಮಯವನ್ನು ದಾಖಲೆ ಮಾಡುವ ವ್ಯವಸ್ಥೆಯಾಗಿರುತ್ತದೆ. ಹಾಜರಾತಿ ಮಾಹಿತಿಯು ಆನ್‌ಲೈನ್‌ನಲ್ಲಿ ಸಿಗುತ್ತದೆ. ಈ ಸಾಪ್ಟವೇರಿನ ಮೂಲಕ ವಿವಿಧ ತರಹದ ವರದಿಗಳನ್ನು ತೆಗೆದುಕೊಳ್ಳಬಹುದು.

ಡಿ) **ಇ–ಪ್ರೊಕ್ಯೂರ್ಮೆಂಟ್:**

ಕರ್ನಾಟಕ ಸರ್ಕಾರವು ಅದರ ಗಣಕೀಕರಣ ಕೇಂದ್ರವಾದ ಇ–ಗವರ್ನನ್ಸ್ ಸಹಯೋಗದಲ್ಲಿ ಏಕ, ಏಕೀಕೃತ, ಕೊನೆಯಿಂದ ಕೊನೆಯವರೆಗೆ ಇರುವ ಇ–ಪ್ರೊಕ್ಯೂರ್ಮೆಂಟ್ ವೇದಿಕೆಯನ್ನು ಸ್ಥಾಪಿಸಿದೆ. ಹು.ವಿ.ಸ.ಕಂ.ನಿ. ಯಲ್ಲಿಯೂ ಸಹ ವಿವಿಧ ಖರೀದಿ, ಸೇವೆ ಹಾಗೂ ಕಾರ್ಯಗಳ ಟೆಂಡರ್ ಪ್ರಕ್ರಿಯೆಗೋಸ್ಕರ ಈ ವ್ಯವಸ್ಥೆಯನ್ನು 19/07/2010 ರಿಂದ ಅಳವಡಿಸಲಾಗಿದೆ

ಇ) **ಸರ್ಕಾರದ ಇ–ಮಾರುಕಟ್ಟೆ (ಜಿಇಎಂ)**

ಜಿಇಎಂ. ನ್ಯಾಷನಲ್ ಪಬ್ಲಿಕ್ ಪ್ರೊಕ್ಯೂರ್ಮೆಂಟ್ ಪೋರ್ಟಲ್ ಒಂದು ಕಂಪನಿ ಕಾಯ್ದೆ, 2013 ರಡಿಯಲ್ಲಿ ನೊಂದಾಯಿಸಲ್ಪಟ್ಟಿದ್ದು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಂಸ್ಥೆಗಳಿಗೆ ಅವಶ್ಯವಿರುವ ಸಾಮಗ್ರಿಗಳ ಖರೀದಿಗಾಗಿ ಹಾಗೂ ಸೇವೆಗಳ ಪೂರೈಕೆಗಾಗಿ ಮಾರುಕಟ್ಟೆಯನ್ನು ಒದಗಿಸುವುದು.

ಹುವಿಸ ಕಂಪನಿಯು ಈ ಹೊಸ ಪರಿಕಲ್ಪನೆಯನ್ನು ಅಳವಡಿಸಿಕೊಂಡಿದ್ದು, ಮಾಹಿತಿ ತಂತ್ರಜ್ಞಾನಕ್ಕೆ ಅವಶ್ಯವಿರುವ ಯಂತ್ರಾಂಶಗಳನ್ನು ಜಿಇಎಂ ಮುಖಾಂತರ ಖರೀದಿಗಾಗಿ ಜನೇವರಿ 2017 ರಿಂದ ಚಾಲನೆ ನೀಡಿದೆ. ಜಿಇಎಂ ಪೋರ್ಟಲ್ ಖರೀದಿ ಪ್ರಕ್ರಿಯೆಯನ್ನು ಸರಳಗೊಳಿಸಿದ್ದು, ಪಾರದರ್ಶಕತೆ ಮತ್ತು ಸುಲಭ ಖರೀದಿಯನ್ನು ಒದಗಿಸಿದೆ.

ಎಫ್) ಎ.ಟಿ.ಪಿ. (ಎನಿ ಟೈಮ್ ಪೇಮೇಂಟ್) ಕೇಂದ್ರಗಳು:

ದಿನದ 24 ಘಂಟೆಗಳ ಕಾಲ (24 X 7) ಗ್ರಾಹಕರು ತಮ್ಮ ಬಿಲ್ಲುಗಳನ್ನು ಸಂದಾಯ ಮಾಡಲು ಅನುಕೂಲವಾಗುವಂತೆ 55 ಸ್ಥಳಗಳಲ್ಲಿ ಎ.ಟಿ.ಪಿ.ಕೇಂದ್ರಗಳನ್ನು ಸ್ಥಾಪಿಸಲಾಗಿದೆ.ಎ.ಟಿ.ಪಿ.ಕೇಂದ್ರಗಳಿಂದ ಗ್ರಾಹಕರಿಗೆ ಕೆಳಗಿನಂತೆ ಸೌಲಭ್ಯ ಒದಗುತ್ತವೆ.

- ಗ್ರಾಹಕರಿಗಾಗಿ ಸುಧಾರಿಸಿದ ಸೇವಾ ಮಟ್ಟ.
- ಗ್ರಾಹಕರು ತಮ್ಮ ವಿದ್ಯುಚ್ಛಕ್ತಿ ಬಿಲ್ಲುಗಳನ್ನು ನಗದು/ಚೆಕ್/ಡಿಡಿ/ಡೆಬಿಟ್ ಕಾರ್ಡ್/ಕ್ರೆಡಿಟ್ ಕಾರ್ಡ್ ಮುಖಾಂತರ ಪಾವತಿಸಬಹುದು.
- ವಿದ್ಯುತ್ ಪಾವತಿ/ಬಳಕೆಗಳ ಸಂಗ್ರಹಕ್ಕಾಗಿ ಯಾವಾಗಲಾದರೂ ಉಪಯೋಗಿಸಬಹುದು.
- ಗ್ರಾಹಕ ಸ್ನೇಹಿ ಉಪಕರಣಗಳು, ಪಾವತಿ ಪ್ರಕ್ರಿಯೆಯಲ್ಲಿ ಯಾವುದೇ ಮಾನವರ ಹಸ್ತಕ್ಷೇಪವಿಲ್ಲ.
- ಅಂತಿಮ ಬಳಕೆದಾರರ ಪಾವತಿಯ ಸಮಯದಲ್ಲಿ ಕಡಿತ (ಸರತಿ/ಸಾಲು ಇರುವುದಿಲ್ಲ).

ಜಿ) **ಇಸಿಎಸ್(ಎಲೆಕ್ಟ್ರಾನಿಕ್ ಕ್ಲೀಯರಿಂಗ ಸಿಸ್ಟಮ್):**

ಹುವಿಸ ಕಂಪನಿಯಲ್ಲಿ ಇಸಿಎಸ್‌ನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ವ್ಯವಸ್ಥೆಯಲ್ಲಿ ಗ್ರಾಹಕರು ತಮ್ಮ ಬಿಲ್ಲುಗಳನ್ನು ನೇರವಾಗಿ ತಮ್ಮ ಬ್ಯಾಂಕ ಖಾತೆಗಳ ಮುಖಾಂತರ ಸೂಕ್ತವಾದ ಮಾಹಿತಿಯನ್ನು ಕಡ್ಡಾಯವಾಗಿ ಬ್ಯಾಂಕುಗಳಿಗೆ ನೀಡಿ ಪಾವತಿಸಬಹುದಾಗಿದೆ.

ಹೆಚ್) ಬಿಲ್ಲಿಂಗ್ ಚಟುವಟಿಕೆಗಳು ಮತ್ತು ಆನ್‌ಲೈನ್ ಪೇಮೆಂಟ್ ಸೌಲಭ್ಯ:

ಹುವಿಸಕಂಪನಿಯು ತನ್ನ ಕಾರ್ಯವ್ಯಾಪ್ತಿಯ ಎಲ್ಲ ಗ್ರಾಹಕರಿಗೆ ಬಿಲ್ಲುಗಳನ್ನು ಉತ್ಪಾದನೆ ಮಾಡಿ ಗಣಕೀಕೃತ ರಸೀದಿಯನ್ನು ವಿತರಣೆ ಮಾಡುವುದಕ್ಕಾಗಿ ವೆಬ್ ಆಧಾರಿತ ತಂತ್ರಾಂಶವನ್ನು ಒದಗಿಸಿದೆ. ಗ್ರಾಹಕರಿಗಾಗಿ ನೇರ ಪಾವತಿ (ಆನ್‌ಲೈನ್ ಪೇಮೆಂಟ್)ಸೌಲಭ್ಯವನ್ನು ಒದಗಿಸಲಾಗಿದೆ. ಗ್ರಾಹಕರು ಆನ್‌ಲೈನ್ ಬ್ಯಾಂಕಿಂಗ್, ಬಿ.ಬಿ.ಪಿ.ಎಸ್. / ಇ.ಸಿ.ಎಸ್., ಡೆಬಿಟ್ / ಕ್ರೆಡಿಟ್ ಕಾರ್ಡ್ / ವ್ಯಾಲೆಟ್ / ಎಟಿಪಿ / ಕರ್ನಾಟಕ–ಒನ್ ಇತ್ಯಾದಿ ಮುಖಾಂತರ ನೇರ ಪಾವತಿ (ಆನ್‌ಲೈನ್ ಪೇಮೆಂಟ್) ಮಾಡಬಹುದಾಗಿದೆ.

ಆಯ್) ಮೊಬೈಲ್ ಕ್ಯಾಶ್ ಕೌಂಟರ್ (ಎಂಸಿಸಿ):

ಆರ್ ಎ ಪಿ ಡಿ ಆರ್ ಪಿ ಅಲ್ಲದ ಪ್ರದೇಶದ ಗ್ರಾಹಕರಿಗಾಗಿ ಸ್ಥಳದಲ್ಲಿಯೇ ವಿದ್ಯುತ್ ಬಿಲ್ ಪಾವತಿಯ ಸಂಗ್ರಹ ಹಾಗೂ ರಸೀದಿಗಳನ್ನು ಪೂರೈಸುವುದರೊಂದಿಗೆ ಮನೆಬಾಗಿಲಿಗೆ ಸೇವೆಗಳನ್ನು ಒದಗಿಸಲಾಗುತ್ತಿದೆ. ಹುವಿಸ ಕಂಪನಿಯ ಉಪ–ವಿಭಾಗಗಳು/ಶಾಖೆಗಳಲ್ಲಿ ಈ ಸೌಲಭ್ಯವನ್ನು ಮೇ–2017 ರಿಂದ ಸಕ್ರಿಯಗೊಳಿಸಲಾಗಿದೆ.

ಜೆ) **ಇ ಆರ್ ಪಿ ತಂತ್ರಾಂಶ:** ಇಆರ್‌ಪಿ ತಂತ್ರಾಂಶ ಅನ್ನು ಹೆಸ್ಕಾಂ ಕಚೇರಿಗಳಲ್ಲಿ ದಿನಾಂಕ:12.09.2019 ರಿಂದ ಜಾರಿಗೆ ತರಲಾಗಿದೆ. ಇಆರ್‌ಪಿ ತಂತ್ರಾಂಶವು ಈ ಕೆಳಗೆ ಪಟ್ಟಿ ಮಾಡಲಾದ ಎಲ್ಲಾ ಮಾಡ್ಯೂಲ್‌ಗಳಿಗೆ ವೆಬ್ ಆಧಾರಿತ ಸೌಲಭ್ಯಗಳನ್ನು ಒದಗಿಸುತ್ತದೆ:

1) ಉಗ್ರಾಣ, ದಾಸ್ತಾನು, ಸಂಗ್ರಹಣೆ ಮತ್ತು ಖರೀದಿ ನಿರ್ವಹಣೆ

2) ಹಣಕಾಸು ಮತ್ತು ಲೆಕ್ಕಪತ್ರ ನಿರ್ವಹಣೆ(F&A)

3) ಪ್ರಾಜೆಕ್ಟ್ ಮ್ಯಾನೇಜ್ಮೆಂಟ್ ಮಾಡ್ಯೂಲ್

4) ಕಾನೂನು ಪ್ರಕರಣಗಳ ಮೇಲ್ವಿಚಾರಣೆ

5) ಟೆಂಡರ್ ಮಾನಿಟರಿಂಗ್

6) ಟ್ರಾನ್ಸ್ಫಾರ್ಮರ್ ವೈಫಲ್ಯ ಮತ್ತು ಅಂದಾಜುನಿರ್ವಹಣೆ

26. ಸಾಂಸ್ಥಿಕ ಬಲ:

ತರಬೇತಿ ವಿವರಗಳನ್ನು ಕೆಳಗೆ ನೀಡಲಾಗಿದೆ:

ಕೈಗಾರಿಕಾ ತರಬೇತಿ ಕೇಂದ್ರವನ್ನು ಹುಬ್ಬಳ್ಳಿಯ ವಿದ್ಯುತ್‌ನಗರದಲ್ಲಿ 2002 ರಲ್ಲಿ ಸ್ಥಾಪಿಸಲಾಯಿತು.2020–21 ರ ಆರ್ಥಿಕ ವರ್ಷದಲ್ಲಿ 700 ಸಂಖ್ಯೆಯ ಅಧಿಕಾರಿಗಳು / ಉದ್ಯೋಗಿಗಳು / ಅಪ್ರೆಂಟಿಸ್‌ಗಳಿಗೆ ತರಬೇತಿ ನೀಡಲಾಗಿದೆ.

1. ಕರ್ನಾಟಕ ಸರ್ಕಾರ ಶಿಶಿಕ್ಷು ಕಾಯ್ದೆ– 1961 ಪ್ರಕಾರ ಐ.ಟಿ.ಐ. ಪಾಸಾದ 128 ಅಭ್ಯರ್ಥಿಗಳಿಗೆ ಒಂದು ವರ್ಷದ ಶಿಶಿಕ್ಷು ತರಬೇತಿ ನೀಡಲಾಗುತ್ತಿದೆ.
2. ಕರ್ನಾಟಕ ಸರ್ಕಾರ ಶಿಶಿಕ್ಷು ಕಾಯ್ದೆ– 1961 ಪ್ರಕಾರ ಬಿ.ಇ ಪಾಸಾದ ಒಬ್ಬ ಅಭ್ಯರ್ಥಿಗೆ ಒಂದು ವರ್ಷದ ಶಿಶಿಕ್ಷು ತರಬೇತಿ ನೀಡಲಾಗುತ್ತಿದೆ.
3. 34 ಸಂಖ್ಯೆಯ ಮಾಪಕ ಓದುಗ/ ಓವರ್‌ಸೀಯರ್ / ಸಹಾಯಕ ಉಗ್ರಾಣ ಪಾಲಕ/ ಆಪರೇಟರ್ (ತಾಂತ್ರಿಕ ವಲ್ಲದ) ದಿಂದ ಕಿರಿಯ ಇಂಜನೀಯರರಾಗಿ ಬಡ್ತಿ ಹೊಂದಲು 28 ದಿನಗಳ ಪದೋನ್ನತಿ ಪೂರ್ವ ತರಬೇತಿಯನ್ನು ಜೇಷ್ಠತಾ ಪಟ್ಟಿಯ ಪ್ರಕಾರ ದಿನಾಂಕ 15.02.2021 ರಿಂದ 22.03.2021 ರ ವರೆಗೆ ಆಯೋಜಿಸಲಾಗಿತ್ತು.
4. ರಾಷ್ಟ್ರೀಯ ತರಬೇತಿ ಕಾರ್ಯಕ್ರಮದಡಿ 392 ಸಿ ಮತ್ತು ಡಿ ಗುಂಪಿನ ನೌಕರರಿಗೆ 20 ತಂಡಗಳಲ್ಲಿ ತರಬೇತಿಯನ್ನು ದಿನಾಂಕ 02.11.2020 ರಿಂದ 20.03.2021 ರ ವರೆಗೆ ನೀಡಲಾಗಿರುತ್ತದೆ.

5. 96 ಸಂಖ್ಯೆಯ ವಿಕಲಚೇತನ ಸಹಾಯಕರುಗಳಿಗೆ ಉದ್ಯೋಗ ಪೂರ್ವ ತರಬೇತಿಯನ್ನು ದಿನಾಂಕ 20.02.2021 ರಿಂದ 31.03.2021 ರ ವರೆಗೆ 2 ತಂಡಗಳಲ್ಲಿ ನೀಡಲಾಗಿರುತ್ತದೆ.
6. 27 ಸಂಖ್ಯೆಯ ತಾಂತ್ರಿಕ ಅಧಿಕಾರಿಗಳಿಗೆ 'ತಾಂತ್ರಿಕ ವಿಷಯ' ಕುರಿತು 3 ದಿನಗಳ ಆರ್.ಇ.ಸಿ ಯಿಂದ ತರಬೇತಿಯನ್ನು 2020–2021 ರ ಸಾಲಿನಲ್ಲಿ ನೀಡಲಾಗಿರುತ್ತದೆ.
7. 13 ಸಂಖ್ಯೆಯ ತಾಂತ್ರಿಕ ಅಧಿಕಾರಿಗಳಿಗೆ 'ತಾಂತ್ರಿಕ ವಿಷಯ' ಕುರಿತು 4 ದಿನಗಳ ಆರ್.ಇ.ಸಿ ಯಿಂದ ತರಬೇತಿಯನ್ನು ಆನ್‌ಲೈನ್ ಮುಖಾಂತರ 2020–2021 ರ ಸಾಲಿನಲ್ಲಿ ನೀಡಲಾಗಿರುತ್ತದೆ.
8. 5 ಸಂಖ್ಯೆಯ ತಾಂತ್ರಿಕ ಅಧಿಕಾರಿಗಳಿಗೆ ಐದು ದಿನಗಳ ಐಮಾ (IEEMA) ಆನ್‌ಲೈನ್– ಮೀಟ್ 2020–2021 ರ ಸಾಲಿನಲ್ಲಿ ನೀಡಲಾಗಿರುತ್ತದೆ.
9. 4 ಸಂಖ್ಯೆಯ ತಾಂತ್ರಿಕ ಅಧಿಕಾರಿಗಳಿಗೆ 'ಆರ್.ಟಿ.ಐ ವಿಷಯದ' ಕುರಿತು 1 ದಿನದ ತರಬೇತಿಯನ್ನು "ಜಿಲ್ಲಾ ತರಬೇತಿ ಸಂಸ್ಥೆ", ಧಾರವಾಡ ವತಿಯಿಂದ 2020–2021 ರ ಸಾಲಿನಲ್ಲಿ ನೀಡಲಾಗಿರುತ್ತದೆ.
10. 26 ನೇ ಜನವರಿ 2021 ಗಣರಾಜ್ಯೋತ್ಸವ ಕಾರ್ಯಕ್ರಮದ ಪ್ರಯುಕ್ತ ವಿದ್ಯುತ್ ದುರುಪಯೋಗದ ಪ್ರಕರಣಗಳ ಪತ್ತೆ ಕಾರ್ಯದಲ್ಲಿ ಡಿಸೆಂಬರ್–2019 ರಿಂದ ಸೆಪ್ಟಂಬರ್–2020 ರವರೆಗೆ ಅಸಾಧಾರಣ ಫಲಿತಾಂಶ ತೋರಿದ ಮಾಪಕ ತಪಾಸಣಾ ವಿಭಾಗ, ಹುಬ್ಬಳ್ಳಿ ಮತ್ತು ಬೆಳಗಾವಿ ವ್ಯಾಪ್ತಿಯ 21 ಅಧಿಕಾರಿ/ನೌಕರರುಗಳಿಗೆ 82,000/– ನಗದು ಬಹುಮಾನ ಹಾಗೂ ಶ್ಲಾಘನಾ ಪತ್ರವನ್ನು ನೀಡಲಾಯಿತು.
11. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗದ ಪ್ರಕರಣಗಳ ಪತ್ತೆ ಕಾರ್ಯದಲ್ಲಿ ಡಿಸೆಂಬರ್–2019 ರಿಂದ ಸೆಪ್ಟಂಬರ್–2020 ರಲ್ಲಿ ಅಸಾಧಾರಣ ಫಲಿತಾಂಶ ತೋರಿದ 56 ಜಾಗೃತದಳದ ಅಧಿಕಾರಿ/ಸಿಬ್ಬಂದಿರವರಿಗೆ 1,24,000/– ನಗದು ಬಹುಮಾನ ಹಾಗೂ ಶ್ಲಾಘನಾ ನೀಡಲಾಯಿತು.

ಮಾನವ ಸಂಪನ್ಮೂಲ ಉಪಕ್ರಮಗಳು:

ಉದ್ಯೋಗಿಗಳ ತರಬೇತಿ ಮತ್ತು ಅಭಿವೃದ್ಧಿಯನ್ನು ಆಯೋಜಿಸಲಾಗುತ್ತಿದ್ದು, ಇದರಿಂದಾಗಿ ಹೊಸ ಉದಯೋನ್ಮುಖ ಸವಾಲುಗಳನ್ನು ಎದುರಿಸುವ ಸಾಮರ್ಥ್ಯವನ್ನು ಹೆಚ್ಚಿಸಲು ಹೆಚ್ಚಿನ ಒತ್ತು ನೀಡಲಾಗುತ್ತದೆ. ಹೆಸ್ಕಾಂ ಅಧಿಕಾರಿಗಳಿಗೆ ವಿವಿಧ ಹೆಸರಾಂತ ತರಬೇತಿ ಸಂಸ್ಥೆಗಳಲ್ಲಿ ಡೆಪ್ಯುಟೇಶನ್ ಆಧಾರದ ಮೇಲೆ ತರಬೇತಿ ನೀಡಲಾಗುತ್ತದೆ 2020–2021 ರ ಆರ್ಥಿಕ ವರ್ಷ ಕೆಲವು ತರಬೇತಿ ಸಂಸ್ಥೆಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ.

1. ಆರ್.ಇ.ಸಿ
2. ಆರ್.ಇ.ಸಿ ಆನ್‌ಲೈನ್ ತರಬೇತಿ
3. ಐಮಾ ಆನ್‌ಲೈನ್– ಮೀಟ್
4. "ಜಿಲ್ಲಾ ತರಬೇತಿ ಸಂಸ್ಥೆ", ಧಾರವಾಡ

ನೌಕರರ ಕಲ್ಯಾಣ ಕ್ರಮಗಳು:

1. ವಿದ್ಯುತ್ ದುರುಪಯೋಗದ ಪ್ರಕರಣಗಳ ಪತ್ತೆ ಕಾರ್ಯದಲ್ಲಿ ಅಸಾಧಾರಣ ಫಲಿತಾಂಶ ತೋರಿದ ಮಾಪಕ ತಪಾಸಣಾ ವಿಭಾಗ, ಹುಬ್ಬಳ್ಳಿ ಮತ್ತು ಬೆಳಗಾವಿ ವ್ಯಾಪ್ತಿಯ 21 ಅಧಿಕಾರಿ/ನೌಕರರುಗಳಿಗೆ ನಗದು ಬಹುಮಾನ ಹಾಗೂ ಶ್ಲಾಘನಾ ಪತ್ರವನ್ನು ನೀಡಲಾಯಿತು.
2. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ ವಿದ್ಯುತ್ ಕಳ್ಳತನ, ಸೋರಿಕೆ ಮತ್ತು ದುರುಪಯೋಗದ ಪ್ರಕರಣಗಳ ಪತ್ತೆ ಕಾರ್ಯದಲ್ಲಿ ಅಸಾಧಾರಣ ಫಲಿತಾಂಶ ತೋರಿದ 56 ಜಾಗೃತದಳದ ಅಧಿಕಾರಿ/ಸಿಬ್ಬಂದಿರವರಿಗೆ ನಗದು ಬಹುಮಾನ ಹಾಗೂ ಶ್ಲಾಘನಾ ಪತ್ರವನ್ನು ನೀಡಲಾಯಿತು.

27. ಗ್ರಾಹಕರ ಸೇವಾ ಕೇಂದ್ರ :

- ಗ್ರಾಹಕರ ಸೇವಾ ಕೇಂದ್ರವನ್ನು (ಸಿಸಿಸಿ) ಅನ್ನು **R-APDRP Part–A** ಯೋಜನೆಯ ಅಡಿಯಲ್ಲಿ ನಿಗಮ ಕಚೇರಿ ಹೆಸ್ಕಾಂ ಹುಬ್ಬಳ್ಳಿಯಲ್ಲಿ ಸ್ಥಾಪಿಸಿದೆ. ಹೆಸ್ಕಾಂನ ಗ್ರಾಹಕರ ದೂರುಗಳ ನೋಂದಣಿ ಮತ್ತು ತ್ವರಿತ ಪರಿಹಾರದಂತಹ ಕಾರ್ಯಗಳ ಸರಿಯಾದ ಮೇಲ್ವಿಚಾರಣೆಗಾಗಿ ಗ್ರಾಹಕರ ಸೇವಾ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ.

- ಯೋಜನೆಯ ಅಡಿಯಲ್ಲಿ ನಿಗಮ ಕಚೇರಿ ಹೆಸ್ಕಾಂ ಹುಬ್ಬಳ್ಳಿಯಲ್ಲಿ ಸ್ಥಾಪಿಸಿದೆ. ಹೆಸ್ಕಾಂನ ಗ್ರಾಹಕರ ದೂರುಗಳ ನೋಂದಣಿ ಮತ್ತು ತ್ವರಿತ ಪರಿಹಾರದಂತಹ ಕಾರ್ಯಗಳ ಸರಿಯಾದ ಮೇಲ್ವಿಚಾರಣೆಗಾಗಿ ಗ್ರಾಹಕರ ಸೇವಾ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ.
- 53 ಕಾರ್ಯನಿರ್ವಾಹಕರು, 4 ತಂಡ ಪ್ರಮುಖರು, 4 ಕಿರಿಯ ಎಂಜಿನಿಯರ್‌ಗಳು ಮತ್ತು ಒಬ್ಬ ಸಹಾಯಕ ಎಂಜಿನಿಯರ್ ಹೆಸ್ಕಾಂ ಗ್ರಾಹಕರ ಸೇವಾ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.
- ಹೆಸ್ಕಾಂನಲ್ಲಿ ಅಭಿವೃದ್ಧಿ ಪಡಿಸಿದ ವೆಬ್ ಆಧಾರಿತ ತಂತ್ರಾಂಶವು ಗ್ರಾಹಕ ಸೇವಾ ಕೇಂದ್ರದಲ್ಲಿ ಸಕ್ರಿಯವಾಗಿ ಅವಡಿಸಿಕೊಳ್ಳುವುದರ ಮೂಲಕ ಗ್ರಾಹಕರಿಗೆ ದೂರು ನೋಂದಣಿ ಮತ್ತು ತ್ವರಿತ ಪರಿಹಾರ ಒದಗಿಸುವಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಗ್ರಾಹಕರು ತಮ್ಮ ದೂರುಗಳನ್ನು ಹೆಸ್ಕಾಂನ ಅಧಿಕೃತ ಜಾಲತಾಣದಲ್ಲಿ https://hescom.karnataka.gov.in/ನೋಂದಾಯಿಸಿಕೊಳ್ಳಬಹುದು.
- ಕಾರ್ಯನಿರ್ವಾಹಕರು ಮತ್ತು ಗ್ರಾಹಕರ ನಡುವಿನ ಎಲ್ಲಾ ಸಂಭಾಷಣೆಗಳನ್ನು ದಾಖಲಿಸುವ ಇತ್ತೀಚಿನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ ಹೆಸ್ಕಾಂ ತನ್ನ ಸಹಾಯವಾಣಿಯನ್ನುಉತ್ಕೃಷ್ಟಗೊಳಿಸಿದೆ

ಗ್ರಾಹಕರ ಸೇವಾ ಮತ್ತು ಸ್ನೇಹಪರ ಕ್ರಮಗಳು :

- ಹೆಸ್ಕಾಂ ತನ್ನ ಗ್ರಾಹಕರ ಅನುಕೂಲಕ್ಕಾಗಿ **24x7** ಕೇಂದ್ರೀಕೃತ ಗ್ರಾಹಕ ಸೇವಾ ಕೇಂದ್ರವನ್ನು ನಿಗಮ ಕಚೇರಿ ಹೆಸ್ಕಾಂ ಹುಬ್ಬಳ್ಳಿಯಲ್ಲಿ ಸ್ಥಾಪಿಸಿದೆ. ಗ್ರಾಹಕರ ಸೇವಾ ಕೇಂದ್ರವು ಹೆಸ್ಕಾಂನಲ್ಲಿ ಗ್ರಾಹಕರ ದೂರುಗಳ ನೋಂದಣಿ & ತ್ವರಿತ ಪರಿಹಾರದಂತಹ ಕಾರ್ಯಗಳಿಗಾಗಿ ಮತ್ತು ಸರಿಯಾದ ಮೇಲ್ವಿಚಾರಣೆಗಾಗಿ ಕಾರ್ಯನಿರ್ವಹಿಸುತ್ತಿದೆ.
  - ಹೆಸ್ಕಾಂ ವ್ಯಾಪ್ತಿಗೆ ಬರುವ ವಿದ್ಯುತ್ ಗ್ರಾಹಕರು ತಮ್ಮ ವಿದ್ಯುತ್ ಸಂಬಂಧಿತ ದೂರುಗಳು ಮತ್ತು ಸಹಾಯಕ್ಕಾಗಿ ಉಚಿತ ಸಹಾಯವಾಣಿ ಸಂಖ್ಯೆ 1912 ಗೆ ಕರೆ ಮಾಡಿ ತಮ್ಮ ದೂರುಗಳನ್ನು ನೋಂದಾಯಿಸಿಕೊಳ್ಳಬಹುದು.
  - ಗ್ರಾಹಕರು ಹೆಸ್ಕಾಂ ವೆಬ್‌ಸೈಟ್‌ಗೆ ಲಾಗ್ ಇನ್ ಮಾಡುವ ಮೂಲಕ ದೂರು ನೀಡಬಹುದುhttps://hescom.karnataka.gov.in/
  - ಗ್ರಾಹಕರು ದಿನದ 24 ಗಂಟೆಗಳ ಕಾಲ ಕಾರ್ಯನಿರ್ವಹಿಸುವ ಸೇವಾ ಕೇಂದ್ರದಲ್ಲಿ ಈ ಕೆಳಗಿನ ಸೇವೆಗಳಿಗೆ ದೂರು ನೀಡಬಹುದು.
    - ವಿದ್ಯುತ್ ಸರಬರಾಜು ಕಡಿತಗೊಂಡಾಗ
    - ಕಡಿಮೆ ವೋಲ್ಟೇಜ್ ಸಂಬಂಧಿತ ದೂರುಗಳಿಗಾಗಿ
    - ಮೀಟರ್‌ಗೆ ಸಂಬಂಧಿಸಿದ ವಿಷಯಗಳ ಕುರಿತು
    - ವಿದ್ಯುತ್ ಬಿಲ್‌ಗಳ ಬಗ್ಗೆ
    - ವಿದ್ಯುತ್ ಸುರಕ್ಷತಾ ಕ್ರಮಗಳ ಬಗ್ಗೆ
    - ವಿದ್ಯುತ್ ಕಳ್ಳತನ ಬಗ್ಗೆ
    - ವಿದ್ಯುತ್ ಅಪಘಾತ ಇತ್ಯಾದಿಗಳನ್ನು ತಡೆಗಟ್ಟುವ ಬಗ್ಗೆ.
- 1912 ರ ಸಹಾಯವಾಣಿಯಲ್ಲದೆ, ಹೆಸ್ಕಾಂ ಗ್ರಾಹಕರು ದೂರುಗಳನ್ನು ಅಥವಾ ಯಾವುದೇ ಸಲಹೆಗಳನ್ನು ಕೆಳಗಿನ ವೇದಿಕೆ ಮೂಲಕ ಸಲ್ಲಿಸಬಹುದು.
  - ಇ–ಮೇಲ್ customercare@hescom.co.in
  - ಫೇಸ್‌ಬುಕ್ ಖಾತೆ:https://facebook.com/Hescom Orgn
  - ಟ್ವಿಟರ್ ಖಾತೆ: https://twitter.com/HubliHescom
  - ವಾಟ್ಸಾಪ್ ಸಂಖ್ಯೆ: +919480883899

- ಟ್ರಾನ್ಸ್‌ಫಾರ್ಮರ್ ವೈಫಲ್ಯ ಸಂಬಂಧಿತ ದೂರುಗಳ ನೋಂದಣಿಗಾಗಿ ಹೆಸ್ಕಾಂ ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಗ್ರಾಹಕರಿಗೆ ಹೆಸ್ಕಾಂ ಹೊಸ ಟೋಲ್ ಫ್ರೀ ಸಂಖ್ಯೆಯನ್ನು 1800–425–4754 ಪರಿಚಯಿಸಿದೆ.
- ಗ್ರಾಹಕರ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ 1912 ರ ಕುರಿತು ಮತ್ತು ಇತರೆ ದೂರು ನೋಂದಣಿ ವಿಧಾನಗಳನ್ನು ಸಾಮಾಜಿಕ ಮಾಧ್ಯಮ, ಹೆಸ್ಕಾಂ ಜಾಲತಾಣ ವೇದಿಕೆ ಮೂಲಕ ಸಲ್ಲಿಸುವುದರ ಕುರಿತು ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿ ನಿಯಮಿತವಾಗಿ ವ್ಯಾಪಕ ಪ್ರಚಾರವನ್ನು ನೀಡಲಾಗುತ್ತಿದೆ.
- ಹೆಸ್ಕಾಂ ತನ್ನ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಸೇವೆಯನ್ನು ಒದಗಿಸಲು ನಿರಂತರ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

28. ಡಿಮ್ಯಾಂಡ್ ಸೈಡ್ ಮ್ಯಾನೇಜ್‌ಮೆಂಟ್ (ಡಿಎಸ್‌ಎಮ್):

1. **ಹೊಸ ಬೆಳಕು ಯೋಜನೆ:** ಹೆಸ್ಕಾಂನಲ್ಲಿ ದಿನಾಂಕ: 04–02–2016 ರಿಂದ ಗೃಹಬಳಕೆಯ ದಕ್ಷ ಬೆಳಕಿನ ಕಾರ್ಯಕ್ರಮ ಯೋಜನೆ (DELP) ಜನಪ್ರಿಯವಾಗಿ 'ಹೊಸಬೆಳಕು' ಯೋಜನೆ ಮೆ// ಇ.ಇ.ಎಸ್.ಎಲ್ ವತಿಯಿಂದ ಜಾರಿಯಲ್ಲಿದೆ. ಆಗಸ್ಟ್–2021ರ ವರೆಗೆ ಮಾರಾಟ ಮತ್ತು ಇಂಧನ ಉಳಿತಾಯದ ವಿವರ.

ಕ್ರ.ಸಂ.	ವಿವರಗಳು	ಅಗಸ್ಟ್–2021ರ ವರೆಗೆ ಮಾರಾಟವಾದ ಪ್ರಮಾಣದ ವಿವರ	ಅಗಸ್ಟ್–2021ರ ವರೆಗೆ ಇಂಧನ ಉಳಿತಾಯದ ವಿವರ (ಮಿಯು ಗಳಲ್ಲಿ)
1	ಎಲ್‌ಇಡಿ ಬಲ್ಬ್ ಗಳು	25,11,314	255.56
2	ಎಲ್‌ಇಡಿ ಟ್ಯೂಬಲೈಟ್‌ಗಳು	32,120	3.17
3	ಇಂಧನ ದಕ್ಷ ಫ್ಯಾನ್‌ಗಳು	6,825	0.75
		ಒಟ್ಟು	**259.48**

2. **ಹೆಸ್ಕಾಂನ ಎಲ್ಲ ಸಿ.ಯು.ಜಿ ಮೊಬೈಲ್ ಸಂಖ್ಯೆಗಳಿಗೆ ರೀಂಗ್ ಬ್ಯಾಕ್ ಟೋನ್:**

   ಹೆಸ್ಕಾಂನ ಎಲ್ಲಾ ಸಿ.ಯು.ಜಿ ಮೊಬೈಲ್ ಸಂಖ್ಯೆಗಳಿಗೆ, ಹೆಸ್ಕಾಂನ ಸೇವಾ ಸೌಲಭ್ಯಗಳು, ಹೆಸ್ಕಾಂ 24ಗಂಟೆ ಸಹಾಯವಾಣಿ 1912, ಎಲ್.ಇ.ಡಿ ದೀಪಗಳ ಬಗ್ಗೆ ಒಳಗೊಂಡ ರೀಂಗ್ ಬ್ಯಾಕ್ ಟೋನ್‌ನ್ನು ದಿನಾಂಕ: 17.04.2019 ರಿಂದ ಅಳವಡಿಸಿ ಅರಿವು ಮೂಡಿಸಲಾಗುತ್ತಿದೆ.

3. **ಕೆಪ್ಯಾಸಿಟಿ ಬಿಲ್ಡಿಂಗ್ ಪ್ರೋಗ್ರಾಮ್ (Capacity Building Program): ಸಾಮರ್ಥ್ಯ ನಿರ್ವಹಣಾ ಕಾರ್ಯಕ್ರಮ**

   - ಈ ಕಾರ್ಯಕ್ರಮಕ್ಕೆ ಅಗಸ್ಟ 29 2018 ರಲ್ಲಿ ಬಿ.ಇ.ಇ, ಕೆ.ಆರ್.ಡಿ.ಎಲ್ ಮತ್ತು ಹೆಸ್ಕಾಂ ನಡುವೆ ಒಪ್ಪಂದವಾಗಿರುತ್ತದೆ. ಈ ಕಾರ್ಯಕ್ರಮದಡಿಯಲ್ಲಿ ಬಿಇಇ ನೀಯೋಜಿಸಿದ ಸಿಐಐ ತಂಡವು ಇಂಧನ ದಕ್ಷತೆ ಮತ್ತು ಡಿ.ಎಸ್.ಎಮ್ ಕುರಿತು ತರಬೇತಿ ಕಾರ್ಯಕ್ರಮಗಳನ್ನು ಹೆಸ್ಕಾಂ ಅಧಿಕಾರಿಗಳಿಗೆ ನೀಡಲಾಯಿತು.
   - ಸಿಐಐ ಅವರು 5 ದಿನಗಳ ಮಾಸ್ಟರ್ ಟ್ರೇನರ್‌ಗಳ ತರಬೇತಿ ಕಾರ್ಯಕ್ರಮವನ್ನು ದಿನಾಂಕ 15.10.2019 ರಿಂದ 19.10.2019 ರ ವರೆಗೆ ಹುಬ್ಬಳ್ಳಿಯ ನವೀನ ಹೋಟೆಲ್‌ನಲ್ಲಿ ನಡೆಸಿದರು, ಈ ತರಬೇತಿಯಲ್ಲಿ 43 ಹೆಸ್ಕಾಂನ ಅಧಿಕಾರಿಗಳು ಭಾಗವಹಿಸಿದ್ದರು.
   - 3 ದಿನಗಳ ವೃತ್ತವಾರು ತರಬೇತಿ ಕಾರ್ಯಕ್ರಮವನ್ನು (ಬಾಗಲಕೋಟ ಮತ್ತು ವಿಜಯಪುರ ವೃತ್ತ) ದಿನಾಂಕ 05.12.2019 ರಿಂದ 07.12.2019ರ ವರೆಗೆ ಬಾಗಲಕೋಟನ ಕ್ಲರ್ಕ ಇನ್ನ್ ಹೋಟೆಲ್‌ನಲ್ಲಿ ನಡೆಸಿದರು, ಈ ತರಬೇತಿಯಲ್ಲಿ 34 ಹೆಸ್ಕಾಂನ ಅಧಿಕಾರಿಗಳು ಭಾಗವಹಿಸಿದ್ದರು.

- 3 ದಿನಗಳ ವೃತ್ತವಾರು ತರಬೇತಿ ಕಾರ್ಯಕ್ರಮವನ್ನು (ಬೆಳಗಾವಿ ಮತ್ತು ಚಿಕ್ಕೋಡಿ ವೃತ್ತ) ದಿನಾಂಕ 09.12.2019 ರಿಂದ 11.12.2019ರ ವರೆಗೆ ಬೆಳಗಾವಿನ ಚಾನ್ಸರಿ ಹೋಟೆಲ್‌ನಲ್ಲಿ ನಡೆಸಿದರು, ಈ ತರಬೇತಿಯಲ್ಲಿ 36 ಹೆಸ್ಕಾಂನ ಅಧಿಕಾರಿಗಳು ಭಾಗವಹಿಸಿದ್ದರು.

- 3 ದಿನಗಳ ವೃತ್ತವಾರು ತರಬೇತಿ ಕಾರ್ಯಕ್ರಮವನ್ನು (ಹುಬ್ಬಳ್ಳಿ ಮತ್ತು ಸಿರಸಿ ವೃತ್ತ) ದಿನಾಂಕ 26.07.2021 ರಿಂದ 28.07.2021ರ ವರೆಗೆ ಹುಬ್ಬಳ್ಳಿಯ ನವೀನ್, ಹೋಟೆಲ್ನಲ್ಲಿ ನಡೆಸಿದರು, ಈ ತರಬೇತಿಯಲ್ಲಿ 37 ಹೆಸ್ಕಾಂನ ಅಧಿಕಾರಿಗಳು ಭಾಗವಹಿಸಿದ್ದರು.

- 3 ದಿನಗಳ ವೃತ್ತವಾರು ತರಬೇತಿ ಕಾರ್ಯಕ್ರಮವನ್ನು (ಹುಬ್ಬಳ್ಳಿ ಮತ್ತು ಹಾವೇರಿ ವೃತ್ತ) ದಿನಾಂಕ 29.07.2021 ರಿಂದ 31.07.2021ರ ವರೆಗೆ ಹುಬ್ಬಳ್ಳಿಯ ನವೀನ್, ಹೋಟೆಲ್ನಲ್ಲಿ ನಡೆಸಿದರು, ಈ ತರಬೇತಿಯಲ್ಲಿ 38 ಹೆಸ್ಕಾಂನ ಅಧಿಕಾರಿಗಳು ಭಾಗವಹಿಸಿದ್ದರು.

- ತರಬೇತಿ ಒಳಗೊಂಡ ಕೆಲವು ವಿಷಯಗಳು:

  1. ಡಿಮ್ಯಾಂಡ್ ಸೈಡ್ ಮ್ಯಾನೇಜ್‌ಮೆಂಟ್‌ನ ನಿಯಂತ್ರಣ ಮತ್ತು ನೀತಿ ಅಂಶಗಳು.
  2. ವಿದ್ಯುತ್ ಹೊರೆಯ ಬಗ್ಗೆ ಡಿಎಸ್‌ಎಮ್ ಕ್ರಿಯಾ ಯೋಜನೆ ಕುರಿತು ವಿಷಯ ಅಧ್ಯಯನ.
  3. ಡಿಸ್ಕಾಮ್ ಗಳಲ್ಲಿ, ಸೋಲಾರ್ ಪಿ ವಿ ಸಿಸ್ಟಮ್, ಸ್ಮಾರ್ಟ್ & ಪ್ರಿಪೇಡ್ ಮೀಟರ್ ಸಿಸ್ಟಮ್, ಎಲೆಕ್ಟ್ರಿಕ್ ವೆಹಿಕಲ್&ಚಾರ್ಜಿಂಗ್ ಇನ್‌ಫ್ರಾಸ್ಟ್ರಕ್ಚರ್ ಗಳಲ್ಲಿ ಡಿಮ್ಯಾಂಡ್ ಸೈಡ್ ಮ್ಯಾನೇಜ್‌ಮೆಂಟ್‌ನ ಮಹತ್ವ.
  4. ವಸತಿ, ಬೀದಿ ದೀಪ & ಕೃಷಿ ಕ್ಷೇತ್ರ ಅನುಷ್ಠಾನಗಳಲ್ಲಿ ಎಸ್ಕೊ ಪರಿಕಲ್ಪನೆಗಳು.
  5. ರಾಷ್ಟ್ರೀಯ/ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಡಿಮ್ಯಾಂಡ್ ಸೈಡ್ ಮ್ಯಾನೇಜ್‌ಮೆಂಟ್ ನ ತೆಗೆದುಕೊಂಡ ಕ್ರಮಗಳ ಬಗ್ಗೆ ವಿಷಯ ಅಧ್ಯಯನ. ಇತ್ಯಾದಿ.
  6. ಹಣಕಾಸಿನ ಮೌಲ್ಯಮಾಪನ ಮತ್ತು ಹಣಕಾಸು ಅಧಿವೇಶನದ ವ್ಯಾಪ್ತಿಯ ಪ್ರಾಯೋಗಿಕ ಅಧಿವೇಶನದೊಂದಿಗೆ ಡಿಎಸ್‌ಎಂ ಯೋಜನೆಗಳ ಮಾಪನ ಮತ್ತು ಪರಿಶೀಲನೆ.

  - ಈ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮದ ಅಡಿಯಲ್ಲಿ ಒಂದು ಪ್ರಮುಖ ಚಟುವಟಿಕೆ ಎಂದರೆ ಲೋಡ್ ಸಂಶೋಧನಾ ಅಧ್ಯಯನ. 75 ಸಂಖ್ಯೆಯ ಫೀಡರ್‌ಗಳನ್ನು ಆಯ್ಕೆ ಮಾಡಿ ಲೋಡ್ ಸಂಶೋಧನೆ ಮತ್ತು ಗ್ರಾಹಕ ಸಮೀಕ್ಷೆ ನಡೆಸಲಾಗಿದೆ. ಸಮೀಕ್ಷೆಕಾರ್ಯ ಪೂರ್ಣಗೊಂಡಿದ್ದು. ಸಮೀಕ್ಷೆಯ ವರದಿಯ ಆಧಾರದ ಮೇಲೆ ಡಿಎಸ್‌ಎಂ ಕ್ರಿಯಾ ಯೋಜನೆಯನ್ನು ತಯಾರಿಸಲಾಗುತ್ತದೆ. ಡಿಎಸ್‌ಎಂ ಕ್ರಿಯಾ ಯೋಜನೆಯು ಲೋಡ್ ಅನ್ನು ಗರಿಷ್ಠ ಬೇಡಿಕೆಯಿಂದ ಕನಿಷ್ಟ ಬೇಡಿಕೆಯ ಅವಧಿಗೆ ವರ್ಗಾಯಿಸಲು, ದಿನದ ಸಮಯವನ್ನು ಆಧರಿಸಿ ವಿಭಿನ್ನ ದರಗಳನ್ನು ಹೊಂದಲು ಹಾಗೂ ಉಪಕರಣಗಳ ದಕ್ಷತೆ, ಕಟ್ಟಡ ಮತ್ತು ಕೈಗಾರಿಕಾ ಪ್ರಕ್ರಿಯೆಯ ದಕ್ಷತೆಯನ್ನು ಸುಧಾರಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುವು ಮಾಡಿಕೊಡುವುದರ ಮೂಲಕ ಇಂಧನ ಬಳಕೆಯನ್ನು ಕಡಿಮೆ ಮಾಡುತ್ತದೆ.

4. **ಪತ್ರಿಕಾ ಮಾಧ್ಯಮ:**ವಿಶೇಷ ದಿನಗಳಲ್ಲಿ ದಿನ ಪತ್ರಿಕೆಗಳಲ್ಲಿ ಇಂಧನ ಉಳಿತಾಯ, ಇಂಧನ ದಕ್ಷತೆಯ ವಿಧಾನಗಳು– ಬಿಇಇ 5 ಸ್ಟಾರ್ ರೇಟೆಡ್ ಉಪಕರಣಗಳನ್ನು ಬಳಸುವುದರ ಪ್ರಯೋಜನಗಳು, ಎಲ್.ಇ.ಡಿ. ದೀಪ ಬಳಕೆಯ ಪ್ರಯೋಜನಗಳು ಮತ್ತು ಹೆಸ್ಕಾಂ ಸೇವೆಗಳ ಬಗ್ಗೆ ಜಾಗೃತಿ, ಸೋಲಾರ್ ಮೇಲ್ಛಾವಣಿ ಪಿವಿ ಘಟಕಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸುವುದು ಇತ್ಯಾದಿಗಳ ಕುರಿತು ಜಾಗೃತಿಯನ್ನು ಜಾಹೀರಾತು ನೀಡುವುದರ ಮೂಲಕ ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ.

5. **ರೇಡಿಯೋ ಮಾಧ್ಯಮ:**ಇಂಧನ ಉಳಿತಾಯ, ಇಂಧನ ದಕ್ಷತೆಯ ವಿಧಾನಗಳು– ಬಿಇಇ 5 ಸ್ಟಾರ್ ರೇಟೆಡ್ ಉಪಕರಣಗಳನ್ನು ಬಳಸುವುದರ ಪ್ರಯೋಜನಗಳು, ಎಲ್.ಇ.ಡಿ. ದೀಪ ಬಳಕೆಯ ಪ್ರಯೋಜನಗಳು ಬಿಲ್ ಪಾವತಿ, ಸುರಕ್ಷತಾ ಕಾರ್ಯವಿಧಾನಗಳು ಮತ್ತು ಹೆಸ್ಕಾಂ ಸೇವೆಗಳ ಬಗ್ಗೆ ಜಾಗೃತಿ, ಸೋಲಾರ್ ಮೇಲ್ಛಾವಣಿ

ಪಿವಿ ಘಟಕಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸುವುದು ಇತ್ಯಾದಿಗಳ ಕುರಿತು ಜಿಂಗಲ್ಸ್ ಮತ್ತು ಕಾರ್ಯ್ಯಕ್ರಮದ ಮೂಲಕ. ಆಲ್ ಇಂಡಿಯಾ ರೇಡಿಯೊದ ಪ್ರೈಮರಿ ಚಾನೆಲ್‌ನಲ್ಲಿ ಪ್ರಸಾರ (01.12.2017 ರಿಂದ 31.03.2018 ರವರೆಗೆ) (16.07.2019 ರಿಂದ 31.03.2020 ರವರೆಗೆ) ಮತ್ತು (16.07.2020 ರಿಂದ 31.03.2021 ರವರೆಗೆ)

ಕೋವಿಡ್ –19 ಸಾಂಕ್ರಾಮಿಕ ಪರಿಸ್ಥಿತಿಯ ಕಾರಣ ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳಾದ ಶಾಖಾವಾರು ಜಾಗೃತಿ ಕಾರ್ಯಕ್ರಮಗಳು ಮತ್ತು ಈತರೆ ಕಾರ್ಯಕ್ರಮಗಳು ನಡೆದಿರುವುದಿಲ್ಲ.

29. ಸೌರ ಮೇಲ್ಛಾವಣಿ ಯೋಜನೆ:

ನವೀಕರಿಸಬಹುದಾದ ಇಂಧನವಾದ ಸೌರ ವಿದ್ಯುತ್ ಉತ್ಪಾದನೆಗೆ ಕರ್ನಾಟಕ ಸರ್ಕಾರದಿಂದ ಸೋಲಾರ್ ನೀತಿ 2014–21 ಅನ್ನು ದಿನಾಂಕ: 22.05.2014 ರಂದು ಜಾರಿಗೊಳಿಸಲಾಗಿರುತ್ತದೆ. ಸದರಿ ನೀತಿಯಲ್ಲಿ ಮೇಲ್ಛಾವಣಿ ಸೌರಶಕ್ತಿ ಯೋಜನೆಯಡಿಯಲ್ಲಿ ರಾಜ್ಯದಿಂದ 2022 ರೊಳಗೆ 2400 ಮೆ.ವ್ಯಾಟ್ ಸೋಲಾರ್ ವಿದ್ಯುತ್ ಉತ್ಪಾದನೆಯ ಗುರಿಯನ್ನು ನಿಗದಿ ಪಡಿಸಿದ್ದು, ಗೃಹಬಳಕೆ, ಕೈಗಾರಿಕಾ, ವಾಣಿಜ್ಯ ಮತ್ತು ಇತರೆ ಗ್ರಾಹಕರು ನೆಟ್ ಅಥವಾ ಗ್ರಾಸ್ (Gross) ಮೀಟರಿಂಗ್ ವ್ಯವಸ್ಥೆಯಡಿಯಲ್ಲಿ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಹುವಿಸಕಂಪನಿ ಸೌರ ಮೇಲ್ಛಾವಣಿ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು, ಗ್ರಾಹಕರು ಸೋಲಾರ್‌ನಿಂದ ಉತ್ಪಾದಿಸಿರುವ ವಿದ್ಯುತ್ ನ್ನು ನೆಟ್ ಮೀಟರಿಂಗ್ ವ್ಯವಸ್ಥೆಯಲ್ಲಿ ಸ್ವಂತ ಬಳಕೆಯ ನಂತರ ಉಳಿದ ವಿದ್ಯುತ್ ಅನ್ನು ಹಾಗೂ ಗ್ರಾಸ್ (Gross)ಮೀಟರಿಂಗ್ ವ್ಯವಸ್ಥೆಯಲ್ಲಿ ಉತ್ಪಾದಿಸಿರುವ ಸಂಪೂರ್ಣ ವಿದ್ಯುತ್ ನ್ನು ವಿದ್ಯುತ್ ವಿತರಣಾ ಕಂಪನಿಗಳಿಗೆ ಮಾನ್ಯ ಕೆ.ಇ.ಆರ್.ಸಿ. ರವರು ನಿಗದಿಪಡಿಸಿರುವ ದರದಲ್ಲಿ ಮಾರಾಟ ಮಾಡಬಹುದಾಗಿದೆ. ಈ ಯೋಜನೆಯಲ್ಲಿ ಕಳೆದ 7.2 ವರ್ಷಗಳಿಂದ ಒಟ್ಟು 1678 ಸಂಖ್ಯೆಗಳ ಸೌರ ಘಟಕಗಳಿಂದ 42.795 ಮೆ.ವ್ಯಾಟ್ ಸಾಮರ್ಥ್ಯದ ಸೌರ ಫಲಕಗಳನ್ನು ಹುವಿಸಕಂಪನಿಯ ವಿದ್ಯುತ ಜಾಲಕ್ಕೆ ಸಂಪರ್ಕಗೊಳಿಸಲಾಗಿದೆ.

ಸೌರ ಮೇಲ್ಛಾವಣಿ ಯೋಜನೆ–2: ಸೌರ ಮೇಲ್ಛಾವಣಿ ಯೋಜನೆ ಹಂತ–2: ಎಮ್. ಎನ್. ಆರ್.ಇ. ಯಿಂದ ನೆಟ್ ಮೀಟರಿಂಗ್ ಆಧಾರದಲ್ಲಿ ಸೌರ ಮೇಲ್ಛಾವಣಿ ಸ್ಥಾಪಿಸಲು ಸಹಾಯಧನದ ಯೋಜನೆ – ವಸತಿ ಗ್ರಾಹಕರಿಗೆ (10 ಕಿ.ವ್ಯಾಟ್ ವರೆಗೆ) ಮತ್ತು ಗುಂಪು ವಸತಿ ಸಮುದಾಯ (ಗು.ವ.ಸ.)/ ವಸತಿಕಲ್ಯಾಣ ಸಂಘದ (ವ.ಕ.ಸ.) ಗ್ರಾಹಕರುಗಳಿಗೆ (500 ಕಿ.ವ್ಯಾಟ್ ವರೆಗೆ –ಪ್ರತಿ ಮನೆಗೆ 10 ಕಿ.ವ್ಯಾ. ರಂತೆ)

- ಎಮ್. ಎನ್. ಆರ್. ಇ. ಯಿಂದ ದಿನಾಂಕ 27.01.2020 ರಂದು ಹೆಸ್ಕಾಂ ಗೆ 20 ಮೆ.ವ್ಯಾ. ಹಂಚಿಕೆಯಾಗಿದೆ.
- ಸಹಾಯಧನ ವಿವರಗಳು:
  - ವಸತಿ ಗ್ರಾಹಕರಿಗೆ 40% 3 ಕಿ.ವ್ಯಾಟ್ ವರೆಗೆ ಜೊತೆಗೆ 20% 3 ಕಿ.ವ್ಯಾಟ್ ಮೇಲ್ಪಟ್ಟು – 10 ಕಿ.ವ್ಯಾಟ್ ವರೆಗೆ
  - ಗು.ವ.ಸ. / ವ.ಕ.ಸ. ಗ್ರಾಹಕರಿಗೆ 20% (ಪ್ರತಿ ಮನೆಗೆ 10 ಕಿ.ವ್ಯಾ. ರಂತೆ ಒಟ್ಟು 500 ಕಿ.ವ್ಯಾ. ಗೆ ಮಾತ್ರ)
- ಅರ್ಜಿಗಳ ಆನ್‌ಲೈನ್ ನೋಂದಣಿಗಾಗಿ ವೆಬ್ ಪೋರ್ಟಲ್ ಅಂತಿಮ ಪ್ರಕ್ರಿಯೆಯಲ್ಲಿದೆ.
- ಟೆಂಡರ್ ಕರೆಯಲಾಗಿದೆ L1 ನ ದರವನ್ನು ಕಂಡುಹಿಡಿಯಲಾಗಿದ್ದು, ಏಜೆನ್ಸಿಗಳ ಎಂಪಾನಲ್‌ಮೆಂಟ್ ಅಂತಿಮ ಪ್ರಕ್ರಿಯೆಯಲ್ಲಿದೆ.
- ಪತ್ರಿಕೆ, ಕರಪತ್ರಗಳು, ಬ್ಯಾನರ್‌ಗಳು, ರೇಡಿಯೋದಲ್ಲಿ ಜಾಹೀರಾತಿನ ಮೂಲಕ ಗ್ರಾಹಕರಲ್ಲಿ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳಲಾಗಿದೆ.

ವಿದ್ಯುತ ವಾಹನ ಚಾರ್ಜಿಂಗ್ ಕೇಂದ್ರಗಳು:

- ದಿನಾಂಕ 14.12.2018 ರಂದು ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಗಳ ಕುರಿತಾಗಿ ಕೇಂದ್ರ ಸರ್ಕಾರವು ಮಾರ್ಗಸೂಚಿಗಳನ್ನು ಹೊರಡಿಸಿರುತ್ತದೆ.

- ಕರ್ನಾಟಕ ಸರ್ಕಾರದ ದಿ:28.12.2018 ರ ಪತ್ರದನ್ವಯ ಬೆಸ್ಕಾಂ ನ್ನು ರಾಜ್ಯದಲ್ಲಿ ವಿದ್ಯುತ ವಾಹನ ಚಾರ್ಜಿಂಗ್ ಕೇಂದ್ರಗಳ ಮೂಲ ಸೌಕರ್ಯಗಳನ್ನು ಸ್ಥಾಪಿಸಲು ನೋಡಲ್ ಏಜೇನ್ಸಿಯನ್ನಾಗಿ ನೇಮಿಸಿದೆ.

- ಸ್ಮಾರ್ಟ್ ಸಿಟಿಗಳಿಗೆ ಆದ್ಯತೆ ನೀಡಿ, ಹೆಸ್ಕಾಂ ವ್ಯಾಪ್ತಿಯಲ್ಲಿ ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಗಳನ್ನು ಗುರುತಿಸಲು ಬೆಸ್ಕಾಂ ಕೋರಿರುವ ಪ್ರಯುಕ್ತ, ಹುಬ್ಬಳ್ಳಿ–ಧಾರವಾಡ ನಗರದಲ್ಲಿ 46 (ಖಾಸಗಿ– 34, ಸರ್ಕಾರಿ– 12) ಹಾಗೂ ಬೆಳಗಾವಿ ನಗರದಲ್ಲಿ 28 (ಖಾಸಗಿ) ಸ್ಥಳಗಳನ್ನು ಗುರುತಿಸಿದ್ದು, ಮಾಹಿತಿಯನ್ನು ಬೆಸ್ಕಾಂಗೆ ನೀಡಲಾಗಿದೆ.

- ಸದರಿ ಆರ್ಥಿಕ ವರ್ಷದಲ್ಲಿ ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರಿ ಸ್ಥಳಗಳನ್ನು ಮಾತ್ರ ಗುರುತಿಸಲು ವಿನಂತಿಸಿದೆ.

- 82 ಸರ್ಕಾರಿ ಸ್ಥಳಗಳನ್ನು ಇಲ್ಲಿಯವರೆಗೆ ಗುರುತಿಸಲಾಗಿದೆ.

ಪಿ ಎಮ್–ಕುಸುಮ್ ಯೋಜನೆ:

ಭಾರತ ಸರ್ಕಾರವು ರೈತರಿಗಾಗಿ ಪ್ರಧಾನ ಮಂತ್ರಿ ಕಿಸಾನ್ ಉರ್ಜಾ ಸುರಕ್ಷಾ ಏವಂ ಉತ್ಥಾನ್ ಮಹಾಭಿಯಾನ್ (ಪಿ ಎಮ್– ಕುಸುಮ್) ಯೋಜನೆಯನ್ನು ಆರಂಭಿಸಿದೆ.

I. **ಕಂಪೋನೆಂಟ್– ಎ:** 10,000 MW ವಿಕೇಂದ್ರೀಕೃತ ಗ್ರೌಂಡ್/ಸ್ಟಿಲ್ಟ್ ಮೌಂಟೆಡ್ ಗ್ರಿಡ್ ಸಂಪರ್ಕಿತ ಸೌರ ಅಥವಾ ಇತರ ನವೀಕರಿಸಬಹುದಾದ ಇಂಧನ ಆಧಾರಿತ ವಿದ್ಯುತ್ ಸ್ಥಾವರಗಳನ್ನು 2 MW ವರೆಗೆ ಸ್ಥಾಪಿಸುವುದು. ಹೆಸ್ಕಾಂ ಹಂಚಿಕೆ– ಇರುವುದಿಲ್ಲಾ.

II. **ಕಂಪೋನೆಂಟ್– ಬಿ:** 17.5 ಲಕ್ಷ ಜಾಲಮುಕ್ತ ಸೌರ ನೀರಾವರಿ ಪಂಪ್‌ಸೆಟ್ 7.5 ಅಶ್ವ ಶಕ್ತಿ ವರೆಗೆ ಸ್ಥಾಪನೆ (ಪ್ರತಿ 7.5 ಅಶ್ವ ಶಕ್ತಿ ನೀರಾವರಿ ಪಂಪ್‌ಸೆಟ್‌ಗೆ ಎಮ್. ಎನ್. ಆರ್. ಇ. ನಿಗದಿಪಡಿಸಿದ ಬೆಂಚ್ ಮಾರ್ಕ್ ದರ 3.5 ಲಕ್ಷ). ಕರ್ನಾಟಕದ ಹಂಚಿಕೆ : 10,000

    - ಕೆ ಆರ್ ಇ ಡಿ ಎಲ್ ಈ ಯೋಜನೆಯ ಅನುಷ್ಠಾನ ಸಂಸ್ಥೆಯಾಗಿದೆ.

    - ರಾಜ್ಯ ಸರ್ಕಾರವು, ಪಿ ಎಮ್– ಕುಸುಮ ಕಂಪೊನೆಂಟ್–ಬಿ ಅಡಿಯಲ್ಲಿ 7.5 ಹೆಚ್.ಪಿ ಸಾಮರ್ಥ್ಯದ ವರೆಗೆ ಸೌರ ಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್ ಗಳನ್ನು ಸ್ಥಾಪಿಸಲು ಎಂ.ಎನ್.ಆರ್.ಇ ಯಿಂದ ಕೇಂದ್ರ ಸಹಾಯಧನ ಶೇ. 30 ರಷ್ಟು, ರಾಜ್ಯ ಸರ್ಕಾರದಿಂದ ಶೇ. 50 ರಷ್ಟು ಹಾಗೂ ಪ.ಜಾ/ಪ.ಪಂ ಫಲಾನುಭವಿಗಳ ವಂತಿಗೆಯಾಗಿ ಶೇ.20 ರಷ್ಟು ಪಾಲು ಹಂಚಿಕೆಯಂತೆ, ಯೋಜನೆಯನ್ನು ಕೈಗೆತ್ತುಕೊಳ್ಳಲು ನಿರ್ದೇಶಿಸಿದೆ. (ರಾಜ್ಯದ ಪಾಲನ್ನು ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಮೊತ್ತದಿಂದ ಭರಿಸಲಾಗುತ್ತದೆ)

    - ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವರ್ಗದ ರೈತರಿಂದ ಆನ್‌ಲೈನ್ ಅರ್ಜಿ ನೊಂದಣಿ ಪ್ರಕ್ರಿಯೆ ಮುಕ್ತಾಯಗೊಂಡಿದ್ದು ಸೌರ ನೀರಾವರಿ ಪಂಪ್‌ಸೆಟ್ ಅನುಷ್ಠಾನವು ಪ್ರಗತಿಯಲ್ಲಿದೆ.

    - ಒಟ್ಟು ಹೆಸ್ಕಾಂ ವ್ಯಾಪ್ತಿಯ 111 ಅರ್ಜಿಗಳನ್ನು ಸ್ವೀಕಾರವಾಗಿದ್ದು, ಅದರಲ್ಲಿ 45 ಸಂಖ್ಯೆಗಳ ಸೌರ ನೀರಾವರಿ ಪಂಪ್‌ಸೆಟ್‌ಗಳನ್ನು ಕಾರ್ಯಗತಗೊಳಿಸಲಾಗಿದೆ.

III. **ಕಂಪೋನೆಂಟ್–ಸಿ(1):**15 ಲಕ್ಷ ಗ್ರಿಡ್–ಸಂಪರ್ಕಿತ ಕೃಷಿ ಪಂಪ್‌ಸೆಟ್‌ಗಳ (7.5 ಎಚ್‌ಪಿ ಪಂಪ್ ಸಾಮರ್ಥ್ಯದ ವರೆಗೆ) ಸೌರೀಕರಣ. ಹೆಸ್ಕಾಂ ಹಂಚಿಕೆ – ಶೂನ್ಯ.

ಕಂಪೋನೆಂಟ್–ಸಿ(2):ಫೀಡರ್‌ಗಳ ಸೌರೀಕರಣ– ಈ ಯೋಜನೆಯಲ್ಲಿ ಕೃಷಿ ಫೀಡರ್ ನ್ನು ಸೌರೀಕರಣಗೊಳಿಸುವದು.

- ಎಮ್ ಎನ್ ಆರ್ ಇ ನಿಗದಿ ಪಡಿಸಿದ ಸೌರ ವಿದ್ಯುತ್ ಸ್ಥಾವರ ಸ್ಥಾಪನೆ ವೆಚ್ಚ –3.5 ಕೋಟಿ/ಮೆವ್ಯಾ
- ಕೇಂದ್ರ ಹಣಕಾಸು ನೆರವು 30% ಅಂದರೆ 1.05 ಕೋಟಿ/ಮೆವ್ಯಾ
- ಕರ್ನಾಟಕ ಸರ್ಕಾರದ ಆದೇಶದ ಪ್ರಕಾರ – EN71VSC2021, Dt: 04.03.2021 ಕೆ ಆರ್ ಇ ಡಿ ಎಲ್ ಈ ಯೋಜನೆಯ ಅನುಷ್ಠಾನ ಸಂಸ್ಥೆಯಾಗಿದೆ.
- ಹೆಸ್ಕಾಂ ಹಂಚಿಕೆ –65000.

30. ಮೈಕ್ರೋ ಫೀಡರ್ ಫ್ರಾಂಚೈಜಿ (ಗ್ರಾಮ ವಿದ್ಯುತ್ ಪ್ರತಿನಿಧಿಗಳು) :

ಗ್ರಾಮೀಣ ಪ್ರದೇಶದಲ್ಲಿನ ಕಂದಾಯ ವಸೂಲಾತಿಯನ್ನು ಹೆಚ್ಚಿಸಲು ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಒಬ್ಬರಂತೆ ಮೈಕ್ರೋ ಫೀಡರ್ ಫ್ರಾಂಚ್ಯಾಜಿ ರವರನ್ನು ಗೊತ್ತು ಮಾಡಿಕೊಂಡಿದ್ದು, ಹುವಿಸಕಂನಿ ವ್ಯಾಪ್ತಿಯಲ್ಲಿ ಮಾರ್ಚ–2021 ರ ಅಂತ್ಯಕ್ಕೆ ಒಟ್ಟು 1333 ಮೈಕ್ರೋ ಫೀಡರ್ ಫ್ರಾಂಚ್ಯಾಜಿ ರವರು ಕಾರ್ಯ ನಿರ್ವಹಿಸುತ್ತಿದ್ದಾರೆ.	
ಎಲ್.ಟಿ–1 (40 ಯುನಿಟ್‌ಗಿಂತ ಮೇಲಟ್ಟು), ಎಲ್.ಟಿ–2, ಎಲ್.ಟಿ–3, ಎಲ್.ಟಿ–4 (10 ಹೆಚ್.ಪಿ. ಗಿಂತ ಮೇಲ್ಪಟ್ಟ ಸ್ಥಾವರಗಳು) ಎಲ್.ಟಿ–5 (40 ಹೆಚ್.ಪಿ.ವರೆಗಿನ) ಮತ್ತು ಎಲ್.ಟಿ–6 ಪ್ರವರ್ಗದ ಸ್ಥಾವರಗಳ ಮಾಪಕ ಓದಿ ಬಿಲ್ಲು ವಿತರಣೆ / ಕಂದಾಯ ವಸೂಲಾತಿ ಮಾಡುವುದು.	
ಸಂಗ್ರಹಣೆ ಮಾಡಿದ ಕಂದಾಯ ವಸೂಲಾತಿ ಮೊತ್ತವನ್ನು ಸಂಬಂಧಪಟ್ಟ ಕಂದಾಯ ಶಾಖೆಗೆ ಅದೇ ದಿನ ಅಥವಾ ಮುಂದಿನ ಕೆಲಸದ ದಿನದಂದು ಠೇವಣಿ ಮಾಡುವುದು.	
ಗ್ರಾಹಕರ ದೂರುಗಳನ್ನು ನೋಂದಾಯಿಸುವುದು ಮತ್ತು ಕಛೇರಿಗೆ ತಲುಪಿಸುವುದು.	
ಎಲ್.ಟಿ. ಜಕಾತಿಯ ಗ್ರಾಹಕರ ದೂರುಗಳನ್ನು ನಿವಾರಿಸಲು ಸಹಕರಿಸುವುದು.	
ಎಲ್.ಟಿ–1, ಎಲ್.ಟಿ–2, ಎಲ್.ಟಿ–3, ಎಲ್.ಟಿ–4 ಮತ್ತು ಎಲ್.ಟಿ–5 (40 ಹೆಚ್.ಪಿ.ವರೆಗೆ)	
ಕ್ಷೇತ್ರದ ವಾಸ್ತವಿಕತೆಯ ಬಗ್ಗೆ ನಿಯಮಿತವಾಗಿ ವರದಿ ನೀಡುವುದು.	
ಒಟ್ಟು ಗ್ರಾಮ ಪಂಚಾಯಿತಿಗಳು	1587
ಕಾರ್ಯನಿರ್ವಹಿಸುತ್ತಿರುವ ಮೈಕ್ರೋ ಫೀಡರ್ ಫ್ರಾಂಚ್ಯಾಜಿ ರವರ ಸಂಖ್ಯೆ	1333
2020–21 ರ ಒಟ್ಟು ಬುನಾದಿ ವಸೂಲಾತಿ ಗುರಿ	ರೂ. 2386.29 ಕೋಟಿ 31.03.2021 ಕ್ಕೆ ಇರುವಂತೆ
ಒಟ್ಟು ಕಂದಾಯ ವಸೂಲಾತಿ	ರೂ. 2306.83 ಕೋಟಿ 31.03.2021 ಕ್ಕೆ ಇರುವಂತೆ
ವಸೂಲಾತಿ ದಕ್ಷತೆ (ವಸೂಲಾತಿ / ಬುನಾದಿ ವಸೂಲಾತಿ ಗುರಿ * 100)	96.67%

31. ಮಹಿಳಾ ಆಂತರಿಕ ದೂರು ಸಮಿತಿ :

ಕಾರ್ಯನಿರ್ವಹಿಸುತ್ತಿರುವ ಸ್ಥಳಗಳಲ್ಲಿ ಮಹಿಳಾ ನೌಕರರಿಗೆ ಆಗುತ್ತಿರುವ ಲೈಂಗಿಕ ಕಿರುಕುಳವನ್ನು ತಡೆಗಟ್ಟಲು ಹುವಿಸಕಂನಿ ಕಂಪನಿ ಕಾರ್ಯಾಲಯದಲ್ಲಿ ಹಾಗೂ ವೃತ್ತ ಮಟ್ಟಗಳಲ್ಲಿ ಈ ಕೆಳಗಿನಂತೆ **"ಆಂತರಿಕ ದೂರು ಸಮಿತಿ"** ಯನ್ನು ರಚಿಸಲಾಗಿದೆ.

ಸಮಿತಿಯ ಸದಸ್ಯರು	–	ಸಮಿತಿ (ಮಹಿಳೆಯರು ಮಾತ್ರ)
ಕೆಲಸ ಮಾಡುವ ಸ್ಥಳದಲ್ಲಿನ ಹಿರಿಯ ಮಟ್ಟದಲ್ಲಿನ ಮಹಿಳಾ ಅಧಿಕಾರಿಯವರು	–	ಅಧ್ಯಕ್ಷರು

ನೌಕರರಲ್ಲಿ ಇಬ್ಬರು ಸದಸ್ಯರು ಸಾಮಾಜಿಕ ಕೆಲಸದಲ್ಲಿ ಅನುಭವವನ್ನು ಹೊಂದಿರುವ ಅಥವಾ ಕಾನೂನು ಜ್ಞಾನ ಹೊಂದಿದ ಮಹಿಳೆಯರಿಗೆ ಆದ್ಯತೆ.	–	ಇಬ್ಬರು ಸದಸ್ಯರು
ಮಹಿಳಾ ಕಾರಣಕ್ಕಾಗಿ ಅಥವಾ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ತಿಳಿದಿರುವ ವ್ಯಕ್ತಿಗೆ ಸರ್ಕಾರೇತರ ಸಂಘಟನೆ ಅಥವಾ ಸಂಘಟನೆ.	–	ಒಬ್ಬರು

ಹುವಿಸಕಂನಿಯ ವ್ಯಾಪ್ತಿಯಲ್ಲಿ ಬರುವ ಆಂತರಿಕ ದೂರು ಸಮಿತಿಯ ಅಧ್ಯಕ್ಷರುಗಳಿಂದ ಬಂದಿರುವ ಮಾಹಿತಿ ಪ್ರಕಾರ 2020–21 ನೇ ಸಾಲಿನಲ್ಲಿ ಯಾವುದೇ ದೂರುಗಳು ದಾಖಲಾಗಿರುವುದಿಲ್ಲ.

32. ನಿಗಮದ ಪ್ರಶಾಸನ:

ಹು.ವಿ.ಸ.ಕಂ.ನಿ.ಯ ಆಡಳಿತ ಮಂಡಳಿಯು ನಿಗಮದ ಆಡಳಿತ ಪದ್ಧತಿಗಳನ್ನು ತನ್ನ ಎಲ್ಲಾ ವ್ಯವಹಾರಗಳಲ್ಲಿ ಸಿದ್ಧಾಂತಗಳನ್ನು ಪಾಲಿಸುವುದರೊಂದಿಗೆ ಆಡಳಿತ ಪದ್ಧತಿಗಳಲ್ಲಿ ನಂಬಿಕೆ ಇಟ್ಟಿದ್ದು ಹಾಗೂ ಸದರಿ ಪದ್ಧತಿಗಳನ್ನು ಬೆಂಬಲಿಸುತ್ತದೆ.

ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕದಂದು ನಿರ್ದೇಶಕರ ಮಂಡಳಿಯು 16 ಸದಸ್ಯರನ್ನು ಒಳಗೊಂಡಿರುತ್ತದೆ.ಎಲ್ಲಾ ನಿರ್ದೇಶಕರುಗಳು ಮಂಡಳಿಯ ಹಾಗೂ ಉಪ ಸಮಿತಿಗಳ ನಡುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ.ಇದರಿಂದಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಗೆ ಬೆಲೆ ಉಂಟಾಗುತ್ತದೆ.

ನಿರ್ದೇಶಕ ಮಂಡಳಿಯ ಸಭೆಗಳು :

ನಿರ್ದೇಶಕ ಮಂಡಳಿ ಸಭೆಗಳನ್ನು ಪೂರ್ವಭಾವಿಯಾಗಿ ನಿಗದಿಗೊಳಿಸಲಾಗುವದು.ಅದಕ್ಕಾಗಿ ಪ್ರತಿಯೊಬ್ಬ ನಿರ್ದೇಶಕರಿಗೆ ಬರವಣಿಗೆಯಲ್ಲಿ ಸೂಚನಾಪತ್ರವನ್ನು ನೀಡಲಾಗುವುದು.ಕಾರ್ಯಸೂಚಿ ಮತ್ತು ಇತರೆ ಸಂಬಂಧಪಟ್ಟ ಟಿಪ್ಪಣಿಗಳನ್ನು ನಿರ್ದೇಶಕರುಗಳಿಗೆ ಪೂರ್ವಭಾವಿಯಾಗಿ ತಲುಪಿಸಲಾಗುವುದು.

ಕಂಪನಿಯ ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕದಂದು ಈ ಕೆಳಕಂಡ ಸದಸ್ಯರು ಮಂಡಳಿಯ ನಿರ್ದೇಶಕರಾಗಿರುತ್ತಾರೆ.

ಕ್ರ.ಸಂ.	ನಿರ್ದೇಶಕರ ಹೆಸರುಗಳು ಶ್ರೀಯುತ / ಶ್ರೀಮತಿ	ಪದನಾಮ
1	ಶ್ರೀ ಜಿ. ಕುಮಾರ ನಾಯ್ಕ, ಭಾ.ಆ.ಸೇ.	ಅಧ್ಯಕ್ಷರು
2	ಶ್ರೀಮತಿ ಡಿ. ಭಾರತಿ,ಭಾ.ಆ.ಸೇ.	ವ್ಯವಸ್ಥಾಪಕ ನಿರ್ದೇಶಕರು
3	ಶ್ರೀಮತಿ ಡಾ॥ ಎಕರೂಪ ಕೌರ, ಭಾ.ಆ.ಸೇ.	ನಿರ್ದೇಶಕರು
4	ಶ್ರೀಮತಿ ಅಪರ್ಣಾ ಪಾವಟೆ	ನಿರ್ದೇಶಕರು
5	ಶ್ರೀ ಎ.ಎಚ್.ಕಾಂಬಳೆ	ನಿರ್ದೇಶಕರು (ತಾಂತ್ರಿಕ)
6	ಶ್ರೀ ಬಿ. ಮಂಜುನಾಥ	ನಿರ್ದೇಶಕರು (ಹಣಕಾಸು)
7	ಶ್ರೀ ಶಿವಪ್ರಕಾಶ ಟಿ. ಎಮ್.	ನಿರ್ದೇಶಕರು
8	ಶ್ರೀ ಟಿ. ಆರ್. ರಾಮಕೃಷ್ಣಯ್ಯ,	ನಿರ್ದೇಶಕರು
9	ಶ್ರೀ ಎನ್. ವಿ. ಭುವನೇಶ್ವರಯ್ಯ	ನಿರ್ದೇಶಕರು
10	ಶ್ರೀ ಸುನೀಲ ಸೋಮಶೇಖರ ಸರೂರ	ನಿರ್ದೇಶಕರು
11	ಶ್ರೀ ಅಣ್ಣಾಸಾಹೇಬ ಅಪ್ಪಾಸಾಹೇಬ ದೇಸಾಯಿ	ನಿರ್ದೇಶಕರು
12	ಶ್ರೀ ಮಹೇಶ ಗುಬ್ಬಿ	ನಿರ್ದೇಶಕರು

13	ಶ್ರೀ ದುಂಡಪ್ಪ ಸಿದಗೊಂಡಪ್ಪ ಸಾವಳಗಿ	ನಿರ್ದೇಶಕರು
14	ಶ್ರೀ ಹನುಮಂತ ತುಳಸಿಗೇರಿ	ನಿರ್ದೇಶಕರು
15	ಶ್ರೀ ದಾದಾಗೌಡ ಎಸ್.ಬಿರಾದಾರ ಬಿನ್ ಶಂಕರಗೌಡ ಬಿರಾದಾರ	ನಿರ್ದೇಶಕರು
16	ಶ್ರೀ ಮಹೇಶ ಅಪ್ಪಾಸಾಹೇಬ ಭಾತೆ	ನಿರ್ದೇಶಕರು
	ಶ್ರೀ ರಾಘವೇಂದ್ರ ಕೋಟೆಮನೆ	ಕಂಪನಿ ಕಾರ್ಯದರ್ಶಿ

2020–21 ನೇ ಸಾಲಿನಲ್ಲಿ ಒಟ್ಟು ನಾಲ್ಕು (4) ನಿರ್ದೇಶಕ ಮಂಡಳಿ ಸಭೆಗಳನ್ನು ನಡೆಸಲಾಗಿದೆ.ಅವುಗಳ ವಿವರ ಕೆಳಗಿನಂತಿದೆ.

ಅ. ಸಂ.	ಸಭೆ ಸಂಖ್ಯೆ	ಸಭೆ ನಡೆದ ದಿನಾಂಕ
1	92 ನೇ ಮಂಡಳಿ ಸಭೆ	20.07.2020
2	93 ನೇ ಮಂಡಳಿ ಸಭೆ	13.11.2020
3	94 ನೇ ಮಂಡಳಿ ಸಭೆ	21.12.2020
4	95 ನೇ ಮಂಡಳಿ ಸಭೆ	16.02.2021

ಪ್ರಮುಖ ನಿರ್ವಾಹಕ ಸಿಬ್ಬಂದಿ :

ಕಂಪನಿಗಳ ಕಾಯ್ದೆ 2013 ಕಲಂ 203 (2) ರ ಪ್ರಕಾರ ಶ್ರೀ ಬಿ ಮಂಜುನಾಥ, ಆರ್ಥಿಕ ಸಲಹೆಗಾರರನ್ನು ಕೆಳಗೆ ಸೂಚಿಸಿದ ಷರತ್ತು ಮತ್ತು ನಿಬಂಧನೆಗಳನ್ವಯ ಮುಖ್ಯ ಹಣಕಾಸು ಅಧಿಕಾರಿ (ಸಿ.ಎಫ್.ಓ.) (ಪ್ರಮುಖ ನಿರ್ವಾಹಕ ಸಿಬ್ಬಂದಿ) ಎಂದು ನೇಮಕ ಮಾಡಲಾಗಿದೆ.

ಸಂಭಾವನೆ : ಅಸ್ತಿತ್ವದಲ್ಲಿರುವ ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ ಕಾಲ ಕಾಲಕ್ಕೆ ಅನ್ವಯಿಸುವ ಸಂಬಳ, ಭತ್ಯೆಗಳು ಹಾಗೂ ಇತರೆ ಸೌಲಭ್ಯಗಳು.

ಮಂಡಳಿಯ ಉಪ ಸಮಿತಿಗಳು :

ಪ್ರಮುಖ ವಿಷಯಗಳತ್ತ ಕೇಂದ್ರೀಕೃತ ಗಮನಹರಿಸಲು ಮಂಡಳಿಯ ಉಪಸಮಿತಿಗಳನ್ನು ರಚಿಸಲಾಗಿದೆ.

1. ಕೇಂದ್ರ ಖರೀದಿ ಸಮಿತಿ :

ಪ್ರಮುಖ ಯೋಜನೆಗಳಿಗೆ, ಉಪಕೇಂದ್ರಗಳ ಅಥವಾ ಮಾರ್ಗ ಕಾಮಗಾರಿಗಳ ಅಥವಾ ಇನ್ನಾವುದೇ ಕಾಮಗಾರಿಗಳಿಗೆ ಸಂಬಂಧಿಸಿದ ಎಲ್ಲಾ ಖರೀದಿ ಮತ್ತು ಕಾರ್ಯಾದೇಶಗಳ ಮಂಜೂರಾತಿಯನ್ನು ನೀಡಲು ಕೇಂದ್ರ ಖರೀದಿ ಸಮಿತಿಯನ್ನು ರಚಿಸಲಾಗಿದ್ದು, ಚಾಲ್ತಿಯಲ್ಲಿರುವ ಹಣಕಾಸಿನ ಅಧಿಕಾರ ನಿಯೋಜನೆ ಪ್ರಕಾರ ಈ ಸಮಿತಿಯು ವ್ಯವಸ್ಥಾಪಕ ನಿರ್ದೇಶಕರಿಗೆ ಮೀರಿದ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದ ಖರೀದಿ ಪ್ರಸ್ತಾವನೆಗಳನ್ನು ಪರಿಗಣಿಸುತ್ತದೆ.

ಕೇಂದ್ರ ಖರೀದಿ ಸಮಿತಿಯು ಕಂಪನಿಯ ಸಾಮಾನ್ಯ ಸದಸ್ಯರ ಸಭೆ ದಿನಾಂಕದಂದು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರುತ್ತದೆ.

ಕ್ರ.ಸಂ.	ನಿರ್ದೇಶಕರ ಹೆಸರುಗಳು	ಪದನಾಮ
1.	ವ್ಯವಸ್ಥಾಪಕ ನಿರ್ದೇಶಕರು, ಹು.ವಿ.ಸ.ಕಂ.ನಿ.	ಅಧ್ಯಕ್ಷರು
2.	ನಿರ್ದೇಶಕರು (ತಾಂತ್ರಿಕ)	ಸದಸ್ಯರು
3.	ನಿರ್ದೇಶಕರು (ಹಣಕಾಸು)	ಸದಸ್ಯರು
4.	ಶ್ರೀ ಎನ್. ವಿ. ಭುವನೇಶ್ವರಯ್ಯ, ನಿರ್ದೇಶಕರು	ಸದಸ್ಯರು
	ಕಂಪನಿ ಕಾರ್ಯದರ್ಶಿ, ಹು.ವಿ.ಸ.ಕಂ.ನಿ.	ಸಂಚಾಲಕರು

ಟಿಪ್ಪಣಿ: * ಸದಸ್ಯತ್ವವು ಹು.ವಿ.ಸ.ಕಂ.ನಿ ಯ ಮಂಡಳಿಯ ನಿರ್ದೇಶಕತ್ವ ಕೊನೆಗೊಳ್ಳುವಿಕೆಯೊಂದಿಗೆ ಅಂತ್ಯಗೊಳ್ಳುತ್ತದೆ.

2020–21ನೇ ಸಾಲಿನಲ್ಲಿ ಒಟ್ಟುಮೂರು(3) ಕೇಂದ್ರ ಖರೀದಿ ಸಮಿತಿ ಸಭೆಗಳನ್ನು ನಡೆಸಿದೆ.ಅವುಗಳು ಈ ಕೆಳಗಿನಂತಿರುತ್ತವೆ.

ಅ. ನಂ.	ಸಭೆ ಸಂಖ್ಯೆ	ಸಭೆ ನಡೆದ ದಿನಾಂಕ
1	82	20.07.2020
2.	83	13.11.2020
3.	84	16.02.2021

2. ಸಾಲಗಳ ಉಪಸಮಿತಿ:

ಮಂಡಳಿಯ ಪರವಾಗಿ ಕಾಲಕಾಲಕ್ಕೆ ದೀರ್ಘಾವದಿ ಸಾಲ ಪಡೆಯಲು ಕೆಲವೊಂದು ನಿರ್ದಿಷ್ಟ ಅಧಿಕಾರ ನಿಯೋಜನೆ ನೀಡಲಾಗಿದೆ.ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳಿಂದ ಪಡೆಯಲು ಸಾಲಗಳ ಈ ಉಪಸಮಿತಿಯು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರುತ್ತದೆ.ಸಾಮಾನ್ಯ ಸಭೆಯಲ್ಲಿ ಷೇರುದಾರರ ಗರಿಷ್ಟ ಪರಿಮಿತಿಯ ಅನುಮೋದನೆಗೆ ಒಳಪಟ್ಟಿರುತ್ತದೆ.

ಕಂಪನಿಯ ಸಾಮಾನ್ಯ ಸದಸ್ಯರ ಸಭೆ ದಿನಾಂಕದಂದು ಉಪ–ಸಮಿತಿಯು ಈ ಕೆಳಗಿನ ಸದಸ್ಯರುಗಳನ್ನು ಒಳಗೊಂಡಿರುತ್ತದೆ.

ಕ್ರ.ಸಂ.	ನಿರ್ದೇಶಕರ ಹೆಸರುಗಳು	ಪದನಾಮ
1	ವ್ಯವಸ್ಥಾಪಕ ನಿರ್ದೇಶಕರು, ಹು.ವಿ.ಸ.ಕಂ.ನಿ.	ಅಧ್ಯಕ್ಷರು
2	ನಿರ್ದೇಶಕರು (ತಾಂತ್ರಿಕ)	ಸದಸ್ಯರು
3	ನಿರ್ದೇಶಕರು (ಹಣಕಾಸು)	ಸದಸ್ಯರು
4	ಶ್ರೀ ಎನ್. ವಿ. ಭುವನೇಶ್ವರಯ್ಯ, ನಿರ್ದೇಶಕರು	ಸದಸ್ಯರು
	ಕಂಪನಿ ಕಾರ್ಯದರ್ಶಿ, ಹು.ವಿ.ಸ.ಕಂ.ನಿ.	ಸಂಚಾಲಕರು

ಟಿಪ್ಪಣಿ: * ಸದಸ್ಯತ್ವವು ಹು.ವಿ.ಸ.ಕಂ.ನಿಯ ಮಂಡಳಿಯ ನಿರ್ದೇಶಕತ್ವ ಕೊನೆಗೊಳ್ಳುವಿಕೆಯೊಂದಿಗೆ ಅಂತ್ಯಗೊಳ್ಳುತ್ತದೆ.

2020–21ನೇ ಸಾಲಿನಲ್ಲಿ ಒಟ್ಟು ಎರಡು(2) ಸಾಲಗಳ ಉಪ–ಸಮಿತಿ ಸಭೆಗಳನ್ನು ನಡೆಸಿದೆ.ಅವುಗಳು ಈ ಕೆಳಗಿನಂತಿರುತ್ತವೆ.

ಅ. ನಂ.	ಸಭೆ ಸಂಖ್ಯೆ	ಸಭೆ ನಡೆದ ದಿನಾಂಕ
1	09	25.11.2020
2.	10	18.12.2020

3. ಲೆಕ್ಕ ಪರಿಶೋಧನಾ ಸಮಿತಿ :

ಕೆಳಗೆ ನಮೂದಿಸಿದಂತೆ ಕಂಪನಿಗಳ ಕಾಯ್ದೆ 2013 ರ ನಿಬಂಧನೆಗಳನ್ವಯ ಲೆಕ್ಕ ಪರಿಶೋಧನಾ ಸಮಿತಿಯು ಪುನರ್‌ರಚಿತಗೊಂಡಿರುತ್ತದೆ.

ಕ್ರ.ಸಂ.	ನಿರ್ದೇಶಕರ ಹೆಸರುಗಳು	ಪದನಾಮ
1	ಶ್ರೀಮತಿ ಅಪರ್ಣಾ ಪಾವಟೆ	ಅಧ್ಯಕ್ಷರು
2	ನಿರ್ದೇಶಕರು (ತಾಂತ್ರಿಕ)	ಸದಸ್ಯರು
3	ಶ್ರೀ ಎನ್. ವಿ. ಭುವನೇಶ್ವರಯ್ಯ,	ಸದಸ್ಯರು
4	ಕಂಪನಿ ಕಾರ್ಯದರ್ಶಿ, ಹು.ವಿ.ಸ.ಕಂ.ನಿ.	ಸಂಚಾಲಕರು

2020–21ನೇ ಸಾಲಿನಲ್ಲಿ ಲೆಕ್ಕ ಪರಿಶೋಧನಾ ಸಮಿತಿಯು ಒಂದು (1) ಸಭೆಯನ್ನು ನಡೆಸಿದೆ.

ಕ್ರ. ಸಂ.	ಸಭೆ ಸಂಖ್ಯೆ	ಸಭೆ ನಡೆದ ದಿನಾಂಕ
1	36 ನೇ ಸಭೆ	20.07.2020

ಕಂಪನಿಗಳ ಕಾಯ್ದೆಯಲ್ಲಿ ನಮೂದಿಸಿರುವಂತೆ ಲೆಕ್ಕ ಪರಿಶೋಧನಾ ಸಮಿತಿಯು ಸಾಕಷ್ಟು ಅಧಿಕಾರಗಳನ್ನು ಹಾಗೂ ಸೂಚಿತ ಉಲ್ಲೇಖಗಳನ್ನು ಹೊಂದಿದ್ದು, ಪರಿಣಾಮಕಾರಿಯಾಗಿ ಪಾತ್ರ ನಿರ್ವಹಿಸುವುದನ್ನು ಒಳಗೊಂಡಿರುತ್ತದೆ.

i) ಕಂಪನಿಯ ಲೆಕ್ಕ ಪರಿಶೋಧಕರ ಸಂಭಾವನೆಗೆ ಶಿಫಾರಸ್ಸು ಮಾಡುವುದು.

ii) ಲೆಕ್ಕ ಪರಿಶೋಧಕರ ಸ್ವಾತಂತ್ರತೆ, ಕಾರ್ಯಕ್ಷಮತೆ ಮತ್ತು ಲೆಕ್ಕಪರಿಶೋಧನೆಯ ಪರಿಣಾಮಕಾರಿತ್ವ, ವಿಮರ್ಶೆ ಮಾಡಿ ನಿಭಾಯಿಸುವುದು.

iii) ಹಣಕಾಸಿನ ತಖ್ತೆ: ಮತ್ತು ಅದರ ಮೇಲಿನ ಲೆಕ್ಕ ಪರಿಶೋಧಕರ ವರದಿಯನ್ನು ಪರಿಕ್ಷೀಸುವುದು.

iv) ಕಂಪನಿ ವ್ಯವಹಾರಗಳ ನಂತರದ ಯಾವುದೇ ಬದಲಾವಣೆ ಅಥವಾ ಅನುಮೋದನೆ ಬಗ್ಗೆ ಸಂಬಂಧಪಟ್ಟ ವ್ಯಕ್ತಿಗಳಿಗೆ ತಿಳಿಸುವುದು.

v) ಅಂತರ ಸಾಂಸ್ಥಿಕ ಸಾಲಗಳ ಮತ್ತು ಹೂಡಿಕೆಗಳ ಪರಿಶೀಲನೆ ಮಾಡುವುದು.

vi) ಅಗತ್ಯವಿದ್ದಲ್ಲಿ ಕಂಪನಿಯ ಉದ್ಯಮಗಳ ಅಥವಾ ಸ್ವತ್ತುಗಳ ಮೌಲ್ಯಮಾಪನಮಾಡುವುದು.

vii) ಆಂತರಿಕ ಹಣಕಾಸು ನಿಯಂತ್ರಣಗಳು ಮತ್ತು ಅಪಾಯ ನಿರ್ವಹಣೆ ವ್ಯವಸ್ಥೆಯ ಮೌಲ್ಯಮಾಪನ ಮಾಡುವುದು.

viii) ಸಾರ್ವಜನಿಕ ಕೊಡುಗೆ ಮತ್ತು ಸಂಬಂಧಿತ ವಿಷಯಗಳ ಮೂಲಕ ಶೇಖರಿಸಿದ ನಿಧಿಯ ಅಂತಿಮ ಬಳಕೆಯ ಕುರಿತು ನಿಭಾಯಿಸುವುದು.

ಆಡಿಟ್ ಸಮಿತಿಯ ಸಭೆಗಳಲ್ಲಿ ಲೆಕ್ಕ ಪರಿಶೋಧಕರು ಮತ್ತು ಪೂರ್ಣಕಾಲಿಕ ಪ್ರಮುಖ ನಿರ್ವಾಹಕ ಸಿಬ್ಬಂದಿಗಳು ಲೆಕ್ಕ ಪರಿಶೋಧಕರ ವರದಿ ಪರಿಗಣಿಸಿದ ಸಂದರ್ಭಗಳಲ್ಲಿ ಕೇಳಬಹುದಾದ ಹಕ್ಕನ್ನು ಹೊಂದಿರುತ್ತಾರೆ.ಆದರೆ, ಮತಚಲಾಯಿಸುವ ಹಕ್ಕನ್ನು ಹೊಂದಿರುವುದಿಲ್ಲ.

4. ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿ

ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 178 (1) ರ ನಿಯಮಗಳ ಅನ್ವಯ ಮತ್ತು ಕಂಪನಿಗಳ ನಿಯಮ 6 ರ ಪ್ರಕಾರ (ಮಂಡಳಿ ಮತ್ತು ಅದರ ಅಧಿಕಾರಗಳ ಸಭೆಗಳು) ನಿಯಮಗಳು, 2014, ಕೆಳಗಿನ ಸಾರ್ವಜನಿಕ ಕಂಪನಿಗಳ ನಿರ್ದೇಶಕರ ಮಂಡಳಿಯು ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯನ್ನು ರಚಿಸುವುದು ಕಡ್ಡಾಯವಾಗಿರುತ್ತದೆ ಮತ್ತು ಇಂತಹ ಸಮಿತಿಯಲ್ಲಿ ಮೂರು ಅಥವಾ ಅದಕ್ಕಿಂತ ಹೆಚ್ಚಿನ ಕಾರ್ಯನಿರ್ವಾಹಕೇತರ ನಿರ್ದೇಶಕರನ್ನು ನೇಮಿಸಿ ಅದರಲ್ಲಿ ಅರ್ಧಕ್ಕಿಂತ ಹೆಚ್ಚು ಸ್ವತಂತ್ರ ನಿರ್ದೇಶಕರು ನೇಮಿಸಬೇಕೆಂದು ಕಂಪನಿ ಕಾಯ್ದೆ, 2013 ರಲ್ಲಿ ಉಲ್ಲೇಖಿಸಲಾಗಿದೆ.

ಈ ಕೆಳಗಿನ ನಿರ್ದೇಶಕರನ್ನು ಸದಸ್ಯರನ್ನಾಗಿ ಮಾಡಿ ಸಮಿತಿಯನ್ನು ರಚಿಸಲಾಗಿದೆ:

ಕ್ರ.ಸಂ.	ನಿರ್ದೇಶಕರ ಹೆಸರುಗಳು	ಪದನಾಮ
01	ಅಪರ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರ,	ಸಮಿತಿಯ ಅಧ್ಯಕ್ಷರು
02	ಶ್ರೀ ಎನ್.ವಿ. ಭುವನೇಶ್ವರಯ್ಯ, ನಿರ್ದೇಶಕರು,	ಸದಸ್ಯರು
03	ನಿರ್ದೇಶಕರು(ತಾಂತ್ರಿಕ), ಹುವಿಸಕಂನಿ.,	ಸದಸ್ಯರು

ಗಮನಿಸಿ: ಸದಸ್ಯತ್ವವು ಹೆಸ್ಕಾಂ ಮಂಡಳಿಯಲ್ಲಿ ಅವರ ನಿರ್ದೇಶಕರೊಂದಿಗೆ ಸಂಯೋಜಿತವಾಗಿದೆ.

ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯ ಪ್ರಸ್ತಾವಿತ ನಿಯಮಗಳು ಈ ಕೆಳಗಿನಂತಿವೆ.

ನೇಮಕಾತಿ ಪ್ರಸ್ತಾಪಗಳ ಪರಿಶೀಲನೆ ಮತ್ತು ಶಿಫಾರಸುಗಳನ್ನು ಪರಿಗಣಿಸಿ ಮತ್ತು ಅನುಮೋದನೆಗಾಗಿ ಮಂಡಳಿಗೆ ಸಲ್ಲಿಸುವುದು.

ಹೊಸ ಹುದ್ದೆಗಳ ಸೃಷ್ಟಿಗೆ ಪ್ರಸ್ತಾವನೆಯನ್ನು ಪರಿಶೀಲಿಸಿ ಮತ್ತು ಶಿಫಾರಸುಗಳನ್ನು ಪರಿಗಣಿಸಿ ಅನುಮೋದನೆಗಾಗಿ ಮಂಡಳಿಗೆ ಸಲ್ಲಿಸುವುದು.

ಹೊಸ ವಲಯ, ವೃತ್ತ, ವಿಭಾಗ, ಉಪವಿಭಾಗ ಮತ್ತು ಇತರ ಕಚೇರಿಗಳ ರಚನೆಗೆ ಪ್ರಸ್ತಾವನೆಯನ್ನು ಪರಿಶೀಲಿಸಿ ಮತ್ತು ಅದರ ಪರಿಗಣನೆ ಮತ್ತು ಅನುಮೋದನೆಗಾಗಿ ಶಿಫಾರಸುಗಳನ್ನು ಮಂಡಳಿಗೆ ಸಲ್ಲಿಸುವುದು.

ಮಂಡಳಿಯು ಕಾಲಕಾಲಕ್ಕೆ ಉಲ್ಲೇಖಿಸಬಹುದಾದ ಯಾವುದೇ ಇತರ ವಿಷಯಗಳು.

5. ನಿರ್ದೇಶಕರು ಮತ್ತು ಉದ್ಯೋಗಿಗಳಿಗೆ ಜಾಗರೂಕತೆಯ ಕಾರ್ಯವಿಧಾನ

ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 177 (9) & (10) ರ ಅನ್ವಯ ಮತ್ತು ಕಂಪನಿಗಳ ನಿಯಮ 7 ಪ್ರಕಾರ (ಮಂಡಳಿ ಮತ್ತು ಅದರ ಅಧಿಕಾರಗಳ ಸಭೆಗಳು) ನಿಯಮಗಳು, 2014, ಹೆಸ್ಕಾಂ ಕಂಪನಿಗೆ ಜಾಗೃತ ಕಾರ್ಯವಿಧಾನ ನೀತಿಯನ್ನು ಅಳವಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಸರ್ಕಾರ ತನ್ನ ಪತ್ರ ಸಂಖ್ಯೆ. ಎನರ್ಜಿ/339/ಇಇಬಿ/2019 ದಿನಾಂಕ 21.12.2019 ರಂದು ಕೆಪಿಟಿಸಿಎಲ್ ಮಂಡಳಿಯು ಗೌರವಾನ್ವಿತ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ 21.10.2019 ರಂದು ನಡೆದ 117 ನೇ ಸಭೆಯಲ್ಲಿ, ಏಕರೂಪದ ಜಾಗೃತ ಕಾರ್ಯವಿಧಾನ ನೀತಿಯನ್ನು ಅಳವಡಿಸಿಕೊಳ್ಳಲು ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿ ಇಂಧನ ಇಲಾಖೆಯ ಅಡಿಯಲ್ಲಿ ಕೆಲಸ ಮಾಡುವ ಎಲ್ಲಾ ಕಂಪನಿಗಳಾದ್ಯಂತ ಅಂದರೆ, KPTCL, KPCL,ESCOM ಗಳು, PCKL ಮತ್ತು KREDL ಗಳಲ್ಲಿ ಅಳವಡಿಸಿಕೊಳ್ಳಲು ಸೂಚಿಸಿದರು. ಅದರಂತೆ, ಸರ್ಕಾರವು ಕರಡು ಜಾಗೃತ ಕಾರ್ಯವಿಧಾನ ನೀತಿಯನ್ನು ಕಳುಹಿಸಿದೆ (ಜಾಗರೂಕತೆಯ ಕಾರ್ಯವಿಧಾನ) ನೀತಿ ಮತ್ತು ಗೊತ್ತುಪಡಿಸಿದ ಪ್ರಾಧಿಕಾರದ ಪಟ್ಟಿ ಮತ್ತು ಸ್ಕ್ರೀನಿಂಗ್ ಸಮಿತಿಯ ಸಂಯೋಜನೆ

(i) ಕಾನೂನಿನ ಬದಲಾವಣೆಯಿಂದಾಗಿ ಬದಲಾವಣೆಗಳು / ಮಾರ್ಪಾಡುಗಳು ಅವಶ್ಯವಾದಲ್ಲಿ ಅಗತ್ಯವಾದ ತಿದ್ದುಪಡಿಗಳನ್ನು ಕಂಪನಿಯ ನಿರ್ದೇಶಕರ ಮಂಡಳಿಯಿಂದ ಅನುಮೋದನೆಗೆ ಒಳಪಟ್ಟು ಮುಂಬರುವ ಸಭೆಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆಯೊಂದಿಗೆ ಪಾಲಿಸಿಯಲ್ಲಿ ತಿದ್ದುಪಡಿ/ಬದಲಾವಣೆಗಳನ್ನು ಮಾಡಲಾಗುವುದು;

(ii) ತಿದ್ದುಪಡಿ ಪ್ರಸ್ತಾವನೆಯು ಮೇಲಿನ (i) ಷರತ್ತಿನ ಪ್ರಕಾರ ಒಳಗೊಂಡಿಲ್ಲವಾದಲ್ಲಿ ಕಂಪನಿಯ ನಿರ್ದೇಶಕರ ಮಂಡಳಿಯ ಅನುಮೋದನೆಗೆ ಒಳಪಟ್ಟು ಮಾಡಬಹುದಾಗಿರುತ್ತದೆ.

ಈ ವಿಷಯವನ್ನು ಮಂಡಳಿಯ ಮುಂದೆ ಪರಿಗಣಿಸಿ ಮತ್ತು ಸರ್ಕಾರದಿಂದ ಅನುಮೋದನೆ ಪಡೆದ/ಜಾಗೃತ ಕಾರ್ಯವಿಧಾನ ನೀತಿಯನ್ನು ಅಂಗೀಕರಿಸಿ ಲಗತ್ತು–Iರ ಪ್ರಕಾರ ಅನುಮೋದನೆ ನೀಡಲು ಕೋರಲಾಗಿದೆ.

ಕಂಪನಿಗಳ ಕಾಯ್ದೆ ಪರಿಚ್ಛೇದ 134 (3) ನಿಭಂದನೆಗಳ ಅನುಸಾರ ಕೆಳಗಿನ ಮಾಹಿತಿಯನ್ನು ನೀಡಿದೆ.

ಎ) ವಾರ್ಷಿಕ ಆದಾಯ:

ದಿನಾಂಕ 28.08.2020 ರ ಎಂಸಿಎ ಅಧಿಸೂಚನೆಯ ಪ್ರಕಾರ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರೊಂದಿಗೆ ಓದಿ, ಎಂಜಿಟಿ–9 ರೂಪದಲ್ಲಿ ಮಂಡಳಿಗಳ ವರದಿಯೊಂದಿಗೆ ವಾರ್ಷಿಕ ಆದಾಯದ ಸಾರವನ್ನು ಒದಗಿಸಲು ಕಂಪನಿಯು ವಿನಾಯಿತಿ ನೀಡಿದೆ.

ಬಿ) ನಿರ್ದೇಶಕರ ಹೊಣೆಗಾರಿಕೆಯ ಹೇಳಿಕೆ:

ಕಂಪನಿಗಳ ಕಾಯ್ದೆ 2013 ರ ಪರಿಚ್ಛೇದ 134 (5) ಅನುಸಾರ ಅವಶ್ಯಕತೆಗೆ ಅನುಗುಣವಾಗಿ ನಿರ್ದೇಶಕರ ಹೇಳಿಕೆ.

ಎ) ವಾರ್ಷಿಕ ಲೆಕ್ಕ ಪತ್ರಗಳನ್ನು ತಯಾರಿಸುವಲ್ಲಿ ಅನ್ವಯಿಸುವ ಲೆಕ್ಕಪತ್ರಗಳ ಮಾನದಂಡಗಳನ್ನು ಭೌತಿಕ ಅಡ್ಡಮಾರ್ಗಗಳಿಗೆ ಸಂಬಂಧಿಸಿದಂತೆ ಸರಿಯಾದ ವಿವರಣೆಯೊಂದಿಗೆ ಅನುಸರಿಸಲಾಗಿದೆ.

ಬಿ) ಹಣಕಾಸು ವರ್ಷದ ಕೊನೆಯಲ್ಲಿ ಮತ್ತು ಆ ಅವಧಿಯ ಕಂಪನಿಯ ಲಾಭ ಮತ್ತು ನಷ್ಟ ವ್ಯವಹಾರಗಳ ನಿಜವಾದ ಮತ್ತು ನ್ಯಾಯೋಚಿತ ನೋಟ ನೀಡುವಲ್ಲಿ ನಿರ್ದೇಶಕರು ಸರಿಯಾದ ಲೆಕ್ಕೀಕರಣ ನೀತಿಗಳನ್ನು ಆಯ್ಕೆ ಮಾಡಿ ಅವುಗಳನ್ನು ಸ್ಥಿರವಾಗಿ ಅನ್ವಯಿಸಿ ನಿರ್ಣಯಗಳನ್ನು ಮತ್ತು ಸಮಂಜಸವಾದ ಹಾಗೂ ವಿವೇಕಯುತವಾದ ಅಂದಾಜುಗಳನ್ನು ಮಾಡಿರುತ್ತಾರೆ.

ಸಿ) ಕಂಪನಿಗಳ ಆಸ್ತಿಗಳ ಸುರಕ್ಷತೆಗಾಗಿ ಹಾಗೂ ವಂಚನೆ ಮತ್ತು ಇತರೆ ಅಕ್ರಮಗಳನ್ನು ತಡೆಗಟ್ಟಲು ಹಾಗೂ ಕಂಡುಹಿಡಿಯಲು ಈ ಕಾಯ್ದೆಯ ಅವಕಾಶಗಳ ಅನ್ವಯ ಪರ್ಯಾಪ್ತ ಲೆಕ್ಕ ಪತ್ರಗಳ ದಾಖಲೆಗಳನ್ನು ಸರಿಯಾಗಿ ನಿರ್ವಹಿಸಲು ಸೂಕ್ತ ಹಾಗೂ ಸಾಕಷ್ಟು ಕಾಳಜಿಯನ್ನು ನಿರ್ದೇಶಕರು ಕೈಗೊಂಡಿದ್ದಾರೆ.

ಡಿ) ಮುಂದುವರೆದು ಉದ್ಯೋಗ ಕಲ್ಪನೆಯ ಆಧಾರದ ಮೇರೆಗೆ ವಾರ್ಷಿಕ ಲೆಕ್ಕಗಳನ್ನು ತಯಾರಿಸಲಾಗುತ್ತಿದೆ.

ಇ) ನಿಬಂದನೆಗಳ ಅನುಸಾರವಾಗಿ ಅನ್ವಯಿಸುವ ಎಲ್ಲಾ ಕಾನೂನುಗಳ ಖಚಿತಪಡಿಸಲು ನಿರ್ದೇಶಕರು ಸೂಕ್ತ ವ್ಯವಸ್ಥೆಯನ್ನು ರೂಪಿಸಿರುತ್ತಾರೆ ಮತ್ತು ಅಂತಹ ವ್ಯವಸ್ಥೆಗಳು ಸಾಕಷ್ಟು ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ.

ಸಿ) ಪ್ರತಿಯೊಂದು ಅರ್ಹತೆ, ಮೀಸಲಾತಿ ಅಥವಾ ಪ್ರತಿಕೂಲ ಟೀಕೆ ಅಥವಾ ಹಕ್ಕು ನಿರಾಕರಣೆ ಮೇರೆಗೆ ಮಂಡಳಿಯ ವಿವರಣೆಗಳು ಅಥವಾ ಪ್ರತಿಕ್ರಿಯಗಳು.

i) ಲೆಕ್ಕಪರಿಶೋಧಕರು ತಮ್ಮ ವರದಿಯ ಮೂಲಕ ಲಗತ್ತಿಸಿದೆ

ಡಿ) ಪರಿಚ್ಛೇದ 186 ರನ್ವಯ ಸಾಲ ಖಾತರಿಗಳು ಅಥವಾ ಹೂಡಿಕೆಗಳ ವಿವರಗಳು.

– ಇಲ್ಲ –

ಇ) ಪರಿಚ್ಛೇದ 188 ರ ಉಪ ಭಾಗ (1) ರಲ್ಲಿ ಉಲ್ಲೇಖಿಸಿದಂತೆ ನಿಗದಿತ ರೂಪದಲ್ಲಿ ಸಂಬಂಧಿಸಿದ ಪಕ್ಷಗಳ ಒಪ್ಪಂಧಗಳ ವಿವರಗಳು.

– ಇಲ್ಲ –

ಎಫ್) ಕಂಪನಿಯ ವ್ಯವಹಾರಗಳ ಹೇಳಿಕೆ.

– ಮೇಲೆ ಸೂಚಿಸಿದಂತೆ –

ಜಿ) ಮೀಸಲಿಗೆ ಸಾಗಿಸಲು ಪ್ರಸ್ತಾಪಿಸಲಾಗಿರುವ ವೆಚ್ಚ

– ಇಲ್ಲ –

ಎಚ್) ಡಿವಿಡೆಂಡ ಮೂಲಕ ಪಾವತಿಸಲು ಶಿಫಾರಸ್ಸು ಮಾಡಲಾದ ಮೊತ್ತ.

– ಇಲ್ಲ –

ಐ) ಕಂಪನಿಯ ಆರ್ಥಿಕ ಸ್ಥಿತಿ ಮೇಲೆ ಪರಿಣಾಮ ಬೀಳುವ ಕಂಪನಿಯ ಹಣಕಾಸು ಹೇಳಿಕೆಗಳಿಗೆ ಸಂಬಂಧಿಸಿದಂತೆ ಹಣಕಾಸು ವರ್ಷದ ಕೊನೆಯಲ್ಲಿ ಮತ್ತು ವರದಿಯ ದಿನಾಂಕದಂದು ನಡುವೆ ಸಂಭವಿಸಿರಬಹುದಾದ ವಸ್ತು ಬದಲಾವಣೆ ಮತ್ತು ಬದ್ದತೆಗಳು ಯಾವುದಾದರೂ ಇದ್ದರೆ.

– ಇಲ್ಲ –

ಜೆ) ಶಕ್ತಿಯ ಸಂರಕ್ಷಣೆ, ತಂತ್ರಜ್ಞಾನ ಹೀರಿಕೆ, ವಿದೇಶಿ ವಿನಿಮಯ ಗಳಿಕೆಗಳು ಮತ್ತು ಹೊರಹರಿವು.

ಕಂಪನಿಯ ಕಾರ್ಯಾಚರಣೆಗಳು ಯಾವುದೇ ತರಹದ ಉತ್ಪಾದನೆ ಅಥವಾ ಪ್ರಕ್ರಿಯೆ ಚಟುವಟಿಕೆಗಳನ್ನು ಒಳಗೊಂಡಿಲ್ಲವಾದ್ದರಿಂದ, ಕಂಪನಿಗಳು (ನಿರ್ದೇಶಕರ ಮಂಡಳಿಯ ವರದಿಯಲ್ಲಿ ವಿವರಗಳನ್ನು ಬಹಿರಂಗಪಡಿಸುವುದು), 1988 ಕಾಯ್ದೆಗಳ ಪ್ರಕಾರ ಶಕ್ತಿಯ ಸಂರಕ್ಷಣೆ ಮತ್ತು ತಂತ್ರಜ್ಞಾನ ಹೀರಿಕೊಳ್ಳುವಿಕೆಯ ಬಗ್ಗೆ ಅನ್ವಯಿಸುವುದಿಲ್ಲ.ಪ್ರಸಕ್ತ ವರ್ಷದ ಪರಾಮರ್ಶೆಯಲ್ಲಿ ವಿದೇಶಿ ವಿನಿಮಯದ ಆದಾಯ ಮತ್ತು ಹೊರಹರಿವು ಇರುವುದಿಲ್ಲ.

ಕೆ) ಕಂಪನಿಯ ಅಪಾಯ ನಿರ್ವಹಣೆ ನೀತಿ ಅಭಿವೃದ್ಧಿ ಮತ್ತು ಅನುಷ್ಠಾನದ ಬಗೆಗಿನ ಹೇಳಿಕೆ

–ಇಲ್ಲ–

ಎಲ್) ಕಂಪನಿ ಅಳವಡಿಸಿಕೊಂಡಿರುವ ನಿಗಮ ಸಾಮಾಜಿಕ ಹೊಣೆಗಾರಿಕೆ ಉಪಕ್ರಮಗಳ ನೀತಿಯ ಅಭಿವೃದ್ಧಿ ಮತ್ತು ಅನುಷ್ಠಾನದ ವಿವರಗಳು.

ನಿಗಮ ಸಾಮಾಜಿಕ ಹೊಣೆಗಾರಿಕೆ ಸಮಿತಿ:

ಕಂಪನಿಗಳ ಕಾಯ್ದೆ 2013 ರ ಪರಿಚ್ಛೇದ 135 ರನ್ವಯ ದಿನಾಂಕ 01.04.2014 ರಂದು ನಿಗಮ ಸಾಮಾಜಿಕ ಹೊಣೆಗಾರಿಕೆ ಸಮಿತಿಯು ರಚನೆಯಾಯಿತು.

ಸಮಿತಿಯ ಪ್ರಸ್ತುತ ಸಂವಿಧಾನವು ಈ ಕೆಳಗಿನಂತಿದೆ.

1.	ಅಧ್ಯಕ್ಷರು, ಹು.ವಿ.ಸ.ಕಂ.ನಿ	ಅಧ್ಯಕ್ಷರು
2.	ವ್ಯವಸ್ಥಾಪಕ ನಿರ್ದೇಶಕರು, ಹು.ವಿ.ಸ.ಕಂ.ನಿ.	ಸದಸ್ಯರು
3.	ನಿರ್ದೇಶಕರು (ತಾಂತ್ರಿಕ)ಹು.ವಿ.ಸ.ಕಂ.ನಿ.	ಸದಸ್ಯರು
4.	ನಿರ್ದೇಶಕರು (ಹಣಕಾಸು) ಹು.ವಿ.ಸ.ಕಂ.ನಿ.	ಸದಸ್ಯರು
	ಕಂಪನಿ ಕಾರ್ಯದರ್ಶಿ, ಹು.ವಿ.ಸ.ಕಂ.ನಿ,	ಸಂಚಾಲಕರು

ಟಿಪ್ಪಣಿ: * ಸದಸ್ಯತ್ವವು ಹು.ವಿ.ಸ.ಕಂ.ನಿ. ಯ ಮಂಡಳಿಯ ನಿರ್ದೇಶಕತ್ವ ಕೊನೆಗೊಳ್ಳುವಿಕೆಯೊಂದಿಗೆ ಅಂತ್ಯಗೊಳ್ಳುತ್ತದೆ.

ಉಲ್ಲೇಖದ ನಿಯಮಗಳು:

ಕಂಪನಿಗಳ ಕಾಯ್ದೆ 2013 ರಲ್ಲಿ ಉಲ್ಲೇಖಿಸಿದಂತೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಕಷ್ಟು ಅಧಿಕಾರ ಹಾಗೂ ಷರತ್ತುಗಳನ್ನು ನಿಗಮ ಸಾಮಾಜಿಕ ಹೊಣೆಗಾರಿಕೆ ಸಮಿತಿಯು ಹೊಂದಿರುತ್ತದೆ.

ಎ. ನಿಗಮ ಸಾಮಾಜಿಕ ಹೊಣೆಗಾರಿಕೆ ನೀತಿಯನ್ನು ರೂಪಿಸಿ ಮಂಡಳಿಗೆ ಶಿಫಾರಸ್ಸು ಮಾಡುವುದು;

ಬಿ. ನಿಗಮ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳಿಗೆ ಭರಿಸುವ ವೆಚ್ಚಗಳಿಗೆ ಶಿಫಾರಸ್ಸು ಮಾಡುವುದು;

ಸಿ. ಕಾಲಕಾಲಕ್ಕೆ ಕಂಪನಿಯ ನಿಗಮ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳನ್ನು ಮೇಲ್ವಿಚಾರಣೆಗೆ ಒಳಪಡಿಸುವುದು.

ಡಿ. ಕಂಪನಿಯು ಕೈಗೊಳ್ಳುವ ಚಟುವಟಿಕೆಗಳು ಅಥವಾ ನಿ.ಸಾ.ಹೊ. ಯೋಜನೆಗಳು/ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಪಾರದರ್ಶಕ ಮೇಲ್ವಿಚಾರಣೆಯನ್ನು ಕಾರ್ಯಗತಗೊಳಿಸುವುದು.

ಅ) ನಿಗಮ ಸಾಮಾಜಿಕ ಹೊಣೆಗಾರಿಕೆ ಕಾರ್ಯನೀತಿ :

ಹುವಿಸಕಂನಿಯು ಅಳವಡಿಸಿಕೊಂಡಿರುವ ನಿಗಮ ಸಾಮಾಜಿಕ ಹೊಣೆಗಾರಿಕೆ ಕಾರ್ಯನೀತಿಯ ಪ್ರತಿಯನ್ನು ಲಗತ್ತಿಸಿದೆ.

ಬ) 2020–21 ನೇ ಸಾಲಿನಲ್ಲಿ ನಿಗಮ ಸಾಮಾಜಿಕ ಹೊಣೆಗಾರಿಕೆ ವಂತಿಗೆ:

ಕಂಪನಿಯು ತಕ್ಷಣ ಹಿಂದಿನ 3 ವರ್ಷಗಳಲ್ಲಿ ಸರಾಸರಿ ನಿವ್ವಳ ಲಾಭವನ್ನು ಗಳಿಸದೇ ಇರುವುದರಿಂದ ಆರ್ಥಿಕ ವರ್ಷ 2020–21 ನೇ ಸಾಲಿಗೆ ಅನ್ವಯಿಸುವುದಿಲ್ಲ.

33. ಲೆಕ್ಕಪರಿಶೋಧಕರು :

1. ಮೆ॥ ರಾವ್ & ಎಮ್ಮಾರ್, ಚಾರ್ಟರ್ಡ್ ಅಕೌಂಟಂಟ್ಸ್, ಸಂಖ್ಯೆ 204 ಮತ್ತು 205, 2ನೇ ಮಹಡಿ, "ರಮಣಶ್ರೀ ಆರ್ಕೇಡ್" ಟ್ರಿನಿಟಿ ಸರ್ಕಲ್ ಹತ್ತಿರ, ಎಂಜಿ ರಸ್ತೆ, ಬೆಂಗಳೂರು –560001 ರವರನ್ನು ಹು.ವಿ.ಸ.ಕಂ.ನಿ.ಯ ಶಾಸನಬದ್ಧ ಲೆಕ್ಕ ಪರಿಶೋಧಕರನ್ನಾಗಿ 2020–21 ನೇ ಸಾಲಿಗೆ ಭಾರತದ ಮಹಾಲೇಖಪಾಲರು, ನವದೆಹಲಿ ಇವರು ನೇಮಿಸಿದ್ದಾರೆ.
2. ಮೆ॥ ಜಿ. ಎಸ್ ಕೆ ಟಿಕಾರೆ, ಕಾಸ್ಟ್ ಅಕೌಂಟಂಟ್ಸ್, 2ನೇ ಮುಖ್ಯ ರಸ್ತೆ, 'ಅಂಬಿಕಾ' ಸಾಯಿಮಂದಿರ ಹತ್ತಿರ, ಗಾಂಧಿನಗರ ಧಾರವಾಡ– 580004 ಇವರು ಹು.ವಿ.ಸ.ಕಂ.ನಿ.ಯ 2020–21 ನೇ ಸಾಲಿನ ದರ ಲೆಕ್ಕಪರಿಶೋಧಕರಾಗಿರುತ್ತಾರೆ.
3. ಶ್ರೀ ಎಸ್ ವಿಶ್ವನಾಥನ್ ಕಂಪನಿ ಕಾರ್ಯದರ್ಶಿ, ಸುಶೀಲ್ ಚಂದ್ರ ಅಪಾರ್ಟಮೆಂಟ್, 17ನೇ ಏ ಕ್ರಾಸ್, 10ನೇ ಏಮುಖ್ಯ ರಸ್ತೆ, ಮಲ್ಲೇಶ್ವರಂ (ಡಬ್ಲೂ), ಬೆಂಗಳೂರು – 560044 ರವರು 2020–21 ನೇ ಸಾಲಿಗೆ ಹು.ವಿ.ಸ.ಕಂ.ನಿ.ಯ ಸೆಕ್ರೆಟೇರಿಯಲ್ ಆಡಿಟರ್ಸ್ ಆಗಿರುತ್ತಾರೆ.

34. ಕೃತಜ್ಞತೆಗಳು :

ಮಂಡಳಿಯು, ಮೌಲ್ಯಾನ್ವಿತ ಗ್ರಾಹಕರು ಕಂಪನಿಗೆ ನೀಡಿರುವ ಬೆಂಬಲ ಮತ್ತು ಅವರು ಸಂಸ್ಥೆಯ ಮೇಲೆ ಇಟ್ಟಿರುವ ಅಪಾರ ನಂಬಿಕೆ ಮತ್ತು ವಿಶ್ವಾಸವನ್ನು ದಾಖಲಿಸಲು ಇಚ್ಛಿಸುತ್ತದೆ.

ಇಂಧನ ಸಚಿವಾಲಯ, ಭಾರತ ಸರಕಾರ, ಇಂಧನ ಇಲಾಖೆ, ಕರ್ನಾಟಕ ಸರಕಾರ, ಕವಿಪ್ರನಿನಿ, ಪಿ.ಸಿ.ಕೆ.ಎಲ್., ಇತರೆ ವಿದ್ಯುತ್ ಸರಬರಾಜು ಕಂಪನಿಗಳು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಹಾಗೂ ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಇವರೆಲ್ಲರೂ ಕಂಪನಿಯ ಕಾರ್ಯಾಚರಣೆಗಳಲ್ಲಿ ಹಾಗೂ ಅಭಿವೃದ್ಧಿ ಯೋಜನೆಗಳಲ್ಲಿ ನೀಡಿರುವ ಬೆಂಬಲ ಹಾಗೂ ಮಾರ್ಗದರ್ಶನಗಳನ್ನು ಮಂಡಳಿಯು ಕೃತಜ್ಞತಾ ಭಾವದಿಂದ ಸ್ವೀಕರಿಸುತ್ತದೆ.

ಭಾರತದ ಮಹಾಲೇಖಪಾಲರು, ಶಾಸನಬದ್ಧ ಲೆಕ್ಕ ಪರಿಶೋಧಕರು, ದರ ಪರಿಶೋಧಕರು, ಸೆಕ್ರೆಟರಿಯಲ್ ಆಡಿಟರ್ಸ್ ಭಾರತೀಯ ಸ್ಟೇಟ್ ಬ್ಯಾಂಕ್, ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ವಿಜಯಾ ಬ್ಯಾಂಕ್, ಬ್ಯಾಂಕ್ ಆಫ್ ಇಂಡಿಯಾ, ಕಾರ್ಪೋರೇಶನ್ ಬ್ಯಾಂಕ್, ಗ್ರಾಮೀಣ ವಿದ್ಯುಧೀಕರಣ ಸಂಸ್ಥೆ, ಪಿ.ಎಫ್.ಸಿ., ನಿಗಮ, ಸಂಸ್ಥೆ ವ್ಯವಹಾರಗಳ ಸಚಿವಾಲಯ, ಕಂಪನಿಗಳ ನೋಂದಣಾಧಿಕಾರಗಳು ಇವರೆಲ್ಲರೂ ಹು.ವಿ.ಸ.ಕಂ.ನಿಯು ಸಾರ್ವಜನಿಕರ ಸೇವೆಯನ್ನು ಸಲ್ಲಿಸುವಲ್ಲಿ ಮಾಡಿದ ಪ್ರಯತ್ನಗಳಿಗೆ ಸಕ್ರಿಯವಾಗಿ ಬೆಂಬಲಿಸಿರುವದರಿಂದ ಮಂಡಳಿಯು ಕೃತಜ್ಞತೆಗಳನ್ನು ಅರ್ಪಿಸುತ್ತದೆ. ಕಂಪನಿಯ ನೌಕರರು ಸಲ್ಲಿಸಿರುವ ಸಮರ್ಪಕ ಹಾಗೂ ಬದ್ಧವಾದ ಸೇವೆಯನ್ನು ಹಾಗೂ ಸಂಘ ಸಂಸ್ಥೆಗಳು ನೀಡಿರುವ ಸಹಕಾರವನ್ನು ಸಹ ಮಂಡಳಿಯು ಶ್ಲಾಘಿಸುತ್ತ ದಾಖಲಿಸಲು ಇಚ್ಛಿಸುತ್ತದೆ.

ನಿರ್ದೇಶಕ ಮಂಡಳಿಯ ಪರವಾಗಿ,

ಸಹಿ/–	**ಸಹಿ/–**	**ಸಹಿ/–**
ನಿರ್ದೇಶಕರು (ಹಣಕಾಸು)	***ನಿರ್ದೇಶಕರು (ತಾಂತ್ರಿಕ)***	***ವ್ಯವಸ್ಥಾಪಕ ನಿರ್ದೇಶಕರು,***
ಹುವಿಸಕಂನಿ.	**ಹುವಿಸಕಂನಿ.**	**ಹುವಿಸಕಂನಿ.**

ಅನುಬಂಧ– 1

ಅರ್ಜಿಸಂ.ಎಂ.ಜಿ.ಟಿ.–9

31ನೇ ಮಾರ್ಚ್ 2021 ಕ್ಕೆ ಅಂತ್ಯಗೊಂಡ ಹಣಕಾಸಿನ ವರ್ಷದ ವಾರ್ಷಿಕ ಸಲ್ಲಿಸುವಿಕೆಯ ಸಾರಾಂಶ

[ಕಂಪನಿಗಳ ಕಾಯ್ದೆ, 2013 ರ ಶಾಖೆ 92(3) ಮತ್ತು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರ ನಿಯಮ 12(1) ಕ್ಕೆ ಅನುಸಾರವಾಗಿ]

I. ನೋಂದಣಿ ಮತ್ತುಇತರೆ ಮಾಹಿತಿಗಳು:

i.	ಸಿ ಐ ಎನ್	**U31401KA2002SGC030437**
ii.	ನೋಂದಣಿ ದಿನಾಂಕ	1st June 2002.
iii.	ಕಂಪನಿಯ ಹೆಸರು	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
iv.	ಕಂಪನಿಯ ವರ್ಗ/ಪ್ರವರ್ಗ	ರಾಜ್ಯ ಸರ್ಕಾರದ ಕಂಪನಿ
v.	ನೋಂದಾಯಿತಕಛೇರಿಯ ವಿಳಾಸ ಮತ್ತು ಸಂಪರ್ಕ ವಿವರಗಳು	ನವನಗರ, ಪಿ.ಬಿ. ರೋಡ, ಹುಬ್ಬಳ್ಳಿ ಹುಬ್ಬಳ್ಳಿ–580025 ಕರ್ನಾಟಕ ಭಾರತ
vi.	ರಿಜಿಸ್ಟ್ರಾರ್ ದಳ್ಳಾಳಿಯ ಪಟ್ಟಿಯಲ್ಲಿರಿಸಿದ ಕಂಪನಿಯೇ	ಪಟ್ಟಿಯಲ್ಲಿರಿಸಿದ ಕಂಪನಿಯಲ್ಲ
vii.	ಹೆಸರು, ವಿಳಾಸ ಮತ್ತು ಸಂಪರ್ಕ ವಿವರಗಳು (ಇದ್ದರೆ)	ಇಲ್ಲಾ

II. ಕಂಪನಿಯ ಪ್ರಮುಖ ವ್ಯಾಪಾರ ಚಟುವಟಿಕೆಗಳು

ಕಂಪನಿಯಒಟ್ಟು ವಹಿವಾಟಿನ 10% ಅಥವಾಅದಕ್ಕಿಂತ ಹೆಚ್ಚಿನ ಮೊತ್ತದಎಲ್ಲಾ ವ್ಯಾಪಾರ ಚಟುವಟಿಕೆಗಳನ್ನು ಹೇಳಲಾಗುತ್ತದೆ:–

ಕ್ರಮ ಸಂಖ್ಯೆ	ಮುಖ್ಯ ಉತ್ಪನ್ನಗಳು/ಸೇವೆಗಳ ಹೆಸರು ಮತ್ತು ವಿವರಣೆ	ಉತ್ಪನ್ನ/ಸೇವೆಯಎನ್ ಐಸಿ ಕೋಡ್	ಕಂಪನಿಯ ಶೇಕಡಾವಾರು ವಹಿವಾಟು
1	**ವಿದ್ಯುತ್ ಸರಬರಾಜು**		**100%**

III. ಹೋಲ್ಡಿಂಗ್, ಅಂಗಸಂಸ್ಥೆ ಮತ್ತು ಸಂಬಂಧಿಸಿದ ಕಂಪನಿಗಳ ವಿವರಗಳು

ಕ್ರಮ ಸಂಖ್ಯೆ	ಕಂಪನಿಯ ಹೆಸರು ಮತ್ತು ವಿಳಾಸ	ಸಿ ಐ ಎನ್/ಜಿ ಎಲ್ಎನ್	ಹೋಲ್ಡಿಂಗ್, ಅಂಗಸಂಸ್ಥೆ/ ಸಂಬಂಧಿಸಿದ ಸಂಸ್ಥೆಗಳು	ಹೊಂದಿರುವ ಷೇರುಗಳ ಸಂ.	ಅನ್ವಯವಾಗುವ ವಿಭಾಗ
1.	ಇಲ್ಲಾ				
2.					
3.					
4.					
5.					

IV. ಷೇರು ಹೊಂದಿರುವ ಮಾದರಿ (ಒಟ್ಟು ಈಕ್ವಿಟಿಯ ಶೇಕಡಾವಾರು ಈಕ್ವಿಟಿ ಷೇರು ಬಂಡವಾಳದ ವಿಭಜನೆ)

i. ವರ್ಗವಾರು ಷೇರು ಹೊಂದಿರುವ ವಿವರ

ಷೇರುದಾರರ ವರ್ಗ	ವರ್ಷದ ಪ್ರಾರಂಭದಲ್ಲಿ ಹೊಂದಿದ್ದ ಷೇರುಗಳ ಸಂಖ್ಯೆ				ವರ್ಷಾಂತ್ಯದಲ್ಲಿನ ಷೇರುಗಳ ಸಂಖ್ಯೆ				ಶೇಕಡಾವಾರು ಬದಲಾವಣೆ
	ಡಿಮ್ಯಾಟ್	ಭೌತಿಕವಾಗಿ	ಒಟ್ಟು	ಒಟ್ಟು ಷೇರುಗಳ ಶೇಕಡಾವಾರು	ಡಿಮ್ಯಾಟ್	ಭೌತಿಕವಾಗಿ	ಒಟ್ಟು	ಒಟ್ಟು ಷೇರುಗಳ ಶೇಕಡಾವಾರು	
ಎ.ಪ್ರವರ್ತಕ									
1) ಭಾರತೀಯ									
ಎ) ವೈಯಕ್ತಿಕ/ ಹೆಚ್‌ಯುಎಫ್									
ಬಿ) ಕೇಂದ್ರ ಸರ್ಕಾರ									
ಸಿ) ರಾಜ್ಯ ಸರ್ಕಾರಗಳು		1554237800	1554237800	100%		1554237800	1554237800	100%	NIL
ಡಿ) ಕರ್ಪೋರೇಟ್ ಸಂಸ್ಥೆಗಳು									
ಇ) ಬ್ಯಾಂಕುಗಳು/ ಹಣಕಾಸುಸಂಸ್ಥೆಗಳು									
ಎಫ್) ಇತರೆ ಯಾವುದೇ...									
ಉಪ ಮೊತ್ತ(ಎ)(1):–									
2) ವಿದೇಶ									
ಜಿ) ಎನ್‌ಆರ್‌ಐವ್ಯಕ್ತಿಗಳು									
ಎಚ್) ಇತರೆ– ವ್ಯಕ್ತಿಗಳು									
ಐ) ಕಾರ್ಪೋರೇಟ್ ಸಂಸ್ಥೆಗಳು									
ಜೆ) ಬ್ಯಾಂಕುಗಳು/ ಹಣಕಾಸು ಸಂಸ್ಥೆಗಳು									
ಕೆ) ಇತರೆ ಯಾವುದೇ...									
ಉಪ ಮೊತ್ತ(ಎ)(2):–									
ಬಿ. ಸಾರ್ವಜನಿಕ ಷೇರು ಹೊಂದಿರುವ ವಿವರ									
1. ಸಂಸ್ಥೆಗಳು									
ಎ) ಮ್ಯುಚುಯಲ್ ಫಂಡ್									
ಬಿ) ಬ್ಯಾಂಕುಗಳು/ ಆರ್ಥಿಕ ಸಂಸ್ಥೆಗಳು									
ಸಿ) ಕೇಂದ್ರ ಸರ್ಕಾರ									
ಡಿ) ರಾಜ್ಯ ಸರ್ಕಾರಗಳು									
ಇ) ಸಾಹಸೋದ್ಯಮ ಬಂಡವಾಳ ನಿಧಿಗಳಲ್ಲಿ									
ಎಫ್) ವಿಮಾ ಕಂಪನಿಗಳು									
ಜಿ) ಎಫ್‌ಐಐ ಗಳು									
ಹೆಚ್) ವಿದೇಶಿ ಸಾಹಸೋದ್ಯಮ ಬಂಡವಾಳ ನಿಧಿಗಳು									

ಷೇರುದಾರರ ವರ್ಗ	ವರ್ಷದ ಪ್ರಾರಂಭದಲ್ಲಿ ಹೊಂದಿದ್ದ ಷೇರುಗಳ ಸಂಖ್ಯೆ				ವರ್ಷಾಂತ್ಯದಲ್ಲಿನ ಷೇರುಗಳ ಸಂಖ್ಯೆ				ಶೇಕಡಾ ಬದಲಾವಣೆ
	ಡೀಮ್ಯಾಟ್	ಭೌತಿಕವಾಗಿ	ಒಟ್ಟು	ಒಟ್ಟು ಷೇರುಗಳ ಶೇಕಡಾವಾರು	ಡೀಮ್ಯಾಟ್	ಭೌತಿಕವಾಗಿ	ಒಟ್ಟು	ಒಟ್ಟು ಷೇರುಗಳ ಶೇಕಡಾವಾರು	
ಐ) ಇತರೆ (ಸೂಚಿಸಿ)									
ಉಪ ಮೊತ್ತ (ಬಿ)(1)									
2. ಸಂಸ್ಥೆಗಳಲ್ಲದ									
ಎ) ಕಾರ್ಪೋರೇಟ್ ಸಂಸ್ಥೆಗಳು 1) ಭಾರತೀಯ 2) ಕಡಲಾಚೆಯ									
ಬಿ) ವ್ಯಕ್ತಿಗಳು (i)ವೈಯಕ್ತಿಕ ಷೇರುದಾರರಅತ್ಯಲ್ಪ ಷೇರು ಬಂಡಾವಾಳ ರೂ 1 ಲಕ್ಷದವರೆಗೆ (ii)ವೈಯಕ್ತಿಕ ಷೇರುದಾರರಅತ್ಯಲ್ಪ ಷೇರು ಬಂಡವಾಳ 1 ಲಕ್ಷ ಮೇಲ್ಪಟ್ಟು									
ಸಿ) ಇತರೆ (ಸೂಚಿಸಿ)									
ಉಪ ಮೊತ್ತ(ಬಿ)(2)									
ಒಟ್ಟು ಸಾರ್ವಜನಿಕ ಷೇರು ಮೊತ್ತ (ಬಿ)=(ಬಿ)(1)+ (ಬಿ)(2)									
ಸಿ) ಜಿಡಿಆರ್‌ಗಳು ಮತ್ತು ಎಡಿಆರ್‌ಗಳಿಗಾಗಿ ಮೇಲ್ವಿಚಾರಕರು ಹೊಂದಿರುವ ಷೇರುಗಳು									
ಒಟ್ಟು(ಎ+ಬಿ+ಸಿ)		**1554237800**	**1554237800**	**100%**		**1554237800**	**1554237800**	**100%**	ಇಲ್ಲಾ

ii. ಪ್ರವರ್ತಕರು ಹೊಂದಿರುವ ಷೇರುಗಳು:

ಕ್ರ. ಸಂ.	ಷೇರುದಾರರ ಹೆಸರು	ವರ್ಷದ ಪ್ರಾರಂಭದಲ್ಲಿ ಹೊಂದಿರುವ ಷೇರು			ವರ್ಷದಅಂತ್ಯದಲ್ಲಿ ಹೊಂದಿರುವ ಷೇರು			
		ಷೇರುಗಳ ಸಂಖ್ಯೆ	ಒಟ್ಟು ಷೇರುಗಳ ಶೇಕಡಾವಾರು	ಒಟ್ಟು ಷೇರುಗಳಿಗೆ ಶೇಕಡಾವಾರು ಅಡವು/ ಷೇರುಗಳ ಎನ್‌ಕಂಬರ್ಡ್ ಮೊತ್ತ	ಷೇರುಗಳ ಸಂಖ್ಯೆ	ಒಟ್ಟು ಷೇರುಗಳ ಶೇಕಡಾವಾರು	ಒಟ್ಟು ಷೇರುಗಳಿಗೆ ಶೇಕಡಾವಾರು ಅಡವು/ ಷೇರುಗಳ ಎನ್‌ಕಂಬರ್ಡ್ ಮೊತ್ತ	ಷೇರುಗಳ ಹೊಂದಿರುವ ಶೇಕಡಾವಾರು ಬದಲಾವಣೆ
1.	ಗೌರಾವಾನ್ವಿತ ರಾಜ್ಯಪಾಲರು, ಕರ್ನಾಟಕ ರಾಜ್ಯ	1554187800	99.99%		1554187800	99.99%		
2.	ಶ್ರೀ.ಮಹೇಂದ್ರಜೈನ್	49994	0.01%					
3.	ಶ್ರೀ. ಕಪಿಲ್ ಮೋಹನ				49994	0.01%		100%
4.	ಶ್ರೀ.ಎಂ. ಸುಂದರೇಶಬಾಬು	1	0					
5.	ಶ್ರೀ. ಎಂ. ಮುನಿರಾಜು				1	0		100%
6.	ಶ್ರೀಮತಿ.ಎಂ.ದೀಪಾ	1	0					

ಕ್ರ. ಸಂ.	ಷೇರುದಾರರ ಹೆಸರು	ವರ್ಷದ ಪ್ರಾರಂಭದಲ್ಲಿ ಹೊಂದಿರುವ ಷೇರು			ವರ್ಷದಅಂತ್ಯದಲ್ಲಿ ಹೊಂದಿರುವ ಷೇರು			
		ಷೇರುಗಳ ಸಂಖ್ಯೆ	ಕಂಪನಿಯ ಶೇಕಡಾವಾರು ಷೇರುಗಳು	ಒಟ್ಟು ಷೇರುಗಳಿಗೆ ಶೇಕಡಾವಾರು ಷೇರುಗಳ ಅಡವು/ ಎನ್‌ಕಂಬರ್ಡ್ ಹೊಂದಿರುವ ಷೇರುಗಳ ಶೇಕಡಾವಾರು	ಷೇರುಗಳ ಸಂಖ್ಯೆ	ಕಂಪನಿಯ ಶೇಕಡಾವಾರು ಷೇರುಗಳು	ಒಟ್ಟು ಷೇರುಗಳಿಗೆ ಶೇಕಡಾವಾರು ಷೇರುಗಳ ಅಡವು/ ಎನ್‌ಕಂಬರ್ಡ್ ಹೊಂದಿರುವ ಷೇರುಗಳ ಶೇಕಡಾವಾರು	ಒಟ್ಟು ಷೇರುಗಳಿಗೆ ಶೇಕಡಾವಾರು ಷೇರುಗಳಲ್ಲಿ ಬದಲಾವಣೆ
7.	ಶ್ರೀ. ಟಿ. ಆರ್. ರಾಮಕೃಷ್ಣಯ್ಯ				1	0		100%
8.	ಶ್ರೀ.ಬಿ.ಸಿ.ಸತೀಶ	1	0					
9.	ಶ್ರೀ. ಎಸ್. ಆರ್. ತೇರದಾಳ				1	0		100%
10.	ಶ್ರೀ.ರಾಜಪ್ಪ	1	0					
11.	ಶ್ರೀ. ಎನ್. ವಿ. ಭುವನೇಶ್ವರಯ್ಯ				1	0		100%
12.	ಶ್ರೀ. ಪ್ರಕಾಶ ಜಿ. ಟಿ. ನಿಟ್ಟಾಲಿ	1	0					
13.	ಶ್ರೀಮತಿ ಅಪರ್ಣಾ ಪಾವಟೆ				1	0		100%
14.	ಶ್ರೀ. ಟಿ. ಎಂ. ಶಿವಪ್ರಕಾಶ	1	0		1	0		
	ಒಟ್ಟು	**1554237800**	**100%**		**1554237800**	**100%**		

iii. ಪ್ರಮೋಟರ್ ಷೇರುಗಳಲ್ಲಿನ ಬದಲಾವಣೆ (ಬದಲಾವಣೆಯಿಲ್ಲದಿದ್ದಲ್ಲಿ, ದಯವಿಟ್ಟು ಸೂಚಿಸಿ)

ಕ್ರ. ಸಂ.		ವರ್ಷದ ಪ್ರಾರಂಭದಲ್ಲಿ ಹೊಂದಿದ್ದ ಷೇರುಗಳ ಸಂಖ್ಯೆ		ಪ್ರಸಕ್ತ ವರ್ಷದಲ್ಲಿ ಹೊಂದಿದ ಸಂಚಿತ ಷೇರು	
		ಷೇರುಗಳ ಸಂಖ್ಯೆ	ಕಂಪನಿಯಒಟ್ಟು ಷೇರುಗಳ ಷೇಕಡಾವಾರು	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಶೇಕಡಾವಾರು
	ವರ್ಷದ ಪ್ರಾರಂಭದಲ್ಲಿ	1554237800	**100%**	1554237800	**100%**
	ಪ್ರಸಕ್ತ ವರ್ಷದಲ್ಲಿ ಪ್ರವರ್ತಕರ ಷೇರುಗಳಲ್ಲಿನ ದಿನಾಂಕವಾರು ಏರಿಕೆ/ ಇಳಿಕೆ ಕಾರಣ ಸಹಿತ (ಉದಾ: ಹಂಚಿಕೆ/ ವರ್ಗಾವಣೆ/ ಬೋನಸ್/ಸ್ವೆಟ್ ಈಕ್ವಿಟಿ ಮುಂತಾದವುಗಳು):	------	----	----	----
	ವರ್ಷದ ಅಂತ್ಯದಲ್ಲಿ	1554237800	**100%**	1554237800	**100%**

V.ಋಣ

ಋಣ ಬಾಕಿ ಇರುವ ಬಡ್ಡಿ / ಪಾವತಿಗೆ ಬಾಕಿಯಿದ್ದು ಆದರೆ ಪಾವತಿಸಲು ಇನ್ನೂ ಅವಕಾಶವಿರುವ ಬಡ್ಡಿಯನ್ನೊಳಗೊಂಡಂತೆ ಕಂಪನಿಯ ಋಣ

	ಸುರಕ್ಷಿತ ಸಾಲ	ಅಸುರಕ್ಷಿತ ಸಾಲ	ಠೇವಣಿಗಳು	ಒಟ್ಟುಋಣ (ರೂ. ಕೋಟಿಗಳಲ್ಲಿ)
ಆರ್ಥಿಕ ವರ್ಷದ ಪ್ರಾರಂಭದಲ್ಲಿಋಣ				
i)ಅಸಲು	***3780.42***	***2132.64***		***5913.06***
ii)ಪಾವತಿಸದ ಬಡ್ಡಿಯ ಬಾಕಿ	***11.13***	***0.33***		**11.46**
iii)ಬಾಕಿ ಇಲ್ಲದ ಸಂಚಿತ ಬಡ್ಡಿ	***19.00***	***0.00***		***19.00***
ಒಟ್ಟು(i+ii+iii)	***3810.55***	***2132.97***		***5943.52***

	ಸುರಕ್ಷಿತ ಸಾಲ	ಅಸುರಕ್ಷಿತ ಸಾಲ	ಠೇವಣಿಗಳು	ಒಟ್ಟುಋಣ (ರೂ. ಕೋಟಿಗಳಲ್ಲಿ)
ಆರ್ಥಿಕ ವರ್ಷದಲ್ಲಿ ಬದಲಾವಣೆಯಾದಋಣದ ಮೊತ್ತ				
– ಸೇರ್ಪಡೆ	***4129.40***	***0***		***4129.40***
– ಕಡಿತ	***1917.80***	***5.81***		***1923.60***
ನಿವ್ವಳ ಬದಲಾವಣೆ				
ಆರ್ಥಿಕ ವರ್ಷದಅಂತ್ಯದಲ್ಲಿನಋಣದ ಮೊತ್ತ				
i)ಅಸಲು	***5992.02***	***2126.83***		***8118.85***
ii)ಪಾವತಿಸದ ಬಡ್ಡಿಯ ಬಾಕಿ	***5.87***	***0***		**5.87**
iii)ಬಾಕಿ ಇಲ್ಲದ ಸಂಚಿತ ಬಡ್ಡಿ	***15.53***	***0.64***		**16.17**
ಒಟ್ಟು**(i+ii+iii)**	***6013.42***	***2127.47***		***8140.89***

VI.ನಿರ್ದೇಶಕರ ಮತ್ತು ಪ್ರಮುಖ ನಿರ್ವಹಣಾಸಿಬ್ಬಂದಿಗಳ ಸಂಭಾವನೆ

A.ವ್ಯವಸ್ಥಾಪಕ ನಿರ್ದೇಶಕರ, ಪೂರ್ಣಅವಧಿಯ ನಿರ್ದೇಶಕರ ಮತ್ತು/ಅಥವಾ ವ್ಯವಸ್ಥಾಪಕರ ಸಂಭಾವನೆ:

ಕ್ರ. ಸಂ.	ಸಂಭಾವನೆಯ ವಿವರಗಳು	ವ್ಯವಸ್ಥಾಪಕ ನಿರ್ದೇಶಕರು/ಪೂರ್ಣಅವಧಿ ನಿರ್ದೇಶಕರು/ವ್ಯವಸ್ಥಾಪಕರಹೆಸರು		ಒಟ್ಟು ಮೊತ್ತ
1.	ನಿವ್ವಳ ಸಂಬಳ ಅ) ಅದಾಯತೆರಿಗೆಕಾಯಿದೆ 1961 ರ ಸೆಕ್ಷನ್ 17(1)ಕ್ಕೆ ಒಳಪಟ್ಟಂತೆ ಸಂಬಳ ಆ) ಅದಾಯತೆರಿಗೆಕಾಯಿದೆ 1961ರ ಉಪ ವಿಧಿ 17(2) ಪರಿಲಭ್ಯದ ಮೌಲ್ಯ ಇ) ಅದಾಯತೆರಿಗೆಕಾಯಿದೆ 1961ರ ಉಪ ವಿಧಿ 17(3) ರಂತೆ ಸಂಬಳದ ಬದಲಾಗಿಲಾಭಗಳು.	**ಅ) ಸಂಬಳ** ಶ್ರೀ ಎಂ. ಸುಂದರೇಶ ಬಾಬು ವ್ಯವಸ್ಥಾಪಕ ನಿರ್ದೇಶಕರು ರೂ.1,13,034/– ಶ್ರೀ ಎಂ. ಮುನಿರಾಜು ವ್ಯವಸ್ಥಾಪಕ ನಿರ್ದೇಶಕರು ರೂ.21,19,549/– **ಆ) ಪರಿಲಭ್ಯಗಳು** ರೂ. 72,536/–		ರೂ.23,05,119/-
2.	ನಿವ್ವಳ ಸಂಬಳ ಅ) ಅದಾಯತೆರಿಗೆಕಾಯಿದೆ 1961 ರ ಸೆಕ್ಷನ್ 17(1)ಕ್ಕೆ ಒಳಪಟ್ಟಂತೆ ಸಂಬಳ ಆ) ಅದಾಯತೆರಿಗೆಕಾಯಿದೆ 1961ರ ಉಪ ವಿಧಿ 17(2) ಪರಿಲಭ್ಯದ ಮೌಲ್ಯ ಇ) ಅದಾಯತೆರಿಗೆಕಾಯಿದೆ 1961ರ ಉಪ ವಿಧಿ 17(3) ರಂತೆ ಸಂಬಳದ ಬದಲಾಗಿ ಲಾಭಗಳು.	**ಅ) ಸಂಬಳ** ಶ್ರೀ ಎ. ಹೆಚ್‌ಕಾಂಬ್ಳೆ ನಿರ್ದೇಶಕರು (ತಾಂತ್ರಿಕ) ರೂ.4,72,127/– **ಆ) ಪರಿಲಭ್ಯಗಳು** ರೂ. 16,032/–		Rs.4,88,159/-

ಕ್ರ. ಸಂ.	ಸಂಭಾವನೆಯ ವಿವರಗಳು	ವ್ಯವಸ್ಥಾಪಕ ನಿರ್ದೇಶಕರು/ಪೂರ್ಣಅವಧಿ ನಿರ್ದೇಶಕರು/ವ್ಯವಸ್ಥಾಪಕರಹೆಸರು		ಒಟ್ಟು ಮೊತ್ತ
3.	ಸ್ಟಾಕ್‌ಆಪ್ಶನ್			
4.	ಸ್ವೆಟ್‌ಈಕ್ವಿಟಿ			
5.	ಕಮೀಷನ್ – ಲಾಭದ ಶೇಕಡಾವಾರು – ಇತರೆ, ಹೆಸರಿಸುವುದು.,			
6.	ಇತರೆ, ಹೆಸರಿಸುವುದು.			
7.	ಒಟ್ಟು (ಎ)			Rs.27,93,278/-
	ಕಾಯಿದೆಯ ಅನ್ವಯಗರಿಷ್ಟ ಪರಿಮಿತಿ			

B.ಇತರ ನಿರ್ದೇಶಕರ ಸಂಭಾವನೆ:

ಕ್ರ. ಸಂ.	ಸಂಭಾವನೆಯ ವಿವರಗಳು	ವ್ಯವಸ್ಥಾಪಕ ನಿರ್ದೇಶಕರು/ಪೂರ್ಣಅವಧಿ ನಿರ್ದೇಶಕರು/ವ್ಯವಸ್ಥಾಪಕರಹೆಸರು				ಒಟ್ಟು ಮೊತ್ತ
	ಸ್ವತಂತ್ರ ನಿರ್ದೇಶಕರುಗಳು					
	ಮಂಡಳಿಯ ಸಮಿತಿ ಸಭೆಗಳಲ್ಲಿ ಭಾಗವಹಿಸಿದ್ದರ ಶುಲ್ಕ ● ಕಮೀಷನ್ ● ಇತರೆ, ಹೆಸರಿಸುವುದು.					
	ಒಟ್ಟು (1)					
	ಇತರೆಕಾರ್ಯಕಾರಿಯಲ್ಲದ ನಿರ್ದೇಶಕರುಗಳು					
	ಮಂಡಳಿಯ ಸಮಿತಿ ಸಭೆಗಳಲ್ಲಿ ಭಾಗವಹಿಸಿದ್ದರ ಶುಲ್ಕ ● ಕಮೀಷನ್ ● ಇತರೆ, ಹೆಸರಿಸುವುದು.					95,000/- 15,873/-
	ಒಟ್ಟು (2)					1,10,873/-
	ಒಟ್ಟು (B)=(1+2)					1,10,873/-
	ಒಟ್ಟು ವ್ಯವಸ್ಥಾಪನಾ ಸಂಭಾವನೆ					
	ಒಟ್ಟಾರೆಕಾಯಿದೆಯಅನ್ವಯಗರಿಷ್ಟ ಪರಿಮಿತಿ					

C.ವ್ಯವಸ್ಥಾಪಕ ನಿರ್ದೇಶಕರು/ಪೂರ್ಣಅವಧಿಯ ನಿರ್ದೇಶಕರು/ವ್ಯವಸ್ಥಾಪಕರನ್ನು ಹೊರತುಪಡಿಸಿ ಪ್ರಮುಖ ವ್ಯವಸ್ಥಾಪನಾ ಸಿಬ್ಬಂದಿಗಳ ಸಂಭಾವನೆ

ಕ್ರ. ಸಂ.	ಸಂಭಾವನೆಯ ವಿವರಗಳು	ಪ್ರಮುಖ ವ್ಯವಸ್ಥಾಪನ ಸಿಬ್ಬಂದಿ			
		ಸಿಈಓ	ಕಂಪನಿ ಕಾರ್ಯದರ್ಶಿ	ಸಿಎಫ್‌ಓ	ಒಟ್ಟು
1.	ನಿವ್ವಳ ಸಂಬಳ ಅ) ಅದಾಯ ತೆರಿಗೆ ಕಾಯಿದೆ 1961 ರ ಸೆಕ್ಷನ್ 17(1)ಕ್ಕೆ ಒಳಪಟ್ಟಂತೆ ಸಂಬಳ ಆ) ಅದಾಯ ತೆರಿಗೆ ಕಾಯಿದೆ 1961ರ ಉಪ ವಿಧಿ 17(2)		**ಅ) ಸಂಬಳ** ಶ್ರೀ. ರಾಘವೇಂದ್ರ ಕೋಟೆಮನೆ ರೂ.4,00,744/–	**ಅ) ಸಂಬಳ** ಶ್ರೀ. ಸುರೇಶ ತೇರದಾಳ (ಆರ್ಥಿಕ ಸಲಹೆಗಾರರು)	Rs. 34,02,617/-

ಕ್ರ ಸಂ.	ಸಂಭಾವನೆಯ ವಿವರಗಳು	ಪ್ರಮುಖ ವ್ಯವಸ್ಥಾಪನ ಸಿಬ್ಬಂದಿ			
		ಸಿಈಓ	ಕಂಪನಿ ಕಾರ್ಯದರ್ಶಿ	ಸಿಎಫ್ಓ	ಒಟ್ಟು
	ಪರಿಲಭ್ಯದ ಮೌಲ್ಯ ಇ) ಅದಾಯ ತೆರಿಗೆ ಕಾಯಿದೆ 1961ರ ಉಪ ವಿಧಿ 17(3) ರಂತೆ ಸಂಬಳದ ಬದಲಾಗಿ ಲಾಭಗಳು.		**ಆ) ಪರಿಲಭ್ಯ** ರೂ.15,582/–	ರೂ. 29,10,250/– **ಆ) ಪರಿಲಭ್ಯ** ರೂ.76,041/–	
2.	ಸ್ಟಾಕ್‌ಆಪ್ಶನ್				
3.	ಸ್ವೆಟ್‌ಈಕ್ವಿಟಿ				
4.	ಕಮೀಷನ್ – ಲಾಭದ ಶೇಕಡಾವಾರು – ಇತರೆ, ಹೆಸರಿಸುವುದು.				
5.	ಇತರೆ, ಹೆಸರಿಸುವುದು.				
6.	ಒಟ್ಟು				Rs.34,02,617/-

VII.ದಂಡಗಳು / ಶಿಕ್ಷೆಗಳು / ಅಪರಾಧಗಳ ಸಂಯೋಜನೆ:

ವರ್ಗ	ಕಂಪನಿಯ ಕಾಯ್ದೆಯ ವಿಧಿ	ಸಂಕ್ಷಿಪ್ತ ವಿವರಣೆ	ದಂಡಗಳು / ಶಿಕ್ಷೆಗಳು / ವೃದ್ಧಿಗೊಂಡ ಶುಲ್ಕಗಳ ವಿವರಗಳು	ಅಧಿಕಾರ (ಆರ್.ಡಿ./ಎನ್.ಸಿ.ಎಲ್.ಟಿ./ ನ್ಯಾಯಾಲಯ)	ಮನವಿ ಮಾಡಿರುವುದು. ಯವುದಾದರುಇದ್ದಲ್ಲಿ (ವಿವರಗಳನ್ನು ಸಲ್ಲಿಸುವುದು)
ಎ) ಕಂಪನಿ					
ದಂಡಗಳು		-- ಇಲ್ಲಾ --			
ಶಿಕ್ಷೆಗಳು					
ಸಂಯೋಜನೆ					
ಬಿ) ನಿರ್ದೇಶಕರು					
ದಂಡಗಳು		--ಇಲ್ಲಾ--			
ಶಿಕ್ಷೆಗಳು					
ಸಂಯೋಜನೆ					
ಸಿ) ಸಂಬಂಧಿಸಿದ ಇತರೆ ಅಧಿಕಾರಿಗಳು					
ದಂಡಗಳು		--ಇಲ್ಲಾ--			
ಶಿಕ್ಷೆಗಳು					
ಸಂಯೋಜನೆ					

ಮಾರ್ಚ್ 31, 2021 ರಂದು ಕೊನೆಗೊಂಡ ವರ್ಷಾಂತ್ಯಕ್ಕೆ ನಿರ್ದೇಶಕರ ವರದಿಗೆ ಜೋಡಿಕೆ

2020–21 ನೇ ಸಾಲಿನ ಲೆಕ್ಕಪತ್ರಗಳ ಮೇಲೆ ಶಾಸನಬದ್ಧ ಲೆಕ್ಕಪರಿಶೋಧಕರು ಗಮನಿಸಿರುವ ನ್ಯೂನತೆಗಳು/ವಿಮರ್ಶೆಗಳ ಮೇಲೆ ಈ ಕೆಳಕಂಡ ಅಭಿಪ್ರಾಯಗಳನ್ನು ಪ್ರಸ್ತಾಪಿಸಲಾಗಿದೆ.

ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು		ವ್ಯವಸ್ಥಾಪಕ ಮಂಡಳಿಯ ಉತ್ತರ
	ಸಾಲಗಳು & ಎರವಲುಗಳು:	
1	ಕಂಪನಿಯು ಆರ್‌ಎಪಿಡಿಆರ್‌ಪಿ ಯೋಜನೆಗಾಗಿ ಪವರ್ ಫೈನಾನ್ಸ್ ಕಾರ್ಪೋರೇಷನ್‌ನಿಂದ (ಪಿಎಫ್‌ಸಿ) ಸಾಲವನ್ನು ಪಡೆದಿದ್ದು, ಇದನ್ನು ಸರ್ಕಾರದ ಆದೇಶದ ಪ್ರಕಾರ ಅನುದಾನವೆಂದು ಪರಿಗಣಿಸಬೇಕು. ಕಂಪನಿಯು ಇದನ್ನು ದೀರ್ಘಾವಧಿ ಸಾಲವೆಂದು ತೋರಿಸುತ್ತಲಿದೆ ಹಾಗೂ ಆಕರಿಸಿದ ಬಡ್ಡಿಯನ್ನು ಆಸ್ತಿಗಳ ಬಂಡವಾಳೀಕರಣಕ್ಕೆ ಲೆಕ್ಕೀಕರಿಸಲಾಗಿದೆ. ಕಂಪನಿಯು ಪಿಎಫ್‌ಸಿಯಿಂದ ಅನುದಾನದ ಮೊತ್ತದ ದೃಢೀಕರಣಕ್ಕಾಗಿ ಕಾಯುತ್ತಿದೆ ಮತ್ತು ಅದು ಅಸಲು ಮತ್ತು ಬಡ್ಡಿಯ ಮೊತ್ತದ ಮರುಪಾವತಿಯನ್ನು ಮುಂದುವರಿಸುತ್ತಿದೆ. ಅಂತಹ ಸಾಲಗಳು ಅನುದಾನಗಳೆಂದು ಭವಿಷ್ಯದ ಸಂವಹನದ ಫಲಿತಾಂಶವನ್ನು ಸ್ಪಷ್ಟಪಡಿಸಲಾಗಿಲ್ಲ ಮತ್ತು ಬಡ್ಡಿಗಳು ಮತ್ತು ಮರುಪಾವತಿಸಲಾದ ಅಸಲು ಮೊತ್ತವನ್ನು ಹಿಂತಿರುಗಿಸಲು ಕಾರಣವಾಗಬಹುದು.	ಆರ್‌ಎಪಿಡಿಆರ್‌ಪಿ ಭಾಗ–ಎ ಮತ್ತು ಭಾಗ–ಬಿ ಸಾಲಗಳನ್ನು ಅನುದಾನ ಎಂದು ಪರಿವರ್ತನೆಯ ಪ್ರಕ್ರಿಯೆ (ಭಾಗ–ಎ: 100% & ಭಾಗ–ಬಿ : 50%) ಇನ್ನೂ ಭಾರತ ಸರ್ಕಾರದ ಅಂತಿಮ ಪರಿಗಣನೆಯಲ್ಲಿದೆ. ಅಂತಿಮ ಆದೇಶದ ಸ್ವೀಕೃತಿಯ ನಂತರ ಸಮಂಜಸ ಲೆಕ್ಕೀಕರಣ ಕ್ರಮವನ್ನು ಪ್ರಾರಂಭಿಸಲಾಗುತ್ತದೆ. ಮೇಲೆ ವಿವರಿಸಿದಂತೆ ಹೆಸ್ಕಾಂ ಬಡ್ಡಿಯ ಭಾಗವನ್ನು ಬಂಡವಾಳೀಕರಣದ ಮೂಲಕ ಸ್ವತ್ತುಗಳಾಗಿ ಪರಿವರ್ತಿಸಿಲ್ಲ. ಮೆ॥ ಪಿಎಫ್‌ಸಿ ನಿಂದ ಸ್ವೀಕರಿಸಿದ ಪತ್ರವ್ಯವಹಾರದ ಇತ್ತೀಚಿನ ಸ್ಥಿತಿಯು ಪತ್ರ ಸಂಖ್ಯೆ: 02:10:IPDS:2021:Utilities/73773 ದಿನಾಂಕ:27.09.2021.
2	ಕಂಪನಿಯು ತನ್ನ ಹಣಕಾಸು ಹೇಳಿಕೆಗಳಲ್ಲಿಯೋಜನಾವಾರು ವೆಚ್ಚಗಳು ಮತ್ತು ಎರವಲು ಪಡೆದ ಸಾಲಗಳು ಮತ್ತು ತನ್ನ ಸ್ವಂತ ಉಳಿಕೆಯನ್ನು ಬಹಿರಂಗಪಡಿಸಿಲ್ಲ.	ಹಣಕಾಸು ಸಂಸ್ಥೆಗಳವಾರು ಎರವಲು ಪಡೆದ ಸಾಲಗಳನ್ನು ಬಹಿರಂಗಪಡಿಸಲಾಗಿದೆ. ಯೋಜನಾವಾರು ವೆಚ್ಚಗಳು ಮತ್ತು ಎರವಲು ಪಡೆದ ಸಾಲಗಳನ್ನು ಮುಂಬರುವ ವರ್ಷಗಳಲ್ಲಿ ಬಹಿರಂಗಪಡಿಸಲಾಗುತ್ತದೆ.
	ಗ್ರಾಹಕರಿಂದ ಭದ್ರತಾ ಠೇವಣಿ:	
3	ಬಳಕೆದಾರರಿಂದ ಪಡೆದ ಭದ್ರತಾ ಠೇವಣಿಗೆ ಸಂಬಂಧಿಸಿದ ಕಂಪನಿಯ ಲೆಡ್ಜರ್ ಬಾಕಿ ರೂ.924.69 ಕೋಟಿಯಷ್ಟು ಇದ್ದು, ಆದರೆ ಆರ್‌ಎಪಿಡಿಆರ್‌ಪಿ–ಎನ್‌ಸಾಫ್ಟ್ ತಂತ್ರಾಂಶಗಳಲ್ಲಿ ನಿರ್ವಹಿಸಿದ ಕಕ್ಷಿಗಾರರ ಪೂರಕ ಖಾತೆಗಳಲ್ಲಿ ಕೇವಲ ರೂ.646.73 ಕೋಟಿಗಳೆಂದು ತೋರಿಸಲಾಗುತ್ತಿದೆ. ಕಂಪನಿಯು ಈ ಶಿಲ್ಕಿನ ಸಮನ್ವಯವನ್ನು ಪರಿಣಾಮಕಾರಿಯಾಗಿ ಕೈಕೊಳ್ಳಬೇಕಾಗಿದೆ. ಕಂಪನಿಯು ತನ್ನ ಖಾತೆಗಳ	ಠೇವಣಿ ರಜಿಸ್ಟರ್‌ಗಳನ್ನು ಉಪ–ವಿಭಾಗ/ವಿಭಾಗ ಹಂತಗಳಲ್ಲಿ ನಿರ್ವಹಿಸಲಾಗುತ್ತಿದೆ ಮತ್ತು ಖಾತೆಗಳನ್ನು ವಿಭಾಗೀಯ ಮಟ್ಟದಲ್ಲಿ ನಿರ್ವಹಿಸಲಾಗುತ್ತದೆ. ಹಣಕಾಸು ವರ್ಷದ ಅವಧಿಯಲ್ಲಿ ಠೇವಣಿ ರೆಜಿಸ್ಟರ್‌ಗಳು ಮತ್ತು ಖಾತೆಗಳ ನಡುವಿನ ಬ್ಯಾಲೆನ್ಸ್‌ಗಳನ್ನು ಸಮನ್ವಯಗೊಳಿಸಲು ಕಂಪನಿಯು ಪ್ರಯತ್ನಗಳನ್ನು ಮಾಡಿದೆ. ಸಮನ್ವಯಗೊಳಿಸುವ ಪರಮಾಣವು ಬೃಹತ್ತಾಗಿರುವ ಕಾರಣ ಕಾರ್ಯವು ದೊಡ್ಡದಾಗಿದೆ; ಅದನ್ನು ಪೂರ್ಣಗೊಳಿಸಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು		ವ್ಯವಸ್ಥಾಪಕ ಮಂಡಳಿಯ ಉತ್ತರ
	ಪುಸ್ತಕಗಳಲ್ಲಿ ರೂ 277.96 ಕೋಟಿಗಳನ್ನು ಹೆಚ್ಚುವರಿಯಾಗಿ ಭದ್ರತಾ ಠೇವಣಿಯೆಂದು ಸಾಗಿಸುತ್ತಿದೆ ಮತ್ತು ಈ ಶಿಲ್ಕುಗಳ ಮೇಲಿನ ಬಡ್ಡಿಗಾಗಿ ಹೆಚ್ಚುವರಿ ಅವಕಾಶವನ್ನು ಒದಗಿಸಲಾಗಿದೆ.	ಎಲ್ಲಾ ಕಾರ್ಯ ಮತ್ತು ಪಾಲನಾ ವಿಭಾಗಗಳಲ್ಲಿನ ಗ್ರಾಹಕರ ವೈಯಕ್ತಿಕ ಲೆಡ್ಜರ್‌ಗಳಲ್ಲಿ ತೋರಿಸಿರುವ ನೈಜ ಶಿಲ್ಕಿನ ಪ್ರಕಾರ ಗ್ರಾಹಕರಿಂದ ಪಡೆದ ಭದ್ರತಾ ಠೇವಣಿ ಮೇಲಿನ ಬಡ್ಡಿಗೆ ಅವಕಾಶವನ್ನು ಒದಗಿಸಲಾಗುತ್ತಿದೆ.
	ದೀರ್ಘಾವಧಿ ಅವಕಾಶಗಳು ಮತ್ತು ಅಲ್ಪಾವಧಿ ಅವಕಾಶಗಳು:	
4	ಕಂಪನಿಯು ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗೆ ವಿಳಂಬವಾಗಿ ಪಾವತಿಸುತ್ತಿದ್ದು, ಅದರ ಮೇರೆಗೆ ವಿಳಂಬಪಾವತಿಯ ಮೇಲಿನ ಬಡ್ಡಿಗಾಗಿ ಲೆಕ್ಕಪುಸ್ತಕಗಳಲ್ಲಿ ಅವಕಾಶವನ್ನು ಒದಗಿಸಲಾಗಿರುವುದಿಲ್ಲ. ಇದರಿಂದಾಗಿ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗೆ ಪಾವತಿಸಬೇಕಾದ ಕೊಡುಗೆಗಳ ಶೇಕಡಾವಾರು ಪ್ರಮಾಣವು ವರ್ಷದಿಂದ ವರ್ಷಕ್ಕೆ ಏರಿಕೆಯಾಗಿದೆ. ಕಂಪನಿಯು ತನ್ನ ನಿವೃತ್ತ ಉದ್ಯೋಗಿಗಳಿಗೆ ಪಿಂಚಣಿ ಮತ್ತು ಉಪದಾನ ಪಾವತಿಗಳ ಸೇವೆಗಳನ್ನು ಒದಗಿಸುತ್ತಿದೆ ಎಂದು ಗಮನಿಸಲಾಗಿದೆ, ಅದರ ಮೇರೆಗೆ ಆಡಳಿತದ ವೆಚ್ಚವನ್ನು ಟ್ರಸ್ಟ್‌ನಿಂದ ಕ್ಲೇಮ್ ಮಾಡಲಾಗುವುದಿಲ್ಲ.	ಆ್ಯಕ್ಚುರಿಯಲ್ ವರದಿಯ ಪ್ರಕಾರ ಪಿಂಚಣಿ ಕೊಡುಗೆ ದರವನ್ನು ದಿನಾಂಕ 01.04.2019 ರಿಂದ ಜಾರಿಗೆ ಬರುವಂತೆ 57.30% ರಿಂದ 64.00% ಗೆ ಶಿಫಾರಸು ಮಾಡಲು ಕಾರಣ ಈ ಕೆಳಗಿನಂತಿರುತ್ತದೆ. ಎಸ್ಕಾಂಗಳು ಸರ್ಕಾರದಿಂದ ಬರಬೇಕಾದವುಗಳಲ್ಲಿನ ಕೊರತೆಯ ಪ್ರಮುಖ ಸಮಸ್ಯೆಯನ್ನು ಎದುರಿಸುತ್ತಿವೆ. ಪ್ರಯೋಜನಗಳ ಪಾವತಿಗಳನ್ನು ಮಾಡಲು ಟ್ರಸ್ಟ್ ಕೊರತೆಯ ಮಟ್ಟಿಗೆ ಸ್ವತ್ತುಗಳನ್ನು ಲಿಕ್ವಿಡೇಟ್ ಮಾಡಬೇಕಾಗುತ್ತದೆ. ಈ ಕಾರಣದಿಂದಾಗಿ ಕಳೆದ ಕೆಲವು ವರ್ಷಗಳಲ್ಲಿ ಕೊಡುಗೆಗಳು ತೀವ್ರವಾಗಿ ಹೆಚ್ಚುತ್ತಿವೆ (ಹೊಸದಾಗಿ ಜಾರಿಗೆ ತರಲಾದ ವೇತನ / ಪಿಂಚಣಿ ಪರಿಷ್ಕರಣೆಯ ಜೊತೆಗೆ).
	ವ್ಯಾಪಾರ ಸಂಬಂಧಿ ಪಾವತಿಗಳು:	
5	ಕಂಪನಿಯು ತನ್ನ ಪೂರೈಕೆದಾರರಿಂದ ಹಾಗೂ ಇತರ ಎಸ್ಕಾಂಗಳಿಂದ ಶಿಲ್ಕಿನ ದೃಢೀಕರಣವನ್ನು ಪಡೆದಿರುವುದಿಲ್ಲ.	ಶಿಲ್ಕಿನ ದೃಢೀಕರಣಕ್ಕಾಗಿ ಉತ್ಪಾದಕರು ಮತ್ತು ಇತರ ಎಸ್ಕಾಂಗಳೊಂದಿಗೆ ಸಂವಹನ ಕೈಗೊಳ್ಳಲಾಗಿದೆ.
6	ಎಸ್‌ಎಲ್‌ಡಿಸಿಮತ್ತು ಪಿಸಿಕೆಎಲ್ ಗಳು ಸಲ್ಲಿಸಿದ ತಾತ್ಕಾಲಿಕ ಹೇಳಿಕೆಯ ಆಧಾರದ ಮೇಲೆ ಕಂಪನಿಯು ತನ್ನ ಲೆಕ್ಕಪತ್ರಗಳಲ್ಲಿ ಇಂಧನ ಬಳಕೆಯ ನಮೂದುಗಳನ್ನು ಒದಗಿಸಿದೆ. ಎಸ್‌ಎಲ್‌ಡಿಸಿಮತ್ತು ಪಿಸಿಕೆಎಲ್ ಗಳು ಸಲ್ಲಿಸುವ ಅಂತಿಮ ಹೇಳಿಕೆಯ ಪ್ರಕಾರ ಶಿಲ್ಕುಗಳು ಬದಲಾವಣೆಗೆ ಒಳಗಾಗಬಹುದು. ಕಂಪನಿಯು ಎಸ್‌ಎಲ್‌ಡಿಸಿ ಮತ್ತು ಪಿಸಿಕೆಎಲ್‌ನ ಮೂಲಗಳು ಒದಗಿಸಿದ ಹೇಳಿಕೆಗಳ ಮೇಲೆ ಅವಲಂಬಿತವಾಗಿದೆ ಮತ್ತು ವಿದ್ಯುತ್ ಬಳಕೆ ಅಥವಾ ಉಪಯೋಗದ ಮಾಪನಕ್ಕೆ	ಖಾತೆಗಳ ಪುಸ್ತಕಗಳಲ್ಲಿನ ಇಂಧನ ಬಳಕೆಯ ನಮೂದುಗಳನ್ನು ಎಸ್‌ಎಲ್‌ಡಿಸಿಸಲ್ಲಿಸಿದ ಅಂತಿಮ ಹೇಳಿಕೆಯ ಮೇಲೆ ಲೆಕ್ಕಹಾಕಲಾಗುತ್ತದೆ.

ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು		ವ್ಯವಸ್ಥಾಪಕ ಮಂಡಳಿಯ ಉತ್ತರ
	ಯಾವುದೇ ಆಂತರಿಕ ತಪಾಸಣೆ ಅಥವಾ ಆಂತರಿಕ ದಾಖಲೆಗಳನ್ನು ಹೊಂದಿರುವುದಿಲ್ಲ ಎಂದು ಗಮನಿಸಲಾಗಿದೆ.	
7	ವಿದ್ಯುತ್ ಖರೀದಿಯ ವಿಳಂಬ ಪಾವತಿಯ ಮೇಲಿನ ಬಡ್ಡಿಗೆ ಸಂಬಂಧಿಸಿದಂತೆ, ಕಂಪನಿಯು ಮಾರಾಟಗಾರರಿಂದ ಬಡ್ಡಿ ಬೇಡಿಕೆಯನ್ನು ಸ್ವೀಕರಿಸಿದಾಗ ಬಡ್ಡಿಯನ್ನು ಲೆಕ್ಕೀಕರಿಸುತ್ತಿದೆ ಆದರೆ ವಿದ್ಯುತ್ ಖರೀದಿ ಒಪ್ಪಂದವು ಕ್ರೆಡಿಟ್ ಅವಧಿಯ ನಂತರ ವಿಳಂಬವಾದ ಪಾವತಿಗೆ ಬಡ್ಡಿಯನ್ನು ಪಾವತಿಸಬೇಕೆಂದು ಸೂಚಿಸುತ್ತದೆ. ಕಂಪನಿಯು ವಿಳಂಬವನ್ನು ಗುರುತಿಸಬೇಕು ಹಾಗೂ ವಿದ್ಯುತ್ ಖರೀದಿ ಒಪ್ಪಂದಗಳ ಪ್ರಕಾರ ವಿಳಂಬ ಪಾವತಿಗಳ ಮೇಲಿನ ಬಡ್ಡಿಗೆ ಅವಕಾಶ ಕಲ್ಪಿಸಬೇಕು.	ಉತ್ಪಾದಕರು ಬಡ್ಡಿ ಕ್ಲೇಮ್‌ಗಳಿಗಾಗಿ ಇನ್‌ವಾಯ್ಸ್‌ಗಳನ್ನು ಸಲ್ಲಿಸಿದಾಗಲೆಲ್ಲಾ ಅವಕಾಶವನ್ನು ಕಲ್ಪಿಸಲಾಗಿದೆ.
8	ಎಸ್‌ಎಲ್‌ಡಿಸಿ (ಕವಿಪ್ರನಿನಿ) ಮತ್ತು ಪಿಸಿಕೆಎಲ್‌ನಿಂದ ಪಡೆದ ಸೇವೆಗಳಿಗಾಗಿ ಕಂಪನಿಗೆ ಕಾರ್ಯ ಮತ್ತು ಪಾಲನಾ ವೆಚ್ಚಗಳನ್ನು ವಿಧಿಸಲ್ಪಟ್ಟಿದೆ. ಕವಿಪ್ರನಿನಿ ಮತ್ತು ಪಿಸಿಕೆಎಲ್ ನಿಂದ ಈ ವೆಚ್ಚಗಳನ್ನು ಕಂಪನಿಗೆ ಇನ್‌ವಾಯ್ಸ್ ಆಗಿಲ್ಲವೆಂಬುದನ್ನು ಗಮನಿಸಲಾಗಿದೆ. ಕಂಪನಿಯು ಈ ವೆಚ್ಚಗಳನ್ನು ತೀರ್ಮಾನಿಸುವ ಆಧಾರವನ್ನು ಪಡೆಯಬೇಕು ಮತ್ತು ಆದಾಯ ತೆರಿಗೆ ಕಾಯಿದೆ ಅಡಿಯಲ್ಲಿ ಟಿಡಿಗಳನ್ನು ಒದಗಿಸಬೇಕು ಮತ್ತು ಈ ವೆಚ್ಚಗಳ ಮೇಲೆ ರಿವರ್ಸ್ ಚಾರ್ಜ್ ಕಾರ್ಯವಿಧಾನದ ಅಡಿಯಲ್ಲಿ ಜಿಎಸ್‌ಟಿಯನ್ನು ಒದಗಿಸಬೇಕು ಎಂದು ಲೆಕ್ಕಪರಿಶೋಧನೆಯು ಅಭಿಪ್ರಾಯಪಟ್ಟಿದೆ.	ಕಾರ್ಯ ಮತ್ತು ಪಾಲನಾ ವೆಚ್ಚಗಳನ್ನುತೀರ್ಮಾನಿಸುವ ಆಧಾರಕ್ಕಾಗಿ ಎಸ್‌ಎಲ್‌ಡಿಸಿಯೊಂದಿಗೆ ಸಂವಹನವನ್ನು ಮಾಡಲಾಗುವುದು ಮತ್ತು ಅದರ ಪ್ರಕಾರ ಟಿಡಿಎಸ್ ಮತ್ತು ಜಿಎಸ್‌ಟಿ ಅನ್ನು ನಂತರದ ವರ್ಷಗಳಲ್ಲಿ ಒದಗಿಸಲಾಗುತ್ತದೆ.
9	ತಣ್ಣೀರಭಾವಿ ವಿದ್ಯುತ್ ಖರೀದಿ ವೆಚ್ಚಕ್ಕೆ ಸಂಬಂಧಿಸಿದಂತೆ ದಿನಾಂಕ 5/10/2020 ರ ಗೌರವಾನ್ವಿತ APTEL ಆದೇಶದ ಪ್ರಕಾರ, ಜಕಾತಿ ದರಗಳಲ್ಲಿ ಹಿಂದಿನ ಬದಲಾವಣೆಗಾಗಿ ಕಂಪನಿಯು ಕವಿಪ್ರನಿನಿಗೆ ರೂ.329.92 ಕೋಟಿಗಳನ್ನು ಪಾವತಿಸಲು ಹೊಣೆಗಾರನಾಗಿದೆ. ಪಾವತಿಯನ್ನು 5 ವರ್ಷಗಳ ಅವಧಿಯಲ್ಲಿ ಮಾಡಬೇಕು. ಕಂಪನಿಯು ಇದಕ್ಕೆ ಅವಕಾಶವನ್ನು ಒದಗಿಸಿರುವುದಿಲ್ಲ ಮತ್ತು ಕವಿಪ್ರನಿನಿಯಿಂದ ಬೇಡಿಕೆಯನ್ನು ಪಡೆದಾಗ ಮೊತ್ತವನ್ನು	2020 ರಲ್ಲಿನ ಮೇಲ್ಮನವಿ ಸಂಖ್ಯೆ: 97 ರಲ್ಲಿ ದಿನಾಂಕ: 05.10.2020 ರ ಗೌರವಾನ್ವಿತ APTEL ಆದೇಶದಂತೆ, ತಣ್ಣೀರಭಾವಿ ವಿದ್ಯುತ್ ಖರೀದಿ ವೆಚ್ಚದ ರೂ.1,657 ಕೋಟಿಗಳಲ್ಲಿ, ಹೆಸ್ಕಾಂ ಭಾಗವು ರೂ.329.92 ಕೋಟಿಗಳಾಗಿದ್ದು, ಮುಂದಿನ 5 ವರ್ಷಗಳ ಅವಧಿಯಲ್ಲಿ ಅದನ್ನು ಭೋಗ್ಯ ಮಾಡಲಾಗಿದ್ದು, ಮತ್ತು ಅದನ್ನು ಗ್ರಾಹಕರು ಪಾವತಿಸಬೇಕಾದ ಸುಂಕದ ಮೂಲಕ ಮರುಪಡೆಯುವುದು. ಕವಿಪ್ರನಿನಿಯಿಂದ ಪ್ರಸರಣ ಶುಲ್ಕಗಳಲ್ಲಿ ಬೇಡಿಕೆಯನ್ನು ಎತ್ತಿದಾಗ ಅದನ್ನು ಖರ್ಚು ಎಂದು ಲೆಕ್ಕಹಾಕಲಾಗುತ್ತದೆ.

ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು		ವ್ಯವಸ್ಥಾಪಕ ಮಂಡಳಿಯ ಉತ್ತರ
	ಲೆಕ್ಕಹಾಕಲಾಗುತ್ತದೆ ಎಂದು ಲೆಕ್ಕಗಳ ತನ್ನ ಟಿಪ್ಪಣಿಗಳಲ್ಲಿ ವರದಿ ಮಾಡಿದೆ. ಆದ್ದರಿಂದ ಪ್ರಸ್ತುತ ಹೊಣೆಗಾರಿಕೆಗಳು, ದೀರ್ಘಾವಧಿಯ ಹೊಣೆಗಾರಿಕೆಗಳು ಮತ್ತು ವಿದ್ಯುತ್ ಖರೀದಿ ವೆಚ್ಚಗಳಲ್ಲಿ ರೂ 329.92 ಕೋಟಿಗಳಷ್ಟು ಕಡಿಮೆ ಹೇಳಿಕೆಯಾಗಿದೆ ಮತ್ತು ನಷ್ಟವು ರೂ.329.92 ಕೋಟಿಗಳಷ್ಟು ಕಡಿಮೆಯಾಗಿದೆ.	
	ಇತರೆ ಪ್ರಸಕ್ತ ಹೊಣೆಗಾರಿಕೆಗಳು:	
10	ವೆಚ್ಚಗಳು ಮತ್ತು ಗುತ್ತಿಗೆ ಕಾಮಗಾರಿಗಳ ಮೇಲೆ ಪಾವತಿಸಬೇಕಾದ ಟಿಡಿಎಸ್ ಅನ್ನು ಸಂಚಿತ ವ್ಯವಸ್ಥೆಯಲ್ಲಿ ಮಾಡದೇ ಪಾವತಿಗಳನ್ನು ಮಾಡಿದಾಗ ಮಾಡಲಾಗುತ್ತದೆ.	ಪ್ರಸ್ತುತ ತೆರಿಗೆ ಇಲಾಖೆಯು ಸೂಚಿಸಿದಂತೆ ಸಂಬಂಧಿಸಿದ ತೆರಿಗೆ ಇಲಾಖೆಗೆ ಪಾವತಿಸಬೇಕಾದ ಟಿಡಿಎಸ್ ಅನ್ನು ಪಾವತಿಗೆ ನಿಗದಿತ ದಿನಾಂಕದೊಳಗೆ ಮಾಡಲಾಗುತ್ತದೆ.
11	ಭದ್ರತಾ ಠೇವಣಿಗಳ ಮೇಲೆ ಪಾವತಿಸಬೇಕಾದ ಬಡ್ಡಿಯನ್ನು ಸಾಫ್ಟ್‌ವೇರ್‌ನಲ್ಲಿ ನಿರ್ವಹಿಸುವ ಖಾತೆಗಳಿಗೆ ಮತ್ತು ಡಿಸಿಬಿ ಪ್ರಕಾರ ಹೋಲಿಸಿದರೆ ಹೆಚ್ಚುವರಿಯಾಗಿ ಒದಗಿಸಲಾಗಿದೆ. ಕಂಪನಿಯು ಬಿಲ್ಲಿಂಗ್‌ಗಾಗಿ ಅಳವಡಿಸಿಕೊಂಡಿರುವ ಸಾಫ್ಟ್‌ವೇರ್‌ನ ಪ್ರಕಾರ ಬಡ್ಡಿಯ ನೈಜ ಬಿಡುಗಡೆಗೆ ಹೋಲಿಸಿದರೆ ಕಂಪನಿಯ ಖಾತೆಗಳ ಪುಸ್ತಕಗಳಲ್ಲಿ ರೂ.11.91 ಕೋಟಿಯಷ್ಟು ವ್ಯತ್ಯಾಸವನ್ನು ಹೆಚ್ಚುವರಿಯಾಗಿ ಒದಗಿಸಲಾಗಿದೆ. ಆದ್ದರಿಂದ ಬಡ್ಡಿ ವೆಚ್ಚವನ್ನು ಹೆಚ್ಚಿಗೆ ಹೇಳಲಾಗಿದೆ, ಪಾವತಿಸಬೇಕಾದ ಬಡ್ಡಿಯನ್ನು ಹೆಚ್ಚಿಗೆಯಾಗಿ ಹೇಳಲಾಗಿದೆ ಮತ್ತು ನಷ್ಟವನ್ನು ಹೆಚ್ಚಿಗೆ ಹೇಳಲಾಗಿದೆ.	ಲೆಕ್ಕ ಶೀರ್ಷಿಕೆ 48.1 ಸರಣಿಯ ಅಡಿಯಲ್ಲಿ ಖಾತೆಗಳಲ್ಲಿನ ಶಿಲ್ಕುಗಳ ಆಧಾರದ ಮೇಲೆ ಭದ್ರತಾ ಠೇವಣಿಗಳ ಮೇಲೆ ಪಾವತಿಸಬೇಕಾದ ಬಡ್ಡಿಯ ಅವಕಾಶವನ್ನು ಮಾಡಲಾಗಿದೆ. ಸಾಫ್ಟ್‌ವೇರ್‌ಗೆ ಸಂಬಂಧಿಸಿದಂತೆ ಶಿಲ್ಕುಗಳ ಸಮನ್ವಯವು ಪ್ರಗತಿಯಲ್ಲಿದೆ. ಭದ್ರತಾ ಠೇವಣಿಯ ಮೇಲಿನ ಹೆಚ್ಚುವರಿ ಬಡ್ಡಿಯ ಅವಕಾಶದ ಬಗ್ಗೆ ಮುಂಬರುವ ವರ್ಷದಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು.
12	ಎಸ್‌ಪಿಪಿಸಿಸಿಯಿಂದ ಯುಆಯ್ ಶುಲ್ಕಗಳು / ಆಡಳಿತ ಶುಲ್ಕಗಳಿಗಾಗಿ ಪಡೆದ ಮುಂಗಡವು ದೀರ್ಘಕಾಲದವರೆಗೆ ಕ್ರೆಡಿಟ್ ಬ್ಯಾಲೆನ್ಸ್‌ಗಳೊಂದಿಗೆ ಬಾಕಿ ಉಳಿದಿದ್ದು ಮತ್ತು ಕಂಪನಿಯು ರೂ.27.87 ಕೋಟಿ ರೂಪಾಯಿಗಳಷ್ಟು ಹೊಣೆಗಾರಿಕೆಯ ವಿಲೇವಾರಿಯನ್ನು ಸಮನ್ವಯಗೊಳಿಸಬೇಕು ಮತ್ತು ಗುರುತಿಸಬೇಕು.	ಸಮನ್ವಯಕಾರ್ಯವನ್ನು ಮುಂಬರುವ ವರ್ಷಗಳಲ್ಲಿ ಕೈಗೊಳ್ಳಲಾಗುವುದು.
13	ಕಂಪನಿಯು ವಿವಿಧ ಎಸ್ಕಾಮ್‌ಗಳಿಗೆ ಸಾಮಗ್ರಿಗಳು/ಸೇವೆಗಳನ್ನು ಪಡೆಯುತ್ತಿದೆ ಮತ್ತು ಒದಗಿಸುತ್ತಿದೆ, ಅದರ ನಿಟ್ಟಿನಲ್ಲಿ ಇನ್‌ವಾಯ್ಸ್‌ಗಳು ಹಾಗೂ ಜಿಎಸ್‌ಟಿಯ ಬಿಡುಗಡೆಯನ್ನು	ವಹಿವಾಟುಗಳು ಜಿಎಸ್‌ಟಿಅನ್ವಯಿಸುವ ಪೂರ್ವ ಅವಧಿಗೆ ಸಂಬಂಧಿಸಿವೆ, ಇತ್ತೀಚಿನ ವಹಿವಾಟುಗಳನ್ನು ಇನ್‌ವಾಯ್ಸ್‌ಗಳನ್ನು ಪಡೆದುಕೊಂಡು ನಡೆಸಲಾಗುತ್ತಿದೆ.

ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು		ವ್ಯವಸ್ಥಾಪಕ ಮಂಡಳಿಯ ಉತ್ತರ
	ಕೈಗೊಳ್ಳುತ್ತಿರುವುದಿಲ್ಲ. ಕಂಪನಿಯು ಜಿಎಸ್‌ಟಿಮತ್ತು ಟಿಡಿಎಸ್ ಹೊಣೆಗಾರಿಕೆಯನ್ನು ನಿರ್ಣಯಿಸಬೇಕು ಮತ್ತು ಪ್ರಸ್ತುತ ಅವಧಿಗೆ ನಿರ್ಧರಿಸದ ಅಂತಹ ಯಾವುದೇ ಹೊಣೆಗಾರಿಕೆಯ ಬಿಡುಗಡೆಗಾಗಿ ಲೆಕ್ಕ ಪುಸ್ತಕಗಳಲ್ಲಿ ಅಗತ್ಯ ಅವಕಾಶವನ್ನು ಮಾಡಬೇಕು.	
14	ಕಂಪನಿಯು ಮೂಲದಲ್ಲಿ ಕಡಿತಗೊಳಿಸಿದ ಮಾರಾಟ ತೆರಿಗೆಯ ಹಳೆಯ ಶಿಲ್ಕುಗಳನ್ನು ಮುಂದುವರೆಸುತ್ತಿದೆ, ಅದಕ್ಕಾಗಿ ಲೆಕ್ಕಪುಸ್ತಕಗಳಲ್ಲಿ ಬಡ್ಡಿ ಅಥವಾ ದಂಡದ ಅವಕಾಶವನ್ನು ಮಾಡಿರುವುದಿಲ್ಲ.	ಮೂಲ ನಿಧಿ ಕೋರಿಕೆಯಲ್ಲಿ ಕಡಿತಗೊಳಿಸಲಾದ ಮಾರಾಟ ತೆರಿಗೆಯನ್ನು ಸಂಪನ್ಮೂಲ ವಿಭಾಗಕ್ಕೆ ಕಳುಹಿಸಲಾಗಿದೆ, ವಿವಾದದಲ್ಲಿರುವ ಪ್ರಕರಣಗಳ ಕಾರಣ ಪಾವತಿ ಬಾಕಿ ಇದೆ.
	ಸ್ಥಿರ ಆಸ್ತಿಗಳು ಮತ್ತು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು:	
15	ಕಂಪನಿಯು ಬಂಡವಾಳೀಕರಿಸಿದ ತಿಂಗಳಿನಿಂದ ಸವಕಳಿಯನ್ನು ವಿಧಿಸುತ್ತಿದೆ. ಬಂಡವಾಳೀಕರಿಸಿದ ಆಸ್ತಿಗಳಿಗಾಗಿ ಆಯಾ ವರ್ಷದಲ್ಲಿ ಪಡೆಯಲಾದ ಯಾವುದೇ ಸಂಬಂಧಿತ ಅನುದಾನವನ್ನು ಆಯಾ ವರ್ಷದಲ್ಲಿ ಒಟ್ಟಾರೆ ಮೊತ್ತದಲ್ಲಿ ಕಡಿಮೆ ಮಾಡಲಾಗಿದೆ. ಅನುದಾನದ ಮೊತ್ತದ ಮೇಲಿನ ಸವಕಳಿಯನ್ನು ಹಿಂತೆಗೆದುಕೊಂಡಿರುವುದು ನಂತರದ ವರ್ಷದಲ್ಲಿ ಪರಿಣಾಮ ಬೀರಿದೆ, ಆದ್ದರಿಂದ ವರ್ಷದಲ್ಲಿ ಬಂಡವಾಳೀಕರಿಸಿದ ಆಸ್ತಿಗಳ ಮೇಲಿನ ಸವಕಳಿಯನ್ನು ಅಧಿಕವಾಗಿ ಪಡೆಯಲಾಗಿದೆ. ಬಂಡವಾಳೀಕರಣ ಹಾಗೂ ಸವಕಳಿಯನ್ನು ವಿಭಾಗಗಳಲ್ಲಿ ಕೈಗೊಳ್ಳಲಾಗಿದೆ ಆದರೆ ಪಡೆದ ಅನುದಾನವನ್ನು ಮುಖ್ಯ ಕಛೇರಿಯಿಂದ ಸ್ಥಿರಾಸ್ತಿಗಳಿಗೆ ಹಂಚಲಾಗಿದೆ ಆದ್ದರಿಂದ ಈ ಮೊತ್ತವನ್ನು ಪ್ರಮಾಣೀಕರಿಸಲಾಗುವುದಿಲ್ಲ.	ಲೆಕ್ಕೀಕರಣ ಕಾರ್ಯವಿಧಾನದ ಪ್ರಕಾರ ಆಸ್ತಿಯ ಸೇರ್ಪಡೆಯ ತಿಂಗಳಿನಿಂದ ಸ್ಥಿರ ಆಸ್ತಿಗಳ ಮೇಲೆ ಸವಕಳಿ ವಿಧಿಸಲಾಗುತ್ತದೆ. ಅನುದಾನವನ್ನು ಸ್ವೀಕರಿಸಿದ ವರ್ಷದಿಂದ ಕಡಿಮೆಯಾದ ಅನುದಾನವನ್ನು ಆಸ್ತಿ ಸೇರಿಸಿದ ತಿಂಗಳಿಂದ ಬೇಡಿಕೆಯಾದ ಸವಕಳಿಯೊಂದಿಗೆ ಹೋಲಿಸುವುದು ಕಾರ್ಯಸಾಧ್ಯವಲ್ಲ ಮತ್ತು ಅನುದಾನವನ್ನು ಸ್ವೀಕರಿಸಿದ ವರ್ಷದಿಂದ ಕಡಿಮೆಯಾದ ಅನುದಾನ ಮತ್ತು ಸವಕಳಿಯನ್ನು ಒದಗಿಸುವ ಈ ವ್ಯವಸ್ಥೆಯು ಸರಿಯಾಗಿದೆ.
16	ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಲ್ಲಿ ಗ್ರಾಹಕರ ಕೊಡುಗೆಯಿಂದ ಕಡಿಮೆಯಾಗಿರುವುದನ್ನು ಗಮನಿಸಲಾಗಿದೆ ಆದರೆ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು ಯಾವ ಯೋಜನೆಗಾಗಿ ಅನುದಾನವನ್ನು ಪಡೆಯಲಾಗಿದೆಯೋ ಅವುಗಳ ಯೋಜನಾ ವೆಚ್ಚವನ್ನುವನ್ನು ಒಳಗೊಂಡಿದ್ದರೆ, ಈ	ಬಂಡವಾಳ ಆಸ್ತಿಗಳ ವೆಚ್ಚಕ್ಕೆ ಸರ್ಕಾರ ಮತ್ತು ಗ್ರಾಹಕರ ಕೊಡುಗೆಯಿಂದ ಪಡೆದ ಬಂಡವಾಳ ಅನುದಾನವನ್ನು ಒಟ್ಟು ಬ್ಲಾಕ್‌ನಿಂದ ಕಡಿಮೆಗೊಳಿಸಲಾಗುತ್ತದೆ ಮತ್ತು ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಲಾಗುತ್ತದೆ. ಬಂಡವಾಳ ಆಸ್ತಿಗಳ ವೆಚ್ಚಕ್ಕೆ ಗ್ರಾಹಕರ ಕೊಡುಗೆಗಳು ಮತ್ತು ಸರ್ಕಾರದ ಅನುದಾನವನ್ನು ಸಂಬಂಧಿತ ಸ್ಥಿರ ಸ್ವತ್ತುಗಳಿಗೆ ಗುರುತಿಸಲು ಸಾಧ್ಯವಿಲ್ಲ ಮತ್ತು ಇದನ್ನು ಲೈನ್ಸ್, ಕೇಬಲ್ಸ್ ನೆಟ್‌ವರ್ಕ್ಸ್ ಸ್ವತ್ತುಗಳ ಗುಂಪಿಗೆ

ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು		ವ್ಯವಸ್ಥಾಪಕ ಮಂಡಳಿಯ ಉತ್ತರ
	ಅನುದಾನವನ್ನು ಆಸ್ತಿಯನ್ನು ಬಂಡವಾಳೀಕರಿಸದೇ ಸ್ಥಿರ ಆಸ್ತಿಯಿಂದ ಕಡಿಮೆ ಮಾಡಲಾಗಿದೆ. ಕಂಪನಿಯು ಸ್ಥಿರ ಆಸ್ತಿಗಳಲ್ಲಿ ಕಡಿಮೆಗೊಳಿಸದೇ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗ ಆಸ್ತಿಗಳಿಗೆ ಸಂಬಂಧಿಸಿದ ಅನುದಾನಗಳನ್ನು ಬೇರ್ಪಡಿಸಬೇಕಾಗುವುದು. ಪ್ರಸ್ತುತ ಅಭ್ಯಾಸದಿಂದಾಗಿ ಸ್ಥಿರ ಆಸ್ತಿಗಳಲ್ಲಿ ಕಡಿಮೆ ಹೇಳಿಕೆಯಾಗಲು ಹಾಗೂ ಸವಕಳಿಯನ್ನು ಕಡಿಮೆ ಪಡೆಯಲಾಗಿರುವುದಕ್ಕೆ ಕಾರಣವಾಗಿದೆ.	ಸಂಬಂಧಿಸಿದಂತೆ ಪರಿಗಣಿಸಲಾಗುತ್ತದೆ ಮತ್ತು ಒಟ್ಟು ಸ್ಥಿರ ಸ್ವತ್ತುಗಳಿಂದ ನೇರವಾಗಿ ಕಡಿತಗೊಳಿಸಲಾಗುತ್ತದೆ. ಈ ನಿಟ್ಟಿನಲ್ಲಿ ಈ ಸ್ವತ್ತುಗಳ ಮೇಲಿನ ಅನುಗುಣವಾದ ಸವಕಳಿಯನ್ನು ಕಡಿಮೆಯಾಗಿರುವುದು ಸರಿಯಾಗಿದೆ.
17	ಹಣಕಾಸು ತಃಖ್ತೆಗಳ ಭಾಗವನ್ನು ರೂಪಿಸುವ ಟಿಪ್ಪಣಿಗಳ ಟಿಪ್ಪಣಿ ಸಂ. 2.6.1 ರ ಪ್ರಕಾರ ಸ್ಥಿರಾಸ್ತಿಗಳನ್ನು ಅವುಗಳ ಐತಿಹಾಸಿಕ ವೆಚ್ಚಗಳಲ್ಲಿ ಅನುರೂಪವಾದ ಸಂಚಿತ ಸವಕಳಿಯೊಂದಿಗೆ ತೋರಿಸಲಾಗಿದೆ ಮತ್ತು ಟಿಪ್ಪಣಿ ಸಂ. 2.6.6 ರಲ್ಲಿ ತಿಳಿಸಿರುವಂತೆ ಕಂಪನಿ–ಉತ್ಪಾದಿತ ಆಸ್ತಿಗಳ ಪ್ರಕರಣಗಳಲ್ಲಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಮೌಲ್ಯೀಕರಣವನ್ನು ಪ್ರಮಾಣಿತ ದರದಂತೆ ಬೆಲೆ ನಿಗದಿಮಾಡಲಾಗಿದ್ದು ಇದು ಲೆಕ್ಕಪತ್ರಗಳ ಮಾನದಂಡ 10 ಕ್ಕೆ ಅನುಗುಣವಾಗಿರುವುದಿಲ್ಲ [ಇದು ವೆಚ್ಚದ ದರದಲ್ಲಿ ದಾಸ್ತಾನು ಮೌಲ್ಯಮಾಪನವನ್ನು ಶಿಫಾರಸ್ಸು ಮಾಡುತ್ತದೆ]. ಆದುದರಿಂದ ನಮ್ಮ ಅಭಿಪ್ರಾಯದಲ್ಲಿ ಕಂಪನಿಯ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಹಾಗೂ ಸ್ಥಿರಾಸ್ತಿಗಳ ಮೌಲ್ಯೀಕರಣದ ಲೆಕ್ಕೀಕರಣವು ಟಿಪ್ಪಣಿ ಸಂ. 2.6.6 ರೊಂದಿಗೆ ಒಮ್ಮತವಾಗಿದ್ದು ಲೆಕ್ಕಪತ್ರಗಳ ಮಾನದಂಡ 10 ಕ್ಕೆ ವಿರೋಧಾತ್ಮಕವಾಗಿರುತ್ತದೆ.	ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಮೌಲ್ಯಮಾಪನವನ್ನು ಹೊರತುಪಡಿಸಿ, ಎಎಸ್ –10 ರಲ್ಲಿ ವಿವರಿಸಲಾದ ಎಲ್ಲಾ ನಿಬಂಧನೆಗಳನ್ನು ಕಂಪನಿಯು ಅನುಸರಿಸುತ್ತಿದೆ, ಇದನ್ನು ಪ್ರಮಾಣಿತ ವೆಚ್ಚದಲ್ಲಿ ಪರಿಗಣಿಸಲಾಗುತ್ತದೆ. ಪ್ರಮಾಣಿತ ದರವು ಸರಿಸುಮಾರು ನೈಜ ವೆಚ್ಚವನ್ನು ಪ್ರತಿನಿಧಿಸುವುದರಿಂದ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು ಮತ್ತು ಸ್ಥಿರ ಸ್ವತ್ತುಗಳ ಮೌಲ್ಯಕ್ಕೆ ಸಂಬಂಧಿಸಿದಂತೆ ಅಲ್ಪ ಪ್ರಮಾಣದ ಆರ್ಥಿಕ ಪರಿಣಾಮಗಳು ಕಂಡುಬರುತ್ತವೆ. ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು / ಸ್ಥಿರ / ಬಿಡುಗಡೆಗೊಳಿಸಿದ / ಹಾಳಾದ ಸ್ವತ್ತುಗಳ ಮೌಲ್ಯಮಾಪನಕ್ಕಾಗಿ ಇಎಸ್ಎಸ್ಎಆರ್ 1985 ರ ನಿಬಂಧನೆಯನ್ನು ಅನುಸರಿಸಲಾಗುತ್ತಿದೆ.
18	ಕಂಪನಿಯು ಅಢಾವೆ ಪತ್ರಿಕೆಯ ದಿನಾಂಕಕ್ಕೆ ಇರುವಂತೆ ಆಸ್ತಿಯ ದುರ್ಬಲತೆಯ ಅಸ್ತಿತ್ವದ ಬಗ್ಗೆ, ಯಾವುದಾದರೂ ಇದ್ದಲ್ಲಿ, ಸಕ್ರಿಯ ಬಳಕೆಯಿಂದ ಹಿಂಪಡೆದ ಆಸ್ತಿಗಳು ಮತ್ತು ನಿಷ್ಕ್ರಿಯಗೊಂಡ ಆಸ್ತಿಗಳನ್ನೊಳಗೊಂಡಂತೆ ತನ್ನ ಆಸ್ತಿಯ ಮೌಲ್ಯಮಾಪನ ಮಾಡಿರುವುದಿಲ್ಲ. ಅದರ ಪರಿಣಾಮವಾಗಿ ನಮಗೆ ದುರ್ಬಲತೆಯ ನಷ್ಟದ ಅಸ್ತಿತ್ವದ ಬಗ್ಗೆ ಪ್ರತಿಕ್ರಿಯಿಸಲು ಸಾಧ್ಯವಾಗುವುದಿಲ್ಲ.	ವಾಸ್ತವಿಕ. ಟ್ರಾನ್ಸ್‌ಫಾರ್ಮರ್‌ಗಳು ಮತ್ತು ಇತರ ವಿದ್ಯುತ್ ಸರಬರಾಜು ಉಪಕರಣಗಳು, ತಂತಿಗಳು ಇತ್ಯಾದಿಗಳಿಗಾಗಿ ಕಂಪನಿಯು ತನ್ನ ಪೂರ್ವನಿಯೋಜಿತ ಸ್ವತ್ತುಗಳನ್ನು ಗುರುತಿಸುವ ನಿಯಮಿತ ಪ್ರಕ್ರಿಯೆಯನ್ನು ಹೊಂದಿದೆ. ದುರಸ್ತಿ ಕಾರ್ಯಗಳು ಅಥವಾ ರಿಪೇರಿಗಳನ್ನು ಕಳಚಿಹಾಕುವ ಕಾರ್ಯಗಳನ್ನು ನಿಯಮಿತವಾಗಿ ನಡೆಸಲಾಗುತ್ತದೆ. ಕಂಪನಿಯ ಇತರ ಸ್ವತ್ತುಗಳಿಗಾಗಿ, ದೌರ್ಬಲ್ಯ ಅವಕಾಶವನ್ನು ಮಾಡಲಾಗಿಲ್ಲ ಮತ್ತು ಮುಂಬರುವ ವರ್ಷದಲ್ಲಿ ಅದನ್ನು ಮಾಡಲಾಗುತ್ತದೆ.

ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು		ವ್ಯವಸ್ಥಾಪಕ ಮಂಡಳಿಯ ಉತ್ತರ
19	ಕಂಪನಿಯು ತನ್ನ ಭೂಮಿ ಮತ್ತು ಕಟ್ಟಡದ ಪ್ರಸ್ತುತ ಸ್ಥಿತಿಯ ಮಾಲೀಕತ್ವವನ್ನು ಖಚಿತಪಡಿಸಿಕೊಳ್ಳಲು ತನ್ನ ಎಲ್ಲಾ ಭೂಮಿ ಮತ್ತು ಕಟ್ಟಡಗಳ ಮತ್ತು ಯಾವುದಾದರೂ ಅವಧಿಮೀರಿದ ಪಾವತಿಸಬೇಕಾದ ತೆರಿಗೆಗಳಿದ್ದಲ್ಲಿ ಅವುಗಳ ಕಾನೂನು ಲೆಕ್ಕಪರಿಶೋಧನೆಯನ್ನು ತಜ್ಞ ವಕೀಲರಿಂದ ನಡೆಸಬೇಕು.	ಮುಂದಿನ ವರ್ಷಗಳಲ್ಲಿ ಭೂಮಿ ಮತ್ತು ಕಟ್ಟಡಗಳ ಕಾನೂನು ಲೆಕ್ಕಪರಿಶೋಧನೆ ನಡೆಸಲು ಕ್ರಮವನ್ನು ಪ್ರಾರಂಭಿಸಲಾಗುವುದು.
20	ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು ತುಂಬಾ ಹಳೆಯ ನಮೂದುಗಳನ್ನು ಒಳಗೊಂಡಿವೆ ಮತ್ತು ಅಂತಹ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಸ್ಥಿತಿಯನ್ನು ಕಂಪನಿಯು ಗುರುತಿಸುವುದಿಲ್ಲ. ಅಂತಹ ಖಾತೆಗಳ ಸಮಂಜಸ ಸಮನ್ವಯ ಮತ್ತು ಉಪಚಾರವನ್ನು ಕಂಪನಿಯು ಕೈಗೊಳ್ಳಬೇಕು.	ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ, 50% ಕ್ಕಿಂತ ಹೆಚ್ಚು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಶಿಲ್ಕುಗಳನ್ನು ವರ್ಗೀಕರಿಸಲಾಗಿದೆ. ಮುಂದಿನ ವರ್ಷಗಳಲ್ಲಿ ಉಳಿದ ಬಾಕಿಗಳಿಗೆ ಕ್ರಮವನ್ನು ಪ್ರಾರಂಭಿಸಲಾಗುವುದು.
	ಹೂಡಿಕೆ:	
21	ಕಂಪನಿಯು ಪ್ರಿಯದರ್ಶಿನಿ ಜುರಾಲಾ ಯೋಜನೆಯಲ್ಲಿ ರೂ.14 ಕೋಟಿಯನ್ನು ಹೂಡಿಕೆ ಮಾಡಿರುತ್ತದೆ. ಈ ಯೋಜನೆಯು ಯಾವುದೇ ಆದಾಯವನ್ನು ನೀಡುತ್ತಿಲ್ಲ ಆದರೆ ಕಂಪನಿಯು ಯೋಜನೆಯಿಂದ ಅಗತ್ಯ ಇಂಧನವನ್ನು ಪಡೆಯದೇ ನಿಗದಿತ ಶುಲ್ಕವನ್ನು ಪಾವತಿಸುತ್ತಿದೆ. ಯಾವುದೇ ಪ್ರಯೋಜನಗಳಿಲ್ಲದೇ ನಿಗದಿತ ವೆಚ್ಚಗಳಿಗೆ ಕಾರಣವಾಗುವುದರಿಂದ ಕಂಪನಿಯು ಹೂಡಿಕೆಗಳನ್ನು ಹಿಂಪಡೆಯಲು ಪ್ರಯತ್ನಗಳನ್ನು ಮಾಡಬೇಕಾಗಿದೆ. ಕಂಪನಿಯು ಸದರಿ ಯೋಜನೆಯಿಂದ ಷೇರು ಪ್ರಮಾಣಪತ್ರಗಳನ್ನೂ ಸಹ ಪಡೆದಿರುವುದಿಲ್ಲ.	31.03.2021ಕ್ಕೆ ಇರುವಂತೆ ಕಂಪನಿಯು ರೂ.14.00 ಕೋಟಿ ಹೂಡಿಕೆಯ ಖಾತೆಯನ್ನು ಹೊಂದಿದೆ, ಇದು ಕರ್ನಾಟಕ ಸರ್ಕಾರವು ಮೆ॥ ಪಿಸಿಕೆಎಲ್ ಮೂಲಕ ಮೆ॥ ಪ್ರಿಯದರ್ಶಿನಿ ಜುರಾಲಾ ಹೈಡ್ರೊ ಎಲೆಕ್ಟ್ರಿಕ್ ಪ್ರಾಜೆಕ್ಟ್ ಲಿಮಿಟೆಡ್‌ನಲ್ಲಿ ವಿದ್ಯುತ್ ಉಪಯುಕ್ತತೆಗಳಲ್ಲಿ ಹೂಡಿಕೆಯಾಗಿ ಮಾಡಿದ ಒಟ್ಟು ರೂ.70 ಕೋಟಿಯ ಮೊತ್ತದಲ್ಲಿ ಹೆಸ್ಕಾಮ್‌ನ ಪಾಲು. ಟಿಪ್ಪಣಿ ಸಂಖ್ಯೆ 13 ರ ಅಡಿಯಲ್ಲಿ ಪ್ರಸ್ತುತವಲ್ಲದ ಹೂಡಿಕೆಗಳ ಮೂಲಕ ಇದನ್ನು ಬಹಿರಂಗಪಡಿಸಲಾಗಿದೆ. ಕ್ರಮ ಸಂಖ್ಯೆ 13–1–1. ಕರ್ನಾಟಕ ಸರ್ಕಾರಕ್ಕೆ ಗೆ ಷೇರುಗಳನ್ನು ವಿತರಿಸಲು ಯಾವುದೇ ನಿರ್ದಿಷ್ಟ ನಿರ್ದೇಶನವಿಲ್ಲ, ಷೇರುಗಳ ವಿತರಣೆಗೆ ಸಂಬಂಧಿಸಿದಂತೆ ಪತ್ರವ್ಯವಹಾರವು ಪ್ರಗತಿಯಲ್ಲಿದೆ.
	ಇತರ ಪ್ರಚಲಿತವಲ್ಲದ ಆಸ್ತಿಗಳು:	
22	ಹುಕ್ಕೇರಿ ಕೋ–ಆಪರೇಟಿವ್ ಸೊಸೈಟಿಗೆ ಸಂಬಂಧಿಸಿದಂತೆ, ರೂ. 27.03 ಕೋಟಿ ಮೊತ್ತವನ್ನು ಆರ್ಥಿಕ ವರ್ಷ 2005–06 ರಿಂದ 2009–10 ರ ಅವಧಿಯವರೆಗೆ ಕರ್ನಾಟಕ ಸರ್ಕಾರದಿಂದ ಬರಬೇಕಾದ ಸಹಾಯಧನ ಎಂದು ತೋರಿಸಿರುವುದನ್ನು ಗಮನಿಸಲಾಗಿದೆ.	ಹುಕ್ಕೇರಿ ಸೊಸೈಟಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಪಡೆಯಬಹುದಾದ ಸಹಾಯಧನದ ಬಿಡುಗಡೆಗಾಗಿ ಈಗಾಗಲೇ ಪತ್ರವ್ಯವಹಾರ ಮಾಡಲಾಗಿದೆ.

ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು		ವ್ಯವಸ್ಥಾಪಕ ಮಂಡಳಿಯ ಉತ್ತರ
	ಈ ಮೊತ್ತವನ್ನು ಕರ್ನಾಟಕ ಸರ್ಕಾರವು ದೃಢೀಕರಿಸದೇ ಇರುವ ಕಾರಣ, ಅಂತಿಮವಾಗಿ ಸದರಿ ಮೊತ್ತವನ್ನು ವಸೂಲಿ ಮಾಡುವುದು ಸಂಶಯಾಸ್ಪದವಾಗಿದ್ದು ಸೂಕ್ತ ಅವಕಾಶವನ್ನು ಕಲ್ಪಿಸುವ ಅವಶ್ಯಕತೆ ಇರುತ್ತದೆ. ಇದರ ಪ್ರಭಾವದಿಂದಾಗಿ ಲಾಭದಲ್ಲಿ ರೂ.27.03 ಕೋಟಿಗಳಷ್ಟು ಹೆಚ್ಚಳದ ಹೇಳಿಕೆಗೆ ಕಾರಣವಾಗುವುದು (ಲೆಕ್ಕಶೀರ್ಷಿಕೆ 28.621).	
23	ಕರ್ನಾಟಕ ವಿದ್ಯುತ್ ಮಗ್ಗ ಇಲಾಖೆಯಿಂದ ಪಡೆಯಬೇಕಾದ ಮೊತ್ತಕ್ಕೆ ಸಂಬಂಧಿಸಿದಂತೆ, ರೂ 9.38 ಕೋಟಿಗಳ ಪುಸ್ತಕ ಬಾಕಿಯ ಪ್ರತಿಯಾಗಿ ಕಂಪನಿಯು ಸಲ್ಲಿಸಿದ ಕ್ಲೇಮ್ ರೂ 6.73 ಕೋಟಿ ಇರುವುದನ್ನು ಗಮನಿಸಲಾಗಿದೆ. ಕಂಪನಿಯು ಕೊರತೆಗೆ ಯಾವುದೇ ಅವಕಾಶವನ್ನು ಮಾಡಿರುವುದಿಲ್ಲ ಅಥವಾ ಸಮಂಜಸ ಸಮನ್ವಯವನ್ನು ಅಳವಡಿಸಿಕೊಳ್ಳಬೇಕು.	ಸಮನ್ವಯ ಕಾರ್ಯವನ್ನು ಕೈಗೊಳ್ಳಲು ಲೆಕ್ಕಘಟಕಗಳೊಂದಿಗೆ ಸಂವಹನ ಮಾಡಲಾಗುವುದು.
	ನಿಯಂತ್ರಣ ಆಸ್ತಿ – ಕೆಇಆರ್‌ಸಿ:	
24	2020–21 ರ ಕಂದಾಯದಿಂದ ಉಂಟಾಗುವ ದರಪಟ್ಟಿ ವ್ಯತ್ಯಾಸಕ್ಕೆ ಸಂಬಂಧಿಸಿದ ರೂ.1286.46 ಕೋಟಿ ಮೊತ್ತವನ್ನು ಕಂಪನಿಯು ಮರಳಿ ಲೆಕ್ಕೀಕರಿಸಿರುವುದನ್ನು ಗಮನಿಸಲಾಗಿದೆ. ಈ ಮೊತ್ತವು ಖರೀಧಿ ವೆಚ್ಚಗಳು ಮತ್ತು 2018–19ರ ಹಣಕಾಸು ವರ್ಷಕ್ಕೆ ಸಂಬಂಧಿಸಿದ ಅನುಮೋದಿತ ಖರೀಧಿ ವೆಚ್ಚಗಳ ಕೊರತೆಗೆ ಸೇರಿದೆ. ಕಂಪನಿಯು ಕಂದಾಯದ ವಿಷಯದಲ್ಲಿ ಪ್ರಕ್ಷೇಪಗಳು ಮತ್ತು ವಾಸ್ತವಿಕತೆಗಳ ಪ್ರಕಾರ ಸಾಧಿಸಲಾಗಿದೆಯೇ ಎಂಬ ಹೋಲಿಕೆಯ ತತ್ವದ ಅಂಶವನ್ನು ಪರಿಗಣಿಸಿರುವುದಿಲ್ಲ. ಕಂಪನಿಯು ತನ್ನ ಪ್ರಸಕ್ತ ಆರ್ಥಿಕ ವರ್ಷ 2020–21 ರಲ್ಲಿ ಪ್ರವಾಹ ಮತ್ತು ಕೋವಿಡ್ ನಂತಹ ಅನಿವಾರ್ಯ ಪರಿಸ್ಥಿತಿಗಳಿಂದಾಗಿ ಯೂನಿಟ್‌ಗಳ ವಿಷಯದಲ್ಲಿ ತನ್ನ ಮಾರಾಟವನ್ನು ಸಾಧಿಸಿರುವುದಿಲ್ಲ.	ರೂ. 2020–21 ನೇ ಹಣಕಾಸು ವರ್ಷದಲ್ಲಿ 1286.46 ಕೋಟಿಯನ್ನು ಹಿಂತೆಗೆದುಕೊಂಡಿರುವುದು ಸರಿಯಾಗಿದೆ, ನಾವು ಈಗಾಗಲೇ ಹುವಿಸಕಂನಿಯ ಹಿಂದಿನ ಶಾಸನಬದ್ಧ ಲೆಕ್ಕ ಪರಿಶೋಧಕರಾದ ಪಿ / ಜಿ. ಭಗವತ್ ಅವರಿಂದ ಅಭಿಪ್ರಾಯವನ್ನು ಪಡೆದುಕೊಂಡಿದ್ದೇವೆ.
	ತಪಸೀಲು:	
25	ಲೆಕ್ಕೀಕರಣ ನೀತಿಯ ಪ್ರಕಾರ (ಹಣಕಾಸು ತಃಖ್ತೆಗಳ ಭಾಗವನ್ನು ರೂಪಿಸುವ ಟಿಪ್ಪಣಿಗಳಲ್ಲಿ ಟಿಪ್ಪಣಿ ಸಂ.2.3), ಕಂಪನಿಯು ನಿರ್ಧರಿಸಿದಂತೆ,	ವಿದ್ಯುಚ್ಛಕ್ತಿಯ ಉತ್ಪಾದನೆ ಹಾಗೂ ಬಳಕೆಯು ಏಕಕಾಲಕ್ಕೆ ಹಾಗೂ ತತ್‌ಕ್ಷಣದಲ್ಲಿ ಆಗಬೇಕಾಗುತ್ತದೆ. ಆದ್ದರಿಂದ ಮುಕ್ತಾಯಗೊಂಡ ಮತ್ತು ಪ್ರಗತಿಯಲ್ಲಿರುವ ಕಾಮಗಾರಿಗಳ

ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು		ವ್ಯವಸ್ಥಾಪಕ ಮಂಡಳಿಯ ಉತ್ತರ
	ತಪಶೀಲುಗಳ ಮೌಲ್ಯಮಾಪನವನ್ನು ಕಾಲಕಾಲಕ್ಕೆ ಹಿಂದಿನ ಖರೀದಿ ಬೆಲೆ ಹಾಗೂ ಪ್ರಸ್ತುತ ಮಾರುಕಟ್ಟೆ ದರಗಳ ಆಧಾರದ ಮೇಲೆ, ಪ್ರಮಾಣಿತ ದರವನ್ನು ಅನುಸರಿಸುತ್ತಿದ್ದು, ಇದು ಲೆಕ್ಕಪತ್ರ ಮಾನದಂಡ 2 ಕ್ಕೆ ಅನುಗುಣವಾಗಿರುವುದಿಲ್ಲ. ತಪಶೀಲುಗಳನ್ನು ಅವುಗಳ ವೆಚ್ಚ ಮತ್ತು ನಿವ್ವಳ ಗ್ರಹಿಸಬಹುದಾದ ಮೌಲ್ಯಗಳಲ್ಲಿ ಕನಿಷ್ಟಕ್ಕೆ ಮೌಲ್ಯಮಾಪನ ಮಾಡಲು ಲೆಕ್ಕಪತ್ರಗಳ ಮಾನದಂಡವು ಸೂಚಿಸುತ್ತದೆ. ವಿವರಗಳು ಅವಶ್ಯವಿರುವುದರಿಂದ, ತಪಶೀಲುಗಳ ಬೆಲೆ ಅಥವಾ ನಿವ್ವಳ ಗ್ರಹಿಸಬಹುದಾದ ಮೌಲ್ಯ ಹಾಗೂ ಕಂಪನಿಯು ಅಳವಡಿಸಿಕೊಂಡಿರುವ ಪ್ರಮಾಣಿತ ದರಗಳ ಕನಿಷ್ಠ ದರದ ಮಧ್ಯದ ವ್ಯತ್ಯಾಸವನ್ನು ಹಾಗೂ ಅದರಿಂದ ಕಂಪನಿಯ ಹಣಕಾಸಿನ ಕಾರ್ಯಕ್ಷಮತೆ ಮತ್ತು ಸ್ಥಿತಿಗತಿಗಳ ಮೇಲೆ ಆಗುವ ಪರಿಣಾಮಗಳನ್ನು ನಮಗೆ ಪ್ರಮಾಣೀಕರಿಸಲು ಸಾಧ್ಯವಾಗಿರುವುದಿಲ್ಲ.	ಯಾವುದೇ ತಪಶೀಲು ಪಟ್ಟಿ ಇರುವುದಿಲ್ಲ. ಸಾಮಾನ್ಯವಾಗಿ ಸಾಮಗ್ರಿಗಳ ತಪಶೀಲು ಪಟ್ಟಿಯು ಸಾಮಗ್ರಿಗಳು, ಉಗ್ರಾಣ ಸರಕುಗಳು ಹಾಗೂ ಸರಬರಾಜು ಸಾಮಗ್ರಿಗಳನ್ನು ಒಳಗೊಂಡಿರುತ್ತವೆ. ಸಾಮಗ್ರಿಗಳ ತಪಶೀಲು ಪಟ್ಟಿಯನ್ನು ಶಿಷ್ಟದರಗಳಂತೆ ಮೌಲೀಕರಿಸಿದ್ದು ಇವುಗಳನ್ನು ಹಿಂದಿನ ಖರೀದಿ ದರಗಳು ಹಾಗೂ ಪ್ರಚಲಿತ ಮಾರುಕಟ್ಟೆ ದರಗಳನ್ನು ಆಧರಿಸಿ ಕಾಲಕಾಲಕ್ಕೆ ನಿಗದಿಪಡಿಸಲಾಗಿರುತ್ತದೆ. ಶಿಷ್ಟದರಗಳ ವಾಸ್ತವಿಕ ದರಗಳನ್ನು ಅಜಮಾಸಾಗಿ ಪ್ರತಿನಿಧಿಸುತ್ತವೆ. ಆದುದರಿಂದ ಲೆಕ್ಕಪತ್ರಗಳ ಮಾನದಂಡ 2 ರ ಅನಾನುಸರಣೆಯಿಂದಾಗಿ ಯಾವುದೇ ಮಹತ್ವದ ಆರ್ಥಿಕ ಪರಿಣಾಮಗಳು ಬೀರುವದಿಲ್ಲ.
26	ತಪಶೀಲು ಶಿಲ್ಕುಗಳು ಬಂಡವಾಳ ಸ್ವತ್ತುಗಳನ್ನು ಒಳಗೊಂಡಿರುತ್ತದೆ, ಅದು ಲೆಕ್ಕ ಪುಸ್ತಕಗಳಲ್ಲಿ ಪ್ರತ್ಯೇಕಿಸಲ್ಪಟ್ಟಿಲ್ಲ ಮತ್ತು ಆದ್ದರಿಂದ ಹಣಕಾಸಿನ ಹೇಳಿಕೆಗಳ ಮೇಲಿನ ಪರಿಣಾಮವನ್ನು ಪ್ರಮಾಣೀಕರಿಸಲಾಗುವುದಿಲ್ಲ.	ತಪಶೀಲು ಶಿಲ್ಕುಗಳು ಬಂಡವಾಳ ಹಾಗೂ ದುರಸ್ತಿ ಮತ್ತು ನಿರ್ವಹಣಾ ಕಾಮಗಾರಿ ಸಾಮಗ್ರಿಗಳು ಎರಡನ್ನೂ ಒಳಗೊಂಡಿರುತ್ತದೆ, ಸಾಮಗ್ರಿಗಳನ್ನು ನೀಡುವಾಗ ಅದನ್ನು ಬಂಡವಾಳಕ್ಕೆ ಸಂಬಂಧಿಸಿದ್ದು ಹಾಗೂ ದುರಸ್ತಿ ಮತ್ತು ನಿರ್ವಹಣಾ ಕಾಮಗಾರಿಗೆ ಸಂಬಂಧಿಸಿದ್ದು ಎಂದು ವಿಭಜಿಸಲಾಗುತ್ತದೆ.
27	ಕಂಪನಿಯು ನಿಭಾಯಿಸಿದ ತಪಶೀಲು ದಾಸ್ತಾನುಗಳಮೇಲೆ ವಿಮೆ ಮಾಡಲಾಗಿಲ್ಲ ಮತ್ತು ಯಾವುದೇ ನಷ್ಟದ ಅವಕಾಶವನ್ನು ಖಾತೆಗಳ ಪುಸ್ತಕಗಳಲ್ಲಿ ಮಾಡಲಾಗಿಲ್ಲ.	ಆರ್ಥಿಕ ಕಾರ್ಯಸಾಧ್ಯತೆಯನ್ನು ಪರಿಗಣಿಸಿ ಕ್ರಮವನ್ನು ಕೈಗೊಳ್ಳಲಾಗುವುದು.
	ವ್ಯಾಪಾರ ಸ್ವೀಕೃತಿ ಬಾಕಿಗಳು	
28	ಕರ್ನಾಟಕ ಸರ್ಕಾರದಿಂದ ಪಡೆಯಬಹುದಾದ ಒಟ್ಟು ಸಹಾಯಧನವು ದೃಢೀಕರಣ ಮತ್ತು ಸಮನ್ವಯಗಳಿಗೆ ಒಳಪಟ್ಟಿರುತ್ತದೆ.	ಕರ್ನಾಟಕ ಸರ್ಕಾರದಿಂದ ಪಡೆಯಬಹುದಾದ ಸಹಾಯಧನವನ್ನು ಸಮನ್ವಯಗೊಳಿಸಲಾಗಿದೆ.
	ಇತರೆ ಪ್ರಚಲಿತ ಆಸ್ತಿಗಳು:	
29	ಕಂಪನಿಯು ತನ್ನ ನಗದು ಹಿಡುವಳಿಗಾಗಿ ಯಾವುದೇ ವಿಮೆಯನ್ನು ಹೊಂದಿಲ್ಲ ಮತ್ತು ಅಂತಹ ನಗದು ಹಿಡುವಳಿಗಳ ಮೇಲಿನ	ಆರ್ಥಿಕ ಕಾರ್ಯಸಾಧ್ಯತೆಯನ್ನು ಪರಿಗಣಿಸಿ ಕ್ರಮವನ್ನು ಕೈಗೊಳ್ಳಲಾಗುವುದು.

ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು		ವ್ಯವಸ್ಥಾಪಕ ಮಂಡಳಿಯ ಉತ್ತರ
	ಯಾವುದೇ ನಷ್ಟಕ್ಕಾಗಿ ಅವಕಾಶವನ್ನು ಒದಗಿಸಿಲ್ಲ.	
30	ಸಂಗ್ರಹಣೆ ಬ್ಯಾಂಕ್ ಖಾತೆ ಹೊಂದಾಣಿಕೆಗಳನ್ನು ನಿಗದಿತ ಸ್ವರೂಪದ ಪ್ರಕಾರ ಸಿದ್ಧಪಡಿಸಲಾಗಿಲ್ಲ ಮತ್ತು ಬ್ಯಾಂಕ್‌ಗಳಿಂದ ಶಿಲ್ಕಿನ ದೃಢೀಕರಣವನ್ನು ಕಂಪನಿಯು ಪಡೆಯುವುದಿಲ್ಲ. ಈ ಚಾಲ್ತಿ ಖಾತೆಗಳಲ್ಲಿನ ಶಿಲ್ಕು ದೃಢೀಕರಣಕ್ಕೆ ಒಳಪಟ್ಟಿರುತ್ತದೆ.	ಬ್ಯಾಂಕ್ ಸಮನ್ವಯ ಹೇಳಿಕೆಗಳನ್ನು ಉಪ–ವಿಭಾಗ/ವಿಭಾಗ ಹಂತಗಳಲ್ಲಿ ನಿಗದಿತ ನಮೂನೆಗಳಲ್ಲಿ ಸಿದ್ಧಪಡಿಸಲಾಗುತ್ತದೆ ಮತ್ತು ಆಂತರಿಕ ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲಾಗುವುದು ಮತ್ತು ಪಾಸ್ ಶೀಟ್‌ಗಳನ್ನು ಪಡೆಯುವ ಮೂಲಕ ಶಿಲ್ಕುಗಳ ದೃಢೀಕರಣವನ್ನು ಪಡೆಯಲಾಗುತ್ತದೆ.
31	ಹೆಸ್ಕಾಂನಿಂದ ಇತ್ಯರ್ಥಪಡಿಸಲಾದ ಸೇವಾ ತೆರಿಗೆ ಕ್ಲೇಮ್ ರೂ.7.02 ಕೋಟಿಯು ಲೆಕ್ಕ ಶೀರ್ಷಿಕೆ 28.852 ರ ಅಡಿಯಲ್ಲಿ ಬಾಕಿ ಉಳಿದಿದ್ದು, ಗ್ರಾಹಕರು/ಗುತ್ತಿಗೆದಾರರಿಂದ ವಸೂಲಿ ಮಾಡಬೇಕಾಗಿರುತ್ತದೆ. ಅದು 2018 ರಿಂದ ಬಾಕಿ ಉಳಿದಿದೆ. ವಸೂಲಾತಿ ದರವು ತುಂಬಾ ಕಡಿಮೆಯಿರುವುದರಿಂದ ಮತ್ತು ಸ್ವೀಕೃತಿಯ ಅನುಸರಣೆಯು ಪರಿಣಾಮಕಾರಿಯಾಗಿ ಜಾರಿಯಲ್ಲಿಲ್ಲದ ಕಾರಣ ಕಂಪನಿಯು ಸದರಿ ಮೊತ್ತವನ್ನು ಹೊಡೆದು ಹಾಕಲು ಅವಕಾಶವನ್ನು ಕಲ್ಪಿಸಬೇಕು.	ಗ್ರಾಹಕರಿಂದ / ಗುತ್ತಿಗೆದಾರರಿಂದ ಸೇವಾ ತೆರಿಗೆ ವಸೂಲಿ ಮಾಡಲು ಈಗಾಗಲೇ ಎಲ್ಲಾ ವಿಭಾಗಗಳಿಗೆ ಅಗತ್ಯ ನಿರ್ದೇಶನ ನೀಡಲಾಗಿದ್ದು, ಅದರ ಪ್ರಕಾರ ವಿಭಾಗಗಳು ವಸೂಲಿ ಕ್ರಮವನ್ನು ಪ್ರಕ್ರಿಯೆಗೊಳಿಸುತ್ತಿವೆ ಮತ್ತು 2020–21ನೇ ಹಣಕಾಸು ವರ್ಷದಲ್ಲಿ ರೂ.1.38 ಕೋಟಿ ಮರುಪಡೆಯಲಾಗಿದೆ.
32	ಕಂಪನಿಯ ಅಂತರ ಘಟಕ ಖಾತೆಗಳ ವಿಭಿನ್ನ ಖಾತೆಗಳಲ್ಲಿ ಪ್ರತ್ಯೇಕವಾಗಿ ಬಾಕಿ ಉಳಿದಿರುವ ಬೃಹತ್ ಮೊತ್ತವನ್ನು ತೋರಿಸುತ್ತವೆ, ಇದು ಇತರ ಲೆಕ್ಕ ಶೀರ್ಷಿಕೆಗಳ ಶಿಲ್ಕುಗಳ ಮೇಲೆ ಲಾಭ ಮತ್ತು ನಷ್ಟದ ಖಾತೆ ಅಥವಾ ವ್ಯವಹಾರಗಳ ಹೇಳಿಕೆಯಲ್ಲಿ ಅನೇಕ ಪರಿಣಾಮ ಬೀರುತ್ತದೆ. ಕೆಳಗಿನ ಲೆಕ್ಕ ಶೀರ್ಷಿಕೆಗಳಲ್ಲಿ ದೀರ್ಘಕಾಲ ಬಾಕಿ ಉಳಿದಿರುವ ನಮೂದುಗಳನ್ನು ಗುರುತಿಸಬೇಕು ಮತ್ತು ಖಾತೆಗಳ ಪುಸ್ತಕಗಳಲ್ಲಿ ಅಗತ್ಯ ಪರಿಣಾಮಗಳನ್ನು ರವಾನಿಸಲು ಸಮನ್ವಯಗೊಳಿಸಬೇಕು. "ಇತರೆ ಪ್ರಚಲಿತ ಆಸ್ತಿಗಳು" ರಡಿಯಲ್ಲಿ ಸಮನ್ವಯಗೊಳಿಸಿರದ ಅಂತರ ಘಟಕ ಲೆಕ್ಕಖಾತೆಯ ರೂ.18.51 ಕೋಟಿ (ನಿವ್ವಳ ಕ್ರೆಡಿಟ್) ತೋರಿಸಲಾಗಿದೆ. ಅಂತರ ಘಟಕ ಲೆಕ್ಕಖಾತೆಗಳ ಸಮನ್ವಯಗೊಳಿಸದೇ ಇರುವುದರಿಂದ ಹಣಕಾಸಿನ ಹೇಳಿಕೆಗಳಲ್ಲಿನ ಹೊಂದಾಣಿಕೆಯ ಪರಿಣಾಮದ ಬಗ್ಗೆ ಸಧ್ಯಕ್ಕೆ ಖಚಿತಪಡಿಸಲಾಗುವುದಿಲ್ಲ/ ಪ್ರಮಾಣೀಕರಿಸಲಾಗುವುದಿಲ್ಲ. ಇದು ತಪಸೀಲು, ನಗದು, ಬ್ಯಾಂಕ್ ಶಿಲ್ಕು, ಸ್ಥಿರ ಆಸ್ತಿಗಳು ಮತ್ತು ಇತರೆ ಹೊಣೆಗಾರಿಕೆಗಳ ಕಡಿಮೆ ಅಥವಾ ಹೆಚ್ಚಿನ	ಹೆಸ್ಕಾಂನ ಲೆಕ್ಕ ಘಟಕಗಳಾದ್ಯಂತ ಅಂತರ ಘಟಕ ವಹಿವಾಟಿನ ಅಡಿಯಲ್ಲಿ ಡೆಬಿಟ್ ಮತ್ತು ಕ್ರೆಡಿಟ್ ಎಟಿಗಳನ್ನು ಕಳುಹಿಸುವುದು ಮತ್ತು ಸ್ವೀಕಾರವನ್ನು ಸ್ವೀಕರಿಸಿದ ನಂತರ ತೆರವುಗೊಳಿಸುವುದು ನಿರಂತರ ಪ್ರಕ್ರಿಯೆ ಮತ್ತು ಈ ವಹಿವಾಟುಗಳನ್ನು ಮಾಸಿಕ ಆಧಾರದ ಮೇಲೆ ನಿರಂತರವಾಗಿ ಸೇರಿಸಲಾಗುತ್ತದೆ ಮತ್ತು ಕ್ರಮಬದ್ಧಗೊಳಿಸಲಾಗುತ್ತದೆ.

ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು		ವ್ಯವಸ್ಥಾಪಕ ಮಂಡಳಿಯ ಉತ್ತರ
	ಹೇಳಿಕೆಗಳಿಗೆ ಕಾರಣವಾಗಬಹುದು ಇದು ಅಂತರ ಘಟಕ ಲೆಕ್ಕಗಳಲ್ಲಿ ದೀರ್ಘಕಾಲದಿಂದ ಬಾಕಿ ಇರುವ ಸಮನ್ವಯಗೊಳಿಸದ ಅಂಶಗಳಿಂದಾಗಿ ಖಚಿತಪಡಿಸಲಾಗುವುದಿಲ್ಲ.	
33	ಕಂಪನಿಯು ಹಲವಾರು ನಿಗಮ ಸಾಮಾಜಿಕ ಹೊಣೆಗಾರಿಕೆ ಕಾರ್ಯಗಳನ್ನು ಗುತ್ತಿಗೆ ಒಪ್ಪಂದಗಳ ಮೂಲಕ ಕೈಗೊಳ್ಳುತ್ತದೆ. ಗಂಗಾ ಕಲ್ಯಾಣ ಯೋಜನೆಯಡಿ ಹಮ್ಮಿಕೊಂಡ ಈ ಕಾರ್ಯಗಳ ವೆಚ್ಚವನ್ನು ಸರ್ಕಾರಿ ಇಲಾಖೆಗಳಾದ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಕರ್ನಾಟಕ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮ, ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಗಳಿಂದ ಮರುಪಾವತಿ ಮಾಡಲಾಗುವುದು. ಲೆಕ್ಕಪುಸ್ತಕಗಳ ಸ್ವೀಕೃತಿಯಲ್ಲಿ ತೋರಿಸಿದ ರೂ. 142.73 ಕೋಟಿಗೆ ಪ್ರತಿಯಾಗಿ ಯೋಜನಾ ನಿರ್ವಹಣಾ ಶಾಖೆಯ ಪ್ರಕಾರ ಬಾಕಿ ಇರುವ ಕ್ಲೇಮ್ ರೂ.39.60 ಕೋಟಿ ಇರುವುದನ್ನು ಗಮನಿಸಲಾಗಿದೆ. ಸ್ವೀಕೃತಿಯಲ್ಲಿ ರೂ.103.13 ಕೋಟಿಯಷ್ಟರವರೆಗೆ ಹೆಚ್ಚಿನ ಹೇಳಿಕೆ ಇದ್ದು ಮತ್ತು ಸ್ಥಿರ ಆಸ್ತಿಗಳು/ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು ಅಥವಾ ಖರ್ಚುಗಳಲ್ಲಿ ಕಡಿಮೆ ಹೇಳಿಕೆ ಇರುತ್ತದೆ.	ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸೆಲ್‌ನಿಂದ ಬಾಕಿ ಉಳಿದಿರುವ ಕ್ಲೇಮ್‌ಗಳು ಮತ್ತು ಖಾತೆಗಳ ಪುಸ್ತಕಗಳ ಪ್ರಕಾರ ಮುಂದಿನ ವರ್ಷಗಳಲ್ಲಿ ಸಮನ್ವಯಗೊಳಿಸಲಾಗುತ್ತದೆ.
	ಶಾಸನಬದ್ಧ ಅನುಸರಣೆ:	
34	ಕಂಪನಿಯು 2017–18, 2018–19 ಮತ್ತು 2019–20 ನೇ ಸಾಲಿಗಾಗಿ ಜಿ.ಎಸ್.ಟಿ. ಇಲಾಖೆ ನೀಡಿದ ಸಮನ್ಸ್‌ಗೆ ಪ್ರತಿಕ್ರಿಯೆಯಾಗಿ ಮಾಡಿದ ಲೆಕ್ಕಾಚಾರದ ಪ್ರಕಾರ ಬಡ್ಡಿ ಮತ್ತು ದಂಡದಲ್ಲಿ ಜಿ.ಎಸ್.ಟಿ. ಹೊಣೆಗಾರಿಕೆಗಾಗಿ ಬಡ್ಡಿ ಮತ್ತು ದಂಡದ ಸಹಿತ ರೂ.5.83 ಕೋಟಿ ಮೊತ್ತದ ಅವಕಾಶವನ್ನು ಒದಗಿಸಬೇಕಿದೆ. ಮುಂದುವರೆದು ಕಂಪನಿಯು ಬಡ್ಡಿ ಮತ್ತು ದಂಡವನ್ನು ಮನ್ನಾ ಮಾಡಲು ಪ್ರಾತಿನಿದ್ಯವನ್ನು ಸಲ್ಲಿಸಿದೆ.	ಚಾರ್ಟರ್ಡ್ ಅಕೌಂಟೆಂಟ್‌ಗಳ ಅಭಿಪ್ರಾಯದ ಪ್ರಕಾರ ದಂಡ ಮತ್ತು ದ್ರವೀಕೃತ ಹಾನಿಗಳ ಮೇಲೆ ಜಿಎಸ್‌ಟಿಯ ಯಾವುದೇ ಹೊಣೆಗಾರಿಕೆ ಇರುವುದಿಲ್ಲ ಮತ್ತು ಇದು ಈಗಾಗಲೇ ಜಿಎಸ್‌ಟಿ ಇಲಾಖೆಗೆ ಬಡ್ಡಿ ಮತ್ತು ದಂಡದ ಮೊತ್ತವನ್ನು ಪತ್ರ ಸಂಖ್ಯೆ.19136 ದಿನಾಂಕ: 30–11–2018 ರ ಮೂಲಕ ಮನ್ನಾ ಮಾಡಲು ವಿನಂತಿಸಲಾಗಿದೆ. ದಂಡ ಮತ್ತು ದ್ರವೀಕೃತ ಹಾನಿಯ ಮೇಲಿನ ಜಿಎಸ್‌ಟಿ ಬೇಡಿಕೆಯ ವಿರುದ್ಧ ಅರ್ಜಿ ಸಲ್ಲಿಸಲು ಆಡಳಿತ ಮಂಡಳಿ ನಿರ್ಧರಿಸಿದೆ. ಆದ್ದರಿಂದ, ಬಡ್ಡಿ ಮತ್ತು ದಂಡದ ಮೊತ್ತಕ್ಕೆ ಯಾವುದೇ ಅವಕಾಶವನ್ನು ರಚಿಸುವ ಅಗತ್ಯವಿಲ್ಲ.
	ಆದಾಯ:	
35	ತಂತ್ರಾಂಶದ ಪ್ರಕಾರ ಮಾರಾಟ ಹಾಗೂ ಲೆಕ್ಕಪುಸ್ತಕಗಳ ಪ್ರಕಾರ ಮಾರಾಟದಲ್ಲಿ ವ್ಯತ್ಯಾಸವನ್ನು ಗಮನಿಸಲಾಗಿದೆ. ಕಂಪನಿಯು ಲೆಕ್ಕಪುಸ್ತಕಗಳ ಪ್ರಕಾರ ಮತ್ತು ಬಿಲ್ಲುಗಳನ್ನು ತಯಾರಿಸುವ ತಂತ್ರಾಂಶದ ಪ್ರಕಾರ ಬೇಡಿಕೆಗಳಿಗೆ	ಪ್ರತಿ ವಿಭಾಗ ಕಚೇರಿಯಿಂದ ಹೆಸ್ಕಾಂ ನಿಗಮ ಕಾರ್ಯಾಲಯಕ್ಕೆ ಸಲ್ಲಿಸಿದ ಡಿಸಿಬಿ ನಿಜವಾಗಿದ್ದು ಮತ್ತು ಸರಿಯಾಗಿದೆ. ಆರ್‌ಎಪಿಡಿಆರ್‌ಪಿ ವ್ಯವಸ್ಥೆಯಲ್ಲಿ ಸಿಸಿಬಿಯಲ್ಲಿ ಉತ್ಪತ್ತಿಯಾದ ಬಿಲ್‌ಗಳ ಆಧಾರದಲ್ಲಿ ಡಿಸಿಬಿಯು ಉತ್ಪತ್ತಿಯಾಗುತ್ತದೆ ಆದರೆ ಸಿಸಿಬಿಯನ್ನು

ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು		ವ್ಯವಸ್ಥಾಪಕ ಮಂಡಳಿಯ ಉತ್ತರ
	ಸರಿಹೊಂದುವಂತೆ ಸೂಕ್ತ ಸಮನ್ವಯವನ್ನು ಕೈಗೊಳ್ಳಬೇಕಾಗಿದೆ. ಕೆಲವೊಂದು ವೈಶಿಷ್ಟ್ಯಗಳಾದ ಎಫ್‌ಎಸಿ, ಎಲ್‌ಟಿ–7 ಮತ್ತು ಕೆಲವೊಂದು ಹೆಚ್‌ಟಿ ಸ್ಥಾವರಗಳು ಸಂಪೂರ್ಣವಾಗಿ ತಂತ್ರಾಂಶದಲ್ಲಿ ಬಿಲ್ ಮಾಡಲು ಆಗದೇ ಇರುವುದರಿಂದ ತಂತ್ರಾಂಶದಲ್ಲಿ ಮಾನವ ಹಸ್ತಕ್ಷೇಪವನ್ನು ಸಹ ಗಮನಿಸಲಾಗಿದೆ. ಮಾರಾಟದ ಕಡಿಮೆ ಹೇಳಿಕೆ ಅಥವಾ ಹೆಚ್ಚಿನ ಹೇಳಿಕೆಯ ಫಲಿತಾಂಶದ ಅಂಶವನ್ನು ನಿರ್ಧರಿಸಲಾಗುವುದಿಲ್ಲ ಏಕೆಂದರೆ ಅದು ಗುರುತಿಸಲಾಗುವುದಿಲ್ಲ.	ಹೊರತುಪಡಿಸಿ ಕೈಯಾರೆ ಬಿಲ್‌ಗಳನ್ನು ಮಾಡುವುದಿಲ್ಲ ಉದಾ: ಕೆಲವು ಹೆಚ್‌ಟಿ ಬಿಲ್‌ಗಳು (ಸೌರವಿದ್ಯುತ್, ವ್ಹೀಲಿಂಗ್ ಮತ್ತು ಬ್ಯಾಂಕಿಂಗ್ ಸ್ಥಾಪನಗಳು) ಎಲ್‌ಟಿ–7 ಬಿಲ್‌ಗಳು ಮತ್ತು ನೀರು ಸರಬರಾಜು ಮತ್ತು ಬೀದಿದೀಪ ಮತ್ತು ನೀರಾವರಿ ಪಂಪ್‌ಸೆಟ್‌ಗಳು. ಮೇಲ್ಛಾವಣಿ ಸೌರವಿದ್ಯುತ್ ಗೆ ಸಂಬಂಧಿಸಿದ ಬಿಲ್ಲುಗಳನ್ನು ಸಿಸಿಬಿಯಲ್ಲಿ ಇನ್ನೂ ತಯಾರಿಸುತ್ತಿಲ್ಲ. ಈ ವ್ಯವಸ್ಥೆ/ಸಿಸಿಬಿಯಲ್ಲಿ ಬಿಲ್ಲಿಂಗ್ ಪ್ರಕ್ರಿಯೆಯನ್ನು ಇನ್ನೂ ನಿಯೋಜಿಸಿರುವುದಿಲ್ಲ. (ದ್ವಿಮುಖ ಮಾಪಕ ಅಳವಡಿಕೆ). ಪ್ರತಿ ಎಸ್‌ಡಿಓ ರವರು ಎಲ್‌ಟಿ ಬಿಲ್ಲಿಂಗ್‌ನ್ನು ಕೈಯಾರೆ ನಡೆಸುತ್ತಿದ್ದಾರೆ. ಕೆಲವು ಎಸ್‌ಡಿಓ ರವರು ಸದರಿ ವ್ಯವಸ್ಥೆಯಲ್ಲಿ ಮತ್ತು ಇತರು ಕೈಯಾರೆ ಮಾಡುತ್ತಿದ್ದಾರೆ. ಬೆಳಗಾವಿ ಮತ್ತು ಹುಬ್ಬಳ್ಳಿ ನಗರಗಳಲ್ಲಿ ಎಲ್‌ಟಿ–7 ಗೆ ಮುಂಚಿತವಾಗಿ ಪಾವತಿಸಿದ ಮಾಪಕಗಳನ್ನು ಸ್ಥಾಪಿಸಲಾಗಿದೆ. ಸಿಸಿಬಿ/ವ್ಯವಸ್ಥೆಯಲ್ಲಿ ಮುಂಚಿತವಾಗಿ ಪಾವತಿಸಿದ ಮಾಪಕ ಬಿಲ್ಲಿಂಗ್ ಪರಿಕಲ್ಪನೆಯನ್ನು ನಿಯೋಜಿಸಿರುವುದಿಲ್ಲ. ಈ ಕಾರ್ಯ ಪ್ರಗತಿಯಲ್ಲಿದೆ. ಈ ಮೇಲಿನ ಕಾರಣಗಳಿಂದಾಗಿ, ಉಪ–ವಿಭಾಗಗಳು ವ್ಯವಸ್ಥೆಯಲ್ಲಿ ಉತ್ಪತ್ತಿಯಾದ ಡಿಸಿಬಿಯನ್ನು ಪಡೆದು ಕೈಯಾರೆ ತಯಾರಿಸಿದ ಡಿಸಿಬಿಯನ್ನು ಸೇರಿಸಿ ವಿಭಾಗಗಳಿಗೆ ಸಲ್ಲಿಸುವಾಗ ವ್ಯತ್ಯಾಸವು ಉಂಟಾಗಬಹುದು.
36	ಆರ್ಥಿಕ ವರ್ಷ 2019–20 ಮತ್ತು 2020–21 ನೇ ಸಾಲಿಗಾಗಿ ಹುಕ್ಕೇರಿ ಗ್ರಾಮೀಣ ವಿದ್ಯುದೀಕರಣ ಸಹಕಾರ ಸಂಘ (ಹೆಚ್‌ಆರ್‌ಇಸಿಎಸ್) ದ ಭೇದಾತ್ಮಕ ವಿದ್ಯುತ್ ಖರೀದಿ ಬಿಲ್ಲಿಂಗ್‌ಗೆ ಅವಕಾಶವನ್ನು ಮಾಡಿರುವುದಿಲ್ಲ. ಅನ್ವಯಿಸುವ ದರಪಟ್ಟಿಗಿಂತ ಕಡಿಮೆ ದರದಲ್ಲಿ ಇನ್‌ವಾಯಿಸ್‌ಗಳನ್ನು ತಯಾರಿಸಲಾಗಿದೆ. ಕೆಇಆರ್‌ಸಿಯು ವಿಶೇಷವಾಗಿ ಹೆಚ್‌ಆರ್‌ಇಸಿಎಸ್ ಗಾಗಿಯೇ ದರಪಟ್ಟಿಯನ್ನು ನಿರ್ಧರಿಸಿದಾಗ ವ್ಯತ್ಯಾಸದ ಮೊತ್ತಕ್ಕೆ ಬೇಡಿಕೆಯನ್ನು ಮಾಡಲಾಗುತ್ತದೆ. 2019–20ನೇ ಸಾಲಿಗೆ ಕಂಪನಿಯು 31ನೇ ಮಾರ್ಚ್ 2021 ರಂತೆ ಖಾತೆಗಳ ಪುಸ್ತಕಗಳಲ್ಲಿ ಲೆಕ್ಕೀಕರಿಸದೇ ಇರುವ 2.33 ಕೋಟಿ ರೂ.ಗಳಷ್ಟು ಹೆಚ್ಚುವರಿ ಬಾಕಿ ಇರುವ ಭೇದಾತ್ಮಕ ಬ್ಯಾಲೆನ್ಸ್ ಅನ್ನು ಹೊಂದಿದೆ.	ಹುಕ್ಕೇರಿ ಗ್ರಾಮೀಣ ವಿದ್ಯುದೀಕರಣ ಸಹಕಾರ ಸಂಘ (ಹೆಚ್‌ಆರ್‌ಇಸಿಎಸ್) ದ ಗೌರವಾನ್ವಿತ ಕೆ.ಇ.ಆರ್.ಸಿ. ರವರ ದರಪಟ್ಟಿ ಆದೇಶ ದಿನಾಂಕ 09.06.2021 ರ ಪ್ರಕಾರ 2019–20 ನೇ ಸಾಲಿನ ಭೇದಾತ್ಮಕ ಮೊತ್ತವನ್ನು ಜೂನ್ 2021 ರಲ್ಲಿ ಲೆಕ್ಕೀಕರಿಸಲಾಗಿದೆ.
	ಇತರೆ:	
37	ಈ ವರದಿಯಲ್ಲಿ ಒಳಗೊಂಡಿರುವ ವಿವಿಧ ಅಂಶಗಳ ಬಗ್ಗೆ ಕಂಪನಿಯಲ್ಲಿ ಅಸ್ತಿತ್ವದಲ್ಲಿರುವ ಆಂತರಿಕ ತಪಾಸಣೆ ಮತ್ತು ಆಂತರಿಕ ನಿಯಂತ್ರಣಾ ವ್ಯವಸ್ಥೆಯನ್ನು ಸಂಪೂರ್ಣವಾಗಿ	ಮುಂಬರುವ ವರ್ಷದಲ್ಲಿ ಸಿಬ್ಬಂದಿಗಳ ಅಗತ್ಯಕ್ಕೆ ಅನುಗುಣವಾಗಿ ಆಂತರಿಕ ಲೆಕ್ಕಪರಿಶೋಧನಾ ವಿಭಾಗವನ್ನು ಬಲಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು		ವ್ಯವಸ್ಥಾಪಕ ಮಂಡಳಿಯ ಉತ್ತರ
	ಪರಿಶೀಲಿಸಿ ಬಲಪಡಿಸಬೇಕಾಗಿದೆ. ಮತ್ತು ಆಂತರಿಕ ಪರಿಶೋಧನೆ ವಿಭಾಗವು ಸುಧಾರಿಸಬೇಕಾಗಿದೆ.	
38	ದಿನಾಂಕ 31.03.2021 ಕ್ಕೆ ಇರುವಂತೆ ವ್ಯಾಪಾರ ಸಂಬಂಧಿತ ಸ್ವೀಕೃತಿಗಳು/ಪಾವತಿಗಳು, ಮುಂಗಡ ಪಾವತಿಸಿದ್ದು/ಪಡೆದಿರುವ, ಠೇವಣಿ ಪಾವತಿಸಿರುವ/ಪಡೆದಿರುವ. ವ್ಯಾಪಾರ ಠೇವಣಿಗಳು, ಸಾಲ ಮತ್ತು ಮುಂಗಡಗಳ ಮೊತ್ತಗಳು, ಠೇವಣಿಗಳು, ವಿಭಾಗಗಳು, ಉಪ–ವಿಭಾಗಗಳು, ವಲಯಗಳು, ವೃತ್ತಗಳಲ್ಲಿ ನಿರ್ವಹಿಸಿದ ಬಾಂಕ್ ಖಾತೆಗಳ ಶಿಲ್ಕು, ಸರ್ಕಾರಿ ಸಾಲಗಳು ಹಾಗೂ ಅವುಗಳ ಮೇಲೆ ಆಕರಿಸಿದ ಬಡ್ಡಿಗಳನ್ನು ದೃಢೀಕರಣಗೊಳಿಸಬೇಕಿದೆ. ಇವುಗಳು ಕೆಲವೊಂದು ಹಳೆಯ ಶಿಲ್ಕುಗಳನ್ನು ಒಳಗೊಂಡಿದ್ದು, ಪರಾಮರ್ಶೆ ಹಾಗೂ ಸಮನ್ವಯದ ಅಗತ್ಯವಿರುತ್ತದೆ. ಕೆಲವೊಂದು ವ್ಯಾಪಾರ ಸಂಬಂಧೀ ಸ್ವೀಕೃತಿಗಳು ಹಾಗೂ ಮುಂಗಡಗಳಿಗೆ ಪ್ರತಿಯಾಗಿ ಅವಕಾಶಗಳು ಅಸ್ತಿತ್ವದಲ್ಲಿದ್ದರೂ ಅದರ ಸಮರ್ಪಕತೆಯನ್ನು ಖಚಿತಪಡಿಸಲಾಗುವುದಿಲ್ಲ. ಆದ್ದರಿಂದ ಈ ಶಿಲ್ಕಿಗಳಿಗೆ ಪ್ರತಿಯಾಗಿ ನಂತರದ ಅವಕಾಶಗಳು/ಹೊಂದಾಣಿಕೆಗಳ ಬಗ್ಗೆ, ಯಾವುದಾದರೂ ಇದ್ದಲ್ಲಿ, ಖಚಿತಪಡಿಸಲಾಗಿರುವುದಿಲ್ಲ ಮತ್ತು ಮಾಡಿರುವುದಿಲ್ಲ. ಲೆಕ್ಕಪತ್ರಗಳ ಮೇಲೆ ಉಂಟಾಗುವ ತದನಂತರದ ಪರಿಣಾಮವು ಅನಿಶ್ಚಿತವಾಗಿದೆ.	ವ್ಯಾಪಾರ ಸಂಬಂಧೀ ಸ್ವೀಕೃತಿ ಬಾಕಿಗಳ ಬಗ್ಗೆ ಅಂದರೆ ವ್ಯಾಪಾರ ಸಂಬಂಧೀ ಸ್ವೀಕೃತಿ ಬಾಕಿಗಳ ಪ್ರಮಾಣ ಮತ್ತು ಹೆಚ್ಚಿನ ಸಂಖ್ಯೆಯ ಎಲ್‌ಟಿ ಮತ್ತು ಎಚ್‌ಟಿ ಗ್ರಾಹಕರ ಕಾರಣದಿಂದಾಗಿ ವಿದ್ಯುತ್ ಮಾರಾಟದಿಂದ ಬರುವ ಕಂದಾಯದ ಬಗ್ಗೆ ದೃಢೀಕರಣವನ್ನು ಪಡೆಯುವುದು ಪ್ರಾಯೋಗಿಕವಾಗಿ ಸಾಧ್ಯವಿಲ್ಲ. ಇಲ್ಲಿಯವರೆಗೂ ವರ್ಷಾಂತ್ಯದಲ್ಲಿ ಇಂತಹ ದೃಢೀಕರಣಗಳನ್ನು ಪಡೆದಿರುವುದಿಲ್ಲ ಮತ್ತು ಇದು ಕಂಪನಿಯ ಹಣಕಾಸು ಹೇಳಿಕೆಗಳನ್ನು ಪ್ರಸ್ತುತಪಡಿಸುವಲ್ಲಿ ಹೆಚ್ಚಿನ ಪರಿಣಾಮಗಳನ್ನು ಬೀರುವುದಿಲ್ಲ. ಎಲ್ಲಾ ಆಯಾ ಲೆಕ್ಕಪತ್ರ ಘಟಕಗಳಲ್ಲಿ ಖಾತೆಗಳನ್ನು ನಿರ್ವಹಿಸಲಾಗುತ್ತಿದೆ. ಪ್ರಕರಣವಾರು ಆಧಾರದ ಮೇಲೆ ಅಂಶಗಳನ್ನು ಸರಿಯಾಗಿ ಪರಿಶೀಲಿಸಿ ಹಳೆಯ ಬಾಕಿಗಳನ್ನು ತೆರವುಗೊಳಿಸಲು ಕ್ರಮವನ್ನು ಪ್ರಾರಂಭಿಸಲಾಗುತ್ತದೆ. ವ್ಯಾಪಾರ ಸಂಬಂಧೀ ಪಾವತಿಸಬೇಕಾಗಿರುವುದು, ಸಾಲದಾತರು, ಸಾಲಗಳು ಮತ್ತು ಮುಂಗಡಗಳ ದೃಢೀಕರಣ / ಬಗೆಗಿನ ವಿವರಗಳನ್ನು ಹೆಸ್ಕಾಮ್‌ನಿಂದ ಸಮನ್ವಯಕರಣ ಪ್ರಾರಂಭಿಸುವ ಮೂಲಕ ಸರಿಯಾದ ಕ್ರಮ ಕೈಗೊಳ್ಳಲಾಗುವುದು.

ನಿರ್ದೇಶಕ ಮಂಡಳಿಯ ಪರವಾಗಿ,

ಸಹಿ/–
ಮುಖ್ಯ ಆರ್ಥಿಕ ಅಧಿಕಾರಿ,
ಹುವಿಸಕಂನಿ, ಹುಬ್ಬಳ್ಳಿ.

ಫಾರ್ಮ ಎಮ್‌ಆರ್–3

ಸೆಕ್ರೆಟೇರಿಯಲ್ ಆಡಿಟ್ ವರದಿ

31ನೇ ಮಾರ್ಚ್, 2021 ರಂದು ಕೊನೆಗೊಂಡ ಆರ್ಥಿಕ ವರ್ಷಕ್ಕೆ

[ಕಂಪನೀಸ್ ಕಾಯಿದೆ, 2013ರ ಸೆಕ್ಷನ್ 204(1) ಮತ್ತು ಕಂಪನಿಗಳ ನಿಯಮ ನಂ.9 (ನೇಮಕಾತಿ ಮತ್ತು ಸಿಬ್ಬಂದಿ ಸಂಭಾವನೆ) ನಿಯಮಗಳು, 2014]

ಗೆ,

ಮಾನ್ಯ ಸದಸ್ಯರುಗಳಿಗೆ
ಮೆ॥ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ನವನಗರ ಪಿ.ಬಿ. ರಸ್ತೆ
ಹುಬ್ಬಳ್ಳಿ ಕರ್ನಾಟಕ – 580025

ನಾನು ಅನ್ವಯವಾಗುವ ಶಾಸನಬದ್ಧ ನಿಬಂಧನೆಗಳ ಅನುಸರಣೆಯ ಪ್ರಕಾರ ಕಾರ್ಯದರ್ಶಿಯ ದಾಖಲಾತಿಗಳ ಪರಿಶೋಧನೆಯನ್ನು ನಡೆಸಿದ್ದೇನೆ ಮತ್ತು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್ (CIN:U31401KA2002SGC030437)ನಿಂದ ಉತ್ತಮ ಕಾರ್ಪೊರೇಟ್ ಅಭ್ಯಾಸಗಳ ಅನುಸರಣೆಯನ್ನು ಮಾಡಲಾಗಿದೆ ಮತ್ತು ಈ ಕಂಪನಿಯು ನವನಗರ ಪಿ.ಬಿ. ರಸ್ತೆ ಹುಬ್ಬಳ್ಳಿ–580025ನಲ್ಲಿ ನೋಂದಾಯಿತ ಕಚೇರಿಯನ್ನು ಹೊಂದಿದೆ (ಇನ್ನು ಮುಂದೆ ಕಂಪನಿ ಎಂದು ಕರೆಯಲಾಗುತ್ತದೆ).

ಕಂಪನಿಯು ಪಟ್ಟಿ ಮಾಡದ ಸಾರ್ವಜನಿಕ ಕಂಪನಿಯಾಗಿದ್ದು, ಸಂಪೂರ್ಣವಾಗಿ ಕರ್ನಾಟಕ ಸರ್ಕಾರದ ಒಡೆತನದಲ್ಲಿದೆ. ಇದು ವಿದ್ಯುತ್ ಪೂರೈಕೆಯಲ್ಲಿ ತೊಡಗಿದೆ. ಕಂಪನಿಗಳ ಕಾಯಿದೆ, 2013 ಮತ್ತು ಇತರ ಅನ್ವಯವಾಗುವ ಕಾನೂನುಗಳ ಹೊರತಾಗಿ, ಕಂಪನಿಯ ಹಿತಾಸಕ್ತಿಯಿಂದ ಕಾಲಕಾಲಕ್ಕೆ ಕರ್ನಾಟಕ ಸರ್ಕಾರವು ಹೊರಡಿಸಿದ ನಿರ್ದೇಶನಗಳನ್ನು ಕಂಪನಿಯು ಅನುಸರಿಸಬೇಕಾಗುತ್ತದೆ. ಕಂಪನಿಯು ಯಾವುದೇ ವಿದೇಶಿ ಹೂಡಿಕೆಯನ್ನು ಹೊಂದಿಲ್ಲ. ಅಧಿಸೂಚನೆಗಳ ಮೂಲಕ No GSR 463(ಇ) ದಿನಾಂಕ 5.6.2015 ತಿದ್ದುಪಡಿ ಮಾಡಿದಂತೆ, ಕಂಪನಿಗಳ ಕಾಯಿದೆ, 2013ರ ಕೆಲವು ನಿಬಂಧನೆಗಳು ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಿಂದ ಸರ್ಕಾರಿ ಕಂಪನಿಗಳಿಗೆ ವಿನಾಯಿತಿ ನೀಡಲಾಗಿದೆ

ಕಾರ್ಯದರ್ಶಿಯ ಲೆಕ್ಕಪರಿಶೋಧನೆಯು ನನಗೆ ಸಮಂಜಸವಾದ ಆಧಾರವನ್ನು ಒದಗಿಸುವ ರೀತಿಯಲ್ಲಿ ನಡೆಸಲಾಯಿತು ಕಾರ್ಪೊರೇಟ್ ನಡವಳಿಕೆಗಳು/ಕಾನೂನುಬದ್ಧ ಅನುಸರಣೆಗಳನ್ನು ಮೌಲ್ಯಮಾಪನ ಮಾಡುವುದು ಮತ್ತು ಅದರ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದು.

ಕಂಪನಿಯ ಪುಸ್ತಕಗಳು, ಪೇಪರ್‌ಗಳು, ನಿಮಿಷ ಪುಸ್ತಕಗಳು, ನಮೂನೆಗಳು ಮತ್ತು ಸಲ್ಲಿಸಿದ ರಿಟರ್ನ್ಸ್ ಮತ್ತು ಕಂಪನಿಯು ನಿರ್ವಹಿಸಿದ ಇತರ ದಾಖಲೆಗಳು ಮತ್ತು ಕಂಪನಿಯು ಒದಗಿಸಿದ ಮಾಹಿತಿಯ ನನ್ನ ಪರಿಶೀಲನೆಯ ಆಧಾರದ ಮೇಲೆ, ಅದರ ಅಧಿಕಾರಿಗಳು, ಏಜೆಂಟರು ಮತ್ತು ಅಧಿಕೃತ ಪ್ರತಿನಿಧಿಗಳು ಕಾರ್ಯದರ್ಶಿಯ ಲೆಕ್ಕಪರಿಶೋಧನೆಯ ಸಮಯದಲ್ಲಿ, ನಾನು ಈ ಮೂಲಕ ವರದಿ ಮಾಡುತ್ತೇನೆ, ನನ್ನ ಅಭಿಪ್ರಾಯದಲ್ಲಿ, ಕಂಪನಿಯು 2021ರ ಮಾರ್ಚ್ 31ರಂದು ಕೊನೆಗೊಂಡ ಆರ್ಥಿಕ ವರ್ಷವನ್ನು ಒಳಗೊಂಡ ಲೆಕ್ಕಪರಿಶೋಧನೆಯ ಅವಧಿಯನ್ನು ಹೊಂದಿದೆ, ಇಲ್ಲಿ ಪಟ್ಟಿ ಮಾಡಲಾದ ಶಾಸನಬದ್ಧ ನಿಬಂಧನೆಗಳಿಗೆ ಬದ್ಧವಾಗಿದೆ ಮತ್ತು ಕಂಪನಿಯು ಸರಿಯಾದ ಬೋರ್ಡ್–ಪ್ರಕ್ರಿಯೆಗಳನ್ನು ಹೊಂದಿದೆ ಮತ್ತು ಅನುಸರಣೆ–ಯಾಂತ್ರಿಕತೆ, ಕ್ರಮದಲ್ಲಿ ಮತ್ತು ಮುಂದೆ ಮಾಡಿದ ವರದಿಗೆ ಒಳಪಟ್ಟಿರುತ್ತದೆ:

31ನೇ ಮಾರ್ಚ್, 2021ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಕಂಪನಿಯು ನಿರ್ವಹಿಸಿದ ಪುಸ್ತಕಗಳು, ಪೇಪರ್‌ಗಳು, ನಿಮಿಷದ ಪುಸ್ತಕಗಳು, ನಮೂನೆಗಳು ಮತ್ತು ರಿಟರ್ನ್ಸ್‌ಗಳು ಮತ್ತು ಇತರ ದಾಖಲೆಗಳನ್ನು ಅನ್ವಯಿಸುವ ನಿಬಂಧನೆಗಳ ಪ್ರಕಾರ ಪರಿಶೀಲಿಸಿದ್ದೇನೆ:

i. ಕಂಪನಿ ಕಾಯಿದೆ, 2013 (ದ ಕಾಯಿದೆ) ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳು;

ii. ಶೇರು ಒಪ್ಪಂದಗಳ (ನಿಯಂತ್ರಣ) ಕಾಯಿದೆ, 1956 ('SCRA') ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳು; ಅನ್ವಯಿಸುವುದಿಲ್ಲ.

iii. ಠೇವಣಿ ಕಾಯಿದೆ, 1996 ಮತ್ತು ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳು ಮತ್ತು ಉಪ–ಕಾನೂನುಗಳು; ಅನ್ವಯಿಸುವುದಿಲ್ಲ

iv. ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ, 1999 ಮತ್ತು ನಿಯಮಗಳು ಮತ್ತು ನಿಯಮಗಳು ವಿದೇಶಿ ನೇರ ಹೂಡಿಕೆ, ಸಾಗರೋತ್ತರ ನೇರ ಹೂಡಿಕೆ ಮತ್ತು ಬಾಹ್ಯ ವಾಣಿಜ್ಯ ಸಾಲಗಳ ಮಟ್ಟಿಗೆ; ಅನ್ವಯಿಸುವುದಿಲ್ಲ

v. ಸೆಕ್ಯುರಿಟೀಸ್ ಅಂಡ್ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ ಆಕ್ಟ್, 1992 ('ಸೆಬಿ ಆಕ್ಟ್') ಮತ್ತು ಅದರ ಅಡಿಯಲ್ಲಿ ಹೊರಡಿಸಲಾದ ನಿಯಮಗಳು ಮತ್ತು ಮಾರ್ಗಸೂಚಿಗಳು: ಅನ್ವಯಿಸುವುದಿಲ್ಲ

ಕಂಪನಿಗೆ ನಿರ್ದಿಷ್ಟವಾಗಿ ಅನ್ವಯಿಸುವ ಈ ಕೆಳಗಿನ ಇತರ ಕಾನೂನುಗಳು, ಕಾಯಿದೆಗಳು ಮತ್ತು ನಿಯಮಗಳ ಅಡಿಯಲ್ಲಿ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಕಂಪನಿಯು ಸ್ಥಾಪಿಸಿದ ವ್ಯವಸ್ಥೆಗಳು ಮತ್ತು ಪ್ರಕ್ರಿಯೆಗಳನ್ನು ನಾನು ಪರಿಶೀಲಿಸಿದ್ದೇನೆ.

1. ವಿದ್ಯುಚ್ಛಕ್ತಿ ಕಾಯಿದೆ, 2003 ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳು ಮತ್ತು ನಿರ್ದಿಷ್ಟವಾಗಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದೊಂದಿಗೆ ವಾರ್ಷಿಕ ಕಾರ್ಯಕ್ಷಮತೆ ಪರಿಶೀಲನೆ ಮತ್ತು ನಿಯಂತ್ರಕ ಕಾರ್ಯವಿಧಾನ.

2. ಕೇಂದ್ರೀಯ ವಿದ್ಯುತ್ ಪ್ರಾಧಿಕಾರ (ವಿದ್ಯುತ್ ಸ್ಥಾವರಗಳು ಮತ್ತು ವಿದ್ಯುತ್ ಮಾರ್ಗಗಳ ನಿರ್ಮಾಣಕ್ಕಾಗಿ ತಾಂತ್ರಿಕ ಮಾನದಂಡಗಳು) ನಿಯಮಗಳು, 2010.

3. ಕೇಂದ್ರೀಯ ವಿದ್ಯುತ್ ಪ್ರಾಧಿಕಾರ (ಸುರಕ್ಷತೆ ಮತ್ತು ವಿದ್ಯುತ್ ಪೂರೈಕೆಗೆ ಸಂಬಂಧಿಸಿದ ಕ್ರಮಗಳು) ನಿಯಮಗಳು 2010 (2015 ರಲ್ಲಿ ತಿದ್ದುಪಡಿ ಮಾಡಿದಂತೆ)

4. ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ (ನಿರ್ಮಾಣ, ಕಾರ್ಯಾಚರಣೆಗಳು ಮತ್ತು ವಿದ್ಯುತ್ ಸ್ಥಾವರಗಳು ಮತ್ತು ವಿದ್ಯುತ್ ಮಾರ್ಗಗಳ ನಿರ್ವಹಣೆಗೆ ಸುರಕ್ಷತೆ ಅಗತ್ಯತೆಗಳು) ನಿಯಮಗಳು 2011

5. ಭಾರತೀಯ ವಿದ್ಯುತ್ ಗ್ರಿಡ್ ಕೋಡ್ ನಿಯಮಗಳು 2010

6. ಇಂಧನ ಸಂರಕ್ಷಣೆ ಕಾಯಿದೆ, 2011

7. ಅರಣ್ಯ (ಸಂರಕ್ಷಣೆ) ಕಾಯಿದೆ, 1980

8. ಭಾರತೀಯ ಒಪ್ಪಂದ ಕಾಯಿದೆ 1872

9. ಕರ್ನಾಟಕ ರಾಜ್ಯ ಅಂಗಡಿಗಳು ಮತ್ತು ಸ್ಥಾಪನೆ ಕಾಯಿದೆ

10. ವಾಯು (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯಿದೆ, 1961

11. ನೀರು (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯಿದೆ, 1974

12. ನೀರು (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಸೆಸ್ ಕಾಯಿದೆ, 1977

13. ಕೆಇಆರ್‌ಸಿ (ಪರವಾನಗಿ) ನಿಯಮಗಳು 2000.

14. ಕೆಇಆರ್‌ಸಿ (ಶುಲ್ಕ) ನಿಯಮಗಳು 2016.

15. ಕೆಇಆರ್‌ಸಿ (ಸುಂಕ) ನಿಯಮಗಳು 2000.

16. ಕೆಇಆರ್‌ಸಿ (ವಿದ್ಯುತ್ ಪೂರೈಕೆಗಾಗಿ ವೆಚ್ಚದ ವಸೂಲಾತಿ) ನಿಯಮಗಳು 2004

17. ಕೆಇಆರ್‌ಸಿ (ವಿದ್ಯುತ್ ಸರಬರಾಜು) ಕೋಡ್ 2004.

18. ಕರ್ನಾಟಕ ವಿದ್ಯುತ್ ಗ್ರಿಡ್ ಕೋಡ್ 2005.

19. ಕರ್ನಾಟಕ ವಿದ್ಯುತ್ ಮಂಡಳಿ ನೌಕರರ ಸೇವಾ ನಿಯಮಗಳು

20. ದಿನಾಂಕ:17.6.2006ದ ಕರ್ನಾಟಕ ರಾಜ್ಯ ಗೆಜೆಟ್ ಅಧಿಸೂಚನೆಯಲ್ಲಿ ವಿತರಣಾ ಪರವಾನಗಿದಾರರ ಮೇಲೆ ವಿದ್ಯುತ್ ಪೂರೈಕೆಯ ಷರತ್ತುಗಳು.

21. ಕೆಇಆರ್‌ಸಿ ಅಧಿಸೂಚನೆ ಸಂಖ್ಯೆ. ಕೆಇಆರ್‌ಸಿ/ಸಿಓಎಸ್/ಡಿ/07/10 ದಿನಾಂಕ 1.7.2016

22. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನೇಮಕಾತಿ ಮತ್ತು ಬಡ್ತಿ ನಿಯಮಗಳು, ಉದ್ಯೋಗಿಗಳ (ಪ್ರೊಬೇಷನ್) ನಿಯಂತ್ರಣ ಮತ್ತು ನೌಕರರ (ಹಿರಿಯ) ನಿಯಮಗಳು.

23. ಪರಿಸರ (ರಕ್ಷಣೆ) ಕಾಯಿದೆ, 1986

24. ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯಿದೆ, 2013.

25. ಗ್ರಾಹಕ ಸಂರಕ್ಷಣಾ ಕಾಯಿದೆ, 1986

26. ಅಪ್ರೆಂಟೈಸಿಸ್ ಕಾಯಿದೆ, 1961

27. ಕಾರ್ಖಾನೆಗಳ ಕಾಯಿದೆ 1948 ಮತ್ತು ನಿಯಮಗಳು

28. ಕೈಗಾರಿಕಾ ವಿವಾದಗಳ ಕಾಯಿದೆ, 1947

29. ಹೆರಿಗೆ ಪ್ರಯೋಜನ ಕಾಯಿದೆ (ಇಎಸ್‌ಐ ಕಾಯಿದೆಯ ವ್ಯಾಪ್ತಿಯಿಂದ ಹೊರಗಿರುವ ಮಹಿಳಾ ಉದ್ಯೋಗಿಗಳಿಗೆ ಅನ್ವಯಿಸುತ್ತದೆ)

30. ಗುತ್ತಿಗೆ ಕಾರ್ಮಿಕ (ನಿಯಂತ್ರಣ ಮತ್ತು ನಿರ್ಮೂಲನೆ) ಕಾಯಿದೆ 1970,

31. ಗುತ್ತಿಗೆ ಕಾರ್ಮಿಕ (ನಿಯಂತ್ರಣ ಮತ್ತು ನಿರ್ಮೂಲನೆ) ಕರ್ನಾಟಕ ನಿಯಮಗಳು 1974.

32. ಬೋನಸ್ ಆಕ್ಟ್ ಪಾವತಿ, 1965

33. ವೇತನ ಪಾವತಿ ಕಾಯಿದೆ, 1936

34. ಕೆಲಸಗಾರರ ಪರಿಹಾರ ಕಾಯಿದೆ, 1923.

35. ಕೆಇಆರ್‌ಸಿ (ಸಾಮಾನ್ಯ ಮತ್ತು ನಡಾವಳಿಗಳ ನಡವಳಿಕೆ) ನಿಯಮಗಳು 2000

ಕೆಳಗಿನವುಗಳ ಅನ್ವಯವಾಗುವ ಷರತ್ತುಗಳ ಅನುಸರಣೆಯನ್ನು ನಾನು ಪರಿಶೀಲಿಸಿದ್ದೇನೆ:

(i) ದಿ ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿದ ಕಾರ್ಯದರ್ಶಿ ಮಾನದಂಡಗಳು.

(ii) ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (ಎನ್‌ಎಸ್‌ಇ) ಮತ್ತು ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್ ಲಿಮಿಟೆಡ್ (ಬಿಎಸ್‌ಇ) ನೊಂದಿಗೆ ಕಂಪನಿಯು ನಮೂದಿಸಿದ ಪಟ್ಟಿ ಒಪ್ಪಂದ; ಅನ್ವಯಿಸುವುದಿಲ್ಲ

ಪರಿಶೀಲನೆಯ ಅವಧಿಯಲ್ಲಿ, ಕಂಪನಿಯು ಮೇಲೆ ತಿಳಿಸಲಾದ ಅನ್ವಯವಾಗುವ ಕಾಯಿದೆಗಳು, ನಿಯಮಗಳು, ನಿಬಂಧನೆಗಳು, ಮಾರ್ಗಸೂಚಿಗಳು, ಮಾನದಂಡಗಳು, ಇತ್ಯಾದಿಗಳ ನಿಬಂಧನೆಗಳನ್ನು ಅನುಸರಿಸಿದೆ, ಒತ್ತಿಹೇಳಲು ಕೆಳಗಿನ ಅವಲೋಕನಗಳು/ವಿಷಯಗಳಿಗೆ ಒಳಪಟ್ಟಿರುತ್ತದೆ: –

1. ಕಂಪನಿಗಳ (ನೇಮಕಾತಿ ಮತ್ತು ಅರ್ಹತೆ) ನಿಯಮಗಳು 2014ರ ನಿಯಮ 4ರ ಪ್ರಕಾರ, ಕಂಪನಿಗಳ ಕಾಯಿದೆ, 2013ರ ವಿಭಾಗ 149ರ ಅಡಿಯಲ್ಲಿ, ಕಂಪನಿಯು ಮಂಡಳಿಯಲ್ಲಿ ಕನಿಷ್ಠ 2 ಸ್ವತಂತ್ರ ನಿರ್ದೇಶಕರನ್ನು ಹೊಂದಿರಬೇಕು. ಪರಿಶೀಲನೆಯ ಅವಧಿಯಲ್ಲಿ, ಕಂಪನಿಯ ಮಂಡಳಿಯು ಅಗತ್ಯವಿರುವ ಸ್ವತಂತ್ರ ನಿರ್ದೇಶಕರನ್ನು ಹೊಂದಿರುವುದಿಲ್ಲ. ಕರ್ನಾಟಕ ಸರ್ಕಾರಕ್ಕೆ ಸ್ವತಂತ್ರ ನಿರ್ದೇಶಕರಾಗಿ ಕನಿಷ್ಠ ಇಬ್ಬರು ನಿರ್ದೇಶಕರನ್ನು ನೇಮಿಸಲು ಮನವಿ ಪತ್ರ ಕಳುಹಿಸಲಾಗಿದೆ ಎಂದು ತಿಳಿಸಲಾಗಿದೆ.
2. ಸೆಕ್ಷನ್ 177(2) ಪ್ರಕಾರ, ಲೆಕ್ಕಪರಿಶೋಧನಾ ಸಮಿತಿಯು ಕನಿಷ್ಠ 3 ನಿರ್ದೇಶಕರನ್ನು ಒಳಗೊಂಡಿರುತ್ತದೆ, ಅದರಲ್ಲಿ 2 ಸ್ವತಂತ್ರ ನಿರ್ದೇಶಕರಾಗಿರಬೇಕು. ಪರಿಶೀಲನೆಯ ಅವಧಿಯಲ್ಲಿ, ಲೆಕ್ಕಪರಿಶೋಧನಾ ಸಮಿತಿಯು ಇಬ್ಬರು (2) ಸ್ವತಂತ್ರ ನಿರ್ದೇಶಕರನ್ನು ಒಳಗೊಂಡಿರುವುದಿಲ್ಲ. ಕರ್ನಾಟಕ ಸರ್ಕಾರವು 2 ಸ್ವತಂತ್ರ ನಿರ್ದೇಶಕರನ್ನು ಮಂಡಳಿಗೆ ನೇಮಿಸಿದ ತಕ್ಷಣ, ಅದೇ ಸ್ವತಂತ್ರ ನಿರ್ದೇಶಕರನ್ನು ಲೆಕ್ಕಪರಿಶೋಧನಾ ಸಮಿತಿಗೆ ಸೇರಿಸಲಾಗುವುದು ಎಂದು ನಮಗೆ ತಿಳಿಸಲಾಯಿತು.
3. ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 177(9)ರ ನಿಬಂಧನೆಗಳ ಪ್ರಕಾರ, ಕಂಪನಿಗಳ (ಮಂಡಳಿ ಮತ್ತು ಅದರ ಅಧಿಕಾರಗಳ ಸಭೆಗಳು) ನಿಯಮಗಳು 2014ರ ನಿಯಮ 7 ರೊಂದಿಗೆ ಓದಿ, ಕಂಪನಿಯ ಸಾಲವು ರೂ.50 ಕೋಟಿಗಿಂತ ಹೆಚ್ಚಿದ್ದರೆ. ಅಂತಹ ಕಂಪನಿಯು ನಿರ್ದೇಶಕರು ಮತ್ತು ಉದ್ಯೋಗಿಗಳಿಗೆ ನಿಜವಾದ ಕಾಳಜಿಯನ್ನು ವರದಿ ಮಾಡಲು ಜಾಗರಣಾ ಕಾರ್ಯವಿಧಾನವನ್ನು ಸ್ಥಾಪಿಸುವ ಅಗತ್ಯವಿದೆ. ಜಾಗೃತ ಕಾರ್ಯವಿಧಾನ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದೆ.

"ಇತರ ಕಾನೂನುಗಳಿಗೆ" ಸಂಬಂಧಿಸಿದಂತೆ, ಕಂಪನಿಯು ಉತ್ತಮವಾಗಿ ಸ್ಥಾಪಿತವಾದ ಸರ್ಕಾರಿ ಕಂಪನಿಯಾಗಿದೆ ಮತ್ತು ಸಾಮಾನ್ಯವಾಗಿ, ಇತರ ಕಾನೂನುಗಳ ನಿಬಂಧನೆಗಳ ಅನುಸರಣೆಗಾಗಿ ಸರಿಯಾದ ವ್ಯವಸ್ಥೆಗಳು ಮತ್ತು ಪ್ರಕ್ರಿಯೆಗಳಿವೆ.

ಕಾನೂನುಬದ್ಧ ಹಣಕಾಸು ಲೆಕ್ಕಪರಿಶೋಧನೆ ಮತ್ತು ಇತರ ಗೊತ್ತುಪಡಿಸಿದ ವೃತ್ತಿಪರರಿಂದ ಪರಿಶೀಲನೆಗೆ ಒಳಪಟ್ಟಿರುವುದರಿಂದ, ನೇರ ಮತ್ತು ಪರೋಕ್ಷ ತೆರಿಗೆ ಕಾನೂನುಗಳಂತಹ ಅನ್ವಯವಾಗುವ ಹಣಕಾಸು ಕಾನೂನುಗಳೊಂದಿಗೆ ಕಂಪನಿಯ ಅನುಸರಣೆಯನ್ನು ನಾನು ಪರಿಶೀಲಿಸಿಲ್ಲ.

ಮೇಲಿನ ಅವಲೋಕನಗಳು/ವಿಷಯಗಳಿಗೆ ಒಳಪಟ್ಟು ಈ ಕೆಳಗಿನಂತೆ ವರದಿ ಮಾಡುತ್ತೇನೆ:

ಕಂಪನಿಯ ನಿರ್ದೇಶಕರ ಮಂಡಳಿ ಮತ್ತು ಅದರ ಲೆಕ್ಕಪರಿಶೋಧನಾ ಸಮಿತಿಯನ್ನು ಸರಿಯಾಗಿ ರಚಿಸಲಾಗಿದೆ. ಪರಿಶೀಲನೆಯ ಅವಧಿಯಲ್ಲಿ ನಡೆದ ನಿರ್ದೇಶಕರ ಮಂಡಳಿಯ ಸಂಯೋಜನೆಯಲ್ಲಿನ ಬದಲಾವಣೆಗಳನ್ನು ಕಾಯಿದೆಯ ನಿಬಂಧನೆಗಳಿಗೆ ಅನುಸಾರವಾಗಿ ಕೈಗೊಳ್ಳಲಾಗಿದೆ.

ಕಂಪನಿಯು ಮಂಡಳಿಯ ಕೆಳಗಿನ ಉಪ ಸಮಿತಿಗಳನ್ನು ಹೊಂದಿದೆ:–

1) ಲೆಕ್ಕಪರಿಶೋಧನಾ ಸಮಿತಿ
2) ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ ಸಮಿತಿ
3) ಸಾಲದ ಉಪ–ಸಮಿತಿ
4) ಕೇಂದ್ರಿಯ ಖರೀದಿ ಸಮಿತಿ

****ಗಮನಿಸಿ: ಕಂಪನಿಗಳ ಕಾಯಿದೆ, 2013ರ ಸೆಕ್ಷನ್ 135ರ ಪ್ರಕಾರ, 22ನೇ ಜನವರಿ 2021 ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಲಾಗಿದೆ:-**

ಕಂಪನಿ ಕಾಯಿದೆ ಸೆಕ್ಷನ್–135ರ ಸಬ್ ಸೆಕ್ಷನ್(5)ರ ಅಡಿಯಲ್ಲಿ ಕಂಪನಿಯು ಖರ್ಚು ಮಾಡಬೇಕಾದ ಮೊತ್ತವು ಐವತ್ತು ಲಕ್ಷ ರೂಪಾಯಿಗಳನ್ನು ಮೀರದಿದ್ದರೆ, ಸಬ್ ಸೆಕ್ಷನ್(1)ರ ಅಡಿಯಲ್ಲಿ ಕಾರ್ಪೋರೇಟ್ ಸಾಮಾಜಿಕ

ಜವಾಬ್ದಾರಿ ಸಮಿತಿಯ ರಚನೆಯ ಅಗತ್ಯತೆಗಳು ಅನ್ವಯಿಸುವುದಿಲ್ಲ ಮತ್ತು ಅಂತಹ ಸಂದರ್ಭಗಳಲ್ಲಿ ಕಂಪನಿಯ ನಿರ್ದೇಶಕರ ಮಂಡಳಿಯು ಕಾರ್ಪೋರೆಟ್ ಸಾಮಾಜಿಕ ಜವಾಬ್ದಾರಿಯ ತಿರ್ಮಾನವನ್ನು ತೆಗೆದುಕೊಳ್ಳಬಹುದಾಗಿದೆ.

ಹಿಂದಿನ ಮೂರು ಹಣಕಾಸು ವರ್ಷಗಳಲ್ಲಿ ಕಂಪನಿಯು ನಷ್ಟವನ್ನು ಅನುಭವಿಸಿದೆ ಮತ್ತು ಯಾವುದೇ ನಿವ್ವಳ ಲಾಭವನ್ನು ಗಳಿಸದ ಕಾರಣ, ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ ಸಮಿತಿಯ ಮುಂದುವರಿಕೆಯನ್ನು ಪರಿಶೀಲಿಸಬಹುದು

ಮಂಡಳಿಯ ಸಭೆಗಳನ್ನು ನಿಗದಿಪಡಿಸಲು ಎಲ್ಲಾ ನಿರ್ದೇಶಕರಿಗೆ ಕಂಪನಿಯ ಕಾಯಿದೆಯ ಅನ್ವಯ ಸೂಚನೆಯನ್ನು ನೀಡಲಾಗುತ್ತದೆ, ಕಾರ್ಯಸೂಚಿ ಮತ್ತು ವಿವರವಾದ ಟಿಪ್ಪಣಿಗಳನ್ನು ಮುಂಚಿತವಾಗಿ ಕಳುಹಿಸಲಾಗುತ್ತದೆ ಮತ್ತು ಸಭೆಯ ಮೊದಲು ಕಾರ್ಯಸೂಚಿಯ ಅಂಶಗಳ ಕುರಿತು ಹೆಚ್ಚಿನ ಮಾಹಿತಿ ಮತ್ತು ಸ್ಪಷ್ಟೀಕರಣಗಳನ್ನು ಪಡೆಯಲು ಮತ್ತು ಸಭೆಯಲ್ಲಿ ಅರ್ಥಪೂರ್ಣ ಭಾಗವಹಿಸುವಿಕೆಗಾಗಿ ವ್ಯವಸ್ಥೆಯು ಅಸ್ತಿತ್ವದಲ್ಲಿದೆ.

ಮಂಡಳಿ ಮತ್ತು ಅದರ ಉಪ ಸಮಿತಿಗಳ ಸಭೆಗಳ ನಡಾವಳಿಗಳನ್ನು ಸರಿಯಾಗಿ ನಿರ್ವಹಿಸಲಾಗುತ್ತದೆ.

ಇತರ ಅನ್ವಯವಾಗುವ ಕಾನೂನುಗಳು, ನಿಯಮಗಳು, ನಿಯಮಗಳು ಮತ್ತು ಮಾರ್ಗಸೂಚಿಗಳ ಅನುಸರಣೆಯನ್ನು ಮೇಲ್ವಿಚಾರಣೆ ಮಾಡಲು ಮತ್ತು ಖಚಿತಪಡಿಸಿಕೊಳ್ಳಲು ಕಂಪನಿಯ ಗಾತ್ರ ಮತ್ತು ಕಾರ್ಯಾಚರಣೆಗಳಿಗೆ ಅನುಗುಣವಾಗಿ ಕಂಪನಿಯಲ್ಲಿ ಸಾಕಷ್ಟು ವ್ಯವಸ್ಥೆಗಳು ಮತ್ತು ಪ್ರಕ್ರಿಯೆಗಳಿವೆ ಎಂದು ನಾನು ಅನುಬಂಧ–ಎ ಯ ಪ್ರಕಾರ ವರದಿ ಮಾಡುತ್ತೇನೆ.

ಎಸ್. ವಿಶ್ವನಾಥನ್
ಕಂಪನಿ ಕಾರ್ಯದರ್ಶಿ ಅಭ್ಯಾಸ
ACS No: 5284
CP No: 5284
UDIN: A005284C001061405

ಸ್ಥಳ : ಬೆಂಗಳೂರು

ದಿನಾಂಕ: 01/10/2021

ಆವರಣ:

ಅನುಬಂಧ ಎ – ಸೆಕ್ರೆಟರಿಯಲ್ ಆಡಿಟ್ ವರದಿಯ ಭಾಗವಾಗಿದೆ

ಅನುಬಂಧ–ಎ

ಗೆ,

ಮಾನ್ಯ ಸದಸ್ಯರುಗಳು

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ನನ್ನ ಸಮ ದಿನಾಂಕದ ವರದಿಯನ್ನು ಈ ಪತ್ರದ ಜೊತೆಗೆ ಓದಬೇಕು.

1) ಕಾರ್ಯದರ್ಶಿಯ ದಾಖಲೆಯ ನಿರ್ವಹಣೆಯು ಕಂಪನಿಯ ನಿರ್ವಹಣೆಯ ಜವಾಬ್ದಾರಿಯಾಗಿದೆ. ನನ್ನ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಈ ಕಾರ್ಯದರ್ಶಿಯ ದಾಖಲೆಗಳ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನನ್ನ ಜವಾಬ್ದಾರಿಯಾಗಿದೆ.

2) ಕಾರ್ಯದರ್ಶಿಯ ದಾಖಲೆಗಳ ವಿಷಯಗಳ ಸರಿಯಾದತೆಯ ಬಗ್ಗೆ ಸಮಂಜಸವಾದ ಭರವಸೆಯನ್ನು ಪಡೆಯಲು ನಾನು ಆಡಿಟ್ ಅಭ್ಯಾಸಗಳು ಮತ್ತು ಪ್ರಕ್ರಿಯೆಯನ್ನು ಅನುಸರಿಸಿದ್ದೇನೆ. ಕಾರ್ಯದರ್ಶಿಯ ದಾಖಲೆಗಳಲ್ಲಿ ಸರಿಯಾದ ಸತ್ಯಗಳು ಪ್ರತಿಫಲಿಸುತ್ತದೆ ಎಂದು ಖಚಿತಪಡಿಸಿಕೊಳ್ಳಲು ಪರೀಕ್ಷೆಯ ಆಧಾರದ ಮೇಲೆ ಪರಿಶೀಲನೆಯನ್ನು ಮಾಡಲಾಗಿದೆ. ನಾನು ಅನುಸರಿಸಿದ ಪ್ರಕ್ರಿಯೆ ಮತ್ತು ಅಭ್ಯಾಸಗಳು ನನ್ನ ಅಭಿಪ್ರಾಯಕ್ಕೆ ಸಮಂಜಸವಾದ ಆಧಾರವನ್ನು ಒದಗಿಸುತ್ತವೆ ಎಂದು ನಾನು ನಂಬುತ್ತೇನೆ.

3) ಕಂಪನಿಯ ಹಣಕಾಸು ದಾಖಲೆಗಳು ಮತ್ತು ಖಾತೆಗಳ ಪುಸ್ತಕಗಳ ಸರಿ ಮತ್ತು ಸೂಕ್ತತೆಯನ್ನು ನಾನು ಪರಿಶೀಲಿಸಿಲ್ಲ.

4) ಅಗತ್ಯವಿದ್ದಲ್ಲಿ, ಕಾನೂನುಗಳು, ನಿಯಮಗಳು ಮತ್ತು ನಿಬಂಧನೆಗಳ ಅನುಸರಣೆ ಮತ್ತು ಘಟನೆಗಳ ಸಂಭವಿಸುವಿಕೆ ಇತ್ಯಾದಿಗಳ ಬಗ್ಗೆ ನಾನು ನಿರ್ವಹಣಾ ಪ್ರಾತಿನಿಧ್ಯವನ್ನು ಪಡೆದುಕೊಂಡಿದ್ದೇನೆ.

5) ಕಾರ್ಪೊರೇಟ್ ಮತ್ತು ಇತರ ಅನ್ವಯವಾಗುವ ಕಾನೂನುಗಳು, ನಿಯಮಗಳು, ನಿಬಂಧನೆಗಳು, ಮಾನದಂಡಗಳ ಅನುಸರಣೆ ನಿರ್ವಹಣೆಯ ಜವಾಬ್ದಾರಿಯಾಗಿದೆ. ನನ್ನ ಪರೀಕ್ಷೆಯು ಪರೀಕ್ಷಾ ಆಧಾರದ ಮೇಲೆ ಕಾರ್ಯವಿಧಾನದ ಪರಿಶೀಲನೆಗೆ ಸೀಮಿತವಾಗಿತ್ತು.

6) ಸೆಕ್ರೆಟೇರಿಯಲ್ ಆಡಿಟ್ ವರದಿಯು ಕಂಪನಿಯ ಭವಿಷ್ಯದ ಕಾರ್ಯಸಾಧ್ಯತೆಯ ಬಗ್ಗೆ ಅಥವಾ ನಿರ್ವಹಣೆಯು ಕಂಪನಿಯ ವ್ಯವಹಾರಗಳನ್ನು ನಿರ್ವಹಿಸಿದ ಪರಿಣಾಮಕಾರಿತ್ವ ಅಥವಾ ಪರಿಣಾಮಕಾರಿತ್ವದ ಭರವಸೆಯಲ್ಲ.

ಎಸ್. ವಿಶ್ವನಾಥನ್

ಕಂಪನಿ ಕಾರ್ಯದರ್ಶಿ ಅಭ್ಯಾಸ

ACS No: 5284

CP No: 5284

ಸ್ಥಳ : ಬೆಂಗಳೂರು **UDIN: A005284C001061405**

ದಿನಾಂಕ: 01/10/2021

ನಿಗಮ ಸಾಮಾಜಿಕ ಹೊಣೆಗಾರಿಕೆ ನೀತಿ

ಪರಿವಿಡಿ:

1. ಹಿನ್ನೆಲೆ
2. ಉದ್ದೇಶ
3. ನಿ.ಸಾ.ಹೊ.ಸಮಿತಿಯ ಷರತ್ತುಗಳು
4. ನಿ.ಸಾ.ಹೊ. ಚಟುವಟಿಕೆ/ಯೋಜನೆ
5. ನಿ.ಸಾ.ಹೊ. ಮೊಬಲಗು
6. ನಿ.ಸಾ.ಹೊ.ಮೊಬಲಗಿನ ಖರ್ಚುವೆಚ್ಚಗಳು
7. ಆಡಳಿತ
8. ಮಾಹಿತಿಯ ಪ್ರಚಾರ

1. ಹಿನ್ನೆಲೆ:

ನಿಗಮ ಸಾಮಾಜಿಕ ಹೊಣೆಗಾರಿಕೆಯು, ಕಂಪನಿಯು ತಾನು ಕಾರ್ಯಾಚರಣೆಯನ್ನು ನಡೆಸುವ ವ್ಯಾಪ್ತಿಯಲ್ಲಿನ ಸಮುದಾಯ ಮತ್ತು ಪರಿಸರದ ಕಡೆಗೆ ಕಂಪನಿಯ ಜವಾಬ್ದಾರಿಯ ಪ್ರಜ್ಞೆಯಾಗಿದೆ. ಇದು, ನೈತಿಕವಾಗಿ ವರ್ತಿಸುವುದರ ಮೂಲಕ ಸಮಾಜದ ಆರ್ಥಿಕ ಬೆಳವಳಿಗೆಗೆ ಬೃಹತ್ ಪ್ರಮಾಣದಲ್ಲಿ ಕೊಡುಗೆ ನೀಡಿ, ಸುಸ್ಥಿರ ಜೀವನೋಪಾಯಕ್ಕಾಗಿ ಸಾಮರ್ಥ್ಯವನ್ನು ನೆಲೆಗೊಳಿಸುವಲ್ಲಿ ವ್ಯವಹಾರದ ನಿರಂತರ ಬದ್ಧತೆಯಾಗಿರುತ್ತದೆ. ನಿಗಮವು ತನ್ನ ವ್ಯವಹಾರವನ್ನು ಜವಾಬ್ದಾರಿಯುತವಾಗಿ, ನ್ಯಾಯಯುತವಾಗಿ ಹಾಗೂ ಅತ್ಯಂತ ಪಾರದರ್ಶಕ ರೀತಿಯಲ್ಲಿ ನಡೆಸಲು ನಂಬಿಕೆಯುಳ್ಳದ್ದಾಗಿದೆ. ಕಂಪನಿಯು ತನ್ನ ಕಾರ್ಯಾಚರಣೆಯನ್ನು ನಡೆಸುವ ವ್ಯಾಪ್ತಿಯ ಸಮಾಜ ಹಾಗೂ ಪರಿಸರದ ಮೇಲೆ ಒಟ್ಟಾರೆ ಸಕಾರಾತ್ಮಕ ಪರಿಣಾಮವನ್ನು ಬೀರಲು, ಸಾಮಾಜಿಕ ಉದ್ದೇಶಗಳ ಅಂಗವಾಗಿ ನಿರಂತರವಾಗಿ ವಿಹಿತ ವಿಧಾನಗಳನ್ನು ಅನ್ವೇಶಿಸುತ್ತದೆ.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತವು, ರಾಜ್ಯದ ಒಂದು ವಿದ್ಯುತ್ ವಿತರಣ ಸಂಸ್ಥೆಯಾಗಿದ್ದು, ತನ್ನ ವಿದ್ಯುತ್ ಕೇಂದ್ರಗಳು ಹಾಗೂ ವಿತರಣಾ ಮಾರ್ಗಗಳ ಮೂಲಕ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ವಿತರಣೆಯನ್ನು ಮಾಡುವ ಜವಾಬ್ದಾರಿಯನ್ನು ಹೊಂದಿದೆ. ಹುವಿಸಕಂನಿಯು, ಸಾರ್ವಜನಿಕರಿಗೆ ಸೇವೆಯನ್ನು ನೀಡುವಲ್ಲಿ, ಸ್ಪರ್ಧಾತ್ಮಕ ದರದ, ಉತ್ತಮ ಗುಣಮಟ್ಟದ ವಿದ್ಯುತ್ತನ್ನು ನೀಡಲು ಕೆಳಕಂಡ ಧ್ಯೇಯೋದ್ದೇಶವನ್ನು ಹೊಂದಿದೆ:

1. ವಿದ್ಯುತ್ ವಿತರಣೆಯಲ್ಲಿ ಉತ್ತಮ ಕಾರ್ಯಾಚರಣೆಗೆ ಪ್ರೋತ್ಸಾಹ;
2. ತನ್ನ ಎಲ್ಲಾ ತಾಂತ್ರಿಕ ಸೌಲಭ್ಯಗಳು ಉನ್ನತಮಟ್ಟದ ನಿರ್ವಹಣೆಯಲ್ಲಿರುವುದನ್ನು ಖಚಿತಪಡಿಸಿಕೊಳ್ಳುವುದು; ಮತ್ತು
3. ಗ್ರಾಹಕ ಸೇವೆಯಲ್ಲಿ ಅತ್ಯುತ್ತಮ ಗುಣಮಟ್ಟವನ್ನು ಕಾಯ್ದಿರಿಸಿಕೊಳ್ಳುವುದು.

2. ಉದ್ದೇಶ:

ಈ ನೀತಿಯು, ನಿಗಮ ಸಾಮಾಜಿಕ ಹೊಣೆಗಾರಿಕೆಯನ್ನು ಒಂದು ಪ್ರಮುಖ ವ್ಯವಹಾರ ಪ್ರಕ್ರಿಯೆಯನ್ನಾಗಿಸಲು ಮಾರ್ಗಸೂಚಿಗಳನ್ನು ಅಣಿಗೊಳಿಸುತ್ತದೆ. ಭಾರತದಲ್ಲಿ ನಿಗಮದ ಕಾರ್ಯಚಟುವಟಿಕೆಗಳ ಸಾಮಾಜಿಕ ಹಾಗೂ ಪರಿಸರದ ಮೇಲಿನ ಪರಿಣಾಮವನ್ನು ಆಧರಿಸಿ, ಸಮಾಜದ ಕ್ಷೇಮಾಭಿವೃದ್ಧಿ ಚಟುವಟಿಕೆಗಳನ್ನು ಹೆಚ್ಚಿಸುವ ಗುರಿ ಹೊಂದಿದೆ. ಈ ಯೋಜನೆಯು ಕಂಪನಿ ಕಾಯ್ದೆ, 2013 ರ ಅನುಸೂಚಿ VII ಗೆ ಅನುಗುಣವಾಗಿ ಕೈಗೊಳ್ಳಬಹುದಾದ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ನಿರ್ದಿಷ್ಟಪಡಿಸುತ್ತದೆ. ನೀತಿಯು ಅನುಷ್ಠಾನಗೊಳಿಸುವಿಕೆಯ ವರ್ಷಗಳಲ್ಲಿ, ಕೈಗೊಳ್ಳಬೇಕಾದ ಯೋಜನೆ ಹಾಗೂ ಉದ್ದೇಶಗಳನ್ನು ಹೊರತರುವುದರೊಂದಿಗೆ, ಆಯ್ಕೆ ಮಾಡಿರುವ ಪ್ರದೇಶ/ವಲಯಗಳಲ್ಲಿ ಕಾರ್ಯಗತಗೊಳಿಸುವ ವಿಧಾನಗಳು ಹಾಗೂ

ಅನುಷ್ಠಾನ ವೇಳಾಪಟ್ಟಿಯನ್ನು ನಿರ್ದಿಷ್ಟಪಡಿಸುತ್ತದೆ. ಕಂಪನಿ ಕಾಯ್ದೆ, 2013ರ ಅನುಸೂಚಿ VII ರಲ್ಲಿ ನಮೂದಿಸಿರುವ ಚಟುವಟಿಕೆಗಳಿಗೆ ಒಳಪಟ್ಟು, ಕಂಪನಿಯು ವಿವಿಧ ಸನ್ನಿವೇಶ ಹಾಗೂ ಸವಾಲುಗಳಿಗೆ ಸೂಕ್ತ ಹಾಗೂ ಸುಲಭ ರೀತಿಯಲ್ಲಿ ಸ್ಪಂದಿಸಲು ನೀತಿಯ ಉದ್ದೇಶವನ್ನು ಸಾಧ್ಯವಾದಷ್ಟೂ ವಿಸ್ತೃತಗೊಳಿಸಲಾಗಿದೆ. ಆದರೆ, ಭಾರತದಾಚೆ ಕೈಗೊಳ್ಳುವ ಯಾವುದೇ ಚಟುವಟಿಕೆಗಳಿಗೆ ಯಾವುದೇ ರೀತಿಯ ಕೊಡುಗೆ ನೀಡುವುದಿಲ್ಲ.

3. ನಿಗಮ ಸಾಮಾಜಿಕ ಹೊಣೆಗಾರಿಕೆ ಸಮಿತಿಯ ಷರತ್ತುಗಳು:

ಹುವಿಸಕಂನಿಯ ನಿರ್ದೇಶಕ ಮಂಡಳಿಯು, ಕೆಳಕಂಡ ಷರತ್ತುಗಳೊಂದಿಗೆ ನಿಗಮ ಸಾಮಾಜಿಕ ಹೊಣೆಗಾರಿಕೆ ಸಮಿತಿಯನ್ನು ರಚಿಸಿದೆ:

ಎ. ನಿಗಮ ಸಾಮಾಜಿಕ ಹೊಣೆಗಾರಿಕೆ ನೀತಿಯನ್ನು ರೂಪಿಸಿ ಮಂಡಳಿಗೆ ಶಿಫಾರಸ್ಸು ಮಾಡುವುದು;

ಬಿ. ನಿಗಮ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳಿಗೆ ಭರಿಸುವ ವೆಚ್ಚಗಳಿಗೆ ಶಿಫಾರಸ್ಸು ಮಾಡುವುದು;

ಸಿ. ಕಾಲಕಾಲಕ್ಕೆ ಕಂಪನಿಯ ನಿಗಮ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳನ್ನು ಮೇಲ್ವಿಚಾರಣೆಗೆ ಒಳಪಡಿಸುವುದು.

ಡಿ. ಕಂಪನಿಯು ಕೈಗೊಳ್ಳುವ ಚಟುವಟಿಕೆಗಳು ಅಥವಾ ನಿ.ಸಾ.ಹೊ. ಯೋಜನೆಗಳು / ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಪಾರದರ್ಶಕ ಮೇಲ್ವಿಚಾರಣೆಯನ್ನು ಕಾರ್ಯಗತಗೊಳಿಸುವುದು.

ನಿಗಮದ ನಿ.ಸಾ.ಹೊ. ಸಮಿತಿಯು, ಯೋಜಿತ ಉದ್ದೇಶಗಳನ್ನು ಕಾಯಕಲ್ಪಗೊಳಿಸಲು ಕೆಳಕಂಡಂತೆ ಪ್ರಕ್ರಿಯೆಗೊಳಿಸುತ್ತದೆ:

- ನಿ.ಸಾ. ಹೊಣೆಗಾರಿಕೆ ಉಪಕ್ರಮಗಳ ಸಂಬಂಧವಾಗಿ, ನಿಗಮವು ಕೈಗೊಳ್ಳಬೇಕಾದ ಚಟುವಟಿಕೆಗಳನ್ನು ಸೂಚಿಸುವ ಕಾರ್ಯನೀತಿಯನ್ನು ರೂಪಿಸಿ ಪರಿಶೀಲಿಸುವುದು;
- ನಿ.ಸಾ. ಹೊಣೆಗಾರಿಕೆ ಚಟುವಟಿಕೆಗಳಿಗಾಗಿ ಭರಿಸಬೇಕಾದ ವೆಚ್ಚಕ್ಕೆ ಶಿಫಾರಸ್ಸು ಮಾಡುವುದು;
- ನಿಗಮವು ಕೈಗೊಳ್ಳಬೇಕಾದ ಯೋಜನೆ/ಕಾರ್ಯಕ್ರಮ/ಚಟುವಟಿಕೆಗಳ ಅನುಷ್ಠಾನ ಅಥವಾ ನಿ.ಸಾ.ಹೊ. ನಿಮಿತ್ತವಾಗಿ ಭರಿಸಿದ ಕಟ್ಟಕಡೆಯ ವೆಚ್ಚವನ್ನು ಖಚಿತಪಡಿಸಿಕೊಳ್ಳಲು ಪಾರದರ್ಶಕ ಮೇಲ್ವಿಚಾರಣಾ ಕಾರ್ಯನೀತಿಯನ್ನು ರೂಪಿಸುವುದು;
- ಕಾಲಕಾಲಕ್ಕೆ ಈ ನೀತಿಯನ್ನು ಮೇಲ್ವಿಚಾರಣೆಗೆ ಒಳಪಡಿಸಿ ಅನುಷ್ಠಾನಗೊಳಿಸುವುದು;
- ನಿ.ಸಾ.ಹೊ. ಚಟುವಟಿಕೆಗಳ ಬಗ್ಗೆ ಹಾಗೂ ಆ ನಿಮಿತ್ತವಾಗಿ ನಿಗಮದ ಕೊಡುಗೆಯ ಬಗ್ಗೆ ವಾರ್ಷಿಕವಾಗಿ ಮಂಡಳಿಗೆ ವರದಿಯನ್ನು ಸಲ್ಲಿಸುವುದು;
- ಕಾಯ್ದೆಯ ಅಡಿಯಲ್ಲಿ ಕಡ್ಡಾಯಗೊಳಿಸಿರುವ ಇತರ ಯಾವುದೇ ಅಗತ್ಯತೆ ಹಾಗೂ ತತ್ಸಂಬಂಧ ಹೊರಡಿಸಿರುವ ನಿಯಮಗಳ ಪಾಲನೆ.

4. ನಿ.ಸಾ.ಹೊ. ಚಟುವಟಿಕೆ/ಯೋಜನೆ:

ಕಂಪನಿ ಕಾಯ್ದೆ, 2013 ರ ಅನುಸೂಚಿ VII, ಕಂಪನಿಗಳು ತಮ್ಮ ನಿಗಮ ಸಾಮಾಜಿಕ ಹೊಣೆಗಾರಿಕೆ ಕಾರ್ಯನೀತಿಯಲ್ಲಿ ಕೆಳಗೆ ಸೂಚಿಸಿರುವ ಚಟುವಟಿಕೆಗಳು ಒಳಗೊಂಡಿರಬೇಕೆಂದು ಪಟ್ಟಿಮಾಡಿದೆ. ಸದರಿ ಕಾರ್ಯಾಚರಣೆಗಳು ಈ ಕೆಳಗಿನವುಗಳಿಗೆ ಸಂಬಂಧಿಸಿರುತ್ತವೆ:

i. ಹಸಿವು, ಬಡತನ ಮತ್ತು ಅಪೌಷ್ಟಿಕತೆಯನ್ನು ನರ್ಮೂಲನೆ ಮಾಡುವುದು, ನೈರ್ಮಲ್ಯದ ಪ್ರಚಾರಕ್ಕಾಗಿ ಮತ್ತು ಸುರಕ್ಷಿತವಾಗಿ ಕುಡಿಯುವ ನೀರನ್ನು ಒದಗಿಸಲು ಕೇಂದ್ರ ಸರ್ಕಾರದ ಸ್ವಚ್ಛ ಭಾರತ ಕೋಶಕ್ಕೆ ನೀಡಿದ ಕೊಡುಗೆ ಸೇರಿದಂತೆ ಮುಂಜಾಗ್ರತಾ ಕ್ರಮಗಳು ಮತ್ತು ನೈರ್ಮಲ್ಯ ಸೇರಿದಂತೆ ಆರೋಗ್ಯ ಸುರಕ್ಷೆಯನ್ನು ಉತ್ತೇಜಿಸುವುದು.

ii. ವಿಶೇಷವಾಗಿ ಮಕ್ಕಳು, ಮಹಿಳೆಯರು, ಹಿರಿಯರು ಮತ್ತು ವಿಭಿನ್ನ ಶಕ್ತರ ಜೀವನ ಉನ್ನತೀಕರಣ ಯೋಜನೆಯಲ್ಲಿ ವೃತ್ತಿ ಕೌಶಲ್ಯಗಳನ್ನು ಒಳಗೊಂಡಂತೆ ಶಿಕ್ಷಣವನ್ನು ಉತ್ತೇಜಿಸುವುದು.

iii. ಲಿಂಗ ಸಮಾನತೆ, ಮಹಿಳಾ ಸಬಲೀಕರಣವನ್ನು ಉತ್ತೇಜಿಸುವುದು, ಮಹಿಳೆಯರು ಮತ್ತು ಅನಾಥರಿಗೆ ಆಶ್ರಮ ಮತ್ತು ವಸತಿ ನಿಲಯಗಳನ್ನು ಸ್ಥಾಪಿಸುವುದು; ಹಿರಿಯ ನಾಗರಿಕರು ಮತ್ತು ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಗುಂಪುಗಳು ಎದುರಿಸುತ್ತಿರುವ ಅಸಮಾನತೆಗಳನ್ನು ಕಡಿಮೆ ಮಾಡುವ ಕ್ರಮಗಳಿಗಾಗಿ ವೃದ್ಧಾಶ್ರಮಗಳು, ಆರೈಕೆ ಕೇಂದ್ರಗಳು ಮತ್ತು ಇಂತಹ ಇತರೆ ಸೌಲಭ್ಯಗಳನ್ನು ಸ್ಥಾಪಿಸುವುದು.

iv. ಪರಿಸರ ಸಂರಕ್ಷಣೆ, ಪರಿಸರ ಸಮತೋಲನ, ಸಸ್ಯಸಂಪತ್ತು ಮತ್ತು ಪ್ರಾಣಿಗಳ ರಕ್ಷಣೆ, ಕೃಷಿ ಅರಣ್ಯ, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಗಂಗಾ ನದಿಯ ಪುನರುಜ್ಜೀವನಕ್ಕಾಗಿ ಕೇಂದ್ರ ಸರ್ಕಾರವು ಸ್ಥಾಪಿಸಿದ ನಿರ್ಮಲ ಗಂಗಾ ನಿಧಿಗೆ ಕೊಡುಗೆ ಸೇರಿದಂತೆ ಮಣ್ಣು, ವಾಯು ಮತ್ತು ನೀರಿನ ಗುಣಮಟ್ಟ ಕಾಯ್ದುಕೊಳ್ಳುವುದು.

v. ಐತಿಹಾಸಿಕ ಪ್ರಾಮುಖ್ಯತೆ ಹೊಂದಿರುವ ಕಟ್ಟಡಗಳು ಮತ್ತು ತಾಣಗಳು ಸೇರಿದಂತೆ ರಾಷ್ಟ್ರೀಯ ಪರಂಪರೆ, ಕಲೆ ಮತ್ತು ಸಂಸ್ಕೃತಿಯ ರಕ್ಷಣೆ; ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆ, ಸಾಂಪ್ರದಾಯಿಕ ಕಲೆ ಮತ್ತು ಕರಕುಶಲ ವಸ್ತುಗಳಿಗೆ ಉತ್ತೇಜನ ಮತ್ತು ಅಭಿವೃದ್ಧಿ.

vi. ಸಶಸ್ತ್ರ ಪಡೆಗಳ ಶೂರರು, ಯುದ್ಧದಲ್ಲಿ ಮಡಿದ ಸೈನಿಕರ ವಿಧವೆಯರು ಮತ್ತು ಅವರ ಅವಲಂಬಿತರ ಪ್ರಯೋಜನಕ್ಕಾಗಿ ಕ್ರಮಗಳು.

vii. ಗ್ರಾಮೀಣ ಕ್ರೀಡೆ, ರಾಷ್ಟ್ರೀಯವಾಗಿ ಗುರುತಿಸಲ್ಪಟ್ಟ ಕ್ರೀಡೆಗಳು, ಪ್ಯಾರಾಲಿಂಪಿಕ್ ಕ್ರೀಡೆಗಳು ಮತ್ತು ಓಲಿಂಪಿಕ್ ಕ್ರೀಡೆಗಳ ಉತ್ತೇಜನಕ್ಕಾಗಿ ತರಬೇತಿ.

viii. ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ, ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ರೂಪಿಸುವ ಪರಿಹಾರ ನಿಧಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕ್ಷೇಮಾಭಿವೃದಿ, ಇತರ ಹಿಂಡುಳಿದ ವರ್ಗಗಳು, ಅಲ್ಪ ಸಂಖ್ಯಾತರು ಹಾಗೂ ಮಹಿಳಾ ಕಲ್ಯಾಣಕ್ಕಾಗಿ ಕೊಡುಗೆ; **ಮತ್ತು**

ix. ಕೇಂದ್ರ ಸರ್ಕಾರದ ಅನುಮೋದನೆ ಹೊಂದಿರುವ ಶೈಕ್ಷಣಿಕ ಸಂಸ್ಥೆಗಳೊಳಗೆ ಇರುವ ತಂತ್ರಜ್ಞಾನ ಇನ್ಕುಬೇಟರ್‌ಗಳಿಗೆ ಕೊಡುಗೆಗಳು ಅಥವಾ ನಿಧಿಗಳು.

x. ಗ್ರಾಮೀಣ ಅಭಿವೃದ್ಧಿ ಯೋಜನೆಗಳು

xi. ಕೊಳೆಗೇರಿ ಪ್ರದೇಶ ಅಭಿವೃದ್ಧಿ ಯೋಜನೆಗಳು

ವಿವರಣೆ: ಈ ಅಂಶದ ಉದ್ದೇಶಕ್ಕಾಗಿ 'ಕೊಳೆಗೇರಿ ಪ್ರದೇಶ' ಎಂಬ ಶಬ್ದವು ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಆ ಸಮಯದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿರುವ ಯಾವುದೇ ಇತರ ಪ್ರಾಧಿಕಾರದಿಂದ ಘೋಷಿಸಲ್ಪಟ್ಟ ಪ್ರದೇಶ.

ಕಂಪನಿ ವ್ಯವಹಾರಗಳ ಸಚಿವಾಲಯದಿಂದ ಪರಿಷ್ಕರಿಸಲ್ಪಡುವ ಬಾಧ್ಯತೆ ಅಡಿಯಲ್ಲಿನ ಖರ್ಚಿನ ಪರಿಗಣನೆಗೆ ಸಂಬಂಧಿಸಿದಂತೆ ಕಂಪನಿಗಳ ಕಾಯ್ದೆ ಷೆಡ್ಯೂಲ್ VII, 2013 ಮಾರ್ಗದರ್ಶಿ ದಾಖಲೆಯಾಗಿದೆ. ಆದ್ದರಿಂದ ಕಾಲ ಕಾಲಕ್ಕೆ ಕಂಪನಿ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ ದಿಂದ ತಿದ್ದುಪಡಿಯಾಗುವ ಷೆಡ್ಯೂಲ್ VII ನ್ನು ನಿ.ಸಾ.ಹೊ. ನೀತಿಯಲ್ಲಿ ಬದಲಿಸಬೇಕು.

5. ನಿಗಮ ಸಾಮಾಜಿಕ ಹೊಣೆಗಾರಿಕೆ ಮೊಬಲಗು:

ಕಂಪನಿ ಕಾಯಿದೆ 2013ರ ಪ್ರಕರಣ 135 ಹಾಗೂ ಅದರಡಿಯಲ್ಲಿ ರೂಪಿಸಿರುವ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವಂತೆ, ಪ್ರತಿ ಆರ್ಥಿಕ ವರ್ಷದಲ್ಲಿ, ತತ್‌ಕ್ಷಣದ ಹಿಂದಿನ ಮೂರು ವರ್ಷಗಳಲ್ಲಿ ಗಳಿಸಿದ ನಿವ್ವಳ ಲಾಭದ ಕನಿಷ್ಠ ಶೇಕಡಾ 2ರಷ್ಟನ್ನು ನಿಗಮ ಸಾಮಾಜಿಕ ಹೊಣೆಗಾರಿಕೆಯ ಅನುಸರಣೆಯಾಗಿ ಖರ್ಚು ಮಾಡುವುದನ್ನು ನಿಗಮವು ಖಚಿತಪಡಿಸಿಕೊಳ್ಳತಕ್ಕದ್ದು.

ಈ ನೀತಿಯ ಪ್ರಕಾರ, ನಿಗಮ ಸಾಮಾಜಿಕ ಹೊಣೆಗಾರಿಕೆ ಖರ್ಚಿನ ಮೊದಲ ಆರ್ಥಿಕ ವರ್ಷವು 2014–15 ಆಗಿದ್ದು, ನಿವ್ವಳ ಲಾಭವು ಆ.ವ 2011–12, 2012–13 ಮತ್ತು 2013–14 ರ ನಿವ್ವಳ ಲಾಭದ ಸರಾಸರಿ ಎಂದು ಅರ್ಥೈಸುತ್ತದೆ.

ಮೇಲೆ ತಿಳಿಸಿರುವ ನಿವ್ವಳ ಲಾಭ ಎಂದರೆ, ನಿಗಮದ ಲೆಕ್ಕಪುಸ್ತಕಗಳ ಪ್ರಕಾರ ತೆರಿಗೆಗೆ ಮುಂಚಿನ ನಿವ್ವಳ ಲಾಭ ಎಂದಾಗುತ್ತದೆ. ಇದರಲ್ಲಿ ಭಾರತದಾಚೆ ನಡೆಸಿದ ವ್ಯವಹರಣೆಯಿಂದ ಗಳಿಸಿದ ಲಾಭವನ್ನು ಒಳಗೊಳ್ಳುವುದಿಲ್ಲ.

6. ನಿ.ಸಾ.ಹೊ.ಮೊಬಲಗಿನ ಖರ್ಚುವೆಚ್ಚಗಳು

ನಿ.ಸಾ.ಹೊ. ಸಮಿತಿಯು, ನಿಗಮ ಸಾಮಾಜಿಕ ಹೊಣೆಗಾರಿಕೆ ಮೊಬಲಗಿನ ಖರ್ಚುವೆಚ್ಚಗಳನ್ನು ಕೆಳಕಂಡವುಗಳಿಗೆ ಸಂಬಂಧಿಸಿದಂತೆ, ನಿರ್ಧರಿಸುತ್ತದೆ :

- ಅಭಿವೃದ್ಧಿತ ವಿವಿಧ ಸಂಸ್ಥೆಗಳು ಹಾಗೂ ಪ್ರಾರಂಭಿಕಹಂತದ ಆಕರ ಸಂಸ್ಥೆಗಳಿಗೆ ನಿಧಿ ಸೌಲಭ್ಯ ಒದಗಿಸಬೇಕಾದ ಶೇಕಡಾವಾರು ಒಟ್ಟು ಮೊಬಲಗು; ಮತ್ತು
- ವಿತರಣೆಯನ್ನು ಎಷ್ಟು ಭಾಗಗಳಲ್ಲಿ ಬಿಡುಗಡೆ ಮಾಡಬೇಕು;
- ನಿ.ಸಾ.ಹೊ.ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳಿಂದ ಯಾವುದೇ ಹೆಚ್ಚುವರಿ ಕಂಡುಬಂದರೆ, ಅವು ನಿಗಮದ ವ್ಯವಹರಿತ ಲಾಭದ ಭಾಗವಾಗಿರುವುದಿಲ್ಲ.
- ಸ್ವೀಕರಿಸಿದ ಯಾವುದೇ ವಂತಿಗೆಯಿಂದ ಗಳಿಸಿದ ಆದಾಯವು ಹಾಗೂ ನಿ.ಸಾ.ಹೊ. ಚಟುವಟಿಕೆಗಳಿಂದ ಒದಗಿದ ಯಾವುದೇ ಹೆಚ್ಚುವರಿಯನ್ನು ನಿಗಮ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳಿಗೆ ಮಾತ್ರ ಬಳಸತಕ್ಕದ್ದು.
- ನಿಗಮದ ಉದ್ಯೋಗಿಗಳ ನಿ.ಸಾ.ಹೊ. ಸಾಮರ್ಥ್ಯವನ್ನು ರೂಪಿಸಲು ನಿಧಿಯನ್ನು ಸಜ್ಜುಗೊಳಿಸಲು ಸಮಿತಿಯು ಶಿಫಾರಸ್ಸು ಮಾಡಿ, ತನ್ಮೂಲಕ ನಿ.ಸಾ.ಹೊ. ಚಟುವಟಿಕೆಗಳನ್ನು ಕೈಗೊಳ್ಳತಕ್ಕದ್ದು.

7. ಆಡಳಿತ

1 ಪ್ರತಿ ವರ್ಷ, ಆಯಾ ಆರ್ಥಿಕ ವರ್ಷದಲ್ಲಿ ಹಮ್ಮಿಕೊಂಡಿರುವ ನಿ.ಸಾ.ಹೊ.ಚಟುವಟಿಕೆಗಳ ಕಾರ್ಯಕ್ರಮ ವಿವರಗಳ ಯೋಜನೆ ಹಾಗೂ ತತ್ಸಂಬಂಧ ಖರ್ಚುವೆಚ್ಚ ವಿವರಗಳ ಪ್ರಸ್ತಾಪವನ್ನು ನಿ.ಸಾ.ಹೊ. ಸಮಿತಿಯು ಅನುಮೋದನೆಗಾಗಿ ಮಂಡಳಿಗೆ ಮಂಡಿಸತಕ್ಕದ್ದು. ಅವಶ್ಯವೆಂದು ಕಂಡುಬಂದರೆ, ಅಗತ್ಯ ಮಾರ್ಪಾಡುಗಳೊಂದಿಗೆ ಮಂಡಳಿಯು ನಿ.ಸಾ.ಹೊಣೆಗಾರಿಕೆ ಚಟುವಟಿಕೆಯ ಯೋಜನೆಯನ್ನು ಪರಿಗಣಿಸಿ ಅನುಮೋದಿಸುತ್ತದೆ.

2 ನಿಗಮ ಸಾಮಾಜಿಕ ಹೊಣೆಗಾರಿಕೆ ಸಮಿತಿಯು, ನಿ.ಸಾ.ಹೊ.ಚಟುವಟಿಕೆಗಳ ಅನುಷ್ಠಾನವನ್ನು ಪರಿಶೀಲಿಸಿ, ಈ ನೀತಿಯ ಪ್ರಕಾರ ಕಾರ್ಯಕ್ರಮಗಳು ಸಮರ್ಥನೀಯ ಹಾಗೂ ದಕ್ಷ ರೀತಿಯಲ್ಲಿ ನಿರ್ವಹಿತಗೊಂಡಿರುವುದನ್ನು ಖಚಿತಪಡಿಸಿಕೊಳ್ಳಬೇಕೆಂದು ಕಾಲಕಾಲಕ್ಕೆ ಅಗತ್ಯ ನಿರ್ದೇಶನ ನೀಡತಕ್ಕದ್ದು.

3 ಪ್ರತಿ ಆರು ತಿಂಗಳುಗಳಿಗೊಮ್ಮೆ, ಆ ಆರು ತಿಂಗಳುಗಳಲ್ಲಿ ಅನುಮೋದಿತ ನಿ.ಸಾ.ಹೊ. ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿರುವ ಪ್ರಗತಿಯ ಬಗ್ಗೆ ತಹಲ್ ವರದಿಯನ್ನು ಒದಗಿಸತಕ್ಕದ್ದು. ಅಂತಹ ಸಮಿತಿಯು ಪರಿಶೀಲಿಸಿ, ಅನುಷ್ಠಾನಿತ ಕಾರ್ಯದ ಬಗ್ಗೆ ಮಂಡಳಿಯ ಗಮನಕ್ಕೆ ತರತಕ್ಕದ್ದು.

4 ಪ್ರತಿ ಆರ್ಥಿಕ ವರ್ಷಾಂತ್ಯಕ್ಕೆ, ಮಂಡಳಿಗೆ ನಿ.ಸಾ.ಹೊ.ಸಮಿತಿಯು ವರದಿಯನ್ನು ಮಂಡಿಸತಕ್ಕದ್ದು.

8. ಮಾಹಿತಿಯ ಪ್ರಚಾರ

ನಿ.ಸಾ.ಹೊ.ಸಮಿತಿಯು, ನಿಗಮದ ಮಂಡಳಿಗೆ ಕನಿಷ್ಠ ವಾರ್ಷಿಕವಾಗಿ, ನಿಗಮವು ಕೈಗೊಂಡ ನಿ.ಸಾಹೊ. ಯೋಜನೆಗಳು/ಚಟುವಟಿಕೆಗಳು ಹಾಗೂ ಅದರ ಯೋಜನೆಗಳು/ಚಟುವಟಿಕೆಗಳಿಂದ ಕಂಡುಬಂದ ಫಲಿತಗಳ ಬಗ್ಗೆ ವರದಿಯನ್ನು ಸಲ್ಲಿಸತಕ್ಕದ್ದು.

ನಿಗಮವು ಈ ನೀತಿಯ ಮಾಹಿತಿಯನ್ನು ನಿಗಮದ ಜಾಲತಾಣ www.hescom.karnataka.gov.in ದಲ್ಲಿ ಪ್ರಕಟಿಸತಕ್ಕದ್ದು. ಮುಂದುವರೆಸಿ, ನಿ.ಸಾ.ಹೊ. ಕಾರ್ಯಚಟುವಟಿಕೆಯ ವಿವರವಾದ ವರದಿಯನ್ನು ನಿಗಮದ ವಾರ್ಷಿಕ ಲೆಕ್ಕಪತ್ರಗಳ ನಿರ್ದೇಶಕರ ವರದಿಯಲ್ಲಿ ಹಾಗೂ ಜಾಲತಾಣದಲ್ಲಿ ಪ್ರಚುರಪಡಿಸುವುದು.

ನಿ.ಸಾ.ಹೊ. ನೀತಿಯನ್ವಯ, ಉದ್ದೇಶಿತ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸಿ, ಮೇಲ್ವಿಚಾರಣೆಗೆ ಒಳಪಡಿಸಿ, ಅನುಸರಣೆ ಮಾಡಿರುವ ಬಗ್ಗೆ ನಿ.ಸಾ.ಹೊ. ಸಮಿತಿಯು ನಿಗಮದ ವಾರ್ಷಿಕ ಲೆಕ್ಕಪತ್ರಗಳಲ್ಲಿ ಜವಾಬ್ದಾರಿಯುತವಾದ ಹೇಳಿಕೆಯನ್ನು ನೀಡತಕ್ಕದ್ದು.

ಮಂಡಳಿಯ ವರದಿಯಲ್ಲಿ ಸೇರ್ಪಡೆ ಮಾಡಬೇಕಾಗಿರುವ ನಿ.ಸಾ.ಹೊ. ಚಟುವಟಿಕೆಗಳ ವಾರ್ಷಿಕ ವರದಿ

1. ಕೈಗೊಳ್ಳಬಹುದಾದ ಯೋಜನೆಗಳ/ಕಾರ್ಯಕ್ರಮಗಳ ಅವಲೋಕನ ಸೇರಿದಂತೆ ಕಂಪನಿಯ ನಿ.ಸಾ.ಹೊ. ಚಟುವಟಿಕೆಗಳ ಸಂಕ್ಷಿಪ್ತ ರೂಪರೇಖೆಯನ್ನು ಅನುಭಂದ 4 ರಲ್ಲಿ ಲಗತ್ತಿಸಿದೆ. ನಿ.ಸಾ.ಹೊ. ಚಟುವಟಿಕೆಗಳ ಮತ್ತು ಯೋಜನೆಗಳ ಅಥವಾ ಕಾರ್ಯಕ್ರಮಗಳು ವೆಬ್ ಲಿಂಕ್ ಗೆ ಸಂಬಂಧಿಸಿದಂತೆ : www.hescom.karnataka.gov.in
2. ನಿ.ಸಾ.ಹೊ. ಸಮಿತಿಯ ರಚನೆಯು ಕೆಳಕಂಡಂತಿರುತ್ತದೆ.

ಕ್ರ. ಸಂ.	ಹೆಸರು ಶ್ರೀಯುತರು	ವಿವರ
1.	ಅಧ್ಯಕ್ಷರು, ಹು.ವಿ.ಸ. ಕಂಪನಿ	ಅಧ್ಯಕ್ಷರು
2.	ವ್ಯವಸ್ಥಾಪಕ ನಿರ್ದೇಶಕರು, ಹು.ವಿ.ಸ. ಕಂಪನಿ	ಸದಸ್ಯರು
	ಕಂಪನಿ ಕಾರ್ಯದರ್ಶಿ, ಹು.ವಿ.ಸ. ಕಂಪನಿ	ಸಂಚಾಲಕರು

ಟಿಪ್ಪಣಿ: ಸದಸ್ಯತ್ವವು ಹು.ವಿ.ಸ.ಕಂ.ನಿಯ ಮಂಡಳಿಯ ನಿರ್ದೇಶಕತ್ವ ಕೊನೆಗೊಳ್ಳುವಿಕೆಯೊಂದಿಗೆ ಅಂತ್ಯಗೊಳ್ಳುತ್ತದೆ.

3. ಕಂಪನಿಯ ಕಳೆದ ಮೂರು ಆರ್ಥಿಕ ವರ್ಷಗಳ ಸರಾಸರಿ ನಿವ್ವಳ ಲಾಭ (ಆ.ವ 2017–18 ರಿಂದ 2019–20)

ಆರ್ಥಿಕ ವರ್ಷ	ತೆರಿಗೆ ಮುಂಚಿನ ನಿವ್ವಳ ಲಾಭ (ರೂ. ಕೋಟಿಗಳಲ್ಲಿ)
2017–18	–140.28 (ನಷ್ಟ)
2018–19	689.99 (ಲಾಭ)
2019–20	–682.21 (ನಷ್ಟ)

4. ನಿಗದಿತ ನಿ.ಸಾ.ಹೊ. ವೆಚ್ಚ– ಇಲ್ಲಾ
5. ಆರ್ಥಿಕ ವರ್ಷದಲ್ಲಿ ನಿ.ಸಾ.ಹೊ. ಖರ್ಚು ವಿವರ – ಇಲ್ಲಾ
   1. ಆರ್ಥಿಕ ವರ್ಷದಲ್ಲಿ ಒಟ್ಟು ಖರ್ಚು ಮಾಡಬೇಕಾಗಿರುವ ಮೊತ್ತ – ಇಲ್ಲಾ
   2. ಖರ್ಚು ಮಾಡದೆ ಇರುವ ಮೊತ್ತ (ಯಾವುದಾದರೂ ಇದ್ದಲ್ಲಿ) – ಇಲ್ಲಾ
   3. ಆರ್ಥಿಕ ವರ್ಷದಲ್ಲಿ ಯಾವ ರೀತಿ ಖರ್ಚನ್ನು ಭರಿಸಲಾಗಿದೆ. – ಇಲ್ಲಾ.
6. ಒಂದು ವೇಳೆ ಕಂಪನಿಯು ಕಳೆದ ಮೂರು ಆರ್ಥಿಕ ವರ್ಷಗಳ ಸರಾಸರಿ ನಿವ್ವಳ ಲಾಭದ ಶೇಕಡಾ 2 ರಷ್ಟು ಅಥವಾ ಯಾವುದೇ ಭಾಗವನ್ನು ಖರ್ಚು ಮಾಡಲು ವಿಫಲವಾಗಿದ್ದರೆ ಕಂಪನಿಯು ತನ್ನ ಮಂಡಳಿಯ ವರದಿಯಲ್ಲಿ ಖರ್ಚು ಮಾಡದಿರುವದಕ್ಕೆ ಕಾರಣಗಳನ್ನು ನೀಡಬೇಕಾಗುತ್ತದೆ. – ಅನ್ವಯಿಸುವುದಿಲ್ಲ ಏಕೆಂದರೆ ಕಳೆದ ಮೂರು ಆರ್ಥಿಕ ವರ್ಷಗಳ ಸರಾಸರಿ ನಿವ್ವಳ ಲಾಭವು ರೂ.(–)44.17 ಕೋಟಿ (ನಷ್ಟ)
7. ನಿ.ಸಾ.ಹೊ. ಸಮಿತಿಯ ಜವಾಬ್ದಾರಿಯ ಹೇಳಿಕೆ :

   ಸದಸ್ಯರ ಹೇಳಿಕೆಯ ಅನ್ವಯ ನಿ.ಸಾ.ಹೊ. ನೀತಿಯ ಅನುಷ್ಠಾನ ಮತ್ತು ಮೇಲ್ವಿಚಾರಣೆಯು ನಿ.ಸಾ.ಹೊ. ಉದ್ಯೇಶ ಹಾಗೂ ಕಂಪನಿಯ ಕಾರ್ಯನೀತಿಯ ಅನುಸರಣೆಯಗಿರುತ್ತದೆ.

ಪರಿಷ್ಕೃತ ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ

ಗೆ,

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ಸದಸ್ಯರುಗಳು,

ಹುಬ್ಬಳ್ಳಿ.

ಹಣಕಾಸುತಃಖ್ತೆಗಳ ಮೇಲಿನ ಲೆಕ್ಕಪರಿಶೋಧನಾ ವರದಿ:

ನಾವು **ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ** (“ಕಂಪನಿ”) ಹಣಕಾಸು ತಃಖ್ತೆಗಳನ್ನು ಪರಿಶೋಧಿಸಿದ್ದೇವೆ. ಸದರಿ ಹಣಕಾಸು ತಃಖ್ತೆಗಳು 31 ನೇ ಮಾರ್ಚ 2021 ರಂದು ಇರುವಂತೆ ಅಢಾವೆ ಪತ್ರ ಹಾಗೂ ಲಾಭ ಮತ್ತು ನಷ್ಟದ ತಃಖ್ತೆ, ವರ್ಷಾಂತ್ಯದ ನಗದು ಹರಿವಿನ ತಃಖ್ತೆ ಮತ್ತು ಗಣನೀಯ ಲೆಕ್ಕಪತ್ರ ನೀತಿಗಳು ಹಾಗೂ ಇತರೆ ವಿವರಿಸಲ್ಪಟ್ಟ ಮಾಹಿತಿಗಳ ಟಿಪ್ಪಣಿಗಳನ್ನು ಒಳಗೊಂಡಿರುತ್ತವೆ (ಇನ್ನುಮುಂದೆ “ಹಣಕಾಸು ಹೇಳಿಕೆಗಳು” ಎಂದು ಉಲ್ಲೇಖಿಸಲಾಗುತ್ತದೆ). ಮಂಡಳಿಯು 28 ನೇ ಅಕ್ಟೋಬರ್, 2021 ರಂದು ಅಳವಡಿಸಿಕೊಂಡಿರುವ ಪರಿಷ್ಕೃತ ಹಣಕಾಸು ತಃಖ್ತೆಗಳನ್ನು ಪರಿಗಣಿಸಿ ನಾವು ಈ ಪರಿಷ್ಕೃತ ವರದಿಯನ್ನು ನೀಡುತ್ತಿದ್ದು, ಇದು 25 ನೇ ಆಗಸ್ಟ್, 2021 ರ ನಮ್ಮ ಹಿಂದಿನ ವರದಿಯನ್ನು ಅತಿಕ್ರಮಿಸುತ್ತದೆ.

ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ ರವರು ಮಾಡಿದ ಅವಲೋಕನಗಳ ಹಿನ್ನೆಲೆಯ ಮೇರೆಗೆ ಮಂಡಳಿಯು ಹಣಕಾಸು ತಃಖ್ತೆಗಳನ್ನು ಪರಿಷ್ಕರಿಸಲು ಅನುಮೋದನೆ ನೀಡಿದ್ದು, ಇದರ ಫಲಿತಾಂಶವಾಗಿ ಕಂಪನಿಯು ಟಿಪ್ಪಣಿ ಸಂ.31–11 ರಲ್ಲಿ ಬಹಿರಂಗಪಡಿಸಿದಂತೆ ನಷ್ಟದಲ್ಲಿ ರೂ.124.42 ಕೋಟಿಗಳಷ್ಟು ಕಡಿಮೆಯಾಗಿರುತ್ತದೆ.

ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮ್ಮ ಅತ್ಯುತ್ತಮ ಮಾಹಿತಿ ಮತ್ತು ನಮಗೆ ಒದಗಿಸಿರುವ ವಿವರಣೆಗನುಗುಣವಾಗಿ, ಯೋಗ್ಯ ಕಂಡಿಕೆಯ ತಳಹದಿಯಲ್ಲಿ ವಿವರಿಸಿದ ವಿಷಯದ ಪರಿಣಾಮಗಳನ್ನು ಹೊರತುಪಡಿಸಿ, ಮೇಲೆ ಹೇಳಿದ ಹಣಕಾಸು ಹೇಳಿಕೆಗಳು ಕಂಪನಿ ಕಾಯ್ದೆ, 2013 (“ಕಾಯ್ದೆ”) ಕ್ಕೆ ಅಗತ್ಯವಿರುವ ರೀತಿಯಲ್ಲಿ ಮತ್ತು ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ಲೆಕ್ಕಪರಿಶೋಧನಾ ತತ್ವಗಳಿಗೆ ಅನುಗುಣವಾಗಿ ನೈಜವಾದ ಮತ್ತು ನ್ಯಾಯಯುತ ದೃಷ್ಟಿಕೋನವನ್ನು ನೀಡಿ, 31ನೇ ಮಾರ್ಚ್ 2021 ಕ್ಕೆ ಇರುವಂತೆ ಕಂಪನಿಯ ವ್ಯವಹಾರಗಳ ಸ್ಥಿತಿ, ಸದರಿ ದಿನಾಂಕದಂದು ಕೊನೆಗೊಳ್ಳುವ ವರ್ಷದ ನಷ್ಟ ಮತ್ತು ನಗದು ಹರಿವು ಮಾಹಿತಿಯನ್ನು ನೀಡುತ್ತವೆ.

ಯೋಗ್ಯಅಭಿಪ್ರಾಯಕ್ಕೆ ಆಧಾರ:

ಕಂಪನಿಯು ಲೆಕ್ಕಗಳು ಮತ್ತು ಲೆಕ್ಕಪತ್ರ ನೀತಿಗಳ ಟಿಪ್ಪಣಿಗಳಿಗೆ ಒಳಪಟ್ಟು ಲೆಕ್ಕಗಳು ಮತ್ತು ಲೆಕ್ಕಪತ್ರ ನೀತಿಗಳ ತನ್ನ ಟಿಪ್ಪಣಿಗಳಲ್ಲಿನೀಡಿದ ಕೆಲವು ವ್ಯತ್ಯಾಸಗಳನ್ನು ಬಹಿರಂಗಪಡಿಸಿದೆ, ಅರ್ಹ ಅಭಿಪ್ರಾಯಕ್ಕೆ ಆಧಾರವಾಗಿ ನಾವು ಈ ಕೆಳಗಿನ ಅಂಶಗಳನ್ನು ಮತ್ತಷ್ಟು ವರದಿ ಮಾಡುತ್ತೇವೆ.

ಸಾಲಗಳು & ಎರವಲುಗಳು:

1. ಕಂಪನಿಯು ಆರ್ಎಪಿಡಿಆರ್ಪಿ ಯೋಜನೆಗಾಗಿ ಪವರ್ ಫೈನಾನ್ಸ್ ಕಾರ್ಪೋರೇಷನ್‌ನಿಂದ ಸಾಲವನ್ನು ಪಡೆದಿದ್ದು, ಇದನ್ನು ಸರ್ಕಾರದ ಆದೇಶದ ಪ್ರಕಾರ ಅನುದಾನವೆಂದು ಪರಿಗಣಿಸಬೇಕು. ಕಂಪನಿಯು ಇದನ್ನು ದೀರ್ಘಾವಧಿ ಸಾಲವೆಂದು ತೋರಿಸುತ್ತಲಿದೆ ಹಾಗೂ ಆಕರಿಸಿದ ಬಡ್ಡಿಯನ್ನು ಆಸ್ತಿಗಳ ಬಂಡವಾಳೀಕರಣಕ್ಕೆ ಲೆಕ್ಕೀಕರಿಸಲಾಗಿದೆ. ಕಂಪನಿಯು ಪಿಎಫ್‌ಸಿಯಿಂದ ಅನುದಾನದ ಮೊತ್ತದ ದೃಢೀಕರಣಕ್ಕಾಗಿ ಕಾಯುತ್ತಿದೆ ಮತ್ತು ಅದು ಅಸಲು ಮತ್ತು ಬಡ್ಡಿಯ ಮೊತ್ತದ ಮರುಪಾವತಿಯನ್ನು ಮುಂದುವರಿಸುತ್ತಿದೆ. ಅಂತಹ ಸಾಲಗಳು ಅನುದಾನಗಳೆಂದು ಭವಿಷ್ಯದ ಸಂವಹನದ ಫಲಿತಾಂಶವನ್ನು ಸ್ಪಷ್ಟಪಡಿಸಲಾಗಿಲ್ಲ ಮತ್ತು ಬಡ್ಡಿಗಳು ಮತ್ತು ಮರುಪಾವತಿಸಲಾದ ಅಸಲು ಮೊತ್ತವನ್ನು ಹಿಂತಿರುಗಿಸಲು ಕಾರಣವಾಗಬಹುದು.
2. ಕಂಪನಿಯು ತನ್ನ ಹಣಕಾಸು ಹೇಳಿಕೆಗಳಲ್ಲಿ ಯೋಜನಾವಾರು ವೆಚ್ಚಗಳು ಮತ್ತು ಎರವಲು ಪಡೆದ ಸಾಲಗಳು ಮತ್ತು ತನ್ನ ಸ್ವಂತ ಉಳಿಕೆಯನ್ನು ಬಹಿರಂಗಪಡಿಸಿಲ್ಲ.

ಬಳಕೆದಾರರಿಂದ ಭದ್ರತಾ ಠೇವಣಿ:

3. ಗ್ರಾಹಕರಿಂದ ಪಡೆದ ಭದ್ರತಾ ಠೇವಣಿಗೆ ಸಂಬಂಧಿಸಿದ ಕಂಪನಿಯ ಲೆಡ್ಜರ್ ಬಾಕಿ ರೂ.924.69ಕೋಟಿಯಷ್ಟು ಇದ್ದು, ಆದರೆ ಆರ್‌ಎಪಿಡಿಆರ್‌ಪಿ–ಎನ್‌ಸಾಫ್ಟ್ ತಂತ್ರಾಂಶಗಳಲ್ಲಿ ನಿರ್ವಹಿಸಿದ ಕಕ್ಷಿಗಾರರ ಪೂರಕ ಖಾತೆಗಳಲ್ಲಿ ಕೇವಲ ರೂ.646.73 ಕೋಟಿಗಳೆಂದು ತೋರಿಸಲಾಗುತ್ತಿದೆ. ಕಂಪನಿಯು ಈ ಶಿಲ್ಕಿನ ಸಮನ್ವಯವನ್ನು ಪರಿಣಾಮಕಾರಿಯಾಗಿ ಕೈಕೊಳ್ಳಬೇಕಾಗಿದೆ. ಕಂಪನಿಯು ತನ್ನ ಖಾತೆಗಳ ಪುಸ್ತಕಗಳಲ್ಲಿ ರೂ 277.96 ಕೋಟಿಗಳನ್ನು ಹೆಚ್ಚುವರಿಯಾಗಿ ಭದ್ರತಾ ಠೇವಣಿಯೆಂದು ಸಾಗಿಸುತ್ತಿದೆ ಮತ್ತು ಈ ಶಿಲ್ಕುಗಳ ಮೇಲಿನ ಬಡ್ಡಿಗಾಗಿ ಹೆಚ್ಚುವರಿ ಅವಕಾಶವನ್ನು ಒದಗಿಸಲಾಗಿದೆ.

ದೀರ್ಘಾವಧಿ ಅವಕಾಶಗಳು ಮತ್ತು ಅಲ್ಪಾವಧಿ ಅವಕಾಶಗಳು:

4. ಕಂಪನಿಯು ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗೆ ವಿಳಂಬವಾಗಿ ಪಾವತಿಸುತ್ತಿದ್ದು, ಅದರ ಮೇರೆಗೆ ವಿಳಂಬಪಾವತಿಯ ಮೇಲಿನ ಬಡ್ಡಿಗಾಗಿ ಲೆಕ್ಕಪುಸ್ತಕಗಳಲ್ಲಿ ಅವಕಾಶವನ್ನು ಒದಗಿಸಲಾಗಿರುವುದಿಲ್ಲ. ಇದರಿಂದಾಗಿ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗೆ ಪಾವತಿಸಬೇಕಾದ ಕೊಡುಗೆಗಳ ಶೇಕಡಾವಾರು ಪ್ರಮಾಣವು ವರ್ಷದಿಂದ ವರ್ಷಕ್ಕೆ ಏರಿಕೆಯಾಗಿದೆ. ಕಂಪನಿಯು ತನ್ನ ನಿವೃತ್ತ ಉದ್ಯೋಗಿಗಳಿಗೆ ಪಿಂಚಣಿ ಮತ್ತು ಉಪದಾನ ಪಾವತಿಗಳ ಸೇವೆಗಳನ್ನು ಒದಗಿಸುತ್ತಿದೆ ಎಂದು ಗಮನಿಸಲಾಗಿದೆ, ಅದರ ಮೇರೆಗೆ ಆಡಳಿತದ ವೆಚ್ಚವನ್ನು ಟ್ರಸ್ಟ್‌ನಿಂದ ಕ್ಲೇಮ್ ಮಾಡಲಾಗುವುದಿಲ್ಲ.

ವ್ಯಾಪಾರ ಸಂಬಂಧಿ ಪಾವತಿಗಳು:

5. ಕಂಪನಿಯು ತನ್ನ ಪೂರೈಕೆದಾರರಿಂದ ಹಾಗೂ ಇತರ ವಿಸಕಂಗಳಿಂದ ಶಿಲ್ಕಿನ ದೃಢೀಕರಣವನ್ನು ಪಡೆದಿರುವುದಿಲ್ಲ.

6. ಎಸ್‌ಎಲ್‌ಡಿಸಿ ಮತ್ತು ಪಿಸಿಕೆಎಲ್ ಗಳು ಸಲ್ಲಿಸಿದ ತಾತ್ಕಾಲಿಕ ಹೇಳಿಕೆಯ ಆಧಾರದ ಮೇಲೆ ಕಂಪನಿಯು ತನ್ನ ಲೆಕ್ಕಪತ್ರಗಳಲ್ಲಿ ಇಂಧನ ಬಳಕೆಯ ನಮೂದುಗಳನ್ನು ಒದಗಿಸಿದೆ. ಎಸ್‌ಎಲ್‌ಡಿಸಿ ಮತ್ತು ಪಿಸಿಕೆಎಲ್ ಗಳು ಸಲ್ಲಿಸುವ ಅಂತಿಮ ಹೇಳಿಕೆಯ ಪ್ರಕಾರ ಶಿಲ್ಕುಗಳು ಬದಲಾವಣೆಗೆ ಒಳಗಾಗಬಹುದು. ಕಂಪನಿಯು ಎಸ್‌ಎಲ್‌ಡಿಸಿ ಮತ್ತು ಪಿಸಿಕೆಎಲ್‌ನ ಮೂಲಗಳು ಒದಗಿಸಿದ ಹೇಳಿಕೆಗಳ ಮೇಲೆ ಅವಲಂಬಿತವಾಗಿದೆ ಮತ್ತು ವಿದ್ಯುತ್ ಬಳಕೆ ಅಥವಾ ಉಪಯೋಗದ ಮಾಪನಕ್ಕೆ ಯಾವುದೇ ಆಂತರಿಕ ತಪಾಸಣೆ ಅಥವಾ ಆಂತರಿಕ ದಾಖಲೆಗಳನ್ನು ಹೊಂದಿರುವುದಿಲ್ಲ ಎಂದು ಗಮನಿಸಲಾಗಿದೆ.

7. ವಿದ್ಯುತ್ ಖರೀದಿಯ ವಿಳಂಬ ಪಾವತಿಯ ಮೇಲಿನ ಬಡ್ಡಿಗೆ ಸಂಬಂಧಿಸಿದಂತೆ, ಕಂಪನಿಯು ಮಾರಾಟಗಾರರಿಂದ ಬಡ್ಡಿ ಬೇಡಿಕೆಯನ್ನು ಸ್ವೀಕರಿಸಿದಾಗ ಬಡ್ಡಿಯನ್ನು ಲೆಕ್ಕೀಕರಿಸುತ್ತಿದೆ ಆದರೆ ವಿದ್ಯುತ್ ಖರೀದಿ ಒಪ್ಪಂದವು ಕ್ರೆಡಿಟ್ ಅವಧಿಯ ನಂತರ ವಿಳಂಬವಾದ ಪಾವತಿಗೆ ಬಡ್ಡಿಯನ್ನು ಪಾವತಿಸಬೇಕೆಂದು ಸೂಚಿಸುತ್ತದೆ. ಕಂಪನಿಯು ವಿಳಂಬವನ್ನು ಗುರುತಿಸಬೇಕು ಹಾಗೂ ವಿದ್ಯುತ್ ಖರೀದಿ ಒಪ್ಪಂದಗಳ ಪ್ರಕಾರ ವಿಳಂಬ ಪಾವತಿಗಳ ಮೇಲಿನ ಬಡ್ಡಿಗೆ ಅವಕಾಶ ಕಲ್ಪಿಸಬೇಕು.

8. ಎಸ್‌ಎಲ್‌ಡಿಸಿ (ಕವಿಪ್ರನಿನಿ) ಮತ್ತು ಪಿಸಿಕೆಎಲ್ ನಿಂದ ಪಡೆದ ಸೇವೆಗಳಿಗಾಗಿ ಕಂಪನಿಗೆ ಕಾರ್ಯ ಮತ್ತು ಪಾಲನಾ ವೆಚ್ಚಗಳನ್ನು ವಿಧಿಸಲ್ಪಟ್ಟಿದೆ. ಕವಿಪ್ರನಿನಿ ಮತ್ತು ಪಿಸಿಕೆಎಲ್ ನಿಂದ ಈ ವೆಚ್ಚಗಳನ್ನು ಕಂಪನಿಗೆ ಇನ್‌ವಾಯ್ಸ್ ಆಗಿಲ್ಲವೆಂಬುದನ್ನು ಗಮನಿಸಲಾಗಿದೆ. ಕಂಪನಿಯು ಈ ವೆಚ್ಚಗಳನ್ನು ತಲುಪುವ ಆಧಾರವನ್ನು ಪಡೆಯಬೇಕು ಮತ್ತು ಆದಾಯ ತೆರಿಗೆ ಕಾಯಿದೆ ಅಡಿಯಲ್ಲಿ ಟಿಡಿಎಸ್‌ಗಳನ್ನು ಒದಗಿಸಬೇಕು ಮತ್ತು ಈ ವೆಚ್ಚಗಳ ಮೇಲೆ ರಿವರ್ಸ್ ಚಾರ್ಜ್ ಕಾರ್ಯವಿಧಾನದ ಅಡಿಯಲ್ಲಿ ಜಿಎಸ್‌ಟಿಯನ್ನು ಒದಗಿಸಬೇಕು ಎಂದು ಲೆಕ್ಕಪರಿಶೋಧನೆಯು ಅಭಿಪ್ರಾಯಪಟ್ಟಿದೆ.

9. ತಣ್ಣೀರಭಾವಿ ವಿದ್ಯುತ್ ಖರೀದಿ ವೆಚ್ಚಕ್ಕೆ ಸಂಬಂಧಿಸಿದಂತೆ ದಿನಾಂಕ 5/10/2020 ರ ಗೌರವಾನ್ವಿತ APTEL ಆದೇಶದ ಪ್ರಕಾರ, ಜಕಾತಿ ದರಗಳಲ್ಲಿ ಹಿಂದಿನ ಬದಲಾವಣೆಗಾಗಿ ಕಂಪನಿಯು ಕವಿಪ್ರನಿನಿಗೆ ರೂ.329.92 ಕೋಟಿಗಳನ್ನು ಪಾವತಿಸಲು ಹೊಣೆಗಾರನಾಗಿದೆ. ಪಾವತಿಯನ್ನು 5 ವರ್ಷಗಳ ಅವಧಿಯಲ್ಲಿ ಮಾಡಬೇಕು. ಕಂಪನಿಯು ಇದಕ್ಕೆ ಅವಕಾಶವನ್ನು ಒದಗಿಸಿರುವುದಿಲ್ಲ ಮತ್ತು ಕವಿಪ್ರನಿನಿಯಿಂದ ಬೇಡಿಕೆಯನ್ನು ಪಡೆದಾಗ

ಮೊತ್ತವನ್ನು ಲೆಕ್ಕಹಾಕಲಾಗುತ್ತದೆ ಎಂದು ಲೆಕ್ಕಗಳ ತನ್ನ ಟಿಪ್ಪಣಿಗಳಲ್ಲಿ ವರದಿ ಮಾಡಿದೆ. ಆದ್ದರಿಂದ ಪ್ರಸ್ತುತ ಹೊಣೆಗಾರಿಕೆಗಳು, ದೀರ್ಘಾವಧಿಯ ಹೊಣೆಗಾರಿಕೆಗಳು ಮತ್ತು ವಿದ್ಯುತ್ ಖರೀದಿ ವೆಚ್ಚಗಳಲ್ಲಿ ರೂ 329.92 ಕೋಟಿಗಳಷ್ಟು ಕಡಿಮೆ ಹೇಳಿಕೆಯಾಗಿದೆ ಮತ್ತು ನಷ್ಟವು ರೂ.329.92 ಕೋಟಿಗಳಷ್ಟು ಕಡಿಮೆಯಾಗಿದೆ.

ಇತರೆ ಪ್ರಸಕ್ತ ಹೊಣೆಗಾರಿಕೆಗಳು:

10. ವೆಚ್ಚಗಳು ಮತ್ತು ಗುತ್ತಿಗೆ ಕಾಮಗಾರಿಗಳ ಮೇಲೆ ಪಾವತಿಸಬೇಕಾದ ಟಿಡಿಎಸ್ ಅನ್ನು ಸಂಚಿತ ವ್ಯವಸ್ಥೆಯಲ್ಲಿ ಮಾಡದೇ ಪಾವತಿಗಳನ್ನು ಮಾಡಿದಾಗ ಮಾಡಲಾಗುತ್ತದೆ.

11. ಭದ್ರತಾ ಠೇವಣಿಗಳ ಮೇಲೆ ಪಾವತಿಸಬೇಕಾದ ಬಡ್ಡಿಯನ್ನು ಸಾಫ್ಟ್‌ವೇರ್‌ನಲ್ಲಿ ನಿರ್ವಹಿಸುವ ಖಾತೆಗಳಿಗೆ ಮತ್ತು ಡಿಸಿಬಿ ಪ್ರಕಾರ ಹೋಲಿಸಿದರೆ ಹೆಚ್ಚುವರಿಯಾಗಿ ಒದಗಿಸಲಾಗಿದೆ. ಕಂಪನಿಯು ಬಿಲ್ಲಿಂಗ್‌ಗಾಗಿ ಅಳವಡಿಸಿಕೊಂಡಿರುವ ಸಾಫ್ಟ್‌ವೇರ್‌ನ ಪ್ರಕಾರ ಬಡ್ಡಿಯ ನೈಜ ಬಿಡುಗಡೆಗೆ ಹೋಲಿಸಿದರೆ ಕಂಪನಿಯ ಖಾತೆಗಳ ಪುಸ್ತಕಗಳಲ್ಲಿ ರೂ.11.91 ಕೋಟಿಯಷ್ಟು ವ್ಯತ್ಯಾಸವನ್ನು ಹೆಚ್ಚುವರಿಯಾಗಿ ಒದಗಿಸಲಾಗಿದೆ. ಆದ್ದರಿಂದ ಬಡ್ಡಿ ವೆಚ್ಚವನ್ನು ಹೆಚ್ಚಿಗೆ ಹೇಳಲಾಗಿದೆ, ಪಾವತಿಸಬೇಕಾದ ಬಡ್ಡಿಯನ್ನು ಹೆಚ್ಚಿಗೆಯಾಗಿ ಹೇಳಲಾಗಿದೆ ಮತ್ತು ನಷ್ಟವನ್ನು ಹೆಚ್ಚಿಗೆ ಹೇಳಲಾಗಿದೆ.

12. ಎಸ್‌ಪಿಪಿಸಿಸಿ ಯಿಂದಯುಆಯ್ ಶುಲ್ಕಗಳು / ಆಡಳಿತ ಶುಲ್ಕಗಳಿಗಾಗಿ ಪಡೆದ ಮುಂಗಡವು ದೀರ್ಘಕಾಲದವರೆಗೆ ಕ್ರೆಡಿಟ್ ಬ್ಯಾಲೆನ್ಸ್‌ಗಳೊಂದಿಗೆ ಬಾಕಿ ಉಳಿದಿದ್ದು ಮತ್ತು ಕಂಪನಿಯು ರೂ.27.87 ಕೋಟಿ ರೂಪಾಯಿಗಳಷ್ಟು ಹೊಣೆಗಾರಿಕೆಯ ವಿಲೇವಾರಿಯನ್ನು ಸಮನ್ವಯಗೊಳಿಸಬೇಕು ಮತ್ತು ಗುರುತಿಸಬೇಕು.

13. ಕಂಪನಿಯು ವಿವಿಧ ಎಸ್ಕಾಮ್‌ಗಳಿಗೆ ಸಾಮಗ್ರಿಗಳು/ಸೇವೆಗಳನ್ನು ಪಡೆಯುತ್ತಿದೆ ಮತ್ತು ಒದಗಿಸುತ್ತಿದೆ, ಅದರ ನಿಟ್ಟಿನಲ್ಲಿ ಇನ್‌ವಾಯ್ಸ್‌ಗಳು ಹಾಗೂ ಜಿಎಸ್‌ಟಿಯ ಬಿಡುಗಡೆಯನ್ನು ಕೈಗೊಳ್ಳುತ್ತಿರುವುದಿಲ್ಲ. ಕಂಪನಿಯು ಜಿಎಸ್‌ಟಿ ಮತ್ತು ಟಿಡಿಎಸ್ ಹೊಣೆಗಾರಿಕೆಯನ್ನು ನಿರ್ಣಯಿಸಬೇಕು ಮತ್ತು ಪ್ರಸ್ತುತ ಅವಧಿಗೆ ನಿರ್ಧರಿಸದ ಅಂತಹ ಯಾವುದೇ ಹೊಣೆಗಾರಿಕೆಯ ಬಿಡುಗಡೆಗಾಗಿ ಲೆಕ್ಕ ಪುಸ್ತಕಗಳಲ್ಲಿ ಅಗತ್ಯ ಅವಕಾಶವನ್ನು ಮಾಡಬೇಕು.

14. ಕಂಪನಿಯು ಮೂಲದಲ್ಲಿ ಕಡಿತಗೊಳಿಸಿದ ಮಾರಾಟ ತೆರಿಗೆಯ ಹಳೆಯ ಶಿಲ್ಕುಗಳನ್ನು ಮುಂದುವರೆಸುತ್ತಿದೆ, ಅದಕ್ಕಾಗಿ ಲೆಕ್ಕಪುಸ್ತಕಗಳಲ್ಲಿ ಬಡ್ಡಿ ಅಥವಾ ದಂಡದ ಅವಕಾಶವನ್ನು ಮಾಡಿರುವುದಿಲ್ಲ.

ಸ್ಥಿರ ಆಸ್ತಿಗಳು ಮತ್ತು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು:

15. ಕಂಪನಿಯು ಬಂಡವಾಳೀಕರಿಸಿದ ತಿಂಗಳಿನಿಂದ ಸವಕಳಿಯನ್ನು ವಿಧಿಸುತ್ತಿದೆ. ಬಂಡವಾಳೀಕರಿಸಿದ ಆಸ್ತಿಗಳಿಗಾಗಿ ಆಯಾ ವರ್ಷದಲ್ಲಿ ಪಡೆಯಲಾದ ಯಾವುದೇ ಸಂಬಂಧಿತ ಅನುದಾನವನ್ನು ಆಯಾ ವರ್ಷದಲ್ಲಿ ಒಟ್ಟಾರೆ ಮೊತ್ತದಲ್ಲಿ ಕಡಿಮೆ ಮಾಡಲಾಗಿದೆ. ಅನುದಾನದ ಮೊತ್ತದ ಮೇಲಿನ ಸವಕಳಿಯನ್ನು ಹಿಂತೆಗೆದುಕೊಂಡಿರುವುದು ನಂತರದ ವರ್ಷದಲ್ಲಿ ಪರಿಣಾಮ ಬೀರಿದೆ, ಆದ್ದರಿಂದ ವರ್ಷದಲ್ಲಿ ಬಂಡವಾಳೀಕರಿಸಿದ ಆಸ್ತಿಗಳ ಮೇಲಿನ ಸವಕಳಿಯನ್ನು ಅಧಿಕವಾಗಿ ಪಡೆಯಲಾಗಿದೆ. ಬಂಡವಾಳೀಕರಣ ಹಾಗೂ ಸವಕಳಿಯನ್ನು ವಿಭಾಗಗಳಲ್ಲಿ ಕೈಗೊಳ್ಳಲಾಗಿದೆ ಆದರೆ ಪಡೆದ ಅನುದಾನವನ್ನು ಮುಖ್ಯ ಕಛೇರಿಯಿಂದ ಸ್ಥಿರಾಸ್ತಿಗಳಿಗೆ ಹಂಚಲಾಗಿದೆಆದ್ದರಿಂದಈ ಮೊತ್ತವನ್ನು ಪ್ರಮಾಣೀಕರಿಸಲಾಗುವುದಿಲ್ಲ.

16. ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಲ್ಲಿ ಗ್ರಾಹಕರ ಕೊಡುಗೆಯಿಂದ ಕಡಿಮೆಯಾಗಿರುವುದನ್ನು ಗಮನಿಸಲಾಗಿದೆ ಆದರೆ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು ಯಾವ ಯೋಜನೆಗಾಗಿ ಅನುದಾನವನ್ನು ಪಡೆಯಲಾಗಿದೆಯೋ ಅವುಗಳ ಯೋಜನಾ ವೆಚ್ಚವನ್ನುಒಳಗೊಂಡಿದ್ದರೆ, ಈ ಅನುದಾನವನ್ನು ಆಸ್ತಿಯನ್ನು ಬಂಡವಾಳೀಕರಿಸದೇ ಸ್ಥಿರ ಆಸ್ತಿಯಿಂದ ಕಡಿಮೆ ಮಾಡಲಾಗಿದೆ. ಕಂಪನಿಯು ಸ್ಥಿರ ಆಸ್ತಿಗಳಲ್ಲಿ ಕಡಿಮೆಗೊಳಿಸದೇ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ ಆಸ್ತಿಗಳಿಗೆ ಸಂಬಂಧಿಸಿದ ಅನುದಾನಗಳನ್ನು ಬೇರ್ಪಡಿಸಬೇಕಾಗುವುದು. ಪ್ರಸ್ತುತ ಅಭ್ಯಾಸದಿಂದಾಗಿ ಸ್ಥಿರ ಆಸ್ತಿಗಳಲ್ಲಿ ಕಡಿಮೆ ಹೇಳಿಕೆಯಾಗಲು ಹಾಗೂ ಸವಕಳಿಯನ್ನು ಕಡಿಮೆ ಪಡೆಯಲಾಗಿರುವುದಕ್ಕೆ ಕಾರಣವಾಗಿದೆ.

17. ಹಣಕಾಸು ತಃಖ್ತೆಗಳ ಭಾಗವನ್ನು ರೂಪಿಸುವ ಟಿಪ್ಪಣಿಗಳಲ್ಲಿ ಟಿಪ್ಪಣಿ ಸಂ. 2.6.1 ರ ಪ್ರಕಾರ ಸ್ಥಿರಾಸ್ತಿಗಳನ್ನು ಅವುಗಳ ಐತಿಹಾಸಿಕ ವೆಚ್ಚಗಳಲ್ಲಿ ಅನುರೂಪವಾದ ಸಂಚಿತ ಸವಕಳಿಯೊಂದಿಗೆ ತೋರಿಸಲಾಗಿದೆ ಮತ್ತು ಟಿಪ್ಪಣಿ ಸಂ. 2.6.6 ರಲ್ಲಿ ತಿಳಿಸಿರುವಂತೆ ಕಂಪನಿ–ಉತ್ಪಾದಿತ ಆಸ್ತಿಗಳ ಪ್ರಕರಣಗಳಲ್ಲಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಮೌಲ್ಯೀಕರಣವನ್ನು ಪ್ರಮಾಣಿತ ದರದಂತೆ ಬೆಲೆ ನಿಗದಿಮಾಡಲಾಗಿದ್ದು ಇದು ಲೆಕ್ಕಪತ್ರಗಳ ಮಾನದಂಡ 10 ಕ್ಕೆ ಅನುಗುಣವಾಗಿರುವುದಿಲ್ಲ [ಇದು ವೆಚ್ಚದ ದರದಲ್ಲಿ ದಾಸ್ತಾನು ಮೌಲ್ಯಮಾಪನವನ್ನು ಶಿಫಾರಸ್ಸು ಮಾಡುತ್ತದೆ]. ಆದುದರಿಂದ ನಮ್ಮ ಅಭಿಪ್ರಾಯದಲ್ಲಿ ಕಂಪನಿಯ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಹಾಗೂ ಸ್ಥಿರಾಸ್ತಿಗಳ ಮೌಲ್ಯೀಕರಣದ ಲೆಕ್ಕೀಕರಣವು ಟಿಪ್ಪಣಿ ಸಂ. 2.6.6 ರೊಂದಿಗೆ ಒಮ್ಮತವಾಗಿದ್ದು ಲೆಕ್ಕಪತ್ರಗಳ ಮಾನದಂಡ 10 ಕ್ಕೆ ವಿರೋಧಾತ್ಮಕವಾಗಿರುತ್ತದೆ.

18. ಕಂಪನಿಯು ಅಢಾವೆ ಪತ್ರಿಕೆಯ ದಿನಾಂಕಕ್ಕೆ ಇರುವಂತೆ ಆಸ್ತಿಯ ದುರ್ಬಲತೆಯ ಅಸ್ತಿತ್ವದ ಬಗ್ಗೆ, ಯಾವುದಾದರೂ ಇದ್ದಲ್ಲಿ, ಸಕ್ರಿಯ ಬಳಕೆಯಿಂದ ಹಿಂಪಡೆದ ಆಸ್ತಿಗಳು ಮತ್ತು ನಿಷ್ಕ್ರಿಯಗೊಂಡ ಆಸ್ತಿಗಳನ್ನೊಳಗೊಂಡಂತೆ ತನ್ನ ಆಸ್ತಿಯ ಮೌಲ್ಯಮಾಪನ ಮಾಡಿರುವುದಿಲ್ಲ. ಅದರ ಪರಿಣಾಮವಾಗಿ ನಮಗೆ ದುರ್ಬಲತೆಯ ನಷ್ಟದ ಅಸ್ತಿತ್ವದ ಬಗ್ಗೆ ಪ್ರತಿಕ್ರಿಯಿಸಲು ಸಾಧ್ಯವಾಗುವುದಿಲ್ಲ.

19. ಕಂಪನಿಯು ತನ್ನ ಭೂಮಿ ಮತ್ತು ಕಟ್ಟಡದ ಪ್ರಸ್ತುತ ಸ್ಥಿತಿಯ ಮಾಲೀಕತ್ವವನ್ನು ಖಚಿತಪಡಿಸಿಕೊಳ್ಳಲು ತನ್ನ ಎಲ್ಲಾ ಭೂಮಿ ಮತ್ತು ಕಟ್ಟಡಗಳ ಮತ್ತು ಯಾವುದಾದರೂ ಅವಧಿಮೀರಿದ ಪಾವತಿಸಬೇಕಾದ ತೆರಿಗೆಗಳಿದ್ದಲ್ಲಿ ಅವುಗಳ ಕಾನೂನು ಲೆಕ್ಕಪರಿಶೋಧನೆಯನ್ನು ತಜ್ಞ ವಕೀಲರಿಂದ ನಡೆಸಬೇಕು.

20. ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು ತುಂಬಾ ಹಳೆಯ ನಮೂದುಗಳನ್ನು ಒಳಗೊಂಡಿವೆ ಮತ್ತು ಅಂತಹ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಸ್ಥಿತಿಯನ್ನು ಕಂಪನಿಯು ಗುರುತಿಸುವುದಿಲ್ಲ. ಅಂತಹ ಖಾತೆಗಳ ಸಮಂಜಸ ಸಮನ್ವಯ ಮತ್ತು ಉಪಚಾರವನ್ನು ಕಂಪನಿಯು ಕೈಗೊಳ್ಳಬೇಕು.

ಹೂಡಿಕೆ:

21. ಕಂಪನಿಯು ಪ್ರಿಯದರ್ಶಿನಿ ಜುರಾಲಾ ಯೋಜನೆಯಲ್ಲಿ ರೂ.14 ಕೋಟಿಯನ್ನು ಹೂಡಿಕೆ ಮಾಡಿರುತ್ತದೆ. ಈ ಯೋಜನೆಯು ಯಾವುದೇ ಆದಾಯವನ್ನು ನೀಡುತ್ತಿಲ್ಲ ಆದರೆ ಕಂಪನಿಯು ಯೋಜನೆಯಿಂದ ಅಗತ್ಯ ಇಂಧನವನ್ನು ಪಡೆಯದೇ ನಿಗದಿತ ಶುಲ್ಕವನ್ನು ಪಾವತಿಸುತ್ತಿದೆ. ಯಾವುದೇ ಪ್ರಯೋಜನಗಳಿಲ್ಲದೇ ನಿಗದಿತ ವೆಚ್ಚಗಳಿಗೆ ಕಾರಣವಾಗುವುದರಿಂದ ಕಂಪನಿಯು ಹೂಡಿಕೆಗಳನ್ನು ಹಿಂಪಡೆಯಲು ಪ್ರಯತ್ನಗಳನ್ನು ಮಾಡಬೇಕಾಗಿದೆ. ಕಂಪನಿಯು ಸದರಿ ಯೋಜನೆಯಿಂದ ಷೇರು ಪ್ರಮಾಣಪತ್ರಗಳನ್ನೂ ಸಹ ಪಡೆದಿರುವುದಿಲ್ಲ.

ಇತರ ಪ್ರಚಲಿತವಲ್ಲದ ಆಸ್ತಿಗಳು:

22. ಹುಕ್ಕೇರಿ ಕೋ–ಆಪರೇಟಿವ್ ಸೊಸೈಟಿಗೆ ಸಂಬಂಧಿಸಿದಂತೆ, ರೂ. 27.03 ಕೋಟಿ ಮೊತ್ತವನ್ನು ಆರ್ಥಿಕ ವರ್ಷ 2005–06 ರಿಂದ 2009–10 ರ ಅವಧಿಯವರೆಗೆ ಕರ್ನಾಟಕ ಸರ್ಕಾರದಿಂದ ಬರಬೇಕಾದ ಸಹಾಯಧನ ಎಂದು ತೋರಿಸಿರುವುದನ್ನು ಗಮನಿಸಲಾಗಿದೆ. ಈ ಮೊತ್ತವನ್ನು ಕರ್ನಾಟಕ ಸರ್ಕಾರವು ದೃಢೀಕರಿಸದೇ ಇರುವ ಕಾರಣ, ಅಂತಿಮವಾಗಿ ಸದರಿ ಮೊತ್ತವನ್ನು ವಸೂಲಿ ಮಾಡುವುದು ಸಂಶಯಾಸ್ಪದವಾಗಿದ್ದು ಸೂಕ್ತ ಅವಕಾಶವನ್ನು ಕಲ್ಪಿಸುವ ಅವಶ್ಯಕತೆ ಇರುತ್ತದೆ. ಇದರ ಪ್ರಭಾವದಿಂದಾಗಿ ಲಾಭದಲ್ಲಿ ರೂ.27.03 ಕೋಟಿಗಳಷ್ಟು ಹೆಚ್ಚಿನ ಹೇಳಿಕೆಗೆ ಕಾರಣವಾಗುವುದು (ಲೆಕ್ಕಶೀರ್ಷಿಕೆ 28.621).

23. ಕರ್ನಾಟಕ ವಿದ್ಯುತ್ ಮಗ್ಗ ಇಲಾಖೆಯಿಂದ ಪಡೆಯಬೇಕಾದ ಮೊತ್ತಕ್ಕೆ ಸಂಬಂಧಿಸಿದಂತೆ, ರೂ 9.38 ಕೋಟಿಗಳ ಪುಸ್ತಕ ಬಾಕಿಯ ಪ್ರತಿಯಾಗಿ ಕಂಪನಿಯು ಸಲ್ಲಿಸಿದ ಕ್ಲೇಮ್ ರೂ 6.73 ಕೋಟಿ ಇರುವುದನ್ನು ಗಮನಿಸಲಾಗಿದೆ. ಕಂಪನಿಯು ಕೊರತೆಗೆ ಯಾವುದೇ ಅವಕಾಶವನ್ನು ಮಾಡಿರುವುದಿಲ್ಲ ಅಥವಾ ಸಮಂಜಸ ಸಮನ್ವಯವನ್ನು ಅಳವಡಿಸಿಕೊಳ್ಳಬೇಕು.

ನಿಯಂತ್ರಣ ಆಸ್ತಿ – ಕೆಇಆರ್‌ಸಿ:

24. 2020–21 ರ ಕಂದಾಯದಿಂದ ಉಂಟಾಗುವ ದರಪಟ್ಟಿ ವ್ಯತ್ಯಾಸಕ್ಕೆ ಸಂಬಂಧಿಸಿದ ರೂ.1286.46 ಕೋಟಿ ಮೊತ್ತವನ್ನು ಕಂಪನಿಯು ಮರಳಿ ಲೆಕ್ಕೀಕರಿಸಿರುವುದನ್ನು ಗಮನಿಸಲಾಗಿದೆ.ಈ ಮೊತ್ತವು ಖರೀದಿ ವೆಚ್ಚಗಳು ಮತ್ತು

2018–19ರ ಹಣಕಾಸು ವರ್ಷಕ್ಕೆ ಸಂಬಂಧಿಸಿದ ಅನುಮೋದಿತ ಖರೀದಿ ವೆಚ್ಚಗಳ ಕೊರತೆಗೆ ಸೇರಿದೆ. ಕಂಪನಿಯು ಕಂದಾಯದ ವಿಷಯದಲ್ಲಿ ಪ್ರಕ್ಷೇಪಗಳು ಮತ್ತು ವಾಸ್ತವಿಕತೆಗಳ ಪ್ರಕಾರ ಸಾಧಿಸಲಾಗಿದೆಯೇ ಎಂಬಹೋಲಿಕೆಯ ತತ್ವದ ಅಂಶವನ್ನು ಪರಿಗಣಿಸಿರುವುದಿಲ್ಲ. ಕಂಪನಿಯು ತನ್ನ ಪ್ರಸಕ್ತ ಆರ್ಥಿಕ ವರ್ಷ 2020–21 ರಲ್ಲಿ ಪ್ರವಾಹ ಮತ್ತು ಕೋವಿಡ್ ನಂತಹ ಅನಿವಾರ್ಯ ಪರಿಸ್ಥಿತಿಗಳಿಂದಾಗಿ ಯೂನಿಟ್‌ಗಳ ವಿಷಯದಲ್ಲಿ ತನ್ನ ಮಾರಾಟವನ್ನು ಸಾಧಿಸಿರುವುದಿಲ್ಲ.

ತಪಶೀಲುಗಳು:

25. ಲೆಕ್ಕೀಕರಣ ನೀತಿಯ ಪ್ರಕಾರ (ಹಣಕಾಸು ತಃಖ್ತೆಗಳ ಭಾಗವನ್ನು ರೂಪಿಸುವ ಟಿಪ್ಪಣಿಗಳಲ್ಲಿ ಟಿಪ್ಪಣಿ ಸಂ.2.3), ಕಂಪನಿಯು ನಿರ್ಧರಿಸಿದಂತೆ, ತಪಶೀಲುಗಳ ಮೌಲ್ಯಮಾಪನವನ್ನು ಕಾಲಕಾಲಕ್ಕೆ ಹಿಂದಿನ ಖರೀದಿ ಬೆಲೆ ಹಾಗೂ ಪ್ರಸ್ತುತ ಮಾರುಕಟ್ಟೆ ದರಗಳ ಆಧಾರದ ಮೇಲೆ, ಪ್ರಮಾಣಿತ ದರವನ್ನು ಅನುಸರಿಸುತ್ತಿದ್ದು, ಇದು ಲೆಕ್ಕಪತ್ರ ಮಾನದಂಡ 2 ಕ್ಕೆ ಅನುಗುಣವಾಗಿರುವುದಿಲ್ಲ. ತಪಶೀಲುಗಳನ್ನು ಅವುಗಳ ವೆಚ್ಚ ಮತ್ತು ನಿವ್ವಳ ಗ್ರಹಿಸಬಹುದಾದ ಮೌಲ್ಯಗಳಲ್ಲಿ ಕನಿಷ್ಟಕ್ಕೆ ಮೌಲ್ಯಮಾಪನ ಮಾಡಲು ಲೆಕ್ಕಪತ್ರಗಳ ಮಾನದಂಡವು ಸೂಚಿಸುತ್ತದೆ. ವಿವರಗಳು ಅವಶ್ಯವಿರುವುದರಿಂದ, ತಪಶೀಲುಗಳ ಬೆಲೆ ಅಥವಾ ನಿವ್ವಳ ಗ್ರಹಿಸಬಹುದಾದ ಮೌಲ್ಯ ಹಾಗೂ ಕಂಪನಿಯು ಅಳವಡಿಸಿಕೊಂಡಿರುವ ಪ್ರಮಾಣಿತ ದರಗಳ ಕನಿಷ್ಠ ದರದ ಮಧ್ಯದ ವ್ಯತ್ಯಾಸವನ್ನು ಹಾಗೂ ಅದರಿಂದ ಕಂಪನಿಯ ಹಣಕಾಸಿನ ಕಾರ್ಯಕ್ಷಮತೆ ಮತ್ತು ಸ್ಥಿತಿಗತಿಗಳ ಮೇಲೆ ಆಗುವ ಪರಿಣಾಮಗಳನ್ನು ನಮಗೆ ಪ್ರಮಾಣೀಕರಿಸಲು ಸಾಧ್ಯವಾಗಿರುವುದಿಲ್ಲ.

26. ತಪಶೀಲು ಶಿಲ್ಕುಗಳು ಬಂಡವಾಳ ಸ್ವತ್ತುಗಳನ್ನು ಒಳಗೊಂಡಿರುತ್ತದೆ, ಅದು ಲೆಕ್ಕ ಪುಸ್ತಕಗಳಲ್ಲಿ ಪ್ರತ್ಯೇಕಿಸಲ್ಪಟ್ಟಿಲ್ಲ ಮತ್ತು ಆದ್ದರಿಂದ ಹಣಕಾಸಿನ ಹೇಳಿಕೆಗಳ ಮೇಲಿನ ಪರಿಣಾಮವನ್ನು ಪ್ರಮಾಣೀಕರಿಸಲಾಗುವುದಿಲ್ಲ.

27. ಕಂಪನಿಯು ನಿಭಾಯಿಸಿದತಪಶೀಲುದಾಸ್ತಾನುಗಳ ಮೇಲೆ ವಿಮೆ ಮಾಡಲಾಗಿಲ್ಲ ಮತ್ತು ಯಾವುದೇ ನಷ್ಟದ ಅವಕಾಶವನ್ನು ಖಾತೆಗಳ ಪುಸ್ತಕಗಳಲ್ಲಿ ಮಾಡಲಾಗಿಲ್ಲ.

ವ್ಯಾಪಾರ ಸಂಬಂಧೀ ಸ್ವೀಕೃತಿಬಾಕಿಗಳು:

28. ಕರ್ನಾಟಕ ಸರ್ಕಾರದಿಂದ ಪಡೆಯಬಹುದಾದ ಒಟ್ಟು ಸಹಾಯಧನವು ದೃಢೀಕರಣ ಮತ್ತು ಸಮನ್ವಯಗಳಿಗೆ ಒಳಪಟ್ಟಿರುತ್ತದೆ.

ಇತರೆ ಪ್ರಚಲಿತ ಆಸ್ತಿಗಳು:

29. ಕಂಪನಿಯು ತನ್ನ ನಗದು ಹಿಡುವಳಿಗಾಗಿ ಯಾವುದೇ ವಿಮೆಯನ್ನು ಹೊಂದಿಲ್ಲ ಮತ್ತು ಅಂತಹ ನಗದು ಹಿಡುವಳಿಗಳ ಮೇಲಿನ ಯಾವುದೇ ನಷ್ಟಕ್ಕಾಗಿ ಅವಕಾಶವನ್ನು ಒದಗಿಸಿಲ್ಲ.

30. ಸಂಗ್ರಹಣೆ ಬ್ಯಾಂಕ್ ಖಾತೆ ಹೊಂದಾಣಿಕೆಗಳನ್ನು ನಿಗದಿತ ಸ್ವರೂಪದ ಪ್ರಕಾರ ಸಿದ್ಧಪಡಿಸಲಾಗಿಲ್ಲ ಮತ್ತು ಬ್ಯಾಂಕ್‌ಗಳಿಂದ ಶಿಲ್ಕಿನ ದೃಢೀಕರಣವನ್ನು ಕಂಪನಿಯು ಪಡೆಯುವುದಿಲ್ಲ. ಈ ಚಾಲ್ತಿ ಖಾತೆಗಳಲ್ಲಿನ ಶಿಲ್ಕು ದೃಢೀಕರಣಕ್ಕೆ ಒಳಪಟ್ಟಿರುತ್ತದೆ.

31. ಹೆಸ್ಕಾಂನಿಂದ ಇತ್ಯರ್ಥಪಡಿಸಲಾದ ಸೇವಾ ತೆರಿಗೆ ಕ್ಲೈಮ್ ರೂ.7.02 ಕೋಟಿಯು ಲೆಕ್ಕ ಶೀರ್ಷಿಕೆ 28.852 ರ ಅಡಿಯಲ್ಲಿ ಬಾಕಿ ಉಳಿದಿದ್ದು, ಗ್ರಾಹಕರು/ಗುತ್ತಿಗೆದಾರರಿಂದ ವಸೂಲಿ ಮಾಡಬೇಕಾಗಿರುತ್ತದೆ. ಅದು 2018 ರಿಂದ ಬಾಕಿ ಉಳಿದಿದೆ. ವಸೂಲಾತಿ ದರವು ತುಂಬಾ ಕಡಿಮೆಯಿರುವುದರಿಂದ ಮತ್ತು ಸ್ವೀಕೃತಿಯ ಅನುಸರಣೆಯು ಪರಿಣಾಮಕಾರಿಯಾಗಿ ಜಾರಿಯಲ್ಲಿಲ್ಲದ ಕಾರಣ ಕಂಪನಿಯು ಸದರಿ ಮೊತ್ತವನ್ನು ಹೊಡೆದು ಹಾಕಲು ಅವಕಾಶವನ್ನು ಕಲ್ಪಿಸಬೇಕು.

32. ಕಂಪನಿಯ ಅಂತರ ಘಟಕ ಖಾತೆಗಳ ವಿಭಿನ್ನ ಖಾತೆಗಳಲ್ಲಿ ಪ್ರತ್ಯೇಕವಾಗಿ ಬಾಕಿ ಉಳಿದಿರುವ ಬೃಹತ್ ಮೊತ್ತವನ್ನು ತೋರಿಸುತ್ತವೆ, ಇದು ಇತರ ಲೆಕ್ಕ ಶೀರ್ಷಿಕೆಗಳ ಶಿಲ್ಕುಗಳ ಮೇಲೆ ಲಾಭ ಮತ್ತು ನಷ್ಟದ ಖಾತೆ ಅಥವಾ ವ್ಯವಹಾರಗಳ ಹೇಳಿಕೆಯಲ್ಲಿ ಅನೇಕ ಪರಿಣಾಮ ಬೀರುತ್ತದೆ. ಕೆಳಗಿನ ಲೆಕ್ಕ ಶೀರ್ಷಿಕೆಗಳಲ್ಲಿ ದೀರ್ಘಕಾಲ

ಬಾಕಿ ಉಳಿದಿರುವ ನಮೂದುಗಳನ್ನು ಗುರುತಿಸಬೇಕು ಮತ್ತು ಖಾತೆಗಳ ಪುಸ್ತಕಗಳಲ್ಲಿ ಅಗತ್ಯ ಪರಿಣಾಮಗಳನ್ನು ರವಾನಿಸಲು ಸಮನ್ವಯಗೊಳಿಸಬೇಕು.

"ಇತರೆ ಪ್ರಚಲಿತ ಆಸ್ತಿಗಳು" ರಡಿಯಲ್ಲಿ ಸಮನ್ವಯಗೊಳಿಸಿರದ ಅಂತರ ಘಟಕ ಲೆಕ್ಕಖಾತೆಯ ರೂ.18.51 ಕೋಟಿ (ನಿವ್ವಳ ಕ್ರೆಡಿಟ್) ತೋರಿಸಲಾಗಿದೆ. ಅಂತರ ಘಟಕ ಲೆಕ್ಕಖಾತೆಗಳ ಸಮನ್ವಯಗೊಳಿಸದೇ ಇರುವುದರಿಂದ ಹಣಕಾಸಿನ ಹೇಳಿಕೆಗಳಲ್ಲಿನ ಹೊಂದಾಣಿಕೆಯ ಪರಿಣಾಮದ ಬಗ್ಗೆ ಸಧ್ಯಕ್ಕೆ ಖಚಿತಪಡಿಸಲಾಗುವುದಿಲ್ಲ/ ಪ್ರಮಾಣೀಕರಿಸಲಾಗುವುದಿಲ್ಲ. ಇದು ತಪಸೀಲು, ನಗದು, ಬ್ಯಾಂಕ್ ಶಿಲ್ಕು, ಸ್ಥಿರ ಆಸ್ತಿಗಳು ಮತ್ತು ಇತರೆ ಹೊಣೆಗಾರಿಕೆಗಳ ಕಡಿಮೆ ಅಥವಾ ಹೆಚ್ಚಿನ ಹೇಳಿಕೆಗಳಿಗೆ ಕಾರಣವಾಗಬಹುದು ಇದು ಅಂತರ ಘಟಕ ಲೆಕ್ಕಗಳಲ್ಲಿ ದೀರ್ಘಕಾಲದಿಂದ ಬಾಕಿ ಇರುವ ಸಮನ್ವಯಗೊಳಿಸದ ಅಂಶಗಳಿಂದಾಗಿ ಖಚಿತಪಡಿಸಲಾಗುವುದಿಲ್ಲ.

33. ಕಂಪನಿಯು ಹಲವಾರು ನಿಗಮ ಸಾಮಾಜಿಕ ಹೊಣೆಗಾರಿಕೆ ಕಾರ್ಯಗಳನ್ನು ಗುತ್ತಿಗೆ ಒಪ್ಪಂದಗಳ ಮೂಲಕ ಕೈಗೊಳ್ಳುತ್ತದೆ. ಗಂಗಾ ಕಲ್ಯಾಣ ಯೋಜನೆಯಡಿ ಹಮ್ಮಿಕೊಂಡ ಈ ಕಾರ್ಯಗಳ ವೆಚ್ಚವನ್ನು ಸರ್ಕಾರಿ ಇಲಾಖೆಗಳಾದ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಕರ್ನಾಟಕ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮ, ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಗಳಿಂದ ಮರುಪಾವತಿ ಮಾಡಲಾಗುವುದು. ಲೆಕ್ಕಪುಸ್ತಕಗಳ ಸ್ವೀಕೃತಿಯಲ್ಲಿ ತೋರಿಸಿದ ರೂ. 142.73 ಕೋಟಿಗೆ ಪ್ರತಿಯಾಗಿ ಯೋಜನಾ ನಿರ್ವಹಣಾ ಶಾಖೆಯ ಪ್ರಕಾರ ಬಾಕಿ ಇರುವಕ್ಲೇಮ್ ರೂ.39.60 ಕೋಟಿ ಇರುವುದನ್ನು ಗಮನಿಸಲಾಗಿದೆ. ಬರಬೇಕಾದವುಗಳಲ್ಲಿ ರೂ.103.13 ಕೋಟಿಯಷ್ಟರವರೆಗೆ ಹೆಚ್ಚಿನ ಹೇಳಿಕೆ ಇದ್ದು ಮತ್ತು ಸ್ಥಿರ ಆಸ್ತಿಗಳು/ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು ಅಥವಾ ಖರ್ಚುಗಳಲ್ಲಿ ಕಡಿಮೆ ಹೇಳಿಕೆ ಇರುತ್ತದೆ.

ಶಾಸನಬದ್ಧ ಅನುಸರಣೆ:

34. ಕಂಪನಿಯು 2017–18, 2018–19 ಮತ್ತು 2019–20 ನೇ ಸಾಲಿಗಾಗಿ ಜಿ.ಎಸ್.ಟಿ. ಇಲಾಖೆ ನೀಡಿದ ಸಮನ್ಸ್‌ಗೆ ಪ್ರತಿಕ್ರಿಯೆಯಾಗಿ ಮಾಡಿದ ಲೆಕ್ಕಾಚಾರದ ಪ್ರಕಾರ ಬಡ್ಡಿ ಮತ್ತು ದಂಡದಲ್ಲಿ ಜಿ.ಎಸ್.ಟಿ. ಹೊಣೆಗಾರಿಕೆಗಾಗಿ ಬಡ್ಡಿ ಮತ್ತು ದಂಡದ ಸಹಿತ ರೂ.5.83 ಕೋಟಿ ಮೊತ್ತದ ಅವಕಾಶವನ್ನು ಒದಗಿಸಬೇಕಿದೆ. ಮುಂದುವರೆದು ಕಂಪನಿಯು ಬಡ್ಡಿ ಮತ್ತು ದಂಡವನ್ನು ಮನ್ನಾ ಮಾಡಲು ಪ್ರಾತಿನಿಧ್ಯವನ್ನು ಸಲ್ಲಿಸಿದೆ.

ಆದಾಯ:

35. ತಂತ್ರಾಂಶದ ಪ್ರಕಾರ ಮಾರಾಟ ಹಾಗೂ ಲೆಕ್ಕಪುಸ್ತಕಗಳ ಪ್ರಕಾರ ಮಾರಾಟದಲ್ಲಿ ವ್ಯತ್ಯಾಸವನ್ನು ಗಮನಿಸಲಾಗಿದೆ. ಕಂಪನಿಯು ಲೆಕ್ಕಪುಸ್ತಕಗಳ ಪ್ರಕಾರ ಮತ್ತು ಬಿಲ್ಲುಗಳನ್ನು ತಯಾರಿಸುವ ತಂತ್ರಾಂಶದ ಪ್ರಕಾರ ಬೇಡಿಕೆಗಳಿಗೆ ಸರಿಹೊಂದುವಂತೆ ಸೂಕ್ತ ಸಮನ್ವಯವನ್ನು ಕೈಗೊಳ್ಳಬೇಕಾಗಿದೆ. ಕೆಲವೊಂದು ವೈಶಿಷ್ಟ್ಯಗಳಾದ ಎಫ್‌ಎಸಿ, ಎಲ್‌ಟಿ–7 ಮತ್ತು ಕೆಲವೊಂದು ಹೆಚ್‌ಟಿ ಸ್ಥಾವರಗಳು ಸಂಪೂರ್ಣವಾಗಿ ತಂತ್ರಾಂಶದಲ್ಲಿ ಬಿಲ್ ಮಾಡಲು ಆಗದೇ ಇರುವುದರಿಂದ ತಂತ್ರಾಂಶದಲ್ಲಿ ಮಾನವ ಹಸ್ತಕ್ಷೇಪವನ್ನು ಸಹ ಗಮನಿಸಲಾಗಿದೆ. ಮಾರಾಟದ ಕಡಿಮೆ ಹೇಳಿಕೆ ಅಥವಾ ಹೆಚ್ಚಿನ ಹೇಳಿಕೆಯ ಫಲಿತಾಂಶದ ಅಂಶವನ್ನು ನಿರ್ಧರಿಸಲಾಗುವುದಿಲ್ಲ ಏಕೆಂದರೆ ಅದು ಗುರುತಿಸಲಾಗುವುದಿಲ್ಲ.

36. ಆರ್ಥಿಕ ವರ್ಷ 2019–20 ಮತ್ತು 2020–21 ನೇ ಸಾಲಿಗಾಗಿ ಹುಕ್ಕೇರಿ ಗ್ರಾಮೀಣ ವಿದ್ಯುದೀಕರಣ ಸಹಕಾರ ಸಂಘ (ಹೆಚ್‌ಆರ್‌ಇಸಿಎಸ್) ದ ಭೇದಾತ್ಮಕ ವಿದ್ಯುತ್ ಖರೀದಿ ಬಿಲ್ಲಿಂಗ್‌ಗೆ ಅವಕಾಶವನ್ನು ಮಾಡಿರುವುದಿಲ್ಲ. ಅನ್ವಯಿಸುವ ದರಪಟ್ಟಿಗಿಂತ ಕಡಿಮೆ ದರದಲ್ಲಿ ಇನ್‌ವಾಯಿಸ್‌ಗಳನ್ನು ತಯಾರಿಸಲಾಗಿದೆ. ಕೆಇಆರ್‌ಸಿಯು ವಿಶೇಷವಾಗಿ ಹೆಚ್‌ಆರ್‌ಇಸಿಎಸ್ ಗಾಗಿಯೇ ದರಪಟ್ಟಿಯನ್ನು ನಿರ್ಧರಿಸಿದಾಗ ವ್ಯತ್ಯಾಸದ ಮೊತ್ತಕ್ಕೆ ಬೇಡಿಕೆಯನ್ನು ಮಾಡಲಾಗುತ್ತದೆ. 2019–20ನೇ ಸಾಲಿಗೆ ಕಂಪನಿಯು 31ನೇ ಮಾರ್ಚ್ 2021 ರಂತೆ ಖಾತೆಗಳ ಪುಸ್ತಕಗಳಲ್ಲಿ ಲೆಕ್ಕೀಕರಿಸದೇ ಇರುವ 2.33 ಕೋಟಿ ರೂ.ಗಳಷ್ಟು ಹೆಚ್ಚುವರಿ ಬಾಕಿ ಇರುವ ಭೇದಾತ್ಮಕ ಬ್ಯಾಲೆನ್ಸ್ ಅನ್ನು ಹೊಂದಿದೆ.

ಇತರೆ:

37. ಈ ವರದಿಯಲ್ಲಿ ಒಳಗೊಂಡಿರುವ ವಿವಿಧ ಅಂಶಗಳ ಬಗ್ಗೆ ಕಂಪನಿಯಲ್ಲಿ ಅಸ್ತಿತ್ವದಲ್ಲಿರುವ ಆಂತರಿಕ ತಪಾಸಣೆ ಮತ್ತು ಆಂತರಿಕ ನಿಯಂತ್ರಣಾ ವ್ಯವಸ್ಥೆಯನ್ನು ಸಂಪೂರ್ಣವಾಗಿ ಪರಿಶೀಲಿಸಿ ಬಲಪಡಿಸಬೇಕಾಗಿದೆ. ಮತ್ತು ಆಂತರಿಕ ಪರಿಶೋಧನೆ ವಿಭಾಗವು ಸುಧಾರಿಸಬೇಕಾಗಿದೆ.

38. ದಿನಾಂಕ 31.03.2021 ಕ್ಕೆ ಇರುವಂತೆ ವ್ಯಾಪಾರ ಸಂಬಂಧಿತ ಸ್ವೀಕೃತಿಗಳು/ಪಾವತಿಗಳು, ಮುಂಗಡ ಪಾವತಿಸಿದ್ದು/ಪಡೆದಿರುವ, ಠೇವಣಿ ಪಾವತಿಸಿರುವ/ಪಡೆದಿರುವ. ವ್ಯಾಪಾರ ಠೇವಣಿಗಳು, ಸಾಲ ಮತ್ತು ಮುಂಗಡಗಳ ಮೊತ್ತಗಳು, ಠೇವಣಿಗಳು, ವಿಭಾಗಗಳು, ಉಪ–ವಿಭಾಗಗಳು, ವಲಯಗಳು, ವೃತ್ತಗಳಲ್ಲಿ ನಿರ್ವಹಿಸಿದ ಬಾಂಕ್ ಖಾತೆಗಳ ಶಿಲ್ಕು, ಸರ್ಕಾರಿ ಸಾಲಗಳು ಹಾಗೂ ಅವುಗಳ ಮೇಲೆ ಆಕರಿಸಿದ ಬಡ್ಡಿಗಳನ್ನು ದೃಢೀಕರಣಗೊಳಿಸಬೇಕಿದೆ. ಇವುಗಳು ಕೆಲವೊಂದು ಹಳೆಯ ಶಿಲ್ಕುಗಳನ್ನು ಒಳಗೊಂಡಿದ್ದು, ಪರಾಮರ್ಶೆ ಹಾಗೂ ಸಮನ್ವಯದ ಅಗತ್ಯವಿರುತ್ತದೆ. ಕೆಲವೊಂದು ವ್ಯಾಪಾರ ಸಂಬಂಧೀ ಸ್ವೀಕೃತಿಗಳು ಹಾಗೂ ಮುಂಗಡಗಳಿಗೆ ಪ್ರತಿಯಾಗಿ ಅವಕಾಶಗಳು ಅಸ್ತಿತ್ವದಲ್ಲಿದ್ದರೂ ಅದರ ಸಮರ್ಪಕತೆಯನ್ನು ಖಚಿತಪಡಿಸಲಾಗುವುದಿಲ್ಲ. ಆದ್ದರಿಂದ ಈ ಶಿಲ್ಕುಗಳಿಗೆ ಪ್ರತಿಯಾಗಿ ನಂತರದ ಅವಕಾಶಗಳು/ಹೊಂದಾಣಿಕೆಗಳ ಬಗ್ಗೆ, ಯಾವುದಾದರೂ ಇದ್ದಲ್ಲಿ, ಖಚಿತಪಡಿಸಲಾಗಿರುವುದಿಲ್ಲ ಮತ್ತು ಮಾಡಿರುವುದಿಲ್ಲ. ಲೆಕ್ಕಪತ್ರಗಳ ಮೇಲೆ ಉಂಟಾಗುವ ತದನಂತರದ ಪರಿಣಾಮವು ಅನಿಶ್ಚಿತವಾಗಿದೆ.

ಕಾಯ್ದೆಯ ಕಲಂ 143 (10) ರಲ್ಲಿ ಉಲ್ಲೇಖಿತವಾದ ಪರಿಶೋಧನಾ ಮಾನದಂಡಗಳಿಗೆ ಅನುಗುಣವಾಗಿ ನಾವು ಪರಿಶೋಧನೆಯನ್ನು ನಡೆಸಿರುತ್ತೇವೆ. ಸದರಿ ಮಾನದಂಡಗಳ ಅಡಿಯಲ್ಲಿ ನಮ್ಮ ಜವಾಬ್ದಾರಿಗಳ ಬಗ್ಗೆ ನಮ್ಮ ವರದಿಯ ಹಣಕಾಸು ಹೇಳಿಕೆಗಳ ಪರಿಶೋಧನೆಯಲ್ಲಿ ಲೆಕ್ಕಪರಿಶೋಧಕರ ಜವಾಬ್ದಾರಿಗಳು ಎಂಬ ಭಾಗದಲ್ಲಿ ವಿವರಿಸಲಾಗಿದೆ. ಚಾರ್ಟರ್ಡ್ ಅಕೌಂಟಂಟ್ ಆಫ್ ಇಂಡಿಯಾ ಸಂಸ್ಥೆಯು ಹೊರಡಿಸಿದ ನೀತಿ ಸಂಹಿತೆಯ ಅನುಸಾರ ನಾವು ಕಂಪನಿಯಿಂದ ಸ್ವತಂತ್ರರಾಗಿದ್ದು ಕಂಪನಿ ಕಾಯ್ದೆಯಲ್ಲಿನ ಅವಕಾಶಗಳು ಮತ್ತು ಅಲ್ಲಿನ ನಿಯಮಗಳ ಅಡಿಯಲ್ಲಿ ಹಣಕಾಸು ಹೇಳಿಕೆಗಳ ನಮ್ಮ ಪರಿಶೋಧನೆಗೆ ಪ್ರಸ್ತುತವಿರುವ ನೈತಿಕ ಅವಶ್ಯಕತೆಗಳೊಂದಿಗೆ ಮತ್ತು ಈ ಅವಶ್ಯಕತೆಗಳು ಮತ್ತು ನೀತಿ ಸಂಹಿತೆಗೆ ಅನುಗುಣವಾಗಿ ನಾವು ನಮ್ಮ ಇತರ ನೈತಿಕ ಜವಾಬ್ದಾರಿಗಳನ್ನು ಪೂರೈಸಿದ್ದೇವೆ.

ನಾವು ಪಡೆದುಕೊಂಡ ಪರಿಶೋಧನಾ ಪುರಾವೆಗಳು ಹಣಕಾಸಿನ ತಃಖ್ತೆಗಳ ಬಗ್ಗೆ ನಮ್ಮ ಪರಿಶೋಧನಾ ಅಭಿಪ್ರಾಯಗಳಿಗೆ ತಳಹದಿಯನ್ನು ಒದಗಿಸಲು ಸಾಕಷ್ಟಾಗಿದ್ದು, ಸಮಂಜಸವಾಗಿರುತ್ತವೆ ಎನ್ನುವುದು ನಮ್ಮ ನಂಬಿಕೆ.

ಪ್ರಾಧಾನ್ಯತೆಯ ವಿಷಯ:

1. ಆಸ್ತಿಗಳ ಬಂಡವಾಳೀಕರಣದಲ್ಲಿ ವಿಳಂಬವಾಗಿರುವುದನ್ನು (ಒಂದು ಲೆಕ್ಕೀಕರಣದ ಅವಧಿಗಿಂತ ಹೆಚ್ಚು ವ್ಯಾಪಿಸಿರುವ) ಗಮನಿಸಲಾಗಿದೆ (ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಯಲ್ಲಿ ಒಳಗೊಂಡಿರುವ ವಸ್ತುಗಳನ್ನು ಬಳಸಿಕೊಳ್ಳುವುದು). ಇದರ ಪರಿಣಾಮವಾಗಿ ಸ್ಥಿರಾಸ್ತಿಗಳು ಮತ್ತು ಅನುಗುಣವಾಗಿ ವಿಧಿಸಿದ ಸವಕಳಿಯಲ್ಲಿ ಕಡಿಮೆಯ ಹೇಳಿಕೆಯಾಗಿರುತ್ತದೆ. ವಾಸ್ತವವಾಗಿ ಆಸ್ತಿಗಳ ಬಳಕೆಯ ದಿನಾಂಕದ ಬದಲಾಗಿ ಪುಸ್ತಕದಲ್ಲಿ ಬಂಡವಾಳೀಕರಣದ ದಿನಾಂಕದಿಂದ ಸವಕಳಿಯನ್ನು ಲೆಕ್ಕಾಚಾರ ಮಾಡಿರುವ ಪರಿಣಾಮವಾಗಿ ವಿಧಿಸಿದ ಸವಕಳಿ ಮತ್ತು ಮುಂದುವರೆಸಿದ ಆಸ್ತಿಯ ಮೊತ್ತದಲ್ಲಿ ತಪ್ಪು ಹೇಳಿಕೆಯಾಗಿರುತ್ತದೆ.ಚಾಲ್ತಿಯಲ್ಲಿರುವ ಕಾಮಗಾರಿಗಳ ತಃಖ್ತೆಯ ನಮ್ಮ ಪರೀಕ್ಷಾ ಪರಿಶೀಲನೆ ಸಂದರ್ಭದಲ್ಲಿ, ಕಾರ್ಯಾದೇಶದ ಪ್ರಕಾರ ಅಂದಾಜು ಮೊತ್ತ, ಕಾರ್ಯಾದೇಶದ ಉಲ್ಲೇಖಗಳು, ಕೊನೆಯದಾಗಿ ಸಾಮಗ್ರಿಗಳನ್ನು ಪಡೆದುಕೊಂಡಿರುವ ದಿನಾಂಕ, ವರ್ಷಾಂತ್ಯದಲ್ಲಿ ಕಾರ್ಯದ ಸ್ಥಿತಿಗತಿ ಮುಂತಾದವುಗಳ ಬಗೆಗಿನ ಅಪೂರ್ಣ ವಿವರಗಳನ್ನು ನಾವು ಗಮನಿಸಿದೆವು. ನಮ್ಮ ಅಭಿಪ್ರಾಯದ ಪ್ರಕಾರ ಚಾಲ್ತಿಯಲ್ಲಿರುವ ಕಾಮಗಾರಿಗಳ ನಿಯತಕಾಲಿಕ ವಿಮರ್ಶೆ ನಡೆಸುವುದು ಅವಶ್ಯಕವಾಗಿರುತ್ತದೆ.ಈ ಕಾರಣದಿಂದಾಗಿ, ಹಣಕಾಸು ತಃಖ್ತೆಯಲ್ಲಿನ ವಿಧಿಸಿದ ಸವಕಳಿ, ಸ್ಥಿರಾಸ್ತಿಗಳ ಮುಂದುವರೆಸುವ ಮೊತ್ತ ಮತ್ತು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಮೇಲಿನ ಮೇಲ್ಕಾಣಿಸಿದ ವ್ಯತ್ಯಾಸಗಳ ಸಂಚಿತ ಪರಿಣಾಮಗಳನ್ನು ಪ್ರಸ್ತುತದಲ್ಲಿ ಪ್ರಮಾಣೀಕರಿಸಲಾಗದು.

2. ಪ್ರಸ್ತುತ, ಗ್ರಾಹಕರಿಂದ ಬಿಲ್ಲಿಂಗ್ ಮತ್ತು ಸಂಗ್ರಹಕ್ಕೆ ಸಂಬಂಧಿಸಿದ ಕಾರ್ಯಾಚರಣೆಗಳನ್ನು ಮಾತ್ರ (ಹೆಚ್‌ಟಿ ಗ್ರಾಹಕರನ್ನು ಹೊರತುಪಡಿಸಿ) ಗಣಕೀಕೃತಗೊಳಿಸಲಾಗಿದೆ. ಇತರೆ ಪ್ರಕ್ರಿಯೆಗಳು, ವ್ಯವಹಾರಗಳಿಗೆ

ಸಂಬಂಧಿಸಿದಂತೆ, ದಾಖಲೆಗಳನ್ನು ಭಾಗಶಃ ಕೈಯಾರೆ ಮತ್ತು ಭಾಗಶಃ ಎಮ್.ಎಸ್.ಎಕ್ಸೆಲ್ ನಲ್ಲಿ ನಿರ್ವಹಿಸಲಾಗುತ್ತಿದೆ. ಆದರೆ, ಎಮ್.ಎಸ್.ಎಕ್ಸೆಲ್ ಒಂದು ಲೆಕ್ಕೀಕರಣ ತಂತ್ರಾಂಶವಾಗಿಲ್ಲದಿರುವುದರಿಂದ, ಹಣಕಾಸು ಲೆಕ್ಕಪತ್ರಗಳ ನಿರ್ವಹಣೆಗಾಗಿ ಸೂಕ್ತವಾದ ಮೇಲ್ವಿಚಾರಣೆಯಲ್ಲಿ ಹಾಗೂ ಸಾಕಷ್ಟು ಪ್ರಮಾಣದ ಸುರಕ್ಷಾ ಕ್ರಮಗಳೊಂದಿಗೆ ಒಂದು ಯೋಗ್ಯ ಲೆಕ್ಕೀಕರಣ ತಂತ್ರಾಂಶದ ಅವಶ್ಯಕತೆ ಇರುತ್ತದೆ. ಕಂಪನಿಯು ಕೆಲವು ವರ್ಷಗಳ ಹಿಂದೆಯೇ ತನ್ನ ಇಆರ್‌ಪಿ ತಂತ್ರಾಂಶ ಅಭಿವೃದ್ಧಿಗಾಗಿ ಗುತ್ತಿಗೆ ನೀಡಿದ್ದು, ಇದುವರೆಗೂ ಅನುಷ್ಠಾನಗೊಳಿಸಿರುವುದಿಲ್ಲವೆಂಬುದನ್ನೂ ಸಹ ಗಮನಿಸಲಾಗಿದೆ.

3. ವಿಭಾಗ ಲೆಕ್ಕಪರಿಶೋಧನೆ:

ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ವ್ಯವಸ್ಥೆಯು ಪ್ರಧಾನವಾಗಿ ವಿಭಾಗಗಳಿಂದ ಹಾಗೂ ವಲಯಗಳಿಂದ ನಡೆಯುತ್ತದೆ.ಕಂಪನಿಯು ಪ್ರತ್ಯೇಕವಾಗಿ ಶಾಖಾ ಲೆಕ್ಕಪರಿಶೋಧನೆಯನ್ನು ಕೈಗೊಳ್ಳದೇ ಇರುವುದನ್ನು ಗಮನಿಸಲಾಗಿದೆ ಮತ್ತು ಕೆಲಸದ ವ್ಯಾಪ್ತಿ ಮತ್ತು ಸಮಯದ ಮಿತಿಯೊಂದಿಗೆ ಇರುವ ಶಾಸನಬದ್ಧ ಲೆಕ್ಕಪರಿಶೋಧನೆಯು ಶಾಖಾ ಲೆಕ್ಕಪರಿಶೋಧನೆಯನ್ನೂ ಸಹ ಒಳಗೊಂಡಿರುತ್ತದೆ.

ಕಂಪನಿಯ ಲೆಕ್ಕಪುಸ್ತಕಗಳ ಮೇಲೆ ಹೆಚ್ಚು ನಿಖರತೆ ಮತ್ತು ನ್ಯಾಯಸಮ್ಮತತೆಯನ್ನು ಪಡೆದುಕೊಳ್ಳಲು ಎಲ್ಲ ವಿಭಾಗಗಳಲ್ಲಿ ವರ್ಷದಿಂದ ವರ್ಷಕ್ಕೆ ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆಯನ್ನು ಒಂದು ಪ್ರತ್ಯೇಕ ಅಭ್ಯಾಸದಂತೆ ಅನುಭವಿ ಲೆಕ್ಕಪರಿಶೋಧಕ ಸಂಸ್ಥೆಯಿಂದ ನಡೆಸುವ ನಿಟ್ಟಿನಲ್ಲಿ ಕಂಪನಿಯು ಪ್ರತ್ಯೇಕವಾಗಿ ಶಾಖಾ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಬೇಕೆಂದು ಶಿಫಾರಸ್ಸು ಮಾಡಲಾಗಿದೆ.

ಪ್ರಮುಖ ಲೆಕ್ಕಪರಿಶೋಧನೆಯ ವಿಷಯಗಳು:

ನಮ್ಮ ವೃತ್ತಿಪರ ತೀರ್ಪಿನಂತೆ ಪ್ರಮುಖ ಲೆಕ್ಕಪರಿಶೋಧನೆಯ ವಿಷಯಗಳು ಯಾವುವೆಂದರೆ ಪ್ರಸಕ್ತ ಅವಧಿಯ ಹಣಕಾಸು ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆಯಲ್ಲಿ ಹೆಚ್ಚಿನ ಮಹತ್ವದ್ದಾಗಿವೆ. ಹಣಕಾಸು ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಒಟ್ಟಾರೆಯಾಗಿ ಈ ವಿಷಯಗಳು ಮತ್ತು ಅವುಗಳ ಮೇಲೆ ನಮ್ಮ ಅಭಿಪ್ರಾಯ ರೂಪಿಸುವಲ್ಲಿ ಅವುಗಳ ಕುರಿತು ತಿಳಿಸಲಾಗಿದೆ ಮತ್ತು ಈ ವಿಷಯಗಳ ಬಗ್ಗೆ ನಾವು ಪ್ರತ್ಯೇಕವಾಗಿ ಅಭಿಪ್ರಾಯ ನೀಡುವುದಿಲ್ಲ.

ಪ್ರಮುಖ ಲೆಕ್ಕಪರಿಶೋಧನೆಯ ವಿಷಯಗಳ ವರದಿಯ ಕುರಿತು ಎಸ್‌ಎ 701 ಪ್ರಕಾರ, ಕಂಪನಿಯು ಪಟ್ಟಿಯಲ್ಲಿರದ ಕಂಪನಿಯಾಗಿರುವುದರಿಂದ ಪ್ರಮುಖ ಲೆಕ್ಕಪರಿಶೋಧನೆಯ ವಿಷಯಗಳು ಕಂಪನಿಗೆ ಅನ್ವಯಿಸುವುದಿಲ್ಲ.

ಹಣಕಾಸು ಹೇಳಿಕೆಗಳಿಗೆ ನಿರ್ವಹಣಾ ವ್ಯವಸ್ಥೆಯ ಜವಾಬ್ದಾರಿಗಳು:

ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ಲೆಕ್ಕೀಕರಣ ತತ್ವಗಳಿಗೆ ಅನುಸಾರವಾಗಿ, ಕಂಪನಿಯ ನೈಜ ಹಾಗೂ ಸಮಂಜಸ ಹಣಕಾಸು ಸ್ಥಿತಿ, ಲಾಭ/ನಷ್ಟ ಹಾಗೂ ನಗದು ಹರಿವುಗಳನ್ನು ತೋರಿಸುವ ಸ್ವತಂತ್ರ ಹಣಕಾಸು ಹೇಳಿಕೆಗಳ ತಯಾರಿಕೆಗೆ ಸಂಬಂಧಪಟ್ಟಂತೆ, ಕಾಯ್ದೆಯ ಕಲಂ 133 ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಲೆಕ್ಕಪತ್ರ ಮಾನದಂಡಗಳೊಂದಿಗೆ ಕಾಯ್ದೆಯ ಕಲಂ 134 (5) ರಲ್ಲಿ ನೀಡಿದ ವ್ಯಾಖ್ಯಾನಗಳಿಗೆ ಕಂಪನಿಯ ನಿರ್ದೇಶಕರ ಮಂಡಳಿಯು ಜವಾಬ್ದಾರಿಯಾಗಿರುತ್ತದೆ.ಈ ಜವಾಬ್ದಾರಿಯು, ಕಂಪನಿಯ ಆಸ್ತಿಗಳ ರಕ್ಷಣೆ, ವಂಚನೆಗಳು ಹಾಗೂ ಇತರ ಅಕ್ರಮಗಳ ತಡೆಗಟ್ಟುವುದು ಹಾಗೂ ಪತ್ತೆಹಚ್ಚುವಿಕೆಗಾಗಿ ಕಾಯ್ದೆಯ ನಿಬಂಧನೆಗಳ ಪ್ರಕಾರ ಸಾಕಷ್ಟು ಪ್ರಮಾಣದ ಲೆಕ್ಕೀಕರಣ ದಾಖಲೆಗಳ ನಿರ್ವಹಣೆ; ಸೂಕ್ತ ಲೆಕ್ಕಪತ್ರ ನೀತಿಗಳ ಆಯ್ಕೆ ಮತ್ತು ಅಳವಡಿಕೆ; ಸಮಂಜಸವಾದ ಹಾಗೂ ವಿವೇಕಯುತವಾದ ಅಂದಾಜುಗಳು ಹಾಗೂ ನಿರ್ಣಯಗಳ ಕೈಗೊಳ್ಳುವಿಕೆ; ವಂಚನೆ ಅಥವಾ ತಪ್ಪುಗಳ ಕಾರಣದಿಂದಾಗಿ ಭೌತಿಕ ತಪ್ಪು ಹೇಳಿಕೆಗಳಿಂದ ಹೊರತಾದ, ನೈಜ ಹಾಗೂ ಸಮಂಜಸ ಅಭಿಮತ ನೀಡುವ ಸ್ವತಂತ್ರ ಹಣಕಾಸು ಹೇಳಿಕೆಗಳನ್ನು ತಯಾರಿಸುವುದು ಹಾಗೂ ಮಂಡಿಸುವುದಕ್ಕಾಗಿ ಲೆಕ್ಕ ದಾಖಲೆಗಳ ಪರಿಪೂರ್ಣತೆ ಹಾಗೂ ನಿಖರತೆಗಳನ್ನು ಖಚಿತಪಡಿಸುವ ನಿಟ್ಟಿನಲ್ಲಿ ಪರಿಣಾಮಕಾರಿಯಾಗಿ ಕಾರ್ಯವೆಸಗುವ ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆಯನ್ನೂ ಸಹ ಒಳಗೊಂಡಿರುತ್ತದೆ.

ಹಣಕಾಸು ಹೇಳಿಕೆಗಳನ್ನು ಸಿದ್ಧಪಡಿಸುವಲ್ಲಿ, ನಿರ್ವಹಣಾ ತಂಡವು ಕಂಪನಿಯ ಮುನ್ನಡೆಸುವ ಸಾಮರ್ಥ್ಯ, ಮುನ್ನಡೆಯುವ ಘಟಕಕ್ಕೆ ಸಂಬಂಧಿಸಿದ ವಿಷಯಗಳ ಅವಶ್ಯವಿರುವಲ್ಲಿ ಬಹಿರಂಗಪಡಿಸುವಿಕೆ ಮತ್ತು ಕಂಪನಿಯನ್ನು

ದಿವಾಳಿಯಾಗಿಸಲು ಅಥವಾ ಕಾರ್ಯಾಚರಣೆಯನ್ನು ನಿಲ್ಲಿಸಲು ಉದ್ದೇಶಿಸದ ಹೊರತು ಮುನ್ನಡೆಯುವ ಘಟಕವನ್ನು ಲೆಕ್ಕಪತ್ರದ ಆಧಾರವಾಗಿ ಬಳಸುವುದು ಅಥವಾ ಹಾಗೆ ಮಾಡಲು ಯಾವುದೇ ವಾಸ್ತವಿಕ ಪರ್ಯಾಯವನ್ನು ಹೊಂದಿಲ್ಲದಿರುವುದು ಎಂಬುದನ್ನು ನಿರ್ಣಯಿಸಲು ಜವಾಬ್ದಾರಿಯಾಗಿರುತ್ತದೆ.

ನಿರ್ದೇಶಕ ಮಂಡಳಿಯು ಕಂಪನಿಯ ಹಣಕಾಸು ವರದಿ ಪ್ರಕ್ರಿಯೆಯ ಮೇಲ್ವಿಚಾರಣೆಯಲ್ಲಿಯೂ ಸಹ ಜವಾಬ್ದಾರಿಯಾಗಿರುತ್ತದೆ.

ಹಣಕಾಸು ತಃಖ್ತೆಗಳ ಲೆಕ್ಕಪರಿಶೋಧನೆಯಲ್ಲಿ ಲೆಕ್ಕಪರಿಶೋಧಕರ ಜವಾಬ್ದಾರಿಗಳು:

ಒಟ್ಟಾರೆಯಾಗಿ ಸ್ವತಂತ್ರ ಹಣಕಾಸು ಹೇಳಿಕೆಗಳು ವಸ್ತು ತಪ್ಪುಗ್ರಹಿಕೆಯಿಂದ ಮುಕ್ತವಾಗಿದೆಯೇ, ವಂಚನೆ ಅಥವಾ ದೋಷದಿಂದಾಗಿ, ಎಂಬ ಬಗ್ಗೆ ಸಮಂಜಸವಾದ ಭರವಸೆಯನ್ನು ಪಡೆಯುವುದು ಮತ್ತು ನಮ್ಮ ಅಭಿಪ್ರಾಯವನ್ನು ಒಳಗೊಂಡಿರುವ ಲೆಕ್ಕಪರಿಶೋಧನಾ ವರದಿಯನ್ನು ನೀಡುವುದು ನಮ್ಮ ಉದ್ದೇಶವಾಗಿರುತ್ತದೆ. ಸಮಂಜಸವಾದ ಭರವಸೆಯು ಉನ್ನತ ಮಟ್ಟದ ಆಶ್ವಾಸನೆಯಾಗಿದೆ, ಆದರೆ ಪರಿಶೋಧನಾ ಮಾನದಂಡಗಳಿಗೆ ಅನುಸಾರವಾಗಿ ನಡೆಸಲಾದ ಲೆಕ್ಕಪರಿಶೋಧನೆಯು ವಸ್ತು ತಪ್ಪುಹೇಳಿಕೆಯು ಇರುವಲ್ಲಿ ಅದನ್ನು ಯಾವಾಗಲೂ ಕಂಡುಹಿಡಿಯುವುದು ಎಂಬ ಖಾತರಿಯಲ್ಲ. ತಪ್ಪುಹೇಳಿಕೆಗಳು ವಂಚನೆ ಅಥವಾ ದೋಷದಿಂದ ಉದ್ಭವಿಸಬಹುದು ಮತ್ತು ಒಂದುವೇಳೆ ಪ್ರತ್ಯೇಕವಾಗಿ ಅಥವಾ ಒಟ್ಟಾರೆಯಾಗಿ ಭೌತಿಕವಾಗಿ ಪರಿಗಣಿಸಬಹುದು, ಈ ಸ್ವತಂತ್ರ ಹಣಕಾಸು ಹೇಳಿಕೆಗಳ ಆಧಾರದ ಮೇಲೆ ತೆಗೆದುಕೊಳ್ಳುವ ಬಳಕೆದಾರರ ಆರ್ಥಿಕ ನಿರ್ಧಾರಗಳ ಮೇಲೆ ಪ್ರಭಾವ ಬೀರುತ್ತವೆ ಎಂದು ಸಮಂಜಸವಾಗಿ ನಿರೀಕ್ಷಿಸಬಹುದು.

ಶಾಸನಬದ್ಧ ಲೆಕ್ಕಪರಿಶೋಧಕರಿಗೆ ಅನುಸಾರವಾಗಿ ಲೆಕ್ಕಪರಿಶೋಧನೆಯ ಭಾಗವಾಗಿ, ನಾವು ವೃತ್ತಿಪರ ತೀರ್ಪು ನೀಡುತ್ತೇವೆ ಮತ್ತು ಲೆಕ್ಕಪರಿಶೋಧನೆಯ ಉದ್ದಕ್ಕೂ ವೃತ್ತಿಪರ ಸಂದೇಹವನ್ನು ಕಾಪಾಡಿಕೊಳ್ಳುತ್ತೇವೆ. ಮತ್ತು ನಾವು:

- ವಂಚನೆ ಅಥವಾ ದೋಷದಿಂದಾಗಿ, ಸ್ವತಂತ್ರ ಹಣಕಾಸು ಹೇಳಿಕೆಗಳ ಭೌತಿಕ ತಪ್ಪುಹೇಳಿಕೆಗಳ ಅಪಾಯಗಳು, ಆ ಅಪಾಯಗಳಿಗೆ ಸ್ಪಂದಿಸುವ ಲೆಕ್ಕಪರಿಶೋಧನೆಯ ವಿಧಾನಗಳನ್ನು ವಿನ್ಯಾಸಗೊಳಿಸಿ ನಿರ್ವಹಿಸುವುದು, ಮತ್ತು ನಮ್ಮ ಅಭಿಪ್ರಾಯಕ್ಕೆ ಆಧಾರವನ್ನು ಒದಗಿಸಲು ಸಾಕಷ್ಟು ಮತ್ತು ಸೂಕ್ತವಾದ ಲೆಕ್ಕಪರಿಶೋಧಕ ಪುರಾವೆಗಳನ್ನು ಪಡೆದುಕೊಳ್ಳುವುದನ್ನು ಗುರುತಿಸುತ್ತೇವೆ ಮತ್ತು ನಿರ್ಣಯಿಸುತ್ತೇವೆ.

  ವಂಚನೆಯ ಕಾರಣದಿಂದಾಗಿ ಉಂಟಾದ ತಪ್ಪು ಹೇಳಿಕೆಯನ್ನು ಗುರುತಿಸದೇ ಇರುವುದು ದೋಷದಿಂದ ಉಂಟಾಗಿರುವುದಕ್ಕಿಂತ ಹೆಚ್ಚಿನ ಅಪಾಯಹೊಂದಿರುತ್ತದೆ. ವಂಚನೆಯು ಹೊಂದಾಣಿಕೆ, ಖೊಟ್ಟಿ ದಾಖಲೆ, ಉದ್ದೇಶಪೂರ್ವಕ ಲೋಪಗಳು, ತಪ್ಪಾದ ನಿರೂಪಣೆ ಅಥವಾ ಆಂತರಿಕ ನಿಯಂತ್ರಣದ ಅತಿಕ್ರಮಣವನ್ನು ಹೊಂದಿರಬಹುದು.

- ಆಯಾ ಸಂದರ್ಭಗಳಲ್ಲಿ ಸೂಕ್ತವಾದ ಲೆಕ್ಕಪರಿಶೋಧನೆಯ ಕಾರ್ಯವಿಧಾನಗಳನ್ನು ವಿನ್ಯಾಸಗೊಳಿಸಲು ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಆಂತರಿಕ ನಿಯಂತ್ರಣದ ತಿಳುವಳಿಕೆಯನ್ನು ಪಡೆದುಕೊಳ್ಳುತ್ತೇವೆ. ಕಂಪನಿ ಕಾಯ್ದೆ, 2013 ರ ಸೆಕ್ಷನ್ 143(3) (i) ಅಡಿಯಲ್ಲಿ, ಕಂಪನಿಯು ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯನ್ನು ಹೊಂದಿದೆಯೇ ಮತ್ತು ಅಂತಹ ನಿಯಂತ್ರಣಗಳ ಕಾರ್ಯಾಚರಣೆಯ ಪರಿಣಾಮಕಾರಿತ್ವದ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಜವಾಬ್ದಾರಿಯನ್ನು ಹೊಂದಿರುವುದಿಲ್ಲ.

- ಆಯ್ದುಕೊಂಡ ಲೆಕ್ಕೀಕರಣ ನೀತಿಗಳ ಸೂಕ್ತತೆ ಮತ್ತು ಲೆಕ್ಕೀಕರಣ ಅಂದಾಜುಗಳ ಸಮಂಜಸತೆ ಮತ್ತು ನಿರ್ವಹಣಾ ತಂಡದಿಂದ ಸಂಬಂಧಿಸಿದ ಬಹಿರಂಗಪಡಿಸುವಿಕೆಗಳನ್ನೂ ಸಹ ಮೌಲ್ಯಮಾಪನ ಮಾಡುತ್ತೇವೆ.

- ನಿರ್ವಹಣಾ ತಂಡದ ಲೆಕ್ಕೀಕರಣವನ್ನು ಮುನ್ನಡೆಸುವ ಆಧಾರದ ಸೂಕ್ತತೆಯ ಬಗ್ಗೆ ಮತ್ತು, ಪಡೆದಿರುವ ಲೆಕ್ಕಪರಿಶೋಧನಾ ಪುರಾವೆಗಳ ಆಧಾರದ ಮೇಲೆ, ಮುಂದುವರಿಯುವ ಘಟಕದ ಸಾಮರ್ಥ್ಯದ ಮೇಲೆ ಗಮನಾರ್ಹ ಅನುಮಾನವನ್ನು ಉಂಟುಮಾಡಬಹುದಾದ ಘಟನೆಗಳು ಅಥವಾ ಷರತ್ತುಗಳಿಗೆ ಸಂಬಂಧಿಸಿದಂತೆ ಭೌತಿಕ ಅನಿಶ್ಚಿತತೆಯು ಅಸ್ತಿತ್ವದಲ್ಲಿದೆಯೇ ಎಂಬುದನ್ನು ನಾವು ತೀರ್ಮಾನಿಸುತ್ತೇವೆ. ಒಂದು ವೇಳೆ ಭೌತಿಕ ಅನಿಶ್ಚಿತತೆ ಅಸ್ತಿತ್ವದಲ್ಲಿದೆ ಎಂದು ನಾವು ತೀರ್ಮಾನಿಸಿದರೆ, ನಮ್ಮ ಲೆಕ್ಕಪರಿಶೋಧನಾ

ವರದಿಯಲ್ಲಿ ಸ್ವತಂತ್ರ ಹಣಕಾಸು ಹೇಳಿಕೆಗಳಲ್ಲಿನ ಸಂಬಂಧಿಸಿದ ಬಹಿರಂಗಪಡಿಸುವಿಕೆಗಳಿಗೆ ನಾವು ಗಮನ ಸೆಳೆಯಬೇಕಾಗಿದೆ ಅಥವಾ, ಅಂತಹ ಬಹಿರಂಗಪಡಿಸುವಿಕೆಗಳು ಅಸಮರ್ಪಕವಾಗಿದ್ದರೆ, ನಮ್ಮ ಅಭಿಪ್ರಾಯವನ್ನು ಬದಲಾಯಿಸುವುದು. ನಮ್ಮ ತೀರ್ಮಾನಗಳು ನಮ್ಮ ಲೆಕ್ಕಪರಿಶೋಧನಾ ವರದಿಯ ದಿನಾಂಕದವರೆಗೆ ಪಡೆದ ಲೆಕ್ಕಪರಿಶೋಧನಾ ಪುರಾವೆಗಳನ್ನು ಆಧರಿಸಿವೆ.

ಆದಾಗ್ಯೂ, ಭವಿಷ್ಯದ ಘಟನೆಗಳು ಅಥವಾ ಪರಿಸ್ಥಿತಿಗಳು ಕಂಪನಿಯು ಮುಂದುವರೆಯುವುದನ್ನು ನಿಲ್ಲಿಸಲು ಕಾರಣವಾಗಬಹುದು.

- ಹಣಕಾಸು ಹೇಳಿಕೆಗಳ ಒಟ್ಟಾರೆ ಪ್ರಸ್ತುತಿ, ರಚನೆ ಮತ್ತು ಹಣಕಾಸು ಹೇಳಿಕೆಗಳ ವಿಷಯ, ಬಹಿರಂಗಪಡಿಸುವಿಕೆಯನ್ನು ಒಳಗೊಂಡಂತೆ, ಮತ್ತು ಹಣಕಾಸಿನ ಹೇಳಿಕೆಗಳು ಆಧಾರವಾಗಿರುವ ವ್ಯವಹಾರಗಳು ಮತ್ತು ಘಟನೆಗಳು ನ್ಯಾಯಯುತ ಪ್ರಸ್ತುತಿಯನ್ನು ಸಾಧಿಸುವ ರೀತಿಯಲ್ಲಿ ಪ್ರತಿನಿಧಿಸುತ್ತವೆಯೇ ಎಂಬುದನ್ನೂ ಸಹ ಮೌಲ್ಯಮಾಪನಗೊಳಿಸುತ್ತೇವೆ.

ಇತರ ವಿಷಯಗಳ ಮಧ್ಯೆ, ನಮ್ಮ ಲೆಕ್ಕಪರಿಶೋಧನೆಯ ಸಮಯದಲ್ಲಿ ನಾವು ಗುರುತಿಸುವ ಆಂತರಿಕ ನಿಯಂತ್ರಣದಲ್ಲಿನ ಯಾವುದೇ ಗಮನಾರ್ಹ ನ್ಯೂನ್ಯತೆಗಳನ್ನು ಒಳಗೊಂಡಂತೆ, ಲೆಕ್ಕಪರಿಶೋಧನೆಯ ಯೋಜಿತ ವ್ಯಾಪ್ತಿ ಮತ್ತು ಲೆಕ್ಕಪರಿಶೋಧನಾ ಸಮಯ ಮತ್ತು ಮಹತ್ವದ ಲೆಕ್ಕಪರಿಶೋಧನೆಯ ಆವಿಷ್ಕಾರಗಳ ಕುರಿತಂತೆ ಆಡಳಿತದ ಹೊಣೆಯೊಂದಿಗೆ ನಾವು ಸಂವಹನ ನಡೆಸುತ್ತೇವೆ.

ಆಡಳಿತದ ಹೊಣೆಗೆ ನಾವು ಸ್ವತಂತ್ರಕ್ಕೆ ಸಂಬಂಧಿಸಿದಂತೆ ನೈತಿಕ ಅವಶ್ಯಕತೆಗಳನ್ನು ಅನುಸರಿಸಿದ್ದೇವೆ ಎಂಬ ಹೇಳಿಕೆಯನ್ನೂ ಸಹ ಒದಗಿಸುತ್ತೇವೆ, ಮತ್ತು ನಮ್ಮ ಸ್ವಾತಂತ್ರ್ಯದ ಮೇಲೆ ಸಮಂಜಸವಾಗಿ ಭಾವಿಸಬಹುದಾದ ಎಲ್ಲಾ ಸಂಬಂಧಗಳು ಮತ್ತು ಇತರ ವಿಷಯಗಳೊಂದಿಗೆ, ಮತ್ತು ಅನ್ವಯವಾಗುವಲ್ಲಿ ಸಂಬಂಧಿತ ಸುರಕ್ಷತೆಗಳ ಬಗ್ಗೆ ಅವರೊಂದಿಗೆ ಸಂವಹನ ನಡೆಸುತ್ತೇವೆ.ಅಧಿಕಾರ ಹೊಂದಿದ ಅಂಶಗಳ ಬಗ್ಗೆ ಸಂವಹನ ನಡೆಸಿದುದರ ವಿಷಯಗಳಿಂದಾಗಿ, ಪ್ರಸ್ತುತ ಅವಧಿಯ ಹಣಕಾಸು ಹೇಳಿಕೆಗಳ ಲೆಕ್ಕಪರಿಶೋಧನೆಯಲ್ಲಿ ಅಂತಹ ವಿಷಯಗಳನ್ನು ಹೆಚ್ಚು ಮಹತ್ವದ್ದಾಗಿರುವ ವಿಷಯಗಳೆಂದು ನಾವು ಪರಿಗಣಿಸುತ್ತೇವೆ ಮತ್ತು ಅವುಗಳು ಪ್ರಮುಖ ಲೆಕ್ಕಪರಿಶೋಧನೆಯ ವಿಷಯಗಳಾಗಿವೆ. ಕಾನೂನು ಅಥವಾ ನಿಯಂತ್ರಣವು ಈ ವಿಷಯದ ಬಗ್ಗೆ ಸಾರ್ವಜನಿಕ ಬಹಿರಂಗಪಡಿಸುವಿಕೆಯನ್ನು ತಡೆಯದ ಹೊರತು ಅಥವಾ ಅತ್ಯಂತ ಅಪರೂಪದ ಸಂದರ್ಭಗಳಲ್ಲಿ, ಈ ವಿಷಯಗಳನ್ನು ನಮ್ಮ ಲೆಕ್ಕಪರಿಶೋಧನಾ ವರದಿಯಲ್ಲಿ ವಿವರಿಸುತ್ತೇವೆ.ನಮ್ಮ ವರದಿಯಲ್ಲಿ ವಿಷಯ ಸಂವಹನವಾಗಬಾರದು ಎಂದು ನಾವು ನಿಶ್ಚಯಿಸುತ್ತೇವೆ ಏಕೆಂದರೆ ಹಾಗೆ ಮಾಡುವುದರಿಂದ ಉಂಟಾಗುವ ದುಷ್ಪರಿಣಾಮಗಳು ಅಂತಹ ಸಂವಹನದ ಸಾರ್ವಜನಿಕ ಹಿತಾಸಕ್ತಿ ಪ್ರಯೋಜನಗಳನ್ನು ಮೀರಿಸುತ್ತದೆ ಎಂದು ಸಮಂಜಸವಾಗಿ ನಿರೀಕ್ಷಿಸಬಹುದು.

ಇತರ ಕಾನೂನುಬದ್ಧ ಹಾಗೂ ನಿಯಂತ್ರಣಾ ಅವಶ್ಯಕತೆಗಳ ಮೇಲಿನ ವರದಿ:

ಕಂಪನಿಗಳ (ಲೆಕ್ಕ ಪರಿಶೋದಕರುಗಳ ವರದಿ) ಆದೇಶ 2016 ("ಆದೇಶ") ಕ್ಕೆ ಅಗತ್ಯವಿರುವಂತೆ ಕೇಂದ್ರ ಸರ್ಕಾರ ಜಾರಿಗೊಳಿಸಿದ ಕಂಪನಿಗಳ ಕಾಯ್ದೆ 2013 ರ ಕಲಂ 143 ರ ಉಪ ಕಲಂ (11) ರ ಮೇರೆಗೆ, ಸದರಿ ಆದೇಶದ ಕಂಡಿಕೆ 3 ಮತ್ತು 4 ರಲ್ಲಿ ತಿಳಿಸಿರುವ 'ವಿಷಯಗಳಿಗೆ ಸಂಬಂಧಿಸಿದ ವಿವರಣಾ ಪಟ್ಟಿ' ಯನ್ನು ಅನುಬಂಧ–ಎ ದಲ್ಲಿ, ಅನ್ವಯವಾಗುವಷ್ಟರ ಮೇರೆಗೆ, ನೀಡುತ್ತೇವೆ.

ಕಾಯ್ದೆಯ ಕಲಂ 143 (3) ರ ಅಗತ್ಯತೆಯಂತೆ ನಾವು ವರದಿ ಮಾಡುವುದೇನೆಂದರೆ:

ಎ) ನಮ್ಮ ಲೆಕ್ಕಪರಿಶೋಧನಾ ಉದ್ದೇಶಗಳಿಗಾಗಿ ಅವಶ್ಯವಿರುವ ಎಲ್ಲ ಮಾಹಿತಿಯನ್ನು ಮತ್ತು ವಿವರಣೆಯನ್ನು ನಮ್ಮ ಜ್ಞಾನ ಮತ್ತು ನಂಬಿಕೆಗಳ ಅತ್ಯುತ್ತಮ ಮಟ್ಟಕ್ಕೆ ಹುಡುಕಿ ಪಡೆದಿದ್ದೇವೆ.

ಬಿ) ನಮ್ಮ ಅಭಿಪ್ರಾಯದಲ್ಲಿ, ನಾವು ಕೈಗೊಂಡ ದಾಖಲೆಗಳ ಪರಿಶೀಲನೆಯಿಂದ ತೋರುವಂತೆ ಕಂಪನಿಯು ಕಾನೂನು ರೀತ್ಯಾ ಅವಶ್ಯಕವಾದ ಸೂಕ್ತ ಲೆಕ್ಕಪತ್ರ ಪುಸ್ತಕಗಳನ್ನು ನಿರ್ವಹಿಸಿರುತ್ತದೆ.

ಸಿ) ಈ ವರದಿಯಲ್ಲಿ ಪ್ರಸ್ತಾಪಿಸಿರುವ ಆಸ್ತಿ ಹೊಣೆ ಪಟ್ಟಿ ಮತ್ತು ಲಾಭ ನಷ್ಟ ತಃಖ್ತೆ ಹಾಗೂ ನಗದು ಹರಿವು ಪಟ್ಟಿಗಳು ಲೆಕ್ಕಪುಸ್ತಕಗಳೊಂದಿಗೆ ಒಮ್ಮತವಾಗಿರುತ್ತವೆ.

ಡಿ) ನಮ್ಮ ಅಭಿಪ್ರಾಯದಲ್ಲಿ, ಮೇಲೆ ತಿಳಿಸಿದ ಸ್ವತಂತ್ರ ಹಣಕಾಸು ಹೇಳಿಕೆಗಳು, ಮೇಲೆ ವರದಿಸಲ್ಪಟ್ಟವುಗಳ ಹೊರತಾಗಿ, ಕಂಪನಿಗಳ (ಲೆಕ್ಕಗಳು) ನಿಯಮಗಳು, 2014 ರ ನಿಯಮ 7 ರೊಂದಿಗೆ ಓದಲಾದ ಕಾಯ್ದೆಯ ಶಾಖೆ 133 ರಡಿಯಲ್ಲಿ ಉಲ್ಲೇಖಿಸಲ್ಪಟ್ಟ ಲೆಕ್ಕಪತ್ರ ಮಾನದಂಡಗಳನ್ನು ಅನುಸರಿಸುತ್ತವೆ.

ಇ) 31ನೇ ಮಾರ್ಚ್ 2021 ರ ನಿರ್ದೇಶಕ ಮಂಡಳಿಯ ದಾಖಲೆಯಂತೆ ನಿರ್ದೇಶಕರಿಂದ ಪಡೆದ ಲಿಖಿತ ನಿರೂಪಣೆಯ ಆಧಾರದ ಮೇಲೆ 31ನೇ ಮಾರ್ಚ್ 2021 ಕ್ಕಿರುವಂತೆ ಕಾಯ್ದೆಯ ಸೆಕ್ಷನ್ 164(2) ರ ಮೇರೆಗೆ ನಿರ್ದೇಶಕರೆಂದು ನೇಮಕಾತಿ ಹೊಂದಿರುವ ಯಾವುದೇ ನಿರ್ದೇಶಕರು ಅನರ್ಹಗೊಂಡಿರುವುದಿಲ್ಲ.

ಎಫ್) ಕಂಪನಿಯ ಆರ್ಥಿಕ ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಅರ್ಹತೆ ಮತ್ತು ಇಂತಹ ನಿಯಂತ್ರಣಗಳ ಕಾರ್ಯ ಪರಿಣಾಮಗಳಿಗೆ ಸಂಬಂಧಿಸಿದಂತೆ "ಅನುಬಂಧ–ಬಿ" ಯಲ್ಲಿ ಪ್ರತ್ಯೇಕವಾಗಿ ಸಲ್ಲಿಸಿದ ನಮ್ಮ ವರದಿಯನ್ನು ನೋಡುವುದು.

ಜಿ) ಕಂಪನಿಗಳ (ಲೆಕ್ಕಪರಿಶೋದನೆ ಮತ್ತು ಲೆಕ್ಕಪರಿಶೋದಕರು) ನಿಯಮಗಳು 2014 ರ ನಿಯಮ 11 ರ ಮೇರೆಗೆ ಪರಿಶೋಧಕರ ವರದಿಯಲ್ಲಿ ಇತರೆ ವಿಷಯಗಳಿಗೆ ಸಂಬಂಧಪಟ್ಟಂತೆ ಸೇರಿಸಬೇಕಾದ, ನಮ್ಮ ಅಭಿಪ್ರಾಯ ಮತ್ತು ಮಾಹಿತಿಗಳ ಪ್ರಕಾರ ಹಾಗೂ ನಮಗೆ ನೀಡಲಾದ ವಿವರಣೆಗಳ ಪ್ರಕಾರ:

ಎ) ಕಂಪನಿಯು ಹಣಕಾಸು ಸ್ಥಿತಿಗತಿಯ ಮೇಲೆ ಪ್ರಭಾವ ಬೀರುವಂತಹ ಯಾವುದೇ ಬಾಕಿ ಇರುವ ಮೊಕದ್ದಮೆಗಳನ್ನು ಹೊಂದಿರುವುದಿಲ್ಲ.

ಬಿ) ಕಂಪನಿಯು ನಷ್ಟವನ್ನುಂಟು ಮಾಡಬಹುದಾದ ಯಾವುದೇ ದೀರ್ಘಕಾಲೀನ ಒಪ್ಪಂದ ಹಾಗೂ ಉತ್ಪನ್ನಗಳ ಒಡಂಬಡಿಕೆಯನ್ನು ಹೊಂದಿರುವುದಿಲ್ಲ; ಮತ್ತು

ಸಿ) ಕಂಪನಿಯಿಂದ ಹೂಡಿಕೆದಾರರ ಶಿಕ್ಷಣ ಹಾಗೂ ಸುರಕ್ಷತಾ ನಿಧಿಗೆ ವರ್ಗಾಯಿಸಬೇಕಾದ ಯಾವುದೇ ಮೊತ್ತವಿರುವುದಿಲ್ಲ.

ರಾವ್ ಮತ್ತು ಎಮ್ಮಾರ್ ಪರವಾಗಿ
ಚಾರ್ಟರ್ಡ್ ಅಕೌಂಟಂಟ್ಸ್
ಸಂಸ್ಥೆ ನೊಂದಣಿ ಸಂ.003084S

ಬಿ ಜೆ ಪ್ರವೀಣ
ಪಾಲುದಾರರು
ಸದಸ್ಯತ್ವ ಸಂ.215713
ದಿನಾಂಕ: 28.10.2021
ಸ್ಥಳ: ಹುಬ್ಬಳ್ಳಿ.
ಯುಡಿಆಯ್ಎನ್:21215713AAAATA9091

ಲೆಕ್ಕ ಪರಿಶೋಧಕರ ವರದಿಯ ಅನುಬಂಧ – ಎ:

(ಮಂಡಳಿಯ ಸದಸ್ಯರುಗಳಿಗೆ ಸಲ್ಲಿಸಿದಸಮ ದಿನಾಂಕದ ನಮ್ಮ ವರದಿಯ "ಇತರ ಕಾನೂನು ಮತ್ತು ನಿಯಂತ್ರಣಾ ಅವಶ್ಯಕತೆಗಳ ಮೇಲಿನ ವರದಿ" ರಡಿಯ ಪರಿಚ್ಛೇದ 1 ರಲ್ಲಿ ಉಲ್ಲೇಖಿಸಲಾಗಿದೆ)

1. ಕಂಪನಿಯು ಸ್ಥಿರಾಸ್ತಿಗಳ ಪ್ರಮಾಣ ಮತ್ತು ಪರಿಸ್ಥಿತಿಯೊಂದಿಗೆ ಸಂಪೂರ್ಣ ವಿವರಗಳನ್ನು ತೋರಿಸುವ ಸೂಕ್ತ ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ.

   ಕಂಪನಿಯುಸದರಿ ವರ್ಷದಲ್ಲಿ ಸ್ಥಿರಾಸ್ತಿಗಳ ಭೌತಿಕ ಪರಿಶೀಲನೆ ನಡೆಸಿರುವುದಿಲ್ಲ.ಆದಾಗ್ಯೂ ಕಂಪನಿಯು ಟಿ&ಪಿ ವಸ್ತುಗಳ ಭೌತಿಕ ಪರಿಶೀಲನೆಯ ವ್ಯವಸ್ಥೆಯನ್ನು ಮಾತ್ರ ಹೊಂದಿದೆ ಆದರೆ ಸ್ಥಿರಾಸ್ತಿಗಳ ಪ್ರಮಾಣ ಮತ್ತು ಭೌಗೋಳಿಕ ಪರಿಸ್ಥಿತಿಯ ಅನುಪಸ್ಥಿತಿಯಲ್ಲಿ ವ್ಯತ್ಯಾಸಗಳನ್ನು ಗುರುತಿಸುವುದು ಸಾಧ್ಯವಾಗಿಲ್ಲ.

   ನಾವು ಕೈಗೊಂಡ ಕಂಪನಿಯ ದಾಖಲೆಗಳ ಪರೀಕ್ಷೆಯ ಆಧಾರದ ಮೇಲೆ, ಹಿಂದಿನ ಕಂಪನಿಯ ಹೆಸರಿನಲ್ಲಿದ್ದ ಕೆಲವೊಂದು ಸ್ಥಿರಾಸ್ತಿಗಳ ಸ್ಥಿರಾಸ್ತಿ ಶೀರ್ಷಿಕೆಗಳನ್ನು ಹಿಂದಿನ ಕಂಪನಿಯ ಉತ್ತರಾಧಿಕಾರಿಯಾಗಿರುವ ಈಗಿನ ಕಂಪನಿಗೆ ಇನ್ನೂ ವರ್ಗಾಯಿಸಬೇಕಾಗಿದೆ.ಕಂಪನಿಯು ಪ್ರತಿ ಸ್ಥಿರಾಸ್ತಿಯ ಸ್ವಾಧೀನ ದಿನಾಂಕದ ವಿವರಗಳು, ಭರಿಸಿದ ವೆಚ್ಚ ಮತ್ತು ಅಳತೆಯ ವಿವರಗಳೊಂದಿಗೆ ಸ್ಥಿರಾಸ್ತಿಗಳ ದಾಖಲೆಯನ್ನು ನಿರ್ಮಿಸಬೇಕಾಗಿದೆ.ಮೂಲ ಸ್ಥಿರಾಸ್ತಿ ಶೀರ್ಷಿಕೆಗಳನ್ನು ನಮಗೆ ಪರಿಶೀಲನೆಗಾಗಿ ಒದಗಿಸಿಲ್ಲ.

2. ನಮಗೆ ನೀಡಿದ ಮಾಹಿತಿಯ ಪ್ರಕಾರ ವರ್ಷಕ್ಕೊಂದಾವರ್ತಿಯಾಗಿ ನಿರ್ವಹಣಾ ತಂಡದವರಿಂದ ವಿಭಾಗಮಟ್ಟದಲ್ಲಿ ತಪಶೀಲು ಪಟ್ಟಿಯ ಭೌತಿಕ ಪರಿಶೀಲನೆಯನ್ನು ಮಾಡಲಾಗಿದೆ. ಮತ್ತು ಇಂತಹ ಪರಿಶೀಲನೆಯಲ್ಲಿ ಕಂಡುಹಿಡಿಯಲಾದ ವ್ಯತ್ಯಾಸಗಳು ಭೌತಿಕವಾಗಿರುವುದಿಲ್ಲ. ಆದಾಗ್ಯೂ, ಕಂಪನಿಯ ಮಟ್ಟದಲ್ಲಿ ದಾಸ್ತಾನಿನ ವ್ಯತ್ಯಾಸಗಳ ಕ್ರೋಢೀಕೃತ ವರದಿಯು ನಮ್ಮ ಅವಲೋಕನಕ್ಕೆ ಲಭ್ಯವಾಗಲಿಲ್ಲ.

3. ನಮಗೆ ನೀಡಿದ ಮಾಹಿತಿಯ ಪ್ರಕಾರ ಕಾಯ್ದೆಯ ಶಾಖೆ 189 ರಡಿಯಲ್ಲಿ ನಿರ್ವಹಣೆಯಾಗುವ ದಾಖಲಾತಿ ಪುಸ್ತಕದ ವ್ಯಾಪ್ತಿಯಲ್ಲಿರುವ ಯಾವುದೇ ಕಂಪನಿ, ಸಂಸ್ಥೆಗಳು, ಸೀಮಿತ ಹೊಣೆಗಾರಿಕೆ ಸಹಭಾಗಿತ್ವ ಅಥವಾ ಇತರೆ ಪಕ್ಷಗಳಿಗೆ ಕಂಪನಿಯು ಯಾವುದೇ ಸಾಲವನ್ನು, ಸುರಕ್ಷಿತ ಅಥವಾ ಅಸುರಕ್ಷಿತ, ಮಂಜೂರು ಮಾಡಿರುವುದಿಲ್ಲ. ಆದಾಗ್ಯೂ, ನಿರ್ದಿಷ್ಟ ಗುತ್ತಿಗೆಯ ಮತ್ತು ಸೇವಾ ಪೂರೈಕೆದಾರರ ಸಂಬಂಧಿತ ಪಕ್ಷಗಳ ಬಹಿರಂಗಪಡಿಸುವಿಕೆಯ ವಿವರಗಳನ್ನು ನಿರ್ವಹಿಸಿರುವುದಿಲ್ಲ.ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿದ ವಿವರಣೆ ಹಾಗೂ ಮಾಹಿತಿಗನುಗುಣವಾಗಿ ಕಾಯ್ದೆಯ 185 ಮತ್ತು 186 ಅವಕಾಶಗಳ ವ್ಯಾಪ್ತಿಗಳಲ್ಲಿ ಒಳಪಡುವಂತೆ ಕಂಪನಿಯು ಸಾಲಗಳನ್ನು ನೀಡಿರುವುದಿಲ್ಲ, ಹೂಡಿಕೆಗಳನ್ನು ಮಾಡಿರುವುದಿಲ್ಲ ಅಥವಾ ಖಾತರಿಗಳನ್ನು ನೀಡಿರುವುದಿಲ್ಲ.

4. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿದ ವಿವರಣೆ ಹಾಗೂ ಮಾಹಿತಿಗನುಗುಣವಾಗಿ ಕಾಯ್ದೆಯ 185 ಮತ್ತು 186 ಅವಕಾಶಗಳ ವ್ಯಾಪ್ತಿಗಳಲ್ಲಿ ಒಳಪಡುವಂತೆ ಕಂಪನಿಯು ಸಾಲಗಳನ್ನು ನೀಡಿರುವುದಿಲ್ಲ, ಹೂಡಿಕೆಗಳನ್ನು ಮಾಡಿರುವುದಿಲ್ಲ ಅಥವಾ ಖಾತರಿಗಳನ್ನು ನೀಡಿರುವುದಿಲ್ಲ.

5. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿದ ವಿವರಣೆ ಹಾಗೂ ಮಾಹಿತಿಗನುಗುಣವಾಗಿ ಕಂಪನಿಯು ಸಾರ್ವಜನಿಕರಿಂದ ಯಾವುದೇ ತೆರನಾದ ಠೇವಣಿಗಳನ್ನು ಸ್ವೀಕರಿಸಿರುವುದಿಲ್ಲ ಮತ್ತು ಇದರಿಂದಾಗಿ ಭಾರತೀಯ ರಿಜರ್ವ್ ಬ್ಯಾಂಕ್‌ನ ನಿರ್ದೇಶನಗಳು ಮತ್ತು ಕಾಯ್ದೆಯ ಶಾಖೆ 73 ರಿಂದ 76 ರ ನಿಬಂಧನೆಗಳು ಅಥವಾ ಯಾವುದೇ ಇನ್ನಿತರ ಸಂಬಂಧಿತ ನಿಬಂಧನೆಗಳು ಮತ್ತು ಅವುಗಳಡಿಯಲ್ಲಿ ರೂಪಿಸಲಾದ ನಿಯಮಾವಳಿಗಳ ನಿರ್ದೇಶನಗಳು ಕಂಪನಿಗೆ ಅನ್ವಯಿಸುವುದಿಲ್ಲ.

6. ಕಂಪನಿಯು ಕೇಂದ್ರ ಸರ್ಕಾರದ ಕಾಯ್ದೆಯ ಶಾಖೆ 148(1) ರಡಿಯಲ್ಲಿ ವೆಚ್ಚ ಲೆಕ್ಕಪತ್ರ ದಾಖಲೆಗಳ ನಿರ್ವಹಣೆಗಾಗಿ ನೀಡಿದ ನಿಯಮಗಳಿಗೆ ಅನುಸಾರವಾಗಿ ತಯಾರಿಸಿದ ಮತ್ತು ನಿರ್ವಹಿಸುತ್ತಿರುವ ಖಾತೆಗಳ ಪುಸ್ತಕಗಳನ್ನು ನಾವು ಸಂಪೂರ್ಣವಾಗಿ ಪರಿಶೀಲಿಸಿದ್ದು, ಮೇಲ್ನೋಟಕ್ಕೆ ತೋರುವ ನಮ್ಮ ಅಭಿಪ್ರಾಯದಂತೆ, ವರ್ಷದ ಖಾತೆಗಳ ಮತ್ತು ದಾಖಲೆಗಳನ್ನು ಅಪ್‌ಡೇಟ್ ಮಾಡುವ ಅಗತ್ಯವಿರುತ್ತದೆ. ಆದರೆ ನಾವು ದಾಖಲೆಗಳು ನಿಖರವಾಗಿರುವ ಅಥವಾ ಸಂಪೂರ್ಣವಾಗಿರುವ ಬಗ್ಗೆ ವಿವರವಾದ ಪರೀಕ್ಷೆಯನ್ನು ಮಾಡಿರುವುದಿಲ್ಲ.

7. **ಶಾಸನಬದ್ಧ ಬಾಕಿಗೆ ಸಂಬಂಧಿಸಿದಂತೆ**

i. ನಮಗೆ ಒದಗಿಸಿದ ವಿವರಣೆ ಹಾಗೂ ಮಾಹಿತಿಗನುಗುಣವಾಗಿ ಮತ್ತು ನಾವು ಕಂಪನಿಯ ದಾಖಲೆಗಳನ್ನು ಪರಿಶೀಲಿಸಿದ ಆಧಾರದಲ್ಲಿ ಕಂಪನಿಯು ಭವಿಷ್ಯ ನಿಧಿ, ನೌಕರರ ರಾಜ್ಯ ವಿಮೆ, ಆದಾಯ ತೆರಿಗೆ, ಮಾರಾಟ ತೆರಿಗೆ, ಸೇವಾ ತೆರಿಗೆ, ಸರಕು ಮತ್ತು ಸೇವಾ ತೆರಿಗೆ, ಕಸ್ಟಮ್ಸ್ ಸುಂಕ, ಅಬಕಾರಿ ಸುಂಕ, ಮೌಲ್ಯ ವರ್ಧಿತ ತೆರಿಗೆ, ಸುಂಕ ಮತ್ತು ಇತರ ಭೌತಿಕ ಶಾಸನಬದ್ಧ ಬಾಕಿಗಳೊಂದಿಗೆ ನಿರ್ವಿವಾದಿತ ಶಾಸನಬದ್ಧ ಬಾಕಿಗಳಿಗೆ ಸಂಬಂಧಿಸಿದ ಲೆಕ್ಕಪುಸ್ತಕಗಳಲ್ಲಿ ಕಡಿತಗೊಳಿಸಿದ/ಆಕರಿಸಿದ ಮೊತ್ತಗಳನ್ನು ಈ ಕೆಳಗಿನವುಗಳನ್ನು ಹೊರತುಪಡಿಸಿ ನಿಯಮಿತವಾಗಿ ಆಯಾ ಸೂಕ್ತ ಪ್ರಾಧಿಕಾರದಲ್ಲಿ ಸಲ್ಲಿಸುತ್ತಿದೆ.

ಕ್ರ. ಸಂ.	ವಿವರಗಳು	ಮೊತ್ತ ರೂ. ಕೋಟಿಗಳಲ್ಲಿ	ಷರಾ
1	ಮೂಲದಲ್ಲಿ ಕಡಿತಗೊಳಿಸಲಾದ ಮಾರಾಟ ತೆರಿಗೆ	1.88	ಇನ್ನೂ ಪಾವತಿಸದೇ ಇರುವ ಹಳೆಯ ಬಾಕಿ
2	ಪಾವತಿಸಬೇಕಾದ ಸೇವಾ ತೆರಿಗೆ	0.01	ಇನ್ನೂ ಪಾವತಿಸದೇ ಇರುವ ಹಳೆಯ ಬಾಕಿ
3	ವಿದ್ಯುಚ್ಛಕ್ತಿ ತೆರಿಗೆ	60.61	ಕರ್ನಾಟಕ ಸರ್ಕಾರದಿಂದ ಸ್ವೀಕರಿಸುವ ಸಹಾಯಧನದೊಂದಿಗೆ ಹೊಂದಾಣಿಕೆ ಮಾಡುವುದು
4	ಮೂಲದಲ್ಲಿ ಕಡಿತಗೊಳಿಸಲಾದ ಆದಾಯ ತೆರಿಗೆ–ಕಿರು ಪಾವತಿಗಳು	1.34	ಕಂಡುಬಂದ ಸಣ್ಣ ಪಾವತಿಗಳ ಪ್ರಕಾರ, ಕಂಪನಿಯು ಮೊತ್ತವನ್ನು ಪಾವತಿಸಿದೆ ಮತ್ತು ವ್ಯತ್ಯಾಸಗಳನ್ನು ಸಮನ್ವಯಗೊಳಿಸುವ ಪ್ರಕ್ರಿಯೆಯಲ್ಲಿದೆ.

8. ವಿವಿಧ ವೇದಿಕೆಗಳಲ್ಲಿ ಕಂಪನಿಯ ವಿರುದ್ಧ ಹಲವಾರು ದಾವೆಗಳು/ಕ್ಲೇಮ್‌ಗಳನ್ನು ದಾಖಲಿಸಲಾಗಿರುವುದನ್ನು ನಾವು ಗಮನಿಸಿದ್ದೇವೆ. ನಿರ್ವಹಣಾ ತಂಡ ವರದಿ ಮಾಡಿದಂತೆ, ಕಂದಾಯಕ್ಕೆ ಸಂಬಂಧಿಸಿದಂತೆ 131 ಕಾನೂನು ಪ್ರಕರಣಗಳಿವೆ. ಕ್ಲೇಮ್‌ನ ಒಟ್ಟು ಮೌಲ್ಯ ರೂ.6.12 ಕೋಟಿ. ನವದೆಹಲಿಯ ಐ.ಸಿ.ಎ.ಐ ರವರು ಹೊರಡಿಸಿದ ಎಎಸ್–29 – 'ಅವಕಾಶಗಳು, ಅನಿಶ್ಚಿತ ಹೊಣೆಗಾರಿಕೆಗಳು ಮತ್ತು ಅನಿಶ್ಚಿತ ಸ್ವತ್ತುಗಳು (ಪರಿಷ್ಕೃತ 2016)' ರ ಪ್ರಕಾರ ಇದನ್ನು ಅನಿಶ್ಚಿತ ಹೊಣೆಗಾರಿಕೆ ಎಂದು ತೋರಿಸಬೇಕಾಗಿದೆ. ಸಂಕೀರ್ಣ ಕಾನೂನು ಸಮಸ್ಯೆಗಳನ್ನು ಒಳಗೊಂಡಿರುವುದು, ವಿವಿಧ ವೇದಿಕೆಗಳು ಮತ್ತು ಹೆಚ್ಚಿನ ಸಂಖ್ಯೆಯ ಪ್ರಕರಣಗಳ ಕಾರಣದಿಂದಾಗಿ ಅವುಗಳ ಆರ್ಥಿಕ ಪರಿಣಾಮಗಳನ್ನು ಪ್ರಮಾಣೀಕರಿಸಲು ಆಗುವುದಿಲ್ಲ.

9. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿದ ಮಾಹಿತಿ ಹಾಗೂ ವಿವರಣೆಯನುಸಾರ, ಕಂಪನಿಯು ಕೆಆರ್‌ಇಡಿಎಲ್ ಗೆ ರೂ.210 ಕೋಟಿಯಷ್ಟು ಬಾಕಿಯನ್ನು ಹೊಂದಿರುವುದು. ಕಂಪನಿಯು ಮಿಕ್ಕಿದ ಬಾಕಿಯ ಮೇಲೆ ಹೆಚ್ಚುವರಿಯಾಗಿ ಪ್ರತಿಶತ 2 ರ ದಂಡದ ಬಡ್ಡಿಯನ್ನು ನಿಯಮಿತವಾಗಿ ಪಾವತಿಸುತ್ತಿದೆ.

10. ಕಂಪನಿಯು ಆರಂಭಿಕ ಸಾರ್ವಜನಿಕ ಕೊಡುಗೆ ಅಥವಾ ಮುಂದುವರೆದ ಸಾರ್ವಜನಿಕ ಕೊಡುಗೆಯೆಂದು (ಸಾಲಗಳ ಸಹಿತವಾಗಿ) ಹಣವನ್ನು ಸಂಗ್ರಹಿಸಿರುವುದಿಲ್ಲ. ನಮಗೆ ತಿಳಿಸಿದ ಮಾಹಿತಿಯಂತೆ, ಯಾವ ಉದ್ದೇಶಗಳಿಗಾಗಿ ಅವಧಿ ಸಾಲಗಳನ್ನು ಪಡೆಯಲಾಗಿದೆಯೋ ಅವುಗಳಿಗಾಗಿಯೇ ಬಳಸಲಾಗಿದೆ.

11. ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ, ವರ್ಷದ ಅವಧಿಯಲ್ಲಿ ಕಂಪನಿಯಅಧಿಕಾರಿಗಳು/ನೌಕರರುಗಳಿಂದ ಕಂಪನಿಗೆ ಎಸಗಿದ ವಂಚನೆಗಳನ್ನು [ಹಣ ದುರುಪಯೋಗ] ಗಮನಿಸಲಾಗಿದೆ/ವರದಿಯನ್ನು ನೀಡಲಾಗಿದೆ. ವಿವರಗಳು ಈ ಕೆಳಗಿನಂತಿವೆ.

2020–21 ರಲ್ಲಿ ಹಣ ದುರುಪಯೋಗ	ರೂ.2,69,460/–

12. ಸರ್ಕಾರದ ಕಂಪನಿಯಾಗಿರುವುದರಿಂದ, ಕಂಪನಿ ಕಾಯ್ದೆ, 2013 ರ ಶಾಖೆ 197 ಕಂಪನಿಗೆ ಅನ್ವಯವಾಗುವುದಿಲ್ಲ.

13. ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ, ಕಂಪನಿಯು "ನಿಧಿ ಕಂಪನಿ" ಯಲ್ಲ. ಅದರಂತೆ, ಆದೇಶದ ಪ್ಯಾರಾ3(xii)ಅನ್ವಯವಾಗುವುದಿಲ್ಲ.

14. ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ ಮತ್ತು ಕಂಪನಿಯ ದಾಖಲೆಗಳ ನಮ್ಮ ಪರಿಶೀಲನೆಯ ಆಧಾರದ ಮೇಲೆ, ಕಂಪನಿಯ ಸಂಬಂಧಿತ ಪಕ್ಷಗಳೊಂದಿಗಿನ ವ್ಯವಹಾರಗಳು ಕಾಯ್ದೆಯ ಶಾಖೆ 177 ಮತ್ತು 188 ಗಳಿಗೆ ಅವುಗಳು ಅನ್ವಯವಾಗುವಲ್ಲಿ ಅನುಸರಣೀಯವಾಗಿವೆ ಆದರೆ ಲೆಕ್ಕಪತ್ರಗಳ ಮಾನದಂಡಗಳ ಅನ್ವಯಿಕೆಯ ಅವಶ್ಯಕತೆಗಳಿಗನುಸಾರವಾಗಿ ಇಂತಹ ವ್ಯವಹಾರಗಳನ್ನು ಹಣಕಾಸು ತಃಖ್ತೆಗಳಲ್ಲಿ ಬಹಿರಂಗಪಡಿಸಿರುವುದಿಲ್ಲ.

15. ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ ಮತ್ತು ಕಂಪನಿಯ ದಾಖಲೆಗಳ ನಮ್ಮ ಪರಿಶೀಲನೆಯ ಆಧಾರದ ಮೇಲೆ, ಕಂಪನಿಯು ವರ್ಷದ ಅವಧಿಯಲ್ಲಿ ಷೇರುಗಳ ಅಥವಾ ಸಂಪೂರ್ಣವಾಗಿ ಅಥವಾ ಭಾಗಶಃ ಪರಿವರ್ತನೀಯ ಡಿಬೆಂಚರ್‌ಗಳ ಯಾವುದೇ ತೆರನಾದ ಆದ್ಯತೆಯ ಹಂಚಿಕೆ ಅಥವಾ ಖಾಸಗಿ ನಿಯೋಜನೆಯನ್ನು ಮಾಡಿರುವುದಿಲ್ಲ.

16. ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ ಮತ್ತು ಕಂಪನಿಯ ದಾಖಲೆಗಳ ನಮ್ಮ ಪರಿಶೀಲನೆಯ ಆಧಾರದ ಮೇಲೆ, ಕಂಪನಿಯು ನಿರ್ದೇಶಕರ ಅಥವಾ ನಿರ್ದೇಶಕರಿಗೆ ಸಂಬಂಧಪಟ್ಟ ವ್ಯಕ್ತಿಗಳೊಂದಿಗೆ ಯಾವುದೇ ರೀತಿಯ ನಗದುರಹಿತ ವ್ಯವಹಾರಗಳನ್ನು ಹೊಂದಿಲ್ಲ. ಅದರಂತೆ, ಆದೇಶದ ಪರಿಚ್ಛೇದ 3(xv) ಅನ್ವಯಿಸುವುದಿಲ್ಲ.

17. ನಮಗೆ ತಿಳಿಸಿದ ಮಾಹಿತಿಯಂತೆ, ಕಂಪನಿಯು ಭಾರತೀಯ ರಿಜರ್ವ್ ಬ್ಯಾಂಕ್ ಕಾಯ್ದೆ, 1934 ರ ಶಾಖೆ 45–1ಎ ಯಡಿಯಲ್ಲಿ ನೊಂದಣಿಗೊಳ್ಳುವ ಅವಶ್ಯಕತೆ ಇರುವುದಿಲ್ಲ.

ರಾವ್ ಮತ್ತು ಎಮ್ಮಾರ್ ಪರವಾಗಿ
ಚಾರ್ಟರ್ಡ್ ಅಕೌಂಟಂಟ್ಸ್
ಸಂಸ್ಥೆ ನೊಂದಣಿ ಸಂ.003084S

ಬಿ ಜೆ ಪ್ರವೀಣ
ಪಾಲುದಾರರು
ಸದಸ್ಯತ್ವ ಸಂ.215713
ದಿನಾಂಕ: 28.10.2021
ಸ್ಥಳ: ಹುಬ್ಬಳ್ಳಿ
ಯುಡಿಆಯ್‌ಎನ್:21215713AAAATA9091

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ – ಬಿ:

ಕಂಪನಿ ಕಾಯ್ದೆ, 2013 ("ಕಾಯ್ದೆ") ರ ಶಾಖೆ 143 ಉಪಶಾಖೆ 3 ರ ಕಲಂ (i) ರ ಅಡಿಯಲ್ಲಿರುವ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲೆ ವರದಿ:

ನಾವು 31 ನೇ ಮಾರ್ಚ್ 2021 ಕ್ಕಿರುವಂತೆ **ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ** ("ಕಂಪನಿ") ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳನ್ನು ಆ ದಿನದಂದು ವಾರ್ಷಿಕವಾಗಿ ಮುಕ್ತಾಯಗೊಳ್ಳುವ ಹಣಕಾಸು ತಃಖ್ತೆಗಳ ಲೆಕ್ಕಪರಿಶೋಧನೆಯ ಜೊತೆಯಲ್ಲಿ ಪರಿಶೋಧಿಸಿದ್ದೇವೆ.

ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಆಡಳಿತ ಮಂಡಳಿಯ ಜವಾಬ್ದಾರಿಗಳು:

ಚಾರ್ಟರ್ಡ ಅಕೌಂಟಂಟ್ಸ್ ಆಫ್ ಇಂಡಿಯಾ ('ಐಸಿಎಐ') ರವರು ನೀಡಿದ ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಪರಿಶೋಧನೆಯ ಮೇಲಿನ ಮಾರ್ಗದರ್ಶಿ ಟಿಪ್ಪಣಿಯಲ್ಲಿ ಹೇಳಿದ ಆಂತರಿಕ ನಿಯಂತ್ರಣಗಳ ಅಗತ್ಯ ಅಂಶಗಳನ್ನು ಪರಿಗಣಿಸಿ ಕಂಪನಿಯಿಂದ ಸ್ಥಾಪಿಸಲಾದ ಹಣಕಾಸು ವರದಿಯ ಮೇಲಿನ ಆಂತರಿಕ ನಿಯಂತ್ರಣಗಳ ಮಾನದಂಡಗಳ ಆಧಾರದ ಮೇಲೆ, ಆಂತರಿಕ ಹಣಕಾಸು ನಿಯಂತ್ರಣಗಳ ಸ್ಥಾಪನೆ ಮತ್ತು ನಿರ್ವಹಣೆಯು ಕಂಪನಿಯ ನಿರ್ವಹಣಾ ವ್ಯವಸ್ಥೆಯ ಜವಾಬ್ದಾರಿಯಾಗಿರುತ್ತದೆ. ಈ ಜವಾಬ್ದಾರಿಗಳು ಕಂಪನಿ ಕಾಯ್ದೆಯಲ್ಲಿ ಅವಶ್ಯವಿರುವಂತೆ ಸಮರ್ಥವಾಗಿ ನಿರ್ವಹಿಸುತ್ತಿರುವ, ವ್ಯವಹಾರವನ್ನು ಕ್ರಮಬದ್ಧವಾಗಿ ಮತ್ತು ದಕ್ಷವಾಗಿ ನಿರ್ವಹಿಸುವ ಭರವಸೆಯುಳ್ಳ ಜೊತೆಯಾಗಿ ಕಂಪನಿಯ ನೀತಿಗೆ ಅಂಟಿಕೊಂಡಿರುವ, ಕಂಪನಿಯ ಆಸ್ತಿಗಳನ್ನು ಸಂರಕ್ಷಿಸುವ, ವಂಚನೆ ಮತ್ತು ದೋಷಗಳನ್ನು ಪತ್ತೆಹಚ್ಚುವ ಮತ್ತು ತಡೆಗಟ್ಟುವ, ನಿಖರ ಮತ್ತು ಸಂಪೂರ್ಣ ಲೆಕ್ಕಪತ್ರ ದಾಖಲೆಗಳ ಮತ್ತು ಸಮಯಕ್ಕೆ ಸರಿಯಾಗಿ ವಿಶ್ವಾಸಾರ್ಹ ಹಣಕಾಸು ಮಾಹಿತಿ ತಯಾರಿಸುವ ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆಯನ್ನು ಒಳಗೊಂಡಿರುತ್ತವೆ.

ಲೆಕ್ಕಪರಿಶೋಧಕರ ಜವಾಬ್ದಾರಿಗಳು:

ನಮ್ಮ ಲೆಕ್ಕ ಪರಿಶೋಧನೆಯ ಆಧಾರದ ಮೇಲೆ ಹಣಕಾಸು ವರದಿಯ ಮೇಲಿನ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿ ಇರುತ್ತದೆ. ನಾವು, ಹಣಕಾಸು ವರದಿಯ ಮೇಲಿನ ಆಂತರಿಕ ನಿಯಂತ್ರಣಗಳ ಪರಿಶೋಧನೆಯ ಮಾರ್ಗದರ್ಶಿ ಟಿಪ್ಪಣಿ ("ಮಾರ್ಗದರ್ಶಿ ಟಿಪ್ಪಣಿ") ಮತ್ತು ಐಸಿಎಐ ರವರು ನೀಡಿದ ಪರಿಶೋಧನೆಯ ಗುಣಮಟ್ಟ ಮತ್ತು ಕಂಪನಿ ಕಾಯ್ದೆ, 2013 ರ ಶಾಖೆ 143(10) ರ ಅಡಿಯಲ್ಲಿ ಶಿಫಾರಸಿನಂತೆ ಪರಿಗಣಿಸಿರುವ, ಆಂತರಿಕ ಹಣಕಾಸು ನಿಯಂತ್ರಣಗಳ ಪರಿಶೋಧನೆಯ ಮೇರೆಗೆ ಅನ್ವಯಿಸುವ, ಎರಡೂ ಆಂತರಿಕ ಹಣಕಾಸು ನಿಯಂತ್ರಣಗಳ ಪರಿಶೋಧನೆಗೆ ಅನ್ವಯಿಸುವ ಮತ್ತು ಇವೆರಡನ್ನೂ ಚಾರ್ಟರ್ಡ ಅಕೌಂಟಂಟ್ಸ್ ಆಫ್ ಇಂಡಿಯಾರವರು ನೀಡಿದ್ದು ಇವುಗಳಿಗೆ ಅನುಸಾರವಾಗಿ ಪರಿಶೋಧನೆಯನ್ನು ನಡೆಸಿದ್ದೇವೆ. ಆ ಮಾನದಂಡಗಳು ಮತ್ತು ಮಾರ್ಗದರ್ಶಿ ಟಿಪ್ಪಣಿಗಳು ನಾವು ನೈತಿಕ ಅಗತ್ಯಗಳನ್ನು ಅನುಸರಿಸುವಲ್ಲಿ ಮತ್ತು ಸಾಕಷ್ಟು ಪ್ರಮಾಣದ ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಅನುಷ್ಠಾನ ಮತ್ತು ನಿರ್ವಹಣೆಯ ಬಗ್ಗೆ ಸಮಂಜಸವಾದ ಭರವಸೆಯನ್ನು ಪಡೆಯಲು ಮತ್ತು ಇಂತಹ ನಿಯಂತ್ರಣಗಳು ಎಲ್ಲ ರೀತಿಯ ವಸ್ತುವಿಷಯಗಳಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಪರಿಶೋಧನೆಯ ಯೋಜನೆ ಮತ್ತು ನಿರ್ವಹಣೆಯಲ್ಲಿ ಅನಿವಾರ್ಯವಾಗುತ್ತವೆ.

ನಮ್ಮ ಪರಿಶೋಧನೆಯು ಹಣಕಾಸಿನ ವರದಿಯ ಮೇಲಿನ ಸಮರ್ಪಕ ಆಂತರಿಕ ಹಣಕಾಸು ನಿಯಂತ್ರಣಗಳ ವ್ಯವಸ್ಥೆ ಮತ್ತು ಅವುಗಳ ಕಾರ್ಯ ಪರಿಣಾಮಕಾರಿತ್ವದ ಬಗ್ಗೆ ಪರಿಶೋಧನಾ ಪುರಾವೆಗಳನ್ನು ಪಡೆದುಕೊಳ್ಳಲು ನಿರ್ವಹಿಸುವ ಕಾರ್ಯವಿಧಾನಗಳನ್ನು ಒಳಗೊಂಡಿರುತ್ತದೆ. ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ವ್ಯವಸ್ಥೆಯ ನಮ್ಮ ಪರಿಶೋಧನೆಯು ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ವ್ಯವಸ್ಥೆಯ ಬಗ್ಗೆ ತಿಳುವಳಿಕೆಯನ್ನು ಪಡೆದುಕೊಳ್ಳಲು, ವಸ್ತು ದೌರ್ಬಲ್ಯದ ಅಸ್ತಿತ್ವದ ಅಪಾಯವನ್ನು ಅಂದಾಜಿಸಲು ಮತ್ತು ಅಂದಾಜಿಸಿದ ಅಪಾಯದ ಆಧಾರದ ಮೇಲೆ ಆಂತರಿಕ ನಿಯಂತ್ರಣದ ವಿನ್ಯಾಸ ಮತ್ತು ಕಾರ್ಯ ಪರಿಣಾಮಕಾರಿತ್ವದ ಪರೀಕ್ಷೆ ಮತ್ತು ಮೌಲ್ಯಮಾಪನವನ್ನು ಒಳಗೊಂಡಿರುತ್ತದೆ.ಆಯ್ದುಕೊಂಡ ಕಾರ್ಯವಿಧಾನಗಳು ಲೆಕ್ಕಪರಿಶೋಧಕರ ತೀರ್ಮಾನವನ್ನು ಅವಲಂಬಿಸಿದ್ದು, ವಂಚನೆ ಅಥವಾ ದೋಷಗಳಿಂದಾಗಿ ಹಣಕಾಸು ತಃಖ್ತೆಗಳ ಭೌತಿಕ ತಪ್ಪು ಹೇಳಿಕೆಗಳ ಅಪಾಯಗಳ ಮೌಲ್ಯಮಾಪನವನ್ನು ಒಳಗೊಂಡಿರುತ್ತವೆ.

ನಾವು ಪಡೆದುಕೊಂಡ ಪರಿಶೋಧನಾ ಸಾಕ್ಷ್ಯಾಧಾರಗಳು ಹಣಕಾಸಿನ ವರದಿಯ ಮೇಲಿನ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯ ಬಗ್ಗೆ ನಮ್ಮ ಪರಿಶೋಧನಾ ಅಭಿಪ್ರಾಯಗಳಿಗೆ ಉತ್ತಮ ತಳಹದಿಯನ್ನು ಒದಗಿಸಲು ಸಾಕಷ್ಟಾಗಿದ್ದು, ಸಮಂಜಸವಾಗಿರುತ್ತವೆ ಎನ್ನುವುದು ನಮ್ಮ ನಂಬಿಕೆ.

ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಅರ್ಥ:

ಒಂದು ಕಂಪನಿಯ ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳು ಅಂದರೆ ಇದು ಹಣಕಾಸು ವರದಿಯ ವಿಶ್ವಾಸಾರ್ಹತೆಗೆ ಸಂಬಂಧಿಸಿದಂತೆ ಸಮಂಜಸವಾದ ಭರವಸೆಯನ್ನು ಒದಗಿಸುವ ಮತ್ತು ಸಾಮಾನ್ಯವಾಗಿ ಪಾಲಿಸುವ ಲೆಕ್ಕೀಕರಣ ನಿಯಮಾವಳಿಗನುಸಾರವಾಗಿ ಬಾಹ್ಯ ಉದ್ದೇಶಗಳಿಗಾಗಿ ಹಣಕಾಸು ತಃಖ್ತೆಗಳ ತಯಾರಿಕೆಗಾಗಿ ವಿನ್ಯಾಸಗೊಳಿಸಿದ ಪ್ರಕ್ರಿಯೆ. ಒಂದು ಕಂಪನಿಯ ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳು ನೀತಿ ಹಾಗು ಕಾರ್ಯವಿಧಾನಗಳನ್ನು ಒಳಗೊಂಡಿರುತ್ತವೆ ಅವು;

ಎ) ದಾಖಲೆಗಳ ನಿರ್ವಹಣೆಗೆ ಅನ್ವಯಿಸುವಂತೆ ಸಮಂಜಸವಾದ ವಿವರಗಳೊಂದಿಗೆ ಕಂಪನಿಯ ಕಾರ್ಯಚಟುವಟಿಕೆಗಳು ಮತ್ತು ಆಸ್ತಿಗಳ ಅಳವಡಿಕೆಯನ್ನು ನಿಖರವಾಗಿ ಮತ್ತು ಸರಿಯಾಗಿ ಪ್ರತಿಬಿಂಬಿಸುವುದು;

ಬಿ) ಸಾಮಾನ್ಯವಾಗಿ ಪಾಲಿಸುವ ಲೆಕ್ಕೀಕರಣ ನಿಯಮಾವಳಿಗನುಸಾರವಾಗಿ ಹಣಕಾಸು ತಃಖ್ತೆಗಳ ತಯಾರಿಕೆಗೆ ಅನುವಾಗುವಂತೆ ಅಗತ್ಯವಾದ ಕಾರ್ಯಚಟುವಟಿಕೆಗಳ ದಾಖಲೆಗಳ ಬಗ್ಗೆ ಸಮಂಜಸವಾದ ಭರವಸೆಯನ್ನು ಒದಗಿಸುವ ಮತ್ತು ಕಂಪನಿಯ ಎಲ್ಲ ಸ್ವೀಕೃತಿಗಳು ಮತ್ತು ವೆಚ್ಚಗಳು ಕೇವಲ ಆಡಳಿತ ಮಂಡಳಿಯ ಹಾಗೂ ಕಂಪನಿಯ ನಿರ್ದೇಶಕರಿಂದ ಅಧಿಕೃತಗೊಳಿಸುವಿಕೆಗೆ ಅನುಸಾರವಾಗಿ ಮಾಡುತ್ತಿರುವುದು; ಮತ್ತು

ಸಿ) ಹಣಕಾಸು ತಃಖ್ತೆಗಳ ಮೇಲೆ ಭೌತಿಕ ಪರಿಣಾಮ ಬೀರುವಂತಹ ಕಂಪನಿಯ ಆಸ್ತಿಯ ಅನಧಿಕೃತ ಸ್ವಾಧೀನ, ಉಪಯೋಗ ಅಥವಾ ಆಸ್ತಿಯ ಅಳವಡಿಕೆಯನ್ನು ತಡೆಗಟ್ಟುವಿಕೆಗೆ ಅಥವಾ ಸಕಾಲಿಕ ಪತ್ತೆಗೆ ಸಂಬಂಧಿಸಿದಂತೆ ಸಮಂಜಸವಾದ ಭರವಸೆಯನ್ನು ಒದಗಿಸುವುದು.

ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಅಂತರ್ಗತ ಇತಿಮಿತಿಗಳು:

ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಅಂತರ್ಗತ ಇತಿಮಿತಿಗಳ ಕಾರಣದಿಂದಾಗಿ ಕುಯುಕ್ತಿಯ ಸಾಧ್ಯತೆ ಅಥವಾ ನಿಯಂತ್ರಣಗಳ ಅತಿಕ್ರಮಣದ ಅಸಮರ್ಪಕ ನಿರ್ವಹಣೆ, ವಂಚನೆ ಅಥವಾ ದೋಷಗಳಿಂದಾಗಿ ಉಂಟಾಗುವ ಹಾಗೂ ಪತ್ತೆಯಾಗದ ಭೌತಿಕ ತಪ್ಪು ಹೇಳಿಕೆಗಳನ್ನೂ ಒಳಗೊಂಡಂತೆ ಮತ್ತು ಭವಿಷ್ಯದ ಅವಧಿಯ ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಯಾವುದೇ ಮೌಲ್ಯಮಾಪನದ ಯೋಜನೆಗಳು ಪರಿಸ್ಥಿತಿಗಳಲ್ಲಿ ಬದಲಾವಣೆಯಿಂದಾಗಿಅಸಮರ್ಪಕತೆ ಹೊಂದುವ ಅಥವಾ ನೀತಿಗಳು ಅಥವಾ ಕಾರ್ಯವಿಧಾನಗಳ ಅನುಸರಣೆಯ ಮಟ್ಟವು ಹಾಳಾಗುವ ಸಾಧ್ಯತೆಯಿಂದಾಗಿ ಅಪಾಯಕ್ಕೆ ಒಳಪಟ್ಟಿರುತ್ತವೆ.

ಅರ್ಹ ಅಭಿಪ್ರಾಯದ ತಳಹದಿ:

ನಮಗೆ ಒದಗಿಸಿದ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ ಮತ್ತು ಕಂಪನಿಯ ದಾಖಲೆಗಳ ನಮ್ಮ ಪರಿಶೀಲನೆಯ ಆಧಾರದ ಮೇಲೆ, 31ನೇ ಮಾರ್ಚ್ 2021 ಕ್ಕಿರುವಂತೆ ಈ ಕೆಳಗಿನ ವಸ್ತು ದೌರ್ಬಲ್ಯಗಳನ್ನು ಗುರುತಿಸಲ್ಪಟ್ಟಿವೆ:

1. ಬಜೆಟ್ ಸಂಗ್ರಹ, ಮಾರಾಟ ಮತ್ತು ಯೋಜನೆಗಳ ಪೂರ್ಣಗೊಳಿಸುವಿಕೆಯನ್ನು ನಿರ್ಧರಿಸಲು ಕಂಪನಿಯು ಕ್ರಿಯಾತ್ಮಕ ಕಾರ್ಯಚಟುವಟಿಕೆಗಳನ್ನು ಹೊಂದಿರುವುದಿಲ್ಲ.
2. ಕಂಪನಿಯು ತನ್ನದೇ ಆದ ಆಂತರಿಕ ಪರಿಶೋಧನಾ ವ್ಯವಸ್ಥೆಯನ್ನು ಹೊಂದಿದ್ದು ನಮಗೆ ನೀಡಿದ ಮಾಹಿತಿಯಂತೆ ಎಲ್ಲ ವ್ಯವಹಾರಗಳು ಆಂತರಿಕ ಪರಿಶೋಧನಾ ಪ್ರಕ್ರಿಯೆಯ ವ್ಯಾಪ್ತಿಗೆ ಒಳಪಡುತ್ತವೆ. ಆದಾಗ್ಯೂ, ನಮ್ಮ ಅಭಿಪ್ರಾಯದಲ್ಲಿ ಮತ್ತು ನಮ್ಮ ಪರಿಶೀಲನೆಯ ಆಧಾರದಲ್ಲಿ, ಪ್ರಸ್ತುತ ಆಂತರಿಕ ಪರಿಶೋಧನಾ ವ್ಯವಸ್ಥೆಯ ವ್ಯಾಪ್ತಿಯು ಅಸಮರ್ಪಕವಾಗಿದ್ದು ಹಾಗೂ ಕಂಪನಿಯ ಗಾತ್ರಕ್ಕೆ ಅನುಗುಣವಾಗಿರುವುದಿಲ್ಲ.
3. ವಿಭಾಗಗಳು ಮತ್ತು ನಿಗಮ ಕಛೇರಿಯ ವಹಿವಾಟು ಪರಿಶೋಧನೆಯ ಸಮಯದಲ್ಲಿ ಕಂದಾಯ ಸೋರಿಕೆ, ಹೆಚ್ಚುವರಿ ಪಾವತಿ ಮತ್ತು ಸರಿಯಾದ ಅನುಮೋದನೆಯಿಲ್ಲದೇ ಪಾವತಿಸಿರುವುದು ಆಂತರಿಕ ಪರಿಶೋಧನೆಯ

ಗಮನಕ್ಕೆ ಬಂದಿರುವಂತೆ ಲೆಕ್ಕಗಳ ನಿರ್ವಹಣೆಯ ಕುರಿತು ಕಂಪನಿಯು ಸೂಕ್ತವಾದ ಆಂತರಿಕ ನಿಯಂತ್ರಣಾ ವ್ಯವಸ್ಥೆಯನ್ನು ಹೊಂದಿರುವುದಿಲ್ಲ.

4. ಸೂಕ್ತವಾದ ಲೆಕ್ಕೀಕರಣ ತಂತ್ರಾಂಶ ಲಭ್ಯವಿರದ ಕಾರಣ ಸಾಮಾನ್ಯ ಖಾತೆ ಪುಸ್ತಕ, ಪೂರಕ ಖಾತೆ ಪುಸ್ತಕ ಹಾಗೂ ತಾಳೆಪಟ್ಟಿಯ ಉತ್ಪತ್ತಿಯಲ್ಲಿ ಎಕ್ಸೆಲ್ ಶೀಟ್‌ಗಳನ್ನು ಬಳಸುವುದರಿಂದ ಹೆಚ್ಚಿನ ಅಪಾಯ ಒಳಗೊಂಡಿದೆ.

5. ಸ್ಥಿರ ಆಸ್ತಿಗಳ ಮತ್ತು ದಾಖಲೆಗಳ ಭೌತಿಕ ಪರಿಶೀಲನೆಯಂತಹ, ಇತರ ವಿಭಾಗಗಳಲ್ಲಿರುವ ಇದೇ ತರಹದ ಖಾತೆಗಳ ಶೀರ್ಷಿಕೆಗಳಲ್ಲಿ ಬಾಕಿಯನ್ನು ನಿಗದಿಪಡಿಸುವ ಮತ್ತು ಅನಿರ್ವಹಣಾ ಖಾತೆಗಳ ವಿಷಯದಲ್ಲಿ ಬ್ಯಾಂಕ್ ಸಮನ್ವಯೀಕರಣದ ಅವಧಿವಾರು ಪರಿಶೀಲನೆಯಂತಹ ನಿಯಂತ್ರಣ ಪ್ರಕ್ರಿಯೆಗಳ ಅನುಪಸ್ಥಿತಿ.

6. ಕಂಪನಿಯು ಹಣಕಾಸು ವ್ಯವಹಾರಗಳ ವಿಶ್ವಸನೀಯತೆ, ಗುಂಪೀಕರಣ ಮತ್ತು ಸಾಕಷ್ಟು ಬಹಿರಂಗಪಡಿಸುವಿಕೆಯಲ್ಲಿ ಪರಿಣಾಮವನ್ನು ಬೀರುವ ಹಣಕಾಸು ಲೆಕ್ಕೀಕರಣ, ವೇತನಪಟ್ಟಿ, ತಪಶೀಲು, ಬಂಡವಾಳ ಕಾಮಗಾರಿ ವೆಚ್ಚ ನಿರ್ವಹಣೆಗೆ ಸಂಬಂಧಿಸಿದಂತೆ ಸೂಕ್ತವಾದ ಗಣಕೀಕೃತ ವ್ಯವಸ್ಥೆಯನ್ನು ಹೊಂದಿರುವುದಿಲ್ಲ.

7. ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 177(4)ರ ಪ್ರಕಾರ ಅಗತ್ಯವಿರುವಂತೆ ಕಂಪನಿಯ ಪರಿಶೋಧನಾ ಸಮಿತಿಯಿಂದ ಆಂತರಿಕ ಹಣಕಾಸು ನಿಯಂತ್ರಣಗಳು ಮತ್ತು ಅಪಾಯ ನಿರ್ವಹಣಾ ವ್ಯವಸ್ಥೆಗಳ ಮೌಲ್ಯಮಾಪನವನ್ನು ಮಾಡಿರುವುದಿಲ್ಲ. ಕಂಪನಿಯು ಅಪಾಯ ನಿರ್ವಹಣಾ ನೀತಿಯನ್ನು ಹೊಂದಿರುವುದಿಲ್ಲ.

8. ಕಂಪನಿಯು ಸಾಲಗಾರರು, ಸಾಲದಾತರು, ಮುಂಗಡಗಳು, ಸ್ವೀಕೃತಿಗಳಿಗೆ ಸಂಬಂಧಿಸಿದಂತೆ ಸಂಬಂಧಿಸಿದ ಪಕ್ಷಗಾರರಿಂದ ಬಾಕಿಯ ದೃಢೀಕರಣವನ್ನು ಪಡೆದುಕೊಳ್ಳುವ ಪ್ರಕ್ರಿಯೆಯನ್ನು ಹೊಂದಿರುವುದಿಲ್ಲ. ಇದರ ದೃಷ್ಟಿಯಿಂದ ಸಾಲಗಾರರು, ಸಾಲದಾತರು, ಮುಂಗಡಗಳು, ಸ್ವೀಕೃತಿಗಳು ಸರಿಯಾಗಿರುವುದರ ಬಗ್ಗೆ ಅಥವಾ ಬಾಕಿಗೆ ಸಂಬಂಧಿಸಿದಂತೆ ನಾವು ಪರಿಶೀಲಿಸಿರುವುದಿಲ್ಲ.

9. ಕಂಪನಿ ಕಾಯ್ದೆ, 2013 ರ ಷೆಡ್ಯೂಲ್ IIIಕ್ಕೆ ಅವಶ್ಯಕವಿರುವಂತೆ ಸಾಲಗಳು ಮತ್ತು ಹೂಡಿಕೆಗಳ ವಿಷಯದಲ್ಲಿ ಸಮರ್ಪಕ ಬಹಿರಂಗಪಡಿಸುವಿಕೆಯನ್ನು ಹೊಂದಿರುವುದಿಲ್ಲ.

10. ಕಂಪನಿಯಲ್ಲಿ ಅಳವಡಿಸಿಕೊಂಡ/ಅನುಸರಿಸುವ ಲೆಕ್ಕಪತ್ರ ಕೈಪಿಡಿಯ ಮತ್ತು ಲೆಕ್ಕೀಕರಣಕ್ಕಾಗಿ ಸಮಗ್ರ ಕಾರ್ಯವಿಧಾನಗಳನ್ನು ರೂಪಿಸುವಲ್ಲಿ ನವೀಕರಣಪ್ರಕ್ರಿಯೆ ಇರುವುದಿಲ್ಲ.

11. ಕಡ್ಡಾಯವಿರುವ ಲೆಕ್ಕಪತ್ರ ಮಾನದಂಡಗಳಿಗೆ ಅನುಗುಣವಾಗಿರುವುದನ್ನು / ಹಣಕಾಸಿನ ತಃಖ್ತೆಗಳ ಮೇಲೆ ವಸ್ತು ಪ್ರಭಾವವನ್ನು ಹೊಂದಿರುವ ಸಾಮಾನ್ಯವಾಗಿ ಸ್ವೀಕರಿಸಲಾದ ಲೆಕ್ಕೀಕರಣ ತತ್ವಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳಲು ನಿಯಂತ್ರಣಗಳು ಮತ್ತು ಕಾರ್ಯವಿಧಾನಗಳ ಸಮರ್ಪಕ ವಿನ್ಯಾಸ / ವಿನ್ಯಾಸ ಮತ್ತು ಅನುಷ್ಠಾನದಂತಹ ಕಾರ್ಯವಿಧಾನವನ್ನು ಕಂಪನಿಯು ಹೊಂದಿರುವುದಿಲ್ಲ. ಅವುಗಳು ಈ ಕೆಳಗಿನಂತಿವೆ:

- ತಪಶೀಲುಗಳ ಮೌಲ್ಯೀಕರಣದಲ್ಲಿ ಪ್ರಮಾಣಿತ ದರಗಳ ಅನ್ವಯಿಸುವಿಕೆ/ಅಳವಡಿಕೆಯಿಂದ ತಪಶೀಲುಗಳ ಮೌಲ್ಯಮಾಪನದಲ್ಲಿ ಲೆಕ್ಕಪತ್ರ ಮಾನದಂಡ 2 ನ್ನು ಪಾಲಿಸುವುದು.

- ಈ ಕೆಳಗಿನ ಕಾರಣಗಳಿಂದಾಗಿ ಹಣಕಾಸು ತಃಖ್ತೆಗಳಲ್ಲಿ ವಿಧಿಸಿದ ಸವಕಳಿ ಮತ್ತು ಸ್ಥಿರಾಸ್ತಿಯ ಮುಂದುವರೆಸುವಮೊತ್ತದ ಮೇಲೆ **ಲೆಕ್ಕಪತ್ರ ಮಾನದಂಡ 10 "ಆಸ್ತಿ, ಸ್ಥಾವರ &ಉಪಕರಣ"** ಹೊಂದಿರುವ ಪರಿಣಾಮ:

  - ➢ ಬಳಸಲು ಯೋಗ್ಯವಿರುವ ಆಸ್ತಿಗಳ ಬಂಡವಾಳೀಕರಣ ಮತ್ತು ಅಬಂಡವಾಳೀಕರಣದಲ್ಲಿ (ಒಂದಕ್ಕಿಂತ ಹೆಚ್ಚು ಲೆಕ್ಕೀಕರಣ ಅವಧಿಯನ್ನು ವ್ಯಾಪಿಸಿರುವಂತಹ) ಗಣನೀಯ ವಿಳಂಬವನ್ನು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಲ್ಲಿ ಸೇರಿಸಿರುವುದನ್ನು ಗಮನಿಸಲಾಗಿದೆ. ಉದಾಹರಣೆಗಾಗಿ ಮೆ॥ ಎ.ಬಿ.ಬಿ. ಲಿಮಿಟೆಡ್‌ಗೆ 9 ವರ್ಷಗಳ ಹಿಂದೆ ಭಾರ ರವಾನೆ ಮತ್ತು ಸಂಪರ್ಕ ವಸ್ತುಗಳ ಸರಬರಾಜು ಮತ್ತು ನಿರ್ಮಾಣಕ್ಕಾಗಿ ರೂ.14.97 ಕೋಟಿಯನ್ನು ನೀಡಲಾಗಿತ್ತು. ನಮಗೆ ತಿಳಿಸಿದ ಮಾಹಿತಿಯಂತೆ, ಸೇವಾ ಪೂರೈಕೆದಾರರು ಸಾಧನಗಳನ್ನು ಭಾಗಶಃ ಸ್ಥಾಪಿಸಿದ್ದು ಮತ್ತು ಅವುಗಳು ಕಾರ್ಯನಿರತವಾಗಿರುತ್ತವೆ.

ಬಾಕಿ ಉಳಿದ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ ಮತ್ತು ಬಾಕಿ ಇರುವ ಯೋಜನೆಯನ್ನು ಕೈಬಿಡಲಾಗಿದೆ ಎಂದು ತೋರುತ್ತದೆ. ಇಂತಹ ಸನ್ನಿವೇಶದಲ್ಲಿ, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಯ ಅಡಿಯಲ್ಲಿರುವ ಮೊತ್ತವನ್ನು ವರ್ಷಗಳವರೆಗೆ ಕೊಂಡೊಯ್ಯುವುದು ಸರಿಯಾಗಿರುವುದಿಲ್ಲ. ಆಸ್ತಿಗಳನ್ನು ಬಳಸಿದ ದಿನಾಂಕದಿಂದ ಸವಕಳಿಯನ್ನು ಲೆಕ್ಕೀಕರಿಸಿರುವುದಿಲ್ಲ. ಈ ರೀತಿಯ ಅಸಮರ್ಪಕ ಮಾಹಿತಿಯಿಂದಾಗಿ ಈ ಎಲ್ಲ ವರ್ಷಗಳಲ್ಲಿ ಲೆಕ್ಕೀಕರಿಸಿದ ಸವಕಳಿಯ ಬಗ್ಗೆ ಮತ್ತು ಕಂಪನಿಯ ಲಾಭ/ನಷ್ಟದ ಮೇಲೆ ಇದರ ಪ್ರಭಾವದ ಬಗ್ಗೆ ನಾವು ಪ್ರಮಾಣೀಕರಿಸಲು ಆಗುವುದಿಲ್ಲ.

- ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಲ್ಲಿ ಸೇರಿಸಲಾದ ರೂ 89.98 ಕೋಟಿಗಳು ಆರಂಭಿಕ ಶಿಲ್ಕುಗಳಿಗೆ ಸಂಬಂಧಿಸಿರುತ್ತವೆ ಮತ್ತು ಪ್ರಸಕ್ತ ಹಣಕಾಸು ವರ್ಷ 2020–21 ರಲ್ಲಿ ಯಾವುದೇ ವೆಚ್ಚಗಳನ್ನು ಮಾಡಿರುವುದಿಲ್ಲ.
- ಸ್ಥಿರಾಸ್ತಿಗಳ ಐತಿಹಾಸಿಕ ವೆಚ್ಚದ ಮೇಲಿನ ಯಾವುದೇ ಹೊಂದಾಣಿಕೆಯ ಮೇಲೆ ಸವಕಳಿಯನ್ನು ಸ್ಥಿರಾಸ್ತಿಗಳ ಉಳಿದಿರುವ ಜೀವಿತಾವಧಿಯ ಮೇಲೆ ನಿರೀಕ್ಷಿತವಾಗಿ ವಿಧಿಸಿರುವುದಿಲ್ಲ ಮತ್ತು ಅಂತಹ ಹೊಂದಾಣಿಕೆಗಳು ಹೊಸ ಆಸ್ತಿಗಳಂತೆ ಪರಿಗಣಿಸಿ ನಿರೀಕ್ಷಿತವಾಗಿ ವಿಧಿಸಲಾಗಿದೆ.
- ಆರಂಭದಲ್ಲಿ ಸಕ್ರಿಯ ಬಳಕೆಯಿಂದ ನಿವೃತ್ತಿಯಾದಾಗ ಮೂಲ ಆಸ್ತಿಯ ಕೊಂಡೊಯ್ಯುವ ವೆಚ್ಚದಲ್ಲಿ (ಅಂತಹ ಆಸ್ತಿಗಳನ್ನು ಪ್ರಚಲಿತ ಆಸ್ತಿಗೆ ವರ್ಗಾವಣೆ ಮಾಡಲಾದ ದರದಲ್ಲಿ) ಮರುಯೋಗ್ಯಗೊಳಿಸಿದ ಆಸ್ತಿಗಳ ಬಂಡವಾಳೀಕರಣ.
- ಯೋಜನೆಯ ಆಸ್ತಿಗಳ ಬಂಡವಾಳೀಕರಿಸಿದ ವಸ್ತುಗಳ ವಿಷಯದಲ್ಲಿ ಪ್ರಮಾಣಿತ ದರಗಳ ಅನ್ವಯಿಸುವಿಕೆ.
- ಅಢಾವೆ ಪತ್ರದ ದಿನಾಂಕದಲ್ಲಿ ಇದ್ದಂತಹ ಯಾವುದೇ ಆಸ್ತಿಯ ದುರ್ಬಲತೆಯ ಮೌಲ್ಯಮಾಪನಗೊಳಿಸದಿರುವುದರಿಂದಾಗಿ ಆಸ್ತಿಗಳ ದುರ್ಬಲತೆಯಲ್ಲಿ ಲೆಕ್ಕಪತ್ರ ಮಾನದಂಡ 28 ರ ಅನುಸರಣೆ ಇಲ್ಲದಿರುವುದು.

12. ಗಮನಾರ್ಹ ಖಾತೆಯ ಮೇಲೆ ಆಂತರಿಕ ನಿಯಂತ್ರಣದ ಅಸಮರ್ಪಕ ವಿನ್ಯಾಸ ಅಥವಾ ಕೆಳಗಿನ ಕಾರ್ಯವಿಧಾನಗಳಿಗೆ ಸಂಬಂಧಿಸಿದಂತೆ;

- ಬಿಡುಗಡೆಗೊಳಿಸಿರುವ ಪರಿವರ್ತಕಗಳ ಭಾಗವನ್ನು ರೂಪಿಸುವ ಬಿಡಿಭಾಗಗಳು ಮತ್ತು ಘಟಕಗಳ ವಸ್ತುಗಳ ಲೆಕ್ಕೀಕರಣ,ಅವುಗಳೆಂದರೆ, ಇತರ ಪ್ರಚಲಿತ ಆಸ್ತಿಗಳಡಿಯಲ್ಲಿ ತೈಲ ಮತ್ತು ಸುರುಳಿ ವಸ್ತುಗಳು (ದರಪಟ್ಟಿಯ ಆಧಾರದ ಮೇಲೆ) ಬಿಡುಗಡೆಯಾದ ಆಸ್ತಿಯ ಕೊಂಡೊಯ್ಯುವ ಮೊತ್ತಕ್ಕೆ ಬದಲಾಗಿ ಸ್ಥಿರಾಸ್ತಿಗಳಿಂದ ಹಿಂಪಡೆಯುವ ಸಮಯದಲ್ಲಿ ಇತರೆ ರಸೀತಿ ಖಾತೆಗೆ ಅನುಗುಣವಾಗಿ ಜಮಾ ಮಾಡಲಾಗುತ್ತಿದೆ.
- ನಿಯಂತ್ರಣಾ ಆಸ್ತಿಗಳ ಗುರುತಿಸದಿರುವಿಕೆ ಹಾಗೂ ಮಾಪನವಿಲ್ಲದಿರುವುದು.

13. ಕಂಪನಿಯು ವಿಸಕಂಗಳು, ಪಿಸಿಕೆಎಲ್, ಕೆಪಿಸಿಎಲ್ ಮತ್ತು ಕವಿಪ್ರನಿನಿ ಗಳಿಂದ ಪಡೆದ ಬಿಲ್ಲಗಳ ನಿಖರತೆ ಮತ್ತು ಸಂಪೂರ್ಣತೆಯನ್ನು ಪರಿಶೀಲಿಸುವ ಆಂತರಿಕ ನಿಯಂತ್ರಣಾ ವ್ಯವಸ್ಥೆಯನ್ನು ಹೊಂದಿಲ್ಲದಿರುವುದನ್ನು ಗಮನಿಸಲಾಗಿದೆ. ಪಡೆದಿರುವ ಇನ್‌ವಾಯಿಸ್‌ಗಳು ಅಥವಾ ಆದೇಶಗಳನ್ನು ಅವುಗಳ ಬಗ್ಗೆ ಆಂತರಿಕ ತೀರ್ಪು ಅಥವಾ ಆಂತರಿಕ ಲೆಕ್ಕಪರಿಶೋಧನೆ ಇಲ್ಲದೇ ವೆಚ್ಚಗಳು ಅಥವಾ ಆದಾಯವೆಂದು ಲೆಕ್ಕೀಕರಿಸಲಾಗುತ್ತಿದೆ.

ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳಲ್ಲಿ 'ಭೌತಿಕ ದೌರ್ಬಲ್ಯವು' ಒಂದು ಕೊರತೆ ಅಥವಾ ಕೊರತೆಗಳ ಸಂಯೋಜನೆಯಾಗಿದ್ದು, ಅಂದರೆ ಕಂಪನಿಯ ವಾರ್ಷಿಕ ಅಥವಾ ಮಧ್ಯಂತರ ಹಣಕಾಸು ತಃಖ್ತೆಗಳಲ್ಲಿ ಭೌತಿಕ ತಪ್ಪು ಹೇಳಿಕೆಯನ್ನು ಸಕಾಲಿಕವಾಗಿ ತಡೆಗಟ್ಟಲಾಗದ ಅಥವಾ ಪತ್ತೆಮಾಡಲಾಗದೇ ಇರುವ ಒಂದು ಸಮಂಜಸವಾದ ಸಾಧ್ಯತೆ ಇರುವುದು.

ನಮ್ಮ ಅಭಿಪ್ರಾಯದಲ್ಲಿ, ಕಂಪನಿಯು, ಎಲ್ಲಾ ವಿಷಯಗಳ ದೃಷ್ಟಿಯಿಂದ, ಚಾರ್ಟರ್ಡ್ ಅಕೌಂಟಂಟ್ಸ್ ಆಫ್ ಇಂಡಿಯಾರವರು ಹೊರಡಿಸಿದ ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಪರಿಶೋಧನೆಯ ಮೇಲಿನ ಮಾರ್ಗದರ್ಶಿ ಟಿಪ್ಪಣಿಯಲ್ಲಿ ವಿವರಿಸಿದ ಅಂತರಿಕ ನಿಯಂತ್ರಣಗಳ ಅವಶ್ಯಕ ಅಂಶಗಳನ್ನು ಪರಿಗಣಿಸಿ ಅನುಷ್ಠಾನಗೊಳಿಸಿದ "ಹಣಕಾಸು ವರದಿಯ ಮಾನದಂಡಗಳ ಮೇಲೆ ಆಂತರಿಕ ನಿಯಂತ್ರಣಗಳ" ಆಧಾರದಲ್ಲಿ, 31ನೇ ಮಾರ್ಚ್ 2021 ಕ್ಕಿರುವಂತೆ ಹಣಕಾಸು ವರದಿಯ ಮೇಲೆ ಸಾಕಷ್ಟು ಆಂತರಿಕ ಹಣಕಾಸು ನಿಯಂತ್ರಣಗಳ ನಿರ್ವಹಣೆಯನ್ನು ಹೊಂದಿದೆ ಮತ್ತು ಮೇಲೆ ಹೇಳಲಾದ ಯೋಗ್ಯ ಅಭಿಪ್ರಾಯಕ್ಕೆ ಆಧಾರದ ಕಂಡಿಕೆಯಲ್ಲಿರುವ ಅಂಶಗಳನ್ನು ಹೊರತುಪಡಿಸಿ, ಕಂಪನಿಯ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದವು.

ಕಂಪನಿಯು ತನ್ನ ಆಂತರಿಕ ನಿಯಂತ್ರಣ ಪ್ರಕ್ರಿಯೆಯನ್ನು ಗುರುತಿಸಲು, ಈ ಪ್ರಕ್ರಿಯೆಗಳನ್ನು ದಾಖಲಿಸಲು ಮತ್ತು ERP ಯ ಅನುಷ್ಠಾನದ ಜೊತೆಗೆ ಹೆಚ್ಚಿನ ನಿಯಂತ್ರಣಗಳನ್ನು ವಿಕಸನಗೊಳಿಸಲು ಪ್ರತ್ಯೇಕ ಪ್ರಯೋಗವನ್ನು ಕೈಗೊಳ್ಳಬೇಕು ಎಂದು ಪರಿಶೋಧನೆಯು ಅಭಿಪ್ರಾಯಪಟ್ಟಿದೆ.ಅನೇಕ ಇಲಾಖೆಗಳ ಮಾಹಿತಿಯು ಸಮನ್ವಯವಾಗಿಲ್ಲ ಮತ್ತು ಸಂಪೂರ್ಣ ಮಾಹಿತಿ ಸಂಗ್ರಹಣೆಯಲ್ಲಿ ಹಲವಾರು ಅಂತರಗಳಿವೆ ಎಂದು ಗಮನಿಸಲಾಗಿದೆ.ಆಂತರಿಕ ನಿಯಂತ್ರಣಗಳು ಮತ್ತು ಅದರ ಅಪಾಯ ತಗ್ಗಿಸುವ ಅಂಶಗಳಿದ್ದಲ್ಲಿ ಅಪಾಯವನ್ನು ತಲುಪಲು ಕಂಪನಿಯು ತನ್ನ ರಿಸ್ಕ್ ಕಂಟ್ರೋಲ್ ಮ್ಯಾಟ್ರೈಸಿಸ್‌ಗೆ ಆಗಮಿಸಬೇಕು.

ರಾವ್ ಮತ್ತುಎಮ್ಮಾರ್ ಪರವಾಗಿ
ಚಾರ್ಟರ್ಡ್ ಅಕೌಂಟಂಟ್ಸ್
ಸಂಸ್ಥೆ ನೊಂದಣಿ ಸಂ.003084S

ಬಿ ಜೆ ಪ್ರವೀಣ
ಪಾಲುದಾರರು
ಸದಸ್ಯತ್ವ ಸಂ.215713
ದಿನಾಂಕ: 28.10.2021
ಸ್ಥಳ: ಹುಬ್ಬಳ್ಳಿ
ಯುಡಿಆಯ್‌ಎನ್:21215713AAAATA9091

ಅನುಬಂಧ – ಸಿ

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ನಿಯಂತ್ರಕರು ಮತ್ತು ಭಾರತದ ಮಹಾಲೇಖಪಾಲರು ರವರು ಕಂಪನಿ ಕಾಯ್ದೆ 2013 ರ ಶಾಖೆ 143(5) ರಡಿಯಲ್ಲಿ ನೀಡಿದ ನಿರ್ದೇಶನಗಳಿಗನುಸಾರವಾಗಿ ವರದಿ:

ಕ್ರ. ಸಂ.	ನಿರ್ದೇಶನಗಳು	ಪ್ರತಿಕ್ರಿಯೆ
1	ಕಂಪನಿಯು ಎಲ್ಲಾ ಲೆಕ್ಕೀಕರಣ ವಹಿವಾಟುಗಳನ್ನು ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ಮೂಲಕ ಪ್ರಕ್ರಿಯೆಗೊಳಿಸಲು ವ್ಯವಸ್ಥೆಯನ್ನು ಹೊಂದಿದೆಯೇ? ಹೌದಾದಲ್ಲಿ, ಹಣಕಾಸಿನ ಪರಿಣಾಮಗಳೊಂದಿಗೆ ಲೆಕ್ಕಪತ್ರಗಳ ಸಮಗ್ರತೆಯ ಮೇಲೆ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ಹೊರಗಿನ ಲೆಕ್ಕೀಕರಣ ವಹಿವಾಟುಗಳನ್ನು ಪ್ರಕ್ರಿಯೆಗೊಳಿಸುವ ಪರಿಣಾಮಗಳು, ಯಾವುದಾದರೂ ಇದ್ದಲ್ಲಿ, ಹೇಳಬಹುದು.	ಕಂಪನಿಯು ಎಲ್ಲಾ ಲೆಕ್ಕೀಕರಣ ವಹಿವಾಟುಗಳನ್ನು ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ಮೂಲಕ ಪ್ರಕ್ರಿಯೆಗೊಳಿಸಲು ವ್ಯವಸ್ಥೆಯನ್ನು ಹೊಂದಿರುವುದಿಲ್ಲ. ಲೆಕ್ಕೀಕರಣ ವ್ಯವಸ್ಥೆಯನ್ನು ಎಕ್ಸೆಲ್ ಮ್ಯಾಕ್ರೋ ನಲ್ಲಿ ನಿರ್ವಹಿಸುತ್ತಿದ್ದು ಪ್ರಧಾನ ಕಛೇರಿಯಲ್ಲಿ ಕ್ರೋಢೀಕರಣಗೊಳಿಸಲಾಗುತ್ತಿದೆ.
2	ಸಾಲವನ್ನು ಮರುಪಾವತಿಸಲು ಕಂಪನಿಯ ಅಸಮರ್ಥತೆಯಿಂದಾಗಿ ಸಾಲಗಾರರು ಅಸ್ತಿತ್ವದಲ್ಲಿರುವ ಸಾಲದ ಅಥವಾ ಮನ್ನಾ ಪ್ರಕರಣಗಳು/ಋಣಗಳನ್ನು ವಜಾಗೊಳಿಸುವಿಕೆ/ಸಾಲಗಳು/ಬಡ್ಡಿ ಇತರೆ. ಗಳ ಯಾವುದೇ ಪುನರ್ರಚನೆ ಮಾಡಿರುವರೇ? ಹೌದಾದಲ್ಲಿ, ಹಣಕಾಸಿನ ಪರಿಣಾಮವನ್ನು ಹೇಳಬಹುದು.	ಸಾಲವನ್ನು ಮರುಪಾವತಿಸಲು ಕಂಪನಿಯ ಅಸಮರ್ಥತೆಯಿಂದಾಗಿ ಸಾಲಗಾರರು ಅಸ್ತಿತ್ವದಲ್ಲಿರುವ ಸಾಲದ ಅಥವಾ ಮನ್ನಾ ಪ್ರಕರಣಗಳು/ಋಣಗಳಿಗೆ ವಜಾಗೊಳಿಸುವಿಕೆ/ಸಾಲಗಳು/ಬಡ್ಡಿ ಇತರೆ. ಗಳ ಯಾವುದೇ ಪುನರ್ರಚನೆ ಮಾಡಿರುವುದಿಲ್ಲ.ಪ್ರಸಕ್ತ ವರ್ಷದಲ್ಲಿ ಕಂಪನಿಯು ಕೆಆರ್ಇಡಿಎಲ್ ಗೆ ವರ್ಷದಿಂದ ಬಾಕಿ ಇರುವ ಸಾಲದ ಮೊತ್ತ ರೂ.210 ಕೋಟಿ ಯನ್ನು ಪಾವತಿಸಿರುವುದಿಲ್ಲ. ಕೋವಿಡ್ ಕಾರಣಗಳಿಂದಾಗಿ ಕಂಪನಿಯು ಪ್ರಸಕ್ತ ವರ್ಷದಲ್ಲಿ ಪವರ್ ಫೈನಾನ್ಸ್ ಕಂಪನಿಯಿಂದ ಬಡ್ಡಿಯ ನಿಷೇಧವನ್ನು ಪಡೆದುಕೊಂಡಿದೆ. ಇತರ ಪ್ರಕರಣಗಳಲ್ಲಿ ಕಂಪನಿಯು ತನ್ನ ಅಸಲು ಮತ್ತು ಬಡ್ಡಿ ಮೊತ್ತವನ್ನು ನಿಯಮಿತವಾಗಿ ಮರುಪಾವತಿ ಮಾಡುತ್ತಿದೆ.
3	ಕೇಂದ್ರ/ರಾಜ್ಯದ ಎಜೆನ್ಸಿಗಳಿಂದ ನಿರ್ದಿಷ್ಟ ಯೋಜನೆಗಳಿಗೆ ಸ್ವೀಕರಿಸಿದ/ಸ್ವೀಕರಿಸಬಹುದಾದ ನಿಧಿಯನ್ನು ಅದರ ಅವಧಿ ಮತ್ತು ಷರತ್ತುಗಳ ಪ್ರಕಾರ ಸರಿಯಾಗಿ ಲೆಕ್ಕೀಕರಿಸಲಾಗಿದೆಯೇ/ಬಳಸಲಾಗಿದೆಯೇ? ವ್ಯತ್ಯಾಸವಿರುವ ಪ್ರಕರಣಗಳನ್ನು ಪಟ್ಟಿ ಮಾಡಿ.	ಹೌದು. ಕೇಂದ್ರ/ರಾಜ್ಯದ ಎಜೆನ್ಸಿಗಳಿಂದ ನಿರ್ದಿಷ್ಟ ಯೋಜನೆಗಳಿಗೆ ಸ್ವೀಕರಿಸಿದ/ಸ್ವೀಕರಿಸಬೇಕಾದ ನಿಧಿಯನ್ನು ಅದರ ಷರತ್ತು ಮತ್ತು ನಿಬಂಧನೆಗಳ ಪ್ರಕಾರ ಸರಿಯಾಗಿ ಲೆಕ್ಕೀಕರಿಸಲಾಗಿದೆ / ಬಳಸಲಾಗಿದೆ. ಕಂಪನಿಯು ಕೇಂದ್ರ/ರಾಜ್ಯ ಸರ್ಕಾರಗಳಿಂದ ಪಡೆದ ನಿಧಿಗೋಸ್ಕರ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ನಿರ್ವಹಿಸಿರುವುದಿಲ್ಲವೆಂಬುದನ್ನು ಗಮನಿಸಲಾಗಿದೆ.

ಕ್ರ ಸಂ.	ನಿರ್ದೇಶನಗಳು	ಪ್ರತಿಕ್ರಿಯೆ
		ಲೆಕ್ಕಪುಸ್ತಕಗಳಲ್ಲಿ ಯೋಜನಾವಾರು ನಿಗಾವಹಿಸುವಿಕೆಯನ್ನು ನಿರ್ವಹಿಸಿಲ್ಲದಿರುವುದು ಹಾಗೂ ಸರ್ಕಾರಿ ಪ್ರಾಧಿಕಾರಗಳಿಗೆ ಸಲ್ಲಿಸಿದ ಬಳಕೆ ಪ್ರಮಾಣಪತ್ರಗಳು ಲೆಕ್ಕಪುಸ್ತಕಗಳೊಂದಿಗೆ ಸಮನ್ವಯಗೊಂಡಿರುವುದಿಲ್ಲವೆಂಬುದನ್ನೂ ಸಹ ಗಮನಿಸಲಾಗಿದೆ.
ಹೆಚ್ಚುವರಿ ಕಂಪನಿ ನಿರ್ದಿಷ್ಟ ನಿರ್ದೇಶನಗಳು:		
ಎ	ಅನುಬಂಧ–1 ರಲ್ಲಿರುವಂತೆ ನಗದು ಮತ್ತು ಬ್ಯಾಂಕ್ ಬ್ಯಾಲೆನ್ಸ್‌ಗಳಿಗೆ ಸಂಬಂಧಿಸಿದಂತೆ ಎಲ್ಲಾ ಅಂಶಗಳನ್ನು ಪರಿಶೀಲಿಸಬೇಕು ಮತ್ತು ನಿರ್ದಿಷ್ಟ ಅನುಸರಣೆ ಇರದ ಪ್ರಕರಣಗಳನ್ನು ವರದಿ ಮಾಡಬೇಕು. ವಿವರಿಸಲಾಗದ ಶಿಲ್ಕುಗಳು / 'ಅಮಾನತ್ತು' ಶೀರ್ಷಿಕೆ ಅಡಿಯಲ್ಲಿ ನಿರ್ವಹಿಸಲಾದ ಶಿಲ್ಕುಗಳ ವಿವರಗಳನ್ನು ಸಹ ಪರಿಶೀಲಿಸಬಹುದು.	'ಅಮಾನತ್ತು' ಶೀರ್ಷಿಕೆ ಅಡಿಯಲ್ಲಿ ಅಂತಹ ಯಾವುದೇ ಪ್ರಕರಣಗಳನ್ನು ಗಮನಿಸಲಾಗಿಲ್ಲ. ಅನುಬಂಧ–1 ರ ಪ್ರಕಾರ ಇತರ ಅಂಶಗಳನ್ನು ವರದಿ ಮಾಡಲಾಗಿದೆ.
ಬಿ	ಕಂಪನಿಯಲ್ಲಿ ಬಿಲ್ಲಿಂಗ್ ಮತ್ತು ಕಂದಾಯ ವಸೂಲಾತಿ ವ್ಯವಸ್ಥೆಯ ದಕ್ಷತೆಯ ಕುರಿತು ವರದಿ ಮಾಡುವುದು. ಎಲ್ಲಾ ಗ್ರಾಹಕರಿಗೆ ಮಾರ್ಪಡಿಸಲಾಗದ ಮೀಟರಗಳನ್ನು ಅಳವಡಿಸಲಾಗಿದೆಯೇ? ಒಂದು ವೇಳೆ ಅಳವಡಿಸಿರದಿದ್ದರೆ ಬಿಲ್ಲಿಂಗ್‌ನ ನಿಖರತೆಯನ್ನು ಹೇಗೆ ಖಾತ್ರಿಪಡಿಸಲಾಗಿದೆ ಎಂಬುದನ್ನು ಪರೀಕ್ಷಿಸುವುದು.	ಬಿಲ್ಲಿಂಗ್ ಮತ್ತು ಕಂದಾಯ ಸಂಗ್ರಹಣೆಯ ವ್ಯವಸ್ಥೆಯು ಸಮಂಜಸವಾಗಿ ಪರಿಣಾಮಕಾರಿ ಎಂದು ಪರಿಗಣಿಸಲಾಗಿದೆ. ಆರ್‌ಎಪಿಡಿಆರ್‌ಪಿ ವ್ಯಾಪ್ತಿಯ ಪ್ರದೇಶಗಳ ವಸೂಲಾತಿಯ ವಿವರಗಳು ಅಪ್‌ಡೇಟ್ ಆಗುವಲ್ಲಿ ಕೆಲವು ದಿನಗಳ ವಿಳಂಬವನ್ನು ಗಮನಿಸಲಾಗಿದೆ. ನಮಗೆ ತಿಳಿಸಿದ ಮಾಹಿತಿಯಂತೆ, ಎಲ್ಲ ಗ್ರಾಹಕರಿಗೆ ಮಾರ್ಪಡಿಸಲಾಗದ ಮೀಟರಗಳನ್ನು ಅಳವಡಿಸಲಾಗಿದೆ ಮತ್ತು ಎಲ್ಲ ಡಿಟಿಸಿ/ಎಚ್‌ಟಿ ಗ್ರಾಹಕರುಗಳಿಗೆ ಸ್ವಯಂಚಾಲಿತ ಮೀಟರ್ ಮಾಪನ ವ್ಯವಸ್ಥೆಗಳನ್ನು ಅಳವಡಿಸಲಾಗಿದೆ. ಆದರೆ, ಎಲ್‌ಟಿ ಗ್ರಾಹಕರುಗಳಿಗೆ ಸ್ವಯಂಚಾಲಿತ ಮೀಟರ್ ಮಾಪನ ವ್ಯವಸ್ಥೆಗಳನ್ನು ಅಳವಡಿಸಿರುವುದಿಲ್ಲ. ಬಿಲ್ಲಿಂಗ್ ನಿಖರತೆಯ ಬಗ್ಗೆ ಶಾಖಾಧಿಕಾರಿ/ಉಪ–ವಿಭಾಗಗಳ ಅಧಿಕಾರಿಗಳಿಂದ ಅವಧಿವಾರು ಪರೀಕ್ಷಾ ಪರಿಶೀಲನೆ ನಡೆಸಿ ಖಚಿತಪಡಿಸಲಾಗಿದೆ. ಆಂತರಿಕ ಪರಿಶೋಧನೆಯು ಕಂದಾಯ ಪ್ರಕ್ರಿಯೆಯನ್ನು ಪರಿಶೀಲಿಸುವುದನ್ನು ಒಳಗೊಂಡಿರುತ್ತದೆ ಆದರೆ ಇದುವರೆಗೂ ಕೇವಲ 2018–19 ರ ವರೆಗಿನ ಬಿಲ್ಲಿಂಗ್‌ಗಳನ್ನು ಪರಿಶೀಲಿಸಲಾಗಿದೆ.

ಕ್ರ ಸಂ.	ನಿರ್ದೇಶನಗಳು	ಪ್ರತಿಕ್ರಿಯೆ
ಸಿ	ಸ್ವೀಕರಿಸಬೇಕಾದ ಮತ್ತು ಪಾವತಿಸಬೇಕಾದ ಬಾಕಿಗಳು ಮತ್ತು ಮುಂಗಡಗಳು ಮತ್ತು ಇತರ ಅದೇ ರೀತಿಯ ಬಾಕಿಗಳ ದೃಢೀಕರಣದ ಕುರಿತು ವ್ಯಾಖ್ಯೆನೀಡುವುದು ಮತ್ತು ಅವುಗಳ ಸಮನ್ವಯಕ್ಕೆ ಪರಿಣಾಮಕಾರಿ ಕಾರ್ಯವಿಧಾನವು ಅಸ್ತಿತ್ವದಲ್ಲಿದೆಯೇ.	ಅವಧಿವಾರು ಸ್ವೀಕೃತಿ ಮತ್ತು ಸಂದಾಯಗಳ ನಡುವೆ ಸಮನ್ವಯಕರಣವನ್ನು ದಸ್ತಾವೇಜುಗೊಳಿಸಿರುವುದಿಲ್ಲ ಆದ್ದರಿಂದ ಈ ವಿಷಯದಲ್ಲಿ ನಮ್ಮಿಂದ ವ್ಯಾಖ್ಯಾನವಿರುವುದಿಲ್ಲ. ಖಾತೆಗಳ ಪುಸ್ತಕಗಳ ಪ್ರಕಾರ ಮತ್ತು ಉತ್ಪಾದನೆ, ವಿತರಣೆ ಮತ್ತು ಪ್ರಸರಣ ಕಂಪನಿಗಳಿಂದ ಸ್ವೀಕರಿಸಿದ ಎಲ್ಲ ಹೇಳಿಕೆಗಳ ಪ್ರಕಾರ ಬ್ಯಾಲೆನ್ಸ್‌ಗಳ ನಡುವಿನ ಬೃಹತ್ ವ್ಯತ್ಯಾಸಗಳನ್ನು ನಾವು ಗಮನಿಸುತ್ತೇವೆ.
ಡಿ	ರಾಜ್ಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಎಸ್ ಇ ಆರ್ ಸಿ) ರವರು ಅನುಮೋದಿಸಿರುವ ಇಂಧನ ಮತ್ತು ವಿದ್ಯುತ್ ಖರೀದಿ ಹೊಂದಾಣಿಕೆ ವೆಚ್ಚವನ್ನು (ಎಫ್.ಪಿ.ಪಿ.ಸಿ.ಎ.) ಕಂಪನಿಯು ವಸೂಲಿ ಮಾಡಿ ಲೆಕ್ಕೀಕರಿಸುತ್ತದೆಯೇ?	ಗೌರವಾನ್ವಿತ ಕೆ.ಇ.ಆರ್.ಸಿ. ಆದೇಶದ ಪ್ರಕಾರ ಬಿಲ್ಲಿಂಗ್ ಅವಧಿಗೆ ಅನುಗುಣವಾಗಿ 2020–21ಸಾಲಿಗೆ ರೂ.36.51 ಕೋಟಿಯನ್ನು ಬೇಡಿಕೆ ಎಂದು ಸಂಗ್ರಹಿಸಿದೆ.
ಇ	ಒಪ್ಪಂದದಲ್ಲಿ ಸೂಚಿಸಲಾದ ಮೈಲಿಗಲ್ಲುಗಳಿಗೆ ಎದುರಾಗಿ ಉಪ–ಕೇಂದ್ರಗಳು ಮತ್ತು ಮಾರ್ಗಗಳ ಪ್ರಕರಣಗಳಲ್ಲಿ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯ ಮೇಲ್ವಿಚಾರಣೆ ಮಾಡುವ ವ್ಯವಸ್ಥೆಯು ಅಸ್ತಿತ್ವದಲ್ಲಿದೆಯೇ ಮತ್ತು ವೆಚ್ಚದ ಹೆಚ್ಚಳದ ಪರಿಣಾಮ, ಯಾವುದಾದರೂ ಇದ್ದರೆ, ಕೈಬಿಟ್ಟ ಯೋಜನೆಗಳು, ಯಾವುದಾದರೂ ಇದ್ದರೆ, ಒಪ್ಪಂದಗಳಿಂದಕಂದಾಯ/ನಷ್ಟಗಳು ಇತ್ಯಾದಿಗಳನ್ನು ಪುಸ್ತಕಗಳಲ್ಲಿ ಸರಿಯಾಗಿ ಲೆಕ್ಕ ಹಾಕಲಾಗಿದೆಯೇ.	ಅಂತಹ ಘಟನೆಗಳನ್ನು ಗುರುತಿಸಲು ಕಂಪನಿಯು ಮೇಲ್ವಿಚಾರಣೆ ವ್ಯವಸ್ಥೆಯನ್ನು ಹೊಂದಿಲ್ಲ. ಅಂತಹ ಯಾವುದೇ ಘಟನೆ ಸಂಭವಿಸಿದಾಗ ಕಂಪನಿಯು ಪುಸ್ತಕಗಳಲ್ಲಿ ಲೆಕ್ಕ ಹಾಕುತ್ತದೆ.

ರಾವ್ ಮತ್ತು ಎಮ್ಮಾರ್ ಪರವಾಗಿ
ಚಾರ್ಟರ್ಡ್ ಅಕೌಂಟಂಟ್ಸ್
ಸಂಸ್ಥೆ ನೊಂದಣಿ ಸಂ.003084S

ಬಿ ಜೆ ಪ್ರವೀಣ
ಪಾಲುದಾರರು
ಸದಸ್ಯತ್ವ ಸಂ.215713
ದಿನಾಂಕ: 28.10.2021
ಸ್ಥಳ: ಹುಬ್ಬಳ್ಳಿ
ಯುಡಿಆಯ್‌ಎನ್: 21215713AAAATA9091

ಅನುಬಂಧ–1

ಕ್ರ. ಸಂ.	ತಪಾಸಣಾ ಪಟ್ಟಿಯಲ್ಲಿರುವ ಅಂಶಗಳು	ಷರಾ
1	ಎಲ್ಲಾ ಬ್ಯಾಂಕ್‌ಗಳ ಖಾತೆಗಳು/ಸ್ಥಿರ ಠೇವಣಿಗಳನ್ನು ಬ್ಯಾಂಕ್‌ಗಳು/ಸಮಂಜಸವಾದಪ್ರಾಧಿಕಾರಗಳಲ್ಲಿ ತೆರೆಯಲಾಗಿದೆಯೆ? ಮತ್ತು ಅಧಿಕಾರ ನಿಯೋಗದ ಅನುಮೋದನೆಗಳೊಂದಿಗೆ ತೆರೆಯಲಾಗಿದೆಯೇ?	ಲೆಟರ್ ಆಫ್ ಕ್ರೆಡಿಟ್ ಸೌಲಭ್ಯಗಳ ಮಾರ್ಜಿನ್ ಹಣಕ್ಕಾಗಿ ಮಾತ್ರ ಸ್ಥಿರ ಠೇವಣಿಗಳನ್ನು ನಿರ್ವಹಿಸಲಾಗುತ್ತದೆ.ಅಧಿಕಾರ ನಿಯೋಗವು ಅಧಿಕೃತ ವ್ಯಕ್ತಿಗಳ ಬಗ್ಗೆ ಮೌನವಾಗಿದೆ.
2	ಬ್ಯಾಂಕ್ ಸಮನ್ವಯ ಹೇಳಿಕೆಯನ್ನು ಸಿದ್ಧಪಡಿಸುವ ನಿಯತಕಾಲಿಕ ವ್ಯವಸ್ಥೆ ಇದೆಯೇ ಮತ್ತು ಅವುಗಳನ್ನು ಲೆಕ್ಕಪರಿಶೋಧನೆಯ ವೇಳೆಯಲ್ಲಿ ಪರಿಶೀಲನೆಗಾಗಿ ಸಲ್ಲಿಸಲಾಗಿದೆಯೇ?	ಹೌದು ಕಂಪನಿಯ ಸಂಪನ್ಮೂಲ ವಿಭಾಗವು ನಿಯತಕಾಲಿಕವಾಗಿ BRS ಅನ್ನು ಸಿದ್ಧಪಡಿಸುತ್ತದೆ. ವಿಭಾಗ ಮತ್ತು ವಿಭಾಗಗಳು BRS ಎಲ್ಲಾ ಹಂತಗಳಲ್ಲಿನ ಉಪ ಅನ್ನು ನಿರ್ವಹಿಸುತ್ತಿವೆ ಮತ್ತು ಆಂತರಿಕ ಲೆಕ್ಕಪರಿಶೋಧಕರಿಂದ ಸರಿಯಾಗಿ ಪರಿಶೀಲಿಸಲಾಗುತ್ತದೆ. ಪ್ರಧಾನ ಕಛೇರಿಯಲ್ಲಿ ಮತ್ತು ವಿಭಾಗಮಟ್ಟಗಳಲ್ಲಿ ಪರಿಶೋಧನೆ ಮಾಡಲು ಪರಿಶೀಲನೆಗಾಗಿ BRS ಅನ್ನು ಒದಗಿಸಲಾಯಿತು. ಉಪ ವಿಭಾಗಗಳ BRS ಗಳು ಆಂತರಿಕ ಲೆಕ್ಕ ಪರಿಶೋಧಕರ ಪ್ರಮಾಣೀಕರಣದ ಮೇಲೆ ಅವಲಂಬಿತವಾಗಿದೆ.
3	ಪ್ರಧಾನ ಖಾತೆ ಮತ್ತು ಎಲ್ಲಾ ಅಧೀನ ಬ್ಯಾಂಕ್ ಖಾತೆಗಳ ಬ್ಯಾಂಕ್ ಸಮನ್ವಯವನ್ನು ಮಾಡಲಾಗಿದೆಯೇ?	ಹೌದು.
4	ಬ್ಯಾಂಕ್ ಖಾತೆಗಳನ್ನು ನಿರ್ವಹಿಸುವ ಅಧಿಕಾರವನ್ನು ಒಬ್ಬನೇ ಸಹಿದಾರನಿಗೆ ನೀಡಲಾಗಿದೆಯೇ?	ವಿಭಾಗಗಳಲ್ಲಿ ಲೆಕ್ಕಾಧಿಕಾರಿ ಮತ್ತು ಸಹಾಯಕ ಲೆಕ್ಕಾಧಿಕಾರಿಗಳುಕಾರ್ಯಾಚರಣೆಗಳನ್ನು ನಿರ್ವಹಿಸುತ್ತಾರೆ, ಪ್ರಧಾನ ಕಛೇರಿಯಲ್ಲಿ ಕಾರ್ಯಾಚರಣೆಗಳನ್ನು ಉಪ ಲೆಕ್ಕನಿಯಂತ್ರಣಾಧಿಕಾರಿ ಹಾಗೂ ಲೆಕ್ಕಾಧಿಕಾರಿಯವರು ನಿರ್ವಹಿಸುತ್ತಾರೆ.
.5	ಸ್ಥಿರ ಠೇವಣಿಗಳ ಸಂಪೂರ್ಣ ಅವಧಿಯ ಬಡ್ಡಿಯನ್ನು ಖಾತೆಗಳ ಪುಸ್ತಕಗಳಲ್ಲಿ ಲೆಕ್ಕೀಕರಿಸಲಾಗಿದೆಯೇ?	ಹೌದು.
6	ನಗದು ಭೌತಿಕ ಪರಿಶೀಲನೆಯು ನಿಯತಕಾಲಿಕವಾಗಿ ನಡೆದಿದೆಯೇ?	ಒದಗಿಸಿದ ಮಾಹಿತಿಯ ಪ್ರಕಾರ ಆಂತರಿಕ ಲೆಕ್ಕಪರಿಶೋಧನಾ ತಂಡದಿಂದ ನಗದು ಭೌತಿಕವಾಗಿ ಪರಿಶೀಲಿಸಲ್ಪಡುತ್ತದೆ ಮತ್ತು ಕಂಡುಬರುವ ಯಾವುದೇ ಕೊರತೆಯನ್ನು ಮರುಪಡೆಯುವಿಕೆ ಮತ್ತು ಕ್ರಮಕ್ಕಾಗಿ ವರದಿ ಮಾಡಲಾಗುತ್ತದೆ.

ಕ್ರ. ಸಂ.	ತಪಾಸಣಾ ಪಟ್ಟಿಯಲ್ಲಿರುವ ಅಂಶಗಳು	ಷರಾ
7	ಅಢಾವೆ ಪತ್ರಿಕೆಯಲ್ಲಿ ತೋರಿಸಿರುವಂತೆ ಕೈಯಲ್ಲಿರುವ ನಗದು ಭೌತಿಕ ಪರಿಶೀಲನೆಯ ಪ್ರಮಾಣಪತ್ರದೊಂದಿಗೆ ತಾಳೆಯಾಗುತ್ತದೆಯೇ?	ಆಯಾ ವಿಭಾಗದ ಲೆಕ್ಕಾಧಿಕಾರಿಗಳ ಮೂಲಕ ಸಮತೋಲನ ದೃಢೀಕರಣವನ್ನು ಒದಗಿಸುವುದನ್ನು ಹೊರತುಪಡಿಸಿ ಅಂತಹ ಯಾವುದೇ ವ್ಯವಸ್ಥೆಯು ಅಸ್ತಿತ್ವದಲ್ಲಿಲ್ಲ.
8	ಸ್ಥಿರ ಠೇವಣಿಗಳ ಮೊತ್ತಗಳು, ಮುಕ್ತಾಯ ದಿನಾಂಕಗಳು, ಬಡ್ಡಿ ದರಗಳು ಮತ್ತು ಬಡ್ಡಿ ಪಾವತಿಯ ದಿನಾಂಕಗಳನ್ನು ತೋರಿಸುವ ನೊಂದಣಿ ಪುಸ್ತಕ ಇದೆಯೇ?	ಅಂತಹ ಯಾವುದೇ ನೊಂದಣಿ ಪುಸ್ತಕವನ್ನು ನಿರ್ವಹಿಸಲಾಗುವುದಿಲ್ಲ ಮತ್ತು ಬ್ಯಾಂಕ್ ಹೇಳಿಕೆಗಳ ಅವಲಂಬನೆಯು ತುಂಬಾ ಹೆಚ್ಚಾಗಿದೆ.
9	ಸ್ಥಿರ ಠೇವಣಿಗಳ ಮೇಲಿನ ಬಡ್ಡಿಯನ್ನು ನಿಗದಿತ ದಿನಾಂಕಗಳಲ್ಲಿ ಸ್ವೀಕರಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಲು ಅನುಸರಣಾ ವ್ಯವಸ್ಥೆ ಇದೆಯೇ?	ಹೌದು
10	ಪಕ್ವವಾದ ಸ್ಥಿರ ಠೇವಣಿಗಳ ಮೊತ್ತದ ವರ್ಗಾವಣೆಯನ್ನು ಯಾವುದೇ ವಿಳಂಬವಿಲ್ಲದೆ ಮಾಡಲಾಗುತ್ತದೆ ಎಂದು ಖಚಿತಪಡಿಸಿಕೊಳ್ಳಲು ಅನುಸರಣಾ ವ್ಯವಸ್ಥೆ ಇದೆಯೇ?	ಪ್ರಸ್ತುತ ಆಡಿಟ್ ಅವಧಿಯಲ್ಲಿ ಅಂತಹ ಯಾವುದೇ ಪ್ರಕರಣಗಳಿಲ್ಲ.
11	ಎಲ್ಲಾ ಖಾತೆಗಳಿಗೆ ಬ್ಯಾಂಕ್‌ಗಳಿಂದ ನಿಯತಕಾಲಿಕವಾಗಿ ಬ್ಯಾಂಕ್ ದೃಢೀಕರಣ ಹೇಳಿಕೆಗಳನ್ನು ಪಡೆಯಲಾಗಿದೆಯೇ: SB ಖಾತೆಗಳು, ಚಾಲ್ತಿ ಖಾತೆಗಳು ಮತ್ತು ಸ್ಥಿರ ಠೇವಣಿಗಳು?	ಹೌದು.
12	ಎಲ್ಲಾ ಬ್ಯಾಂಕ್ ಬ್ಯಾಲೆನ್ಸ್‌ಗಳಿಗೆ ಸಂಬಂಧಿಸಿದಂತೆ ಬ್ಯಾಲೆನ್ಸ್‌ಗಳ ದೃಢೀಕರಣಗಳು ಬ್ಯಾಂಕ್ ಹೇಳಿಕೆಗಳೊಂದಿಗೆ ತಾಳೆಯಾಗುತ್ತವೆಯೇ?	ಹೌದು, ಯಾವುದೇ ವ್ಯತ್ಯಾಸಗಳನ್ನು ಸಮನ್ವಯಗೊಳಿಸಲಾಗುತ್ತದೆ.
13	ಸ್ಥಿರ ಠೇವಣಿ ನೊಂದಣಿ ಪುಸ್ತಕದ ಪ್ರಕಾರ ಸ್ಥಿರ ಠೇವಣಿಗಳು ಮತ್ತು ಬಡ್ಡಿಗಳು ಬ್ಯಾಂಕ್ ನೀಡಿದ ದೃಢೀಕರಣ / ಪ್ರಮಾಣಪತ್ರದೊಂದಿಗೆ ಹೊಂದಾಣಿಕೆಯಾಗುತ್ತವೆಯೇ?	ನೊಂದಣಿ ಪುಸ್ತಕವನ್ನು ನಿರ್ವಹಣೆ ಮಾಡಿಲ್ಲ.
14	ಬ್ಯಾಂಕ್‌ಗಳಿಂದ ಸ್ವೀಕರಿಸಿದ ದೃಢೀಕರಣ ಹೇಳಿಕೆಗಳು ಅಧಿಕೃತವೇ ಮತ್ತು ಬ್ಯಾಂಕಿನ ತಲೆಬರಹದ ಪತ್ರದಲ್ಲಿವೆಯೇ?	ಹೌದು
15	ಮೇಲಿನ ಪರಿಶೀಲನೆಯಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ, ನಂತರದ ವರ್ಷದಲ್ಲಿ ಅದನ್ನು ಸರಿಹೊಂದಿಸಲಾಗಿದೆಯೇ?	ವ್ಯತ್ಯಾಸಗಳನ್ನು ಸಮನ್ವಯಗೊಳಿಸಲಾಗುತ್ತದೆ ಮತ್ತು ಸರಿಹೊಂದಿಸಲಾಗುತ್ತದೆ ಅಥವಾ ಬ್ಯಾಂಕ್‌ನೊಂದಿಗೆ ಸರಿಪಡಿಸಲು ಕ್ರಮತೆಗೆದುಕೊಳ್ಳಲಾಗುತ್ತದೆ.

ಕ್ರ. ಸಂ.	ತಪಾಸಣಾ ಪಟ್ಟಿಯಲ್ಲಿರುವ ಅಂಶಗಳು	ಷರಾ
16	ಪರೀಕ್ಷಿಸಿದ ಪ್ರಕರಣಗಳಲ್ಲಿ ಬ್ಯಾಂಕಗಳಿಂದ ಬಾಹ್ಯ ದೃಢೀಕರಣಗಳನ್ನು ಪಡೆಯಲಾಗಿದೆಯೇ, ಹಾಗಿದ್ದಲ್ಲಿ ಅದರ ವಿವರಗಳು.	ಅಂತಹ ಯಾವುದೇ ಬಾಹ್ಯ ದೃಢೀಕರಣಗಳನ್ನು ನಮ್ಮಿಂದ ಪಡೆದಿಲ್ಲ ಮತ್ತು ನಾವು ಕಂಪನಿಯಿಂದ ಪಡೆದ ದೃಢೀಕರಣಗಳ ಮೇಲೆ ಅವಲಂಬಿತರಾಗಿದ್ದೇವೆ ಮತ್ತು ಆಂತರಿಕ ಪರಿಶೋಧನೆ ಪ್ರಮಾಣೀಕರಣಗಳ ಮೇಲೆ ನಮ್ಮ ಅಭಿಪ್ರಾಯವನ್ನು ಆಧರಿಸಿರುತ್ತೇವೆ.
17	ಶಾಸನಬದ್ಧ ಲೆಕ್ಕಪರಿಶೋಧಕರಿಂದ ಆಂತರಿಕ ಹಣಕಾಸು ನಿಯಂತ್ರಣಗಳ ವರದಿಯಲ್ಲಿ ಮೇಲೆ ತಿಳಿಸಲಾದ ಯಾವುದೇ ಲೋಪಗಳನ್ನು ಹೊರತರಲಾಗಿದೆಯೇ, ಇಲ್ಲದಿದ್ದರೆ, ಲೆಕ್ಕಪರಿಶೋಧನೆ ವಿಚಾರಣೆಯನ್ನು ಹೊರಡಿಸಲಾಗಿದೆಯೇ?	ಬ್ಯಾಲೆನ್ಸಗಳಲ್ಲಿನ ವ್ಯತ್ಯಾಸಗಳ ಸಂದರ್ಭದಲ್ಲಿ, ಲೆಕ್ಕಪರಿಶೋಧನೆಯು ಘಟನೆಗಳನ್ನು ಗುರುತಿಸುತ್ತದೆ ಮತ್ತು ಆಡಿಟ್ ವಿಚಾರಣೆಯ ಮೂಲಕ ಕಂಪನಿಯ ಗಮನಕ್ಕೆ ತರುತ್ತದೆ. ಅದನ್ನು ಸರಿಪಡಿಸಲಾಗಿದೆ ಅಥವಾ ಕಂಪನಿಯು ತಿದ್ದುಪಡಿಗಾಗಿ ಬ್ಯಾಂಕಗಳೊಂದಿಗೆ ಅನುಸರಣೆಗಾಗಿ ಪತ್ರವ್ಯವಹಾರಗಳನ್ನು ಮಾಡಿದೆ.

ಕಂಪನಿಗಳ ಕಾಯ್ದೆ 2013, ಪರಿಚ್ಛೇದ 143(6)(ಬಿ) ರ ಪ್ರಕಾರ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿಯ 31ನೇ ಮಾರ್ಚ 2021 ರಂದು ಕೊನೆಗೊಂಡ ವಾರ್ಷಿಕ ಹಣಕಾಸು ಹೇಳಿಕೆಗಳ ಮೇಲೆ ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರು ಸಲ್ಲಿಸಿರುವ ಅಭಿಪ್ರಾಯಗಳು

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಹುಬ್ಬಳ್ಳಿಯ 31 ಮಾರ್ಚ 2021 ಕ್ಕೆ ಅಂತ್ಯಗೊಂಡ ಹಣಕಾಸು ವರ್ಷದ ಆರ್ಥಿಕ ತಖ್ತೆಗಳನ್ನು ಕಂಪನಿಯ ಕಾಯ್ದೆ, 2013(ಕಾಯ್ದೆ) ರ ಅಡಿಯಲ್ಲಿ ಸೂಚಿಸಿರುವ ಹಣಕಾಸು ವರದಿಯ ಚೌಕಟ್ಟಿನ ಅನ್ವಯ ತಯಾರಿಸುವುದು ಕಂಪನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ. ಕಂಪನಿಗಳ ಕಾಯ್ದೆಯ ಪರಿಚ್ಛೇದ 139(5) ರ ಅಡಿಯಲ್ಲಿ ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರು ನೇಮಿಸಿರುವ ಶಾಸನಬದ್ಧ ಲೆಕ್ಕ ಪರಿಶೋಧಕರು ಕಾಯ್ದೆಯ ಪರಿಚ್ಛೇದ 143(10) ರ ಅಡಿಯಲ್ಲಿ ನಮೂದಿಸಲಾದ ಲೆಕ್ಕಪರಿಶೋಧನಾ ಮಾನದಂಡಗಳ ಅನ್ವಯ ಸ್ವತಂತ್ರ ಪರಿಶೋಧನೆಯ ಆಧಾರದ ಮೇರೆಗೆ ಕಂಪನಿಗಳ ಕಾಯ್ದೆಯ ಪರಿಚ್ಛೇದ 143 ರ ಅಡಿಯಲ್ಲಿ ಆರ್ಥಿಕ ತಖ್ತೆಗಳ ಮೇಲೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಜವಾಬ್ದಾರರಾಗಿರುತ್ತಾರೆ. ಇದನ್ನು 25ನೇ ಆಗಸ್ಟ್ 2021ರ ತಮ್ಮ ಮುಂಚಿನ ಲೆಕ್ಕಪರಿಶೋಧನಾ ವರದಿಯನ್ನು ಅತಿಕ್ರಮಿಸುವ 28ನೇ ಅಕ್ಟೋಬರ್ 2021 ರ ಪರಿಷ್ಕೃತ ಲೆಕ್ಕ ಪರಿಶೋಧನಾ ವರದಿಯಲ್ಲಿ ಮಾಡಿರುವುದಾಗಿ ತಿಳಿಸಿರುತ್ತಾರೆ.

ನಾನು, ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರ ಪರವಾಗಿ ಕಂಪನಿಗಳ ಕಾಯ್ದೆಯ ಪರಿಚ್ಛೇದ 143 (6) (ಎ) ರ ಅಡಿಯಲ್ಲಿ 31 ಮಾರ್ಚ್ 2021 ರಂದು ಕೊನೆಗೊಂಡಿರುವ **ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಹುಬ್ಬಳ್ಳಿಯ**ವಾರ್ಷಿಕಹಣಕಾಸು ತಖ್ತೆಗಳ ಪೂರಕ ಲೆಕ್ಕ ಪರಿಶೋಧನೆಯನ್ನು ನಡೆಸಿರುತ್ತೇನೆ. ಈ ಪೂರಕ ಲೆಕ್ಕ ಪರಿಶೋಧನೆಯನ್ನು ಸ್ವತಂತ್ರವಾಗಿ ನಡೆಸಿದ್ದು ಶಾಸನಬದ್ಧ ಲೆಕ್ಕ ಪರಿಶೋಧಕರ ಕಾರ್ಯಶೀಲ ಕಾಗದಗಳನ್ನು ಉಪಯೋಗಿಸದೇ ಮತ್ತು ಶಾಸನಬದ್ಧ ಲೆಕ್ಕ ಪರಿಶೋಧಕರ ಹಾಗೂ ಕಂಪನಿಯ ಸಿಬ್ಬಂದಿ ವರ್ಗದವರ ಪ್ರಾಥಮಿಕ ವಿಚಾರಣೆಗೆ ಸೀಮಿತಗೊಳಿಸಿ ಹಾಗೂ ಕೆಲವೊಂದು ಲೆಕ್ಕ ಪತ್ರಗಳನ್ನು ಆಯ್ಕೆಯ ಪರೀಕ್ಷೆಗೆ ಒಳಪಡಿಸಿ ನಡೆಸಿರುತ್ತೇನೆ.

ಆಡಳಿತ ಮಂಡಳಿಯು ಮಾಡಿರುವ ಆರ್ಥಿಕ ತಖ್ತೆಗಳ ಪರಿಷ್ಕರಣೆಯ ದೃಷ್ಟಿಯಿಂದ, ಲೆಕ್ಕ ಪತ್ರಗಳಲ್ಲಿ ಒಳಗೊಂಡಿರುವ ಟಿಪ್ಪಣಿಗಳ ಕಂಡಿಕೆ 31–11 ರಲ್ಲಿ ತೋರಿಸಿರುವಂತೆ ಪೂರಕ ಲೆಕ್ಕ ಪರಿಶೋಧನೆಯ ಅವಧಿಯಲ್ಲಿ ನನ್ನ ಲೆಕ್ಕ ಪರಿಶೋಧನೆಯ ಟೀಕೆಗಳ ಮುಖ್ಯಾಂಶಗಳ ಪ್ರತಿಫಲವಾಗಿ, ಕಂಪನಿಗಳ ಕಾಯ್ದೆಯ ಪರಿಚ್ಛೇದ 143 (6)(ಬಿ) ರಂತೆ ತಯಾರಿಸಿದ ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿಗೆ ಯಾವುದೇ ಹೆಚ್ಚಿನ ಟೀಕೆಗಳು ಅಥವಾ ಪೂರಕ ವರದಿಯನ್ನು ನಾನು ಮಾಡುವುದಿಲ್ಲ.

ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರ
ಪರವಾಗಿ,

(ಅನೂಪ್‌ಫ್ರಾನ್ಸಿಸ್‌ಡುಂಗ್‌ಡುಂಗ್)
ಪ್ರಧಾನ ಮಹಾಲೇಖಪಾಲರು–ಆಡಿಟ್–II,
ಕರ್ನಾಟಕ, ಬೆಂಗಳೂರು.

ಸ್ಥಳ: ಬೆಂಗಳೂರು

ದಿನಾಂಕ: 05.11.2021.

ದಿನಾಂಕ 31 ನೇ ಮಾರ್ಚ 2021 ರ ಅಂತ್ಯಕ್ಕೆ ಇದ್ದಂತೆ ಆಸ್ತಿ ಹೊಣೆ ಪಟ್ಟಿ

ಕ್ರ ಸಂ.	ವಿವರಗಳು	ಟಿಪ್ಪಣಿ ಸಂಖ್ಯೆ	31.03.2021 ಕ್ಕೆ ರೂ.	31.03.2020 ಕ್ಕೆ ರೂ.
ಎ	**ಸ್ವಾಮ್ಯ ಮತ್ತು ಹೊಣೆಗಾರಿಕೆಗಳು**			
1	**ಷೇರುದಾರರ ನಿಧಿ**			
	ಎ) ಷೇರು ಬಂಡವಾಳ	3	15,54,23,78,000	15,54,23,78,000
	ಬಿ) ಮೀಸಲು ಮತ್ತು ಅಧಿಕ್ಯ	4	(50,76,91,19,081)	(25,86,84,68,397)
			(35,22,67,41,081)	**(10,32,60,90,397)**
2	**ಹಂಚಿಕೆಗೆ ಬಾಕಿ ಇರುವ ಷೇರು ಅರ್ಜಿ ಹಣ**		4,81,58,93,080	2,05,62,00,080
3	**ಪ್ರಸಕ್ತದ್ದಲ್ಲದ ಹೊಣೆಗಾರಿಕೆಗಳು**			
	ಎ) ದೀರ್ಘಾವಧಿ ಸಾಲಗಳು	5	70,17,00,95,114	46,32,75,36,207
	ಸಿ) ಇತರ ದೀರ್ಘಾವಧಿ ಹೊಣೆಗಾರಿಕೆಗಳು	6	9,88,25,32,300	9,34,44,91,374
	ಡಿ) ದೀರ್ಘಾವಧಿ ಅವಕಾಶಗಳು	7	1,55,06,90,322	1,28,98,55,135
			81,60,33,17,736	**56,96,18,82,716**
4	**ಪ್ರಸಕ್ತ ಹೊಣೆಗಾರಿಕೆಗಳು**			
	ಎ) ಅಲ್ಪಾವಧಿ ಸಾಲಗಳು	8	2,95,66,92,571	3,35,08,14,040
	ಬಿ) ವ್ಯವಹರಣೆ ವಿನಿಮಯದ ಪಾವತಿಗಳು	9	53,93,36,31,569	59,06,48,25,694
	ಸಿ) ಇತರ ಪ್ರಸಕ್ತ ಹೊಣೆಗಾರಿಕೆಗಳು	10	18,52,83,59,688	20,90,85,02,571
	ಡಿ) ಅಲ್ಪಾವಧಿ ಅವಕಾಶಗಳು	11	30,83,93,532	29,05,95,524
			75,72,70,77,360	**83,61,47,37,829**
	ಒಟ್ಟು		**1,26,91,95,47,095**	**1,32,30,67,30,228**
ಬಿ	**ಆಸ್ತಿಗಳು**			
1	**ಪ್ರಸಕ್ತದ್ದಲ್ಲದ ಆಸ್ತಿಗಳು**			
	ಎ) ಸ್ಥಿರ ಆಸ್ತಿಗಳು			
	(ಎ) ಸ್ಪಷ್ಟ ಸ್ವತ್ತುಗಳು	12A	45,94,90,71,273	38,63,45,94,761
	(ಬಿ) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು	12B	3,44,14,45,954	6,79,56,47,552
	(ಸಿ) ಅಸ್ಪಷ್ಟ ಆಸ್ತಿಗಳು	12C	6,65,30,486	7,59,95,224
			49,45,70,47,713	**45,50,62,37,537**
	(ಡಿ) ಪ್ರಸಕ್ತದ್ದಲ್ಲದ ಹೂಡಿಕೆಗಳು	13	14,01,00,000	14,01,00,000
	(ಇ) ಮುಂದೂಡಲ್ಪಟ್ಟ ತೆರಿಗೆ ಆಸ್ತಿ (ನಿವ್ವಳ)	13A	1,48,34,29,129	-
	(ಎಫ್) ದೀರ್ಘಾವಧಿ ಸಾಲ ಮತ್ತು ಮುಂಗಡಗಳು	14	1,64,93,74,356	2,37,06,95,623
	(ಜಿ) ಇತರ ಪ್ರಸಕ್ತದ್ದಲ್ಲದ ಆಸ್ತಿಗಳು	15	6,29,76,78,724	19,58,20,13,858
			59,02,76,29,922	**67,59,90,47,018**
2	**ಪ್ರಸಕ್ತ ಆಸ್ತಿಗಳು**			
	ಎ) ಪ್ರಸಕ್ತ ಹೂಡಿಕೆಗಳು	16	-	-
	ಬಿ) ತಪಶೀಲುಗಳು	17	1,58,13,48,378	1,51,63,61,468
	ಸಿ) ವ್ಯವಹರಣೆ ವಿನಿಮಯದ ಸ್ವೀಕೃತಿಗಳು	18	18,30,58,93,305	17,23,32,39,140
	ಡಿ) ನಗದು ಹಾಗೂ ಬ್ಯಾಂಕ್ ಶಿಲ್ಕುಗಳು	19	81,12,93,296	41,83,53,856
	ಇ) ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳು	20	7,94,39,861	4,36,55,811
	ಎಫ್) ಇತರ ಪ್ರಸಕ್ತ ಆಸ್ತಿಗಳು	21	47,11,39,42,333	45,49,60,72,935
			67,89,19,17,173	**64,70,76,83,210**
	ಒಟ್ಟು		**1,26,91,95,47,095**	**1,32,30,67,30,228**

ಇದರೊಂದಿಗಿರುವ ಹಣಕಾಸು ಹೇಳಿಕೆಗಳ ಭಾಗಗಳನ್ನು ರೂಪಿಸುವ ಟಿಪ್ಪಣಿಗಳನ್ನು ನೋಡುವುದು.

ಮಂಡಳಿಯ ನಿರ್ದೇಶಕರುಗಳ ಪರವಾಗಿ

(ರಾಘವೇಂದ್ರ ಕೋಟೆಮನೆ)	**(ಬಿ. ಮಂಜುನಾಥ)**	**(ಎ. ಹೆಚ್. ಕಾಂಬ್ಳೆ)**	**(ಡಿ. ಭಾರತಿ, ಐ.ಎ.ಎಸ್.)**
ಕಂಪನಿ ಕಾರ್ಯದರ್ಶಿ	ನಿರ್ದೇಶಕರು (ಹಣಕಾಸು)	ನಿರ್ದೇಶಕರು (ತಾಂತ್ರಿಕ)	ವ್ಯವಸ್ಥಾಪಕ ನಿರ್ದೇಶಕರು

ಸಮದಿನಾಂಕದ ನಮ್ಮ ಲೆಕ್ಕಪರಿಶೋಧನಾ ವರದಿಯಂತೆ

ಸ್ಥಳ : ಹುಬ್ಬಳ್ಳಿ
ದಿನಾಂಕ : 28.10.2021

ರಾಮ್ & ಎಮ್ಆರ್ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಎಫ್.ಆರ್.ಎನ್. 003084ಎಸ್
ಬಿ.ಜೆ. ಪ್ರವೀಣ, ಪಾಲದಾರರು
ಸದಸ್ಯ ಸಂಖ್ಯೆ: 215713

31.03.2021 ಕ್ಕೆ ಅಂತ್ಯಗೊಂಡ ವರ್ಷದ ಲಾಭ ಮತ್ತು ನಷ್ಟದ ಲೆಕ್ಕಗಳು

ಕ್ರ. ಸಂ.	ವಿವರಗಳು	ಟಿಪ್ಪಣಿ ಸಂಖ್ಯೆ	31 ನೇ ಮಾರ್ಚ 2021 ಕ್ಕೆ ಅಂತ್ಯಗೊಂಡ ವರ್ಷ	31 ನೇ ಮಾರ್ಚ 2020 ಕ್ಕೆ ಅಂತ್ಯಗೊಂಡ ವರ್ಷ
			ರೂ.	ರೂ.
	ಕಂದಾಯ			
1	ಕಾರ್ಯಾಚರಣೆಯಿಂದ ಕಂದಾಯ	22	78,30,01,62,517	77,92,25,17,551
2	ಇತರೆ ಆದಾಯ	23	95,62,80,894	68,49,72,009
3	**ಒಟ್ಟು ಕಂದಾಯ (1+2)**		**79,25,64,43,411**	**78,60,74,89,560**
4	**ವೆಚ್ಚಗಳು**			
	ಎ) ವಿದ್ಯುತ್ ಖರೀದಿ	24	68,35,49,83,367	55,84,88,80,886
	ಸಿ) ಸಿಬ್ಬಂದಿ ಸೌಲಭ್ಯ ವೆಚ್ಚಗಳು	25	9,37,04,79,478	8,66,75,24,042
	ಬಿ) ಹಣಕಾಸಿನ ವೆಚ್ಚ	26	11,29,99,91,821	5,46,33,12,378
	ಡಿ) ಸವಕಳಿ ಮತ್ತು ಭೋಗ್ಯ ವೆಚ್ಚ	27i	2,54,08,92,785	2,23,40,76,562
	ಇ) ಆಡಳಿತ ಮತ್ತು ಇತರೆ ವೆಚ್ಚಗಳು	27ii	2,63,20,90,671	2,98,99,11,933
	ಒಟ್ಟು ವೆಚ್ಚ		**94,19,84,38,122**	**75,20,37,05,801**
5	**ವಿನಾಯತಿ ಪಡೆದ ಅಂಶಗಳು, ವಿಶೇಷಾಧಿಕ ಅಂಶಗಳು ಮತ್ತು ಆದಾಯ ತೆರಿಗೆಗೆ ಮುಂಚಿನ ಲಾಭ/ನಷ್ಟ (3–4)**		(14,94,19,94,711)	3,40,37,83,759
6	ವಿನಾಯತಿ ಪಡೆದ ಅಂಶಗಳು	28a	-	(1,02,90,00,000)
7	ಪೂರ್ವಾವಧಿಗೆ ಸಂಬಂಧಿಸಿದ ಆದಾಯ	28	1,88,17,03,931	1,63,97,29,827
8	ಪೂರ್ವಾವಧಿಗೆ ಸಂಬಂಧಿಸಿದ ವೆಚ್ಚಗಳು	28	(46,10,59,611)	(1,01,08,30,468)
9	**ವಿಶೇಷಾಧಿಕ ಅಂಶಗಳು ಮತ್ತು ಆದಾಯ ತೆರಿಗೆಗೆ ಮುಂಚಿನ ಲಾಭ/ನಷ್ಟ (+/–5 to 8)**		**(13,52,13,50,391)**	**3,00,36,83,118**
10	**ನಿಯಂತ್ರಣ ಆದಾಯ / ವೆಚ್ಚಗಳು**	28b	(12,86,46,78,952)	(8,37,03,11,639)
11	ವಿಶೇಷಾಧಿಕ ಅಂಶಗಳು	28b	-	(1,45,55,00,493)
12	**ತೆರಿಗೆಗೆ ಮುಂಚಿನ ಲಾಭ/ನಷ್ಟ (9 ± 10 ± 11)**		**(26,38,60,29,343)**	**(6,82,21,29,014)**
13	**ತೆರಿಗೆ ಆದಾಯ/ವೆಚ್ಚ**			
	ಎ) ಮುಂದೂಡಲ್ಪಟ್ಟ ತೆರಿಗೆ	28c	1,48,34,29,129	-
			-	-
14	**ಪ್ರಸಕ್ತ ವರ್ಷಕ್ಕೆ ಲಾಭ/ನಷ್ಟ (11±12)**		**(24,90,26,00,214)**	**(6,82,21,29,014)**
13	**ರೂ. 10ರ ಮೌಲ್ಯದ ಪ್ರತಿ ಷೇರಿನ ಗಳಿಕೆ**			
	(ಎ) ಮೂಲ ಮತ್ತು ತೆಳುಗೊಳಿಸಿದ	30	(16.02)	(4.39)

ಇದರೊಂದಿಗಿರುವ ಹಣಕಾಸು ಹೇಳಿಕೆಗಳ ಭಾಗಗಳನ್ನು ರೂಪಿಸುವ ಟಿಪ್ಪಣಿಗಳನ್ನು ನೋಡುವುದು.

ಮಂಡಳಿಯ ನಿರ್ದೇಶಕರುಗಳ ಪರವಾಗಿ

(ರಾಘವೇಂದ್ರ ಕೋಟೆಮನೆ)	(ಬಿ. ಮಂಜುನಾಥ)	(ಎ. ಹೆಚ್. ಕಾಂಬ್ಳೆ)	(ಡಿ. ಭಾರತಿ, ಐ.ಎ.ಎಸ್.)
ಕಂಪನಿ ಕಾರ್ಯದರ್ಶಿ	ನಿರ್ದೇಶಕರು (ಹಣಕಾಸು)	ನಿರ್ದೇಶಕರು (ತಾಂತ್ರಿಕ)	ವ್ಯವಸ್ಥಾಪಕ ನಿರ್ದೇಶಕರು

ಸಮದಿನಾಂಕದ ನಮ್ಮ ಲೆಕ್ಕಪರಿಶೋಧನಾ ವರದಿಯಂತೆ
ರಾಮ್ & ಎಮ್‌ಆರ್ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಎಫ್.ಆರ್.ಎನ್. 003084ಎಸ್
ಬಿ.ಜೆ. ಪ್ರವೀಣ, ಪಾಲದಾರರು
ಸದಸ್ಯ ಸಂಖ್ಯೆ: 215713

ಸ್ಥಳ : ಹುಬ್ಬಳ್ಳಿ
ದಿನಾಂಕ : 28.10.2021

ದಿನಾಂಕ 31 ನೇ ಮಾರ್ಚ 2021 ರ ಅಂತ್ಯಕ್ಕೆ ಇದ್ದಂತೆ ಹಣ ಚಲಾವಣೆ ಪಟ್ಟಿ

ಕ್ರ. ಸಂ.	ವಿವರಗಳು	31 ನೇ ಮಾರ್ಚ 2021 ಕ್ಕೆ ಅಂತ್ಯಗೊಂಡ ವರ್ಷ		31 ನೇ ಮಾರ್ಚ 2020 ಕ್ಕೆ ಅಂತ್ಯಗೊಂಡ ವರ್ಷ	
		ರೂ.	ರೂ.	ರೂ.	ರೂ.
1	**ಕಾರ್ಯಾಚರಣೆ ಚಟುವಟಿಕೆಗಳಿಂದ ಹಣ**				
1-1	ವಿಶೇಷಾಧಿಕ ಅಂಶಗಳು ಮತ್ತು ತೆರಿಗೆಗೆ ಮುಂಚೆ ನಿವ್ವಳ ಲಾಭ/ (ನಷ್ಟ)	(26,38,60,29,343)		(6,82,21,29,014)	
1-2	ಸವಕಳಿ ಮತ್ತು ಭೊಗ್ಯ	2,54,08,92,785		2,23,40,76,562	
1-3	ಸಂದೇಹಾಸ್ಪದ ಬಾಕಿಗಳಿಗೆ ಅವಕಾಶ	8,32,66,277		2,25,13,368	
1-4	ಆಸ್ತಿಯ ಮಾರಾಟದಿಂದ ನಷ್ಟ	66,69,813		7,50,978	
1-5	ಆಸ್ತಿಯ ಮಾರಾಟದಿಂದ ಲಾಭ	-		(18,325)	
1-6	ಆರ್ಥಿಕ ಖರ್ಚುಗಳು	11,29,99,91,821		5,46,33,12,378	
1-7	ಗಳಿಕೆರಜೆ ನಗದೀಕರಣ ಮತ್ತು ಸಿಬ್ಬಂದಿ ಕ್ಷೇಮಾಭಿವೃದ್ಧಿ ವೆಚ್ಚಗಳಿಗೆ ಅವಕಾಶ	1,85,90,16,391		15,24,52,655	
1-8	ಬೋನಸ್/ಎಕ್ಸಗ್ರೇಷಿಯಾ (ಪಾವತಿಸಬೇಕಾಗಿರುವ)	6,88,59,495		6,99,65,716	
1-9	ನಿವೃತ್ತಿ ಸೌಲಭ್ಯಗಳಿಗೆ ಅವಕಾಶ			1,91,16,55,777	
	ವಸ್ತುಗಳ ವೆಚ್ಚ ವ್ಯತ್ಯಾಸ (Credit)	19,71,218		(40,21,69,762)	
1-10	ಬಡ್ಡಿಯ ಆದಾಯ	1,00,26,261		1,22,33,677	
	ವ್ಯವಹರಣೆಯ (ಲಾಭ / ಹಾನಿ) ಕಾರ್ಯವಾಹಿ ಬಂಡವಾಳದ ಬದಲಾವಣೆಯ ಮುಂಚೆ		**(10,51,53,35,282)**		**2,64,26,44,010**
2	**ಕಾರ್ಯಶೀಲ ಬಂಡವಾಳದ ಬದಲಾವಣೆ**				
2-1	ತಪಶೀಲು	(6,49,86,910)		-	
2-2	ವ್ಯವಹರಣೆಯ ಸ್ವೀಕೃತಿಗಳು	(1,15,59,20,442)		(2,25,13,368)	
2-3	ಅಲ್ಪಾವಧಿ ಸಾಲ ಮತ್ತು ಮುಂಗಡಗಳು	(3,57,84,050)		-	
2-4	ಧೀರ್ಘಾವಧಿ ಸಾಲ ಮತ್ತು ಮುಂಗಡಗಳು	72,13,21,267		-	
2-5	ಇತರೆ ಪ್ರಸ್ತುತ ಆಸ್ತಿಗಳು	(1,64,25,39,195)		(1,77,58,948)	
2-6	ಇತರೆ ಪ್ರಸ್ತುತವಲ್ಲದ ಆಸ್ತಿಗಳು	13,28,43,35,134		-	
2-7	ವ್ಯವಹರಣೆಯ ಪಾವತಿಗಳು	(5,13,11,94,125)		-	
2-8	ಇತರ ಪ್ರಸ್ತುತ ಹೊಣೆಗಾರಿಕೆಗಳು	(4,30,80,18,769)		(2,13,40,74,148)	
2-9	ಇತರ ದಿರ್ಘಾವಧಿ ಹೊಣೆಗಾರಿಕೆಗಳು	53,80,40,926		-	
2-10	ಅಲ್ಪಾವಧಿ ಅವಕಾಶಗಳು	30,76,29,958		4,46,57,938	
2-11	ದೀರ್ಘಾವಧಿ ಅವಕಾಶಗಳು	(2,76,14,87,157)		83,42,31,685	
	ಒಟ್ಟು		(24,86,03,363)		(1,29,54,56,841)
	ಕಾರ್ಯಾಚರಣೆ ಚಟುವಟಿಕೆಗಳಿಂದ ಬಂದ ನಗದು ಉತ್ಪಾದನೆ		**(10,76,39,38,645)**		**1,34,71,87,169**
3	**ಹೂಡಿಕೆ ಚಟುವಟಿಕೆಗಳಿಂದ ನಗದುಚಲಾವಣೆ**				
3-1	ಬಂಡವಾಳ ಮುಂಗಡಗಳು ಸೇರಿ ಸ್ಥಿರಾಸ್ತಿಗಳಲ್ಲಿ ಬಂಡವಾಳ ವೆಚ್ಚ	(6,69,97,23,127)		(12,86,28,31,107)	
3-2	ಬಂಡವಾಳವೆಚ್ಚ ಪ್ರಗತಿಯಲ್ಲಿ ಇಳಿಕೆ	(3,35,42,01,598)		-	
3-3	ಸ್ಥಿರಾಸ್ತಿಗಳ ಮಾರಾಟದಿಂದ ಬಂದ ಹಣ	30,64,143		24,55,637	
	ಹೂಡಿಕೆ ಚಟುವಟಿಕೆಗಳಿಂದ ನಿವ್ವಳ ನಗದು ಚಲಾವಣೆ		**(10,05,08,60,583)**		**(12,86,03,75,470)**

ದಿನಾಂಕ 31 ನೇ ಮಾರ್ಚ 2021 ರ ಅಂತ್ಯಕ್ಕೆ ಇದ್ದಂತೆ ಹಣ ಚಲಾವಣೆ ಪಟ್ಟಿ

ಕ್ರ. ಸಂ.	ವಿವರಗಳು	31 ನೇ ಮಾರ್ಚ 2021 ಕ್ಕೆ ಅಂತ್ಯಗೊಂಡ ವರ್ಷ		31 ನೇ ಮಾರ್ಚ 2020 ಕ್ಕೆ ಅಂತ್ಯಗೊಂಡ ವರ್ಷ	
		ರೂ.	ರೂ.	ರೂ.	ರೂ.
4	**ಆರ್ಥಿಕ ಚಟುವಟಿಕೆಗಳಿಂದ ನಗದು ಚಲಾವಣೆ.**				
4-1	ಷೇರು ಠೇವಣಿಗಾಗಿ ಬಂದ ಹಣ	2,75,96,71,312		59,15,20,698	
4-2	ದೀರ್ಘಾವಧಿ ಸಾಲಗಳಿಂದ ಬಂದ ಹಣ	41,29,34,35,970		24,31,64,55,731	
4-3	ದೀರ್ಘಾವಧಿ ಸಾಲಗಳಿಗೆ ಮರುಪಾವತಿ	(17,87,87,47,010)		(10,67,48,06,236)	
4-5	ಮೂಲ ವೆಚ್ಚಗಳು	49,09,580		23,36,981	
4-6	ಬಂಡವಾಳ ಕಾಮಗಾರಿ ಸಾಲಗಳಲ್ಲಿ ನಿವ್ವಳ ಏರಿಕೆ/(ಇಳಿಕೆ)	(2,49,41,21,469)		(2,10,00,00,000)	
4-7	ಹಣಕಾಸಿನ ಖರ್ಚುಗಳು	(11,29,99,91,821)		(5,46,33,12,378)	
	ನಿವ್ವಳ ನಗದು ಹರಿವು / (ಉಪಯೋಗಿಸಿದ) ಹಣಕಾಸು ಚಟುವಟಿಕೆಯಿಂದ		12,38,51,56,562		6,67,21,94,796
	ನಿವ್ವಳ ನಗದು ಹರಿವು / (ಉಪಯೋಗಿಸಿದ) ಹಣಕಾಸು ಚಟುವಟಿಕೆಯಿಂದ (ಸಿ–ಡಿ)		**12,38,51,56,562**		**6,67,21,94,796**
	ನಗದು ಮತ್ತು ನಗದು ಸಮಾನ ಸ್ವರೂಪಗಳ ನಿವ್ವಳ ಏರಿಕೆ/(ಇಳಿಕೆ)		**(8,42,96,42,666)**		**(4,84,09,93,505)**
5	ವರ್ಷದ ಪ್ರಾರಂಭದಲ್ಲಿ ನಗದು ಮತ್ತು ನಗದು ಸಮಾನ ಸ್ವರೂಪಗಳು		41,83,53,856		1,31,85,56,000
	ವರ್ಷಾಂತ್ಯಕ್ಕೆ ನಗದು ಮತ್ತು ನಗದು ಸಮಾನ ಸ್ವರೂಪಗಳು		**(8,01,12,88,810)**		**(3,52,24,37,505)**
	ಆಸ್ತಿ ಹೊಣೆ ಪಟ್ಟಿಯಂತೆ ನಗದು ಮತ್ತು ನಗದು ಸಮಾನ ಸ್ವರೂಪಗಳು (ಟಿಪ್ಪಣಿ–17 ನ್ನು ನೋಡುವುದು)		81,12,93,296		41,83,53,856
	ಟಿಪ್ಪಣಿ–17 ರಲ್ಲಿ ಸೇರಿಸಲಾದ ನಿವ್ವಳ ನಗದು ಮತ್ತು ನಗದು ಸಮಾನ ಸ್ವರೂಪಗಳು (ಎಎಸ್–3 – ನಗದು ಹರಿವು ಹೇಳಿಕೆಗಳಲ್ಲಿ ವ್ಯಖ್ಯಾನಿಸಿದಂತೆ)		**81,12,93,296**		**41,83,53,856**
	ವರ್ಷಾಂತ್ಯಕ್ಕೆ ನಗದು ಮತ್ತು ನಗದು ಸಮಾನ ಸ್ವರೂಪಗಳು *		81,12,93,296		41,83,53,856
6	ಕೈಯಲ್ಲಿರುವ ನಗದು		13,34,28,037		2,17,88,051
7	ಚಾಲ್ತಿ ಖಾತೆಯಲ್ಲಿ		42,97,97,620		12,23,18,880
8	3 ತಿಂಗಳುಗಳಿಗಿಂತ ಕಡಿಮೆ ಅವಧಿಗೆ ಮೂಲ ಪರಿಪಕ್ವತೆ ಹೊಂದುವ ಠೇವಣಿ ಖಾತೆಗಳಲ್ಲಿ		24,80,67,639		27,42,46,925
			81,12,93,296		**41,83,53,856**

ಇದರೊಂದಿಗಿರುವ ಹಣಕಾಸು ಹೇಳಿಕೆಗಳ ಭಾಗಗಳನ್ನು ರೂಪಿಸುವ ಟಿಪ್ಪಣಿಗಳನ್ನು ನೋಡುವುದು.

ಮಂಡಳಿಯ ನಿರ್ದೇಶಕರುಗಳ ಪರವಾಗಿ

(ರಾಘವೇಂದ್ರ ಕೋಟೆಮನೆ)	**(ಬಿ. ಮಂಜುನಾಥ)**	**(ಎ. ಹೆಚ್. ಕಾಂಬ್ಳೆ)**	**(ಡಿ. ಭಾರತಿ, ಐ.ಎ.ಎಸ್.)**
ಕಂಪನಿ ಕಾರ್ಯದರ್ಶಿ	ನಿರ್ದೇಶಕರು (ಹಣಕಾಸು)	ನಿರ್ದೇಶಕರು (ತಾಂತ್ರಿಕ)	ವ್ಯವಸ್ಥಾಪಕ ನಿರ್ದೇಶಕರು

ಸಮದಿನಾಂಕದ ನಮ್ಮ ಲೆಕ್ಕಪರಿಶೋಧನಾ ವರದಿಯಂತೆ

ಸ್ಥಳ : ಹುಬ್ಬಳ್ಳಿ
ದಿನಾಂಕ : 28.10.2021

ರಾಮ್ & ಎಮ್ಆರ್ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಎಫ್.ಆರ್.ಎನ್. 003084ಎಸ್
ಬಿ.ಜೆ. ಪ್ರವೀಣ, ಪಾಲದಾರರು
ಸದಸ್ಯ ಸಂಖ್ಯೆ: 215713

ಟಿಪ್ಪಣಿ 1 & 2

ಟಿಪ್ಪಣಿ	ವಿವರಗಳು
1	**ಕಾರ್ಪೊರೇಟ ಮಾಹಿತಿ** ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ದಿನಾಂಕ 30 ಎಪ್ರಿಲ್ 2002 ರಂದು ಪಬ್ಲಿಕ್ ಲಿಮಿಟೆಡ ಕಂಪನಿಯೆಂದು ಕಂಪನಿಗಳ ರಜಿಸ್ಟರ ಬೆಂಗಳೂರವರಲ್ಲಿ ನೊಂದಾಯಿಸಲ್ಪಟ್ಟದೆ. ನೊಂದಣಿ ಸಂಖ್ಯೆಯು U31401KA2002SGC030437 ಮತ್ತು ದಿನಾಂಕ ಜೂನ 1, 2002 ರಿಂದ ತನ್ನ ಕಾರ್ಯಾಚರಣೆಯನ್ನು ಆರಂಭಿಸಿತು ಕಂಪನಿಯ ನೊಂದಾಯಿತ ಕಛೇರಿಯು ಪಿ.ಬಿ.ರೋಡ ನವನಗರ ಹುಬ್ಬಳ್ಳಿ–580025 ರಲ್ಲಿರುತ್ತದೆ. ಕಂಪನಿಯು ಕರ್ನಾಟಕದ ಏಳು ಜಿಲ್ಲೆಗಳಲ್ಲಿ ವಿದ್ಯುತ್ ವಿತರಣೆಯಲ್ಲಿ ತೊಡಗಿಸಿಕೊಂಡಿದೆ. ಕರ್ನಾಟಕ ಸರ್ಕಾರವು ಹಂಚಿಕೆ ಮಾಡಿರುವಂತೆ ಕಂಪನಿಯು ವಿದ್ಯುತ್ ಉತ್ಪಾದನಾ ಕ್ರೋಡಿಕೃತ ಲೆಕ್ಕದಿಂದ ಸರ್ಕಾರವು ಹಂಚಿಕೆ ಮಾಡಿರುವಂತೆ ಕಂಪನಿಯು ವಿದ್ಯುತ್ ಖರೀದಿ ವೆಚ್ಚವನ್ನು ಲೆಕ್ಕ ಪತ್ರದಲ್ಲಿ ಅಳವಡಿಸಿಕೊಳ್ಳುತ್ತದೆ. ಈ ವಿದ್ಯುತ ಖರೀದಿ ಹಂಚಿಕೆಯ ದರಗಳನ್ನು ವಾಣಿಜ್ಯ ದರಗಳು/ಮುಂಚೆಯೇ ನಿರ್ಣಯಿಸಿರುವ ದರಗಳನ್ನು ಆಧರಿಸಿ ಪಿ ಪಿ ಎ/ ಕೆ ಇ ಆರ್.ಸಿ / ಕರ್ನಾಟಕ ಸರ್ಕಾರಗಳು ಮಂಜೂರು ಮಾಡಿದಂತಿರುತ್ತದೆ. ಕಂಪನಿಯ ಪ್ರಧಾನ ಚಟುವಟಿಕೆಗಳು ವಿದ್ಯುತ್ ವಿತರಣೆಯಲ್ಲಿ ತೊಡಗಿಸಿಕೊಳ್ಳುವುದಾಗಿದೆ.
2.1	**ಲೆಕ್ಕಚಾರಗಳ ಮೂಲತತ್ವ ಮತ್ತು ಅವಯ್ಯವ ಪಟ್ಟಿಗಳ ತಯಾರಿಕೆ.** ಕಂಪನಿಯ ಆಯವ್ಯಯ ಪಟ್ಟಿಗಳನ್ನು ಭಾರತದಲ್ಲಿ (ಭಾರತ ಜಿಎ ಎ ಪಿ) ಸಾಮಾನ್ಯವಾಗಿ ಸಮ್ಮತಿಸಲಾದ ಲೆಕ್ಕಪತ್ರ ನಿರ್ವಹಣೆ ತತ್ವಗಳ ಅನುಗುಣವಾಗಿ ತಯಾರಿಸಲಾಗುತ್ತದೆ. ಕಂಪನಿಯು ಈ ಆಯವ್ಯಯ ಪಟ್ಟಿಗಳನ್ನು ಅಕೌಂಟಿಂಗ ಸ್ಟಾಂಡರ್ಡ ನಿಯಮಾವಳಿ 2014 ಶಾಖೆ 133ರ ಮತ್ತು ಕಂಪನಿಗಳ ಸಂಬಂಧಪಟ್ಟ ನಿಭಂದನೆಗಳ ಕಾಯ್ದೆ 2013ರ ಅಡಿಯಲ್ಲಿಯ ಲೆಕ್ಕ ಪತ್ರ ನಿರ್ವಹಣೆ ಗುಣಮಟ್ಟವನ್ನು ಎಲ್ಲಾ ವಸ್ತು ವಿಷಯಗಳಿಗೆ ಅನುಸರಣೆಯಾಗುವಂತೆ ಸಿದ್ದಪಡಿಸಲಾಗಿದೆ. ಹಣಕಾಸಿನ ತ:ಖ್ತೆಗಳ ಮೇಲೆ ಭೌತಿಕವಾಗಿ ಪರಿಣಾಮ ಬೀರುವ ಎಲ್ಲಾ ಆದಾಯ ಮತ್ತು ವೆಚ್ಚಗಳನ್ನು ಪ್ರಾಪ್ತವಾಗುವ ಆಧಾರದ ಮೇಲೆ ಗುರುತಿಸಲಾಗಿದ್ದು, ಸ್ವತಂತ್ರ ವಿದ್ಯುತ್ ಉತ್ಪಾದಕರಿಗೆ ಪಾವತಿಸುವ ವಿಳಂಬಿತ ಪಾವತಿಯ ಮೇಲಿನ ಬಡ್ಡಿಯನ್ನು ಪಾವತಿಸಿದ ನಂತರವೇ ಲೆಕ್ಕ ಪತ್ರದಲ್ಲಿ ಪರಿಗಣಿಸುವದರಿಂದಾ ಇದನ್ನು ಹೊರತುಪಡಿಸಿ ಹಣಕಾಸಿನ ತ:ಖ್ತೆಗಳ ಮೇಲೆ ಭೌತಿಕವಾಗಿ ಪರಿಣಾಮ ಬೀರುವ ಉಳಿದ ಎಲ್ಲಾ ಆದಾಯ ಮತ್ತು ವೆಚ್ಚಗಳನ್ನು ಪ್ರಾಪ್ತವಾಗುವ ಆಧಾರದ ಮೇಲೆ ಲೆಕ್ಕ ಪತ್ರದಲ್ಲಿ ಅಳವಡಿಸಲಾಗುತ್ತದೆ. ಆದಾಗ್ಯೂ ಅವೆಲ್ಲವುಗಳನ್ನು ಪ್ರಮಾಣೀಕರಿಸಲಾಗಿದ್ದು ಮತ್ತು ಅವುಗಳನ್ನು ಪ್ರಾಸಂಗಿಕ ಹೊಣೆಗಾರಿಕೆಯಾಗಿ ಬಹಿರಂಗಪಡಿಸಲಾಗಿದೆ. ಕಳೆದ ಮೂರು ಆರ್ಥಿಕ ವರ್ಷಗಳಿಂದ ಕಂಪನಿಯ ನಿವ್ವಳ ಮೌಲ್ಯವು ಋಣಾತ್ಮಕವಾಗಿರುವುದರಿಂದ ಆರ್ಥಿಕ ವರ್ಷ 2020–21 ನೇ ಸಾಲಿಗೆ ಇಂಡ್ ಎಎಸ್ ಅನ್ವಯಿಸುವುದಿಲ್ಲ.
2.2	**ಅಂದಾಜುಗಳ ಬಳಕೆ.** ಭಾರತೀಯ ಜಿ.ಎ.ಎ.ಪಿ ಅನುಸರಣೆಯಾಗುವಂತೆ ಆಯವ್ಯಯ ಪಟ್ಟಿಗಳ ತಯಾರಿಕೆಗೆ ಆಯವ್ಯಯ ಪಟ್ಟಿಗಳ ದಿನಾಂಕದಂದು ವರದಿಸಲ್ಪಡುವ ಆಸ್ತಿ ಹಾಗೂ ಹೊಣೆಗಾರಿಕೆಗಳಿಗೆ ಸಂಬಂಧಿಸಿರುವ ಮೊತ್ತಗಳ ಮತ್ತು ವರದಿಯ ಅವಧಿಯಲ್ಲಿ ವರದಿಸಲ್ಪಡುವ ಕಂದಾಯ ಮತ್ತು ವೆಚ್ಚಗಳ ಮೇಲೆ ಆಗುವ ಪ್ರಭಾವಳಿಗಳನ್ನು ಆಡಳಿತ ಮಂಡಳಿಯು ಅಂದಾಜು ಹಾಗೂ ಮಾಹೆಗಳನ್ನು ಮಾಡುವ ಅಗತ್ಯವಿರುತ್ತದೆ. ಆದರೂ ಲಭ್ಯವಿರುವ ಎಲ್ಲಾ ಮಾಹಿತಿಗಳನ್ನು ಗಣನೆಗೆ ತೆಗೆದುಕೊಂಡು ಸಮಂಜಸವಾದ ಮತ್ತು ವಿವೇಕದ ಆಧಾರದ ಮೇಲೆ ತಯಾರಿಸುವ ಇಂತಹ ಅಂದಾಜುಗಳ ನಿಜವಾದ ಫಲಿತಾಂಶಗಳಿಗೆ ಭಿನ್ನವಾಗುತ್ತವೆ.

ಟಿಪ್ಪಣಿ	ವಿವರಗಳು
2.3	**ಸಾಮಗ್ರಿ ತಪಶೀಲು ಪಟ್ಟಿ** ಸಾಮಗ್ರಿ ತಪಶೀಲು ಪಟ್ಟಿಯ ಬೆಲೆಯನ್ನು ನಿಗದಿತ ದರಪಟ್ಟಿಯಂತೆ ಮೌಲಿಕರಿಸಿದ್ದು ಅದನ್ನು ಕಂಪನಿಯು ಕಾಲಕಾಲಕ್ಕೆ ಹಿಂದೆ ಖರೀದಿಸಿರುವ ಬೆಲೆ ಮತ್ತು ಪ್ರಚಲಿತ ಮಾರುಕಟ್ಟೆ ಬೆಲೆಗಳನ್ನು ಆಧರಿಸಿ ನಿಗದಿಪಡಿಸಿದೆ. (ಕಾರ್ಯ ಮತ್ತು ಪಾಲನೆ ದರಪಟ್ಟಿ ಎಂದು ಪ್ರಕಟಿಸಿದೆ).
2.4	**ನಗದು ಮತ್ತು ನಗದು ಸಮಾನ ಸ್ವರೂಪಗಳು (ಹಣ ಚಲಾವಣೆ ವರದಿಯ ಉದ್ದೇಶಕ್ಕಾಗಿ)** ನಗದು, ನಗದು ಕೈಹಣ ಮತ್ತು ಬ್ಯಾಂಕಿನಲ್ಲಿರುವ ಬೇಡಿಕೆ ಠೇವಣಿಗಳನ್ನು ಒಳಗೊಂಡಿರುತ್ತದೆ. ನಗದು ಸಮಾನ ಸ್ವರೂಪಗಳು ಅಲ್ಪಾವಧಿ ಶಿಲ್ಕುಗಳಾಗಿದ್ದು (ಗಳಿಸಿದ ದಿನಾಂಕದಿಂದ ಮೂರು ತಿಂಗಳುಗಳು ಅಥವಾ ಮುಂಚಿತವಾಗಿ ಲಭ್ಯವಾಗುವ ಮೂಲ ಅವಧಿಯದ್ದಾಗಿರುವ), ಹಾಗೂ ಹೆಚ್ಚು ದ್ರವ ಹೂಡಿಕೆಗಳಾಗಿದ್ದು ಇವುಗಳನ್ನು ಶೀಘ್ರವಾಗಿ ನಗದೀಕರಿಸಿಕೊಳ್ಳಬಹುದು ಮೌಲ್ಯದಲ್ಲಿ ಅಂತಹ ಮಹತ್ವಪೂರ್ಣ ಮತ್ತು ಇವುಗಳ ಬದಲಾವಣೆಯ ಅಪಾಯ ಇರುವುದಿಲ್ಲ.
2.5	**ಹಣ ಚಲಾವಣೆ ವರದಿ** ಲೆಕ್ಕ ಪತ್ರ ಮಾನದಂಡ 3 ರಲ್ಲಿ ನಿಗದಿ ಪಡಿಸಿದಂತೆ, ಹಣ ಚಲಾವಣೆ ಪಟ್ಟಿಯನ್ನು ಪರೋಕ್ಷ ವಿಧಾನದ ಮೂಲಕ ಸಿದ್ಧಪಡಿಸಲಾಗುತ್ತದೆ.
2.6	**ಸ್ಥಿರಾಸ್ತಿಗಳು** **2.6.1** ಸ್ಥಿರಾಸ್ತಿಗಳನ್ನು ಅವುಗಳ ಐತಿಹಾಸಿಕ ವೆಚ್ಚಗಳೊಂದಿಗೆ ಅನುರೂಪವಾದ ಸಂಚಿತ ಸವಕಳಿಯನ್ನು ತೋರಿಸಲಾಗಿದೆ. ನಿರ್ಮಿಸಲಾದ/ಪಡೆದುಕೊಂಡ ಸ್ಥಿರಾಸ್ತಿಗಳನ್ನು ಅರ್ಜಿತ ಅಥವಾ ನಿರ್ಮಿಸಲು ತಗಲುವ ಬೆಲೆಯಂತೆ ಮೌಲೀಕರಿಸಿದೆ. ಉಗ್ರಾಣದಿಂದ ಕಾಮಗಾರಿಗಳಿಗಾಗಿ ಹೊರ ಬೀಳುವ ಹಾಗೂ ಆಸ್ತಿಯಾಗಿ ಹೊರ ಹೊಮ್ಮುವ ಸಾಮಗ್ರಿಗಳನ್ನು ನಿರ್ದಿಷ್ಟ ಬೆಲೆಗಳಿಗನುಗುಣವಾಗಿ ಮೌಲೀಕರಿಸಲಾಗಿದೆ. ಸ್ಥಿರಾಸ್ತಿಗಳನ್ನು ನಿರ್ಮಿಸುವ ಹಂತದವರೆಗೆ ತಗಲುವ ಬಡ್ಡಿ ಮತ್ತು ಆರ್ಥಿಕ ವೆಚ್ಚಗಳನ್ನು ಬಂಡವಾಳದ ಲೆಕ್ಕಕ್ಕೆ ಸೇರಿಸಿಕೊಳ್ಳಲಾಗುತ್ತದೆ. **2.6.2** ಕ.ವಿ.ಪ್ರ.ನಿ.ನಿಯಿಂದ ವರ್ಗಾವಣೆಗೊಂಡ ಸ್ಥಿರಾಸ್ತಿಗಳ ವೆಚ್ಚವನ್ನು ವರ್ಗಾವಣೆ ದಾಖಲೆ ದರದಲ್ಲಿಯೇ ನಮೂದಿಸಲಾಗಿದೆ. **2.6.3** ಕ.ವಿ.ಪ್ರ.ನಿ.ನಿಯ ಜೊತೆಗೆ ಹೊಂದಿರುವ ಪಾಲುದಾರಿಕೆ ಸ್ಥಿರಾಸ್ತಿಗಳ ಸಂಪೂರ್ಣ ಮಾಲಿಕತ್ವ ಕ.ವಿ.ಪ್ರ.ನಿ.ನಿ.ಗೆ ಸೇರಿದ್ದು, ಕಾರಣ ಅವುಗಳನ್ನು ಕಂಪನಿಯ ಲೆಕ್ಕ ಪುಸ್ತಕಗಳಲ್ಲಿ ತೋರಿಸಿರುವುದಿಲ್ಲ. ಸದರಿ ಸ್ಥಿರಾಸ್ತಿಗಳ ನಿರ್ವಹಣಾ ವೆಚ್ಚವನ್ನು ಲಾಭ ಮತ್ತು ನಷ್ಟ ಲೆಕ್ಕದಲ್ಲಿ ತೋರಿಸಲಾಗಿದೆ. **2.6.4** ಸ್ಥಿರಾಸ್ತಿಗಳ ಬಂಡವಾಳ ವೆಚ್ಚಕ್ಕೆ ಗ್ರಾಹಕರಿಂದ ಪಡೆದಿರುವ ವಂತಿಗೆ, ಅನುದಾನ ಮತ್ತು ಸಹಾಯಧನವನ್ನು ಅಢಾವೆ ಪತ್ರದಲ್ಲಿ ತೋರಿಸಿರುವ ಒಟ್ಟಾರೆ ಸ್ಥಿರಾಸ್ತಿಯಲ್ಲಿ ಲೆಕ್ಕಗಳ ಮಾನದಂಡ 12 ರಲ್ಲಿ ತಿಳಿಸಿರುವಂತೆ ಕಳೆದಿದೆ. **2.6.5** ಕಳಚಿತ ಆಸ್ತಿಗಳನ್ನು ಇಳಿತಗೊಂಡ ಮೌಲ್ಯದ ಪ್ರಕಾರ ಮೌಲೀಕರಿಸಿದೆ. ನಿರುಪಯುಕ್ತ ಆಸ್ತಿಗಳ ಬೆಲೆಯನ್ನು ದರ ಪಟ್ಟಿಯಲ್ಲಿ ಸೂಚಿಸಿರುವ ದರಗಳಂತೆ ಮೌಲೀಕರಿಸಿದೆ. **2.6.6 ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು** ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಿಗಾಗಿ ಹೊರಬೀಳುವ ಸಾಮಗ್ರಿಗಳ ಬೆಲೆಯನ್ನು ನಿಗದಿತ ದರಪಟ್ಟಿಯಲ್ಲಿರುವ ದರದಂತೆ ನಿಗದಿಗೊಳಿಸಲಾಗಿದ್ದು ಒಟ್ಟು ಟರ್ನಕಿ ಮತ್ತು ಬಾಗಶಃ ಟರ್ನಕಿ ಆಧಾರದ ಮೇಲೆ ಬಂಡವಾಳ ಕಾಮಗಾರಿಗಳನ್ನು ಎಲ್ಲ ಸಾಮಗ್ರಿಗಳ ಖರೀದಿ ಬೆಲೆ ಲೆಕ್ಕೀಕರಿಸಿದೆಯೂ ಅದನ್ನು ಹೊರತುಪಡಿಸಿ ಕಂಪನಿಯು ಸದರಿ ದರಗಳನ್ನು ಕಾಲಕಾಲಕ್ಕೆ ಹಿಂದೆ ಖರೀದಿಸಿರುವ ಬೆಲೆ ಮತ್ತು ಪ್ರಚಲಿತ ಮಾರುಕಟ್ಟೆಯ ದರಗಳನ್ನು ಆಧರಿಸಿ ನಿಗದಿಪಡಿಸುತ್ತದೆ.

ಟಿಪ್ಪಣಿ	ವಿವರಗಳು
2.7	**ಸವಕಳಿ ಮತ್ತು ಭೋಗ್ಯ** **2.7.1** ಸಿ.ಇ.ಆರ್.ಸಿ ಯ ಅಧಿಸೂಚನೆ ಸಂಖ್ಯೆ. ಎಲ್–7/25(5)/2003–ಕೆವಿಎನ್ ದಿನಾಂಕ 26.03.2004 ರ ಆಧಾರಿತ ಕೆ.ಇ.ಆರ್.ಸಿ ಆದೇಶ ಸಂಖ್ಯೆ ಬಿ/12/01 ದಿನಾಂಕ : 29.03.2006 ರ ಅನ್ವಯ ಎಲ್ಲಾ ಆಸ್ತಿಗಳ ಮೇಲಿನ ಸವಕಳಿಯನ್ನು ನೇರ ರೇಖಾ ಪದ್ಧತಿಯಂತೆ (ಭೋಗ್ಯದ ಮೇಲೆ ಹೊಂದಿರುವ ಭೂಮಿಯನ್ನು ಹೊರತು ಪಡಿಸಿ) ಹಾಗೂ ಸಿ.ಇ.ಆರ್.ಸಿ. ಟ್ಯಾರಿಫ್ ನಿಯಮ 2009 ರ ಅನುಬಂಧ III ರಲ್ಲಿ ಸೂಚಿಸಿರುವ ದರಗಳ ಪ್ರಕಾರ ಸವಕಳಿ ಹಾಕಲಾಗಿದೆ. **2.7.2** ಸಿ.ಇ.ಆರ್.ಸಿ.ಯ ಅಧಿಸೂಚನೆ ಸಂಖ್ಯೆ ಎಲ್–7/25(5)/2003–ಕೆವಿಎನ್ ದಿನಾಂಕ 26.03.2004 ರ ಆಧಾರಿತ ಕೆ.ಇ.ಆರ್.ಸಿ. ಆದೇಶ ಸಂಖ್ಯೆ ಬಿ/12/01 ದಿನಾಂಕ 29.03.06 ರ ಅನ್ವಯ ಹಾಗೂ ಸಿ.ಇ.ಆರ್.ಸಿ. ದರ ನಿಯಮಗಳು 2009 ರ ಅನುಬಂಧ III ರಲ್ಲಿ ಸೂಚಿಸಿರುವ ದರಗಳಂತೆ ಕಳಚಿದ ಆಸ್ತಿಗಳು ಮತ್ತು ಪುನಃ ಕೆಲಸಗಳಿಗೆ ನೀಡಲಾದ ಮತ್ತು ಆಸ್ತಿ ವರ್ಗೀಕರಣ ಮಾಡಲಾದ ಆಸ್ತಿಗಳ ಮೇಲೆ ಸವಕಳಿಯನ್ನು ಹಾಕಲಾಗಿದೆ. **2.7.3** ಭೋಗ್ಯದ ಮೆಲೆ ಹೊಂದಿರುವ ಆಸ್ತಿಗಳ ಸವಕಳಿಯನ್ನು ಭೋಗ್ಯದ ಅವಧಿಯನ್ನು ಆಧರಿಸಿ, ಒಟ್ಟಾರೆ ಭೋಗ್ಯ ಅವಧಿಯ ಸಾಲ ಮುಕ್ತ ದರದಲ್ಲಿ ಮಾಡಲಾಗಿದೆ. **2.7.4** ಆಸ್ತಿಗಳ ಮೇಲಿನ ಸವಕಳಿಯನ್ನು ಆಸ್ತಿಗಳ ಮೂಲ ಬೆಲೆಯ ಶೇ. 90 ಕ್ಕೆ ಮಿತಿಗೊಳಿಸಿ ಹಾಕಲಾಗಿದೆ. **2.7.5** ಸದರಿ ವರ್ಷದಲ್ಲಿ ಖರೀದಿ ಮಾಡಿರುವ ರೂ. 500 ಅಥವಾ 500 ಕ್ಕಿಂತ ಕಡಿಮೆ ಇರುವ ಪ್ರತಿಯೊಂದು ಆಸ್ತಿಯ ವೆಚ್ಚವನ್ನು ಪೂರ್ತಿಯಾಗಿ ಸವಕಳಿಯನ್ನೇ ಲೆಕ್ಕಾಚಾರ ಮಾಡಿ ಪರಿಗಣಿಸಲಾಗಿದೆ. (ಕಂಪನಿಯ ಕಾಯ್ದೆ 2013 ರ ಪ್ರಕಾರ ರೂ.5000 ಮೊತ್ತಕ್ಕನುಗುಣವಾಗಿ) **2.7.6** ಬಂಡವಾಳ ಅನುದಾನದಿಂದ ಸೃಷ್ಟಿಸಿದ ಸ್ಥಿರಾಸ್ತಿಗಳ ಮೇಲೆ ಸವಕಳಿಯನ್ನು ಹಾಕಿರುವುದಿಲ್ಲ. **2.7.7** ಆಸ್ತಿಗಳು ಕಾರ್ಯಾರಂಭ ಮಾಡಿದ ತಿಂಗಳಿಂದಲೇ ಸವಕಳಿಯನ್ನು ಹಾಕಲಾಗಿದೆ. **(i)** ಹೊಸದಾಗಿ ಕಾರ್ಯಾರಂಭ ಮಾಡಿರುವ ಆಸ್ತಿಗಳ ಮೇಲಿನ ಸವಕಳಿಯನ್ನು ಸದರಿ ಆಸ್ತಿಗಳು ಕಾರ್ಯಾರಂಭ ಮಾಡಿದ ದಿನಾಂಕವನ್ನು ಗಣನೆಗೆ ತೆಗೆದುಕೊಳ್ಳದೆ ಪೂರ್ತಿ ತಿಂಗಳ ಸವಕಳಿಯನ್ನು ಹಾಕಲಾಗಿದೆ. **(ii)** ಕಳಚಿದ ಅಥವಾ ಕಾರ್ಯನಿರುಪಯುಕ್ತಗೊಳಿಸಿದ ಆಸ್ತಿಗಳ ಮೇಲಿನ ಸವಕಳಿಯನ್ನು ಕಾರ್ಯನಿರುಪಯುಕ್ತಗೊಳಿಸಿದ ತಿಂಗಳ ಹಿಂದಿನ ತಿಂಗಳ ಕೊನೆಯ ದಿನಾಂಕದವರೆಗೆ ಮಾತ್ರ ಹಾಕಲಾಗಿದೆ.
2.8	**ವಿದ್ಯುತ್ ಪೂರೈಕೆಯಿಂದ ಬರಬೇಕಾಗಿರುವುದು** ವಿದ್ಯುತ್ ಪೂರೈಕೆ ಚಟುವಟಿಕೆಯಿಂದ ಬರಬೇಕಾಗಿರುವುದು ವಿವಿಧ ಎಲ್ . ಟಿ ಹೆಚ್. ಟಿ ಪ್ರವರ್ಗಗಳಿಗೆ ವಿದ್ಯುತ ಮಾರಾಟಕ್ಕೆ ಸಂಬಂಧಿಸಿದೆ.
2.9	**ಆದಾಯ ಮಾನ್ಯತೆ :** **ಸರಕುಗಳ ಮಾರಾಟ** ಸಾಮಾನ್ಯವಾಗಿ ಸರಕಗಳನ್ನು ಗ್ರಾಹಕರಿಗೆ ಬಟವಾಡೆಯಾದ ಕೂಡಲೆ ಮಾಲಿಕತ್ವದ ಪ್ರಮುಖ ಅಪಾಯ ಮತ್ತು ಫಲಿತಾಂಶಗಳು ಖರೀದಿದಾರನಿಗೆ ವರ್ಗವಾದ ನಂತರ ಹಿಂದಿರುಗಿಸಿರುವ ಸರಕುಗಳನ್ನು ಹಾಗೂ ವ್ಯಾಪಾರ ರಿಯಾಯತಿಗಳನ್ನು ಪರಿಗಣಿಸಿ ಸರಕುಗಳ ಮಾರಾಟವನ್ನು ನಿವ್ವಳವಾಗಿ ಮಾನ್ಯ ಮಾಡಲಾಗುತ್ತದೆ.

ಟಿಪ್ಪಣಿ	ವಿವರಗಳು
	ಸೇವೆಗಳ ಆದಾಯ ವಿದ್ಯುತ್ ಮಾರಾಟದಿಂದ ಬರುವ ಆದಾಯವನ್ನು ಪ್ರಾಪ್ತವಾಗಿರುವ ಆಧಾರದ ಮೇಲೆ ಲೆಕ್ಕಕ್ಕೆ ತೆಗೆದುಕೊಳ್ಳುವುದು. ಹಿಂದಿನ ವರ್ಷದಲ್ಲಿ ಬಿಲ್ ಮಾಡಿರದ ವಿದ್ಯುತ್ ಬಳಕೆಯ ಆದಾಯವು ಪ್ರಚಲಿತ ವರ್ಷದ ಆದಾಯದಲ್ಲಿ ಸೇರಿಕೊಂಡಿರುವ ಕಂದಾಯ ಮೊತ್ತದಲ್ಲಿ ಕಡಿಮೆ ಮಾಡುವುದು. ಪ್ರಚಲಿತ ವರ್ಷದಲ್ಲಿ ಬಿಲ್ ಮಾಡಿರದ ಕಂದಾಯ ಹಾಗೂ ಖಾತೆ ಪ್ರಾರಂಭಿಸದ ಗ್ರಾಹಕರುಗಳಿಂದ ಬರಬೇಕಾದ ಕಂದಾಯ ಬಾಕಿಯು ಒಟ್ಟಾರೆ ಕಂದಾಯದಲ್ಲಿ ಒಳಗೊಂಡಿರುತ್ತದೆ. ಇಂಧನ ಮಾರಾಟದಿಂದ ಬರುವ ಹು.ವಿ.ಸ.ಕಂನಿಯ ಕಂದಾಯವು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಕಾಲಕಾಲಕ್ಕೆ ನಿಗದಿಪಡಿಸಿರುವ ಜಕಾತಿ ದರದಂತೆ ಇರುತ್ತದೆ. **ಸಂಬಂಧಿತ ಹಣಕಾಸು ವರ್ಷಗಳ ಸುಂಕದ ಆದೇಶಗಳಲ್ಲಿ ಅನುಮೋದಿತ ವಿದ್ಯುತ್ ಖರೀದಿಯ ವೆಚ್ಚಕ್ಕಿಂತ ಹೆಚ್ಚಿರುವ ವಿದ್ಯುತ್ ಖರೀದಿಯ ವೆಚ್ಚಕ್ಕೆ ಸಂಬಂಧಿಸಿದ ಹೆಚ್ಚುವರಿ ವೆಚ್ಚವನ್ನು ವರ್ಷದ ಆದಾಯವೆಂದು ಪರಿಗಣಿಸಲಾಗುತ್ತದೆ ಮತ್ತು ಭವಿಷ್ಯದ ವರ್ಷಗಳಲ್ಲಿ ಗ್ರಾಹಕರಿಂದ ನಿಯಂತ್ರಕ ಆಸ್ತಿಯೆಂದು ಸ್ವೀಕರಿಸಲಾಗುತ್ತದೆ.**
2.10	**ಇತರೆ ಆದಾಯ** ಸಂಚಿತ ಆಧಾರದ ಮೇಲೆ ಬ್ಯಾಂಕ ಠೇವಣಿ ಬಡ್ಡಿ ಆದಾಯವನ್ನು ಲೆಕ್ಕ ಮಾಡಲಾಗಿದೆ ಲಾಭಾಂಶದ ಆದಾಯವನ್ನು ಸಂಚಿತದ ಮೇಲೆ ಲೆಕ್ಕೀಕರಿಸಿದೆ ನೌಕರರ ಕ್ಷೇಮಾಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದ ಆದಾಯ ಶುಲ್ಕ ವಸೂಲಾತಿಗಳನ್ನು ಸ್ವೀಕಾರದ ಆಧಾರದ ಮೇಲೆ ಲೆಕ್ಕೀಕರಿಸಿದೆ.
2.11	**ಸರ್ಕಾರದ ಅನುದಾನ ಸಹಾಯಧನಗಳು ಮತ್ತು ರಪ್ತು ಪ್ರೋತ್ಸಾಹಕಗಳು** ಸರಕಾರದ ಅನುದಾನಗಳು ಹಾಗೂ ಸಹಾಯಧನಗಳನ್ನು ಅವುಗಳಿಗೆ ಅಂಟಿಕೊಂಡಿರುವ ನಿಯಮಗಳನ್ನು ಕಂಪನಿಯ ಅನುಸರಣೆ ಮಾಡುವ ಮತ್ತು ಅನುದಾನಗಳು/ ಸಹಾಯಧನಗಳು ಬಿಡುಗಡೆಗೊಳ್ಳುವ ಸಮಂಜಸ ಭರವಸೆಯನ್ನಾಧಿರಿಸಿ ಮಾನ್ಯ ಮಾಡಲಾಗುತ್ತದೆ. ಕಂಪನಿಯು ಬಂಡವಾಳ ಆಸ್ತಿಗಳನ್ನು ಖರೀದಿ, ರಚನೆ ಅಥವಾ ಸ್ವಾಧೀನಪಡಿಸಿಕೊಳ್ಳಲೇಬೇಕು ಎನ್ನುವ ಪ್ರಾಥಮಿಕ ನಿಯಮಗಳನ್ನು ಒಳಗೊಂಡಿರುವ ಸರಕಾರಿ ಅನುದಾನಗಳನ್ನು ಆಸ್ತಿಗಳ ಒಯ್ಯುವ ಮೌಲ್ಯದಲ್ಲಿ ಕಡಿತಗೊಳಿಸಿ ಪ್ರಸ್ತುತಪಡಿಸಲಾಗುವುದು. ಅನುದಾನವನ್ನು ಸವಕಳಿಯುತ ಆಸ್ತಿಯ ಜೀವಿತಾವಧಿಯಲ್ಲಿನ ಸವಕಳಿಯನ್ನು ಕಳೆಯುವದರೊಂದಿಗೆ ಆದಾಯವೆಂದು ಗುರುತಿಸಲಾಗುವುದು. ಸರಕಾರಿ ಅನುದಾನಗಳನ್ನು ಹಿಂದಿನ ಲೆಕ್ಕಪತ್ರ ಅವಧಿಯಲ್ಲಿ ಉದ್ಯಮವು ಖರ್ಚು ಮಾಡಿದ ಅಥವಾ ಅನುಭವಿಸಿದ ನಷ್ಟದ ಪರಿಹಾರವೆಂದು ಸ್ವೀಕರಿಸಬಹುದಾಗಿದೆ. ಇಂತಹ ಅನುದಾನಗಳನ್ನು ವಿಶೇಷ ಸಂಗತಿ ಎಂದು ಆ ಅವಧಿಯ ಆದಾಯ ಹೇಳಿಕೆಗಳಲ್ಲಿ ಘೋಷಿಸಬಹುದು (ಅಕೌಂಟಿಂಗ್ ಸ್ಟ್ಯಾಂಡರ್ಡ (ಎಎಸ್–5) ಹಿಂದಿನ ಅವಧಿಯಲ್ಲಿನ ನಿವ್ವಳ ಲಾಭ ಅಥವಾ ಹಾನಿಗಳ ಅಂಶಗಳು ಹಾಗೂ ಲೆಕ್ಕ ಪರಿಶೋಧಕ ನೀತಿಗಳಲ್ಲಿನ ಬದಲಾವಣೆಗಳು). ಸಾಮಾನ್ಯವಾಗಿ ಮರುಪಾವತಿಯ ನಿರೀಕ್ಷೆ ಇರದ ಸಹಾಯಧನ ಹೂಡಿಕೆಗಳಂತಹ ಪ್ರೂಮೋಟರ್ಸ್ ಕೊಡುಗೆಗಳ ಸ್ವರೂಪದಲ್ಲಿರುವ ಸರಕಾರಿ ಅನುದಾನಗಳನ್ನು ಬಂಡವಾಳ ಮೀಸಲು ಎಂದು ಪರಿಗಣಿಸಲಾಗುತ್ತದೆ. ರಿಯಾಯತಿ ದರದಲ್ಲಿ ನೀಡಲಾದ ವಿತ್ತೀಯವಲ್ಲದ ಆಸ್ತಿಗಳ ಸ್ವರೂಪದಲ್ಲಿರುವ ಸರಕಾರಿ ಅನುದಾನಗಳನ್ನು ತಮ್ಮ ಸ್ವಾಧೀನ ವೆಚ್ಚದ ಆಧಾರದ ಮೇರೆಗೆ ದಾಖಲಿಸಲಾಗುವುದು. ಒಂದು ವೇಳೆ ವಿತ್ತೀಯವಲ್ಲದ ಆಸ್ತಿಗಳನ್ನು ಉಚಿತವಾಗಿ ನೀಡಿದ್ದಲ್ಲಿ ಅನುದಾನವನ್ನು ನಾಮ ಮಾತ್ರ ಮೌಲ್ಯದಲ್ಲಿ ದಾಖಲಿಸಲಾಗುತ್ತದೆ. ಇತರ ಸರಕಾರಿ ಅನುದಾನ ಹಾಗೂ ಸಹಾಯಧನಗಳನ್ನು ಕಾಲಾಂತರದಲ್ಲಿ ಆಗುವ ಅವುಗಳ ಉದ್ದೇಶಿತ ಖರ್ಚುಗಳಿಗೆ ಸರಿದೂಗಿಸವಂತೆ ವ್ಯವಸ್ಥಿತವಾಗಿ ಆದಾಯವೆಂದು ಗುರುತಿಸಲಾಗುತ್ತದೆ.

ಟಿಪ್ಪಣಿ	ವಿವರಗಳು
2.12	**ಹೂಡಿಕೆಗಳು** ಹೂಡಿಕೆಗಳನ್ನು ಪ್ರಸ್ತುತ ಹೂಡಿಕೆಗಳು ಮತ್ತು ಪ್ರಸ್ತುತವಲ್ಲದ ಹೂಡಿಕೆಯೆಂದು ವಿಂಗಡಿಸಲಾಗಿದೆ. ಪ್ರಸ್ತುತ ಹೂಡಿಕೆಗಳನ್ನು ಕಡಿಮೆ ವೆಚ್ಚದಲ್ಲಿ ನಡೆಸಲಾಗುತ್ತದೆ. ಉಲ್ಲೇಖಿತ ಇಡ್ವಟಿ ಷೇರುಗಳ ಮೇಲಿನ ಪ್ರಸ್ತುತವಲ್ಲದ ಹೂಡಿಕೆಗಳು ಅಂತಹ ಹೂಡಿಕೆಗಳ ಮೌಲ್ಯದಲ್ಲಿ ತಾತ್ಕಾಲಿಕವಾಗಿ ಹೊರತುಪಡಿಸಿ ಕಡಿಮೆ ವೆಚ್ಚದ ವೆಚ್ಚದಲ್ಲಿ ಪ್ರತ್ಯೇಕವಾಗಿ ನಡೆಸಲ್ಪಡುತ್ತದೆ. ಹೂಡಿಕೆಯ ವೆಚ್ಚವು ಬ್ರೋಕರೇಜ್, ಶುಲ್ಕಗಳು ಮತ್ತು ಸುಂಕಗಳಂತಹ ಸ್ವಾಧೀನದ ಶುಲ್ಕಗಳನ್ನು ಒಳಗೊಂಡಿರುತ್ತದೆ. ದೀರ್ಘಕಾಲೀನ ಹೂಡಿಕೆಗಳು (ಹೂಡಿಕೆ ಸ್ವತ್ತುಗಳನ್ನು ಹೊರತುಪಡಿಸಿ) ಅಂತಹ ಹೂಡಿಕೆಗಳ ಮೌಲ್ಯದಲ್ಲಿ, ತಾತ್ಕಾಲಿಕವಾಗಿ ಹೊರತುಪಡಿಸಿ ಕಡಿಮೆ ವೆಚ್ಚದಲ್ಲಿ ಪ್ರತ್ಯೇಕವಾಗಿ ನಡೆಸಲಾಗುತ್ತದೆ. ಪ್ರಸ್ತುತ ಹೂಡಿಕೆಗಳನ್ನು ಕಡಿಮೆ ವೆಚ್ಚ ಮತ್ತು ನ್ಯಾಯೋಚಿತ ಮೌಲ್ಯದಲ್ಲಿ ಪ್ರತ್ಯೇಕವಾಗಿ ನಡೆಸಲಾಗುತ್ತದೆ. ಹೂಡಿಕೆಯ ವೆಚ್ಚವು ಬ್ರೋಕರೇಜ್, ಶುಲ್ಕಗಳು ಮತ್ತು ಸುಂಕಗಳಂತಹ ಸ್ವಾಧೀನದ ಶುಲ್ಕಗಳನ್ನು ಒಳಗೊಂಡಿರುತ್ತದೆ. ಹೂಡಿಕೆಯ ಸ್ವತ್ತುಗಳನ್ನು ಕಡಿಮೆ ಸಂಗ್ರಹಿಸಿದ ಸವಕಳಿ ಮತ್ತು ದುರ್ಬಲತೆಯ ವೆಚ್ಚದಲ್ಲಿ, ಯಾವುದೇ ಇದ್ದಲ್ಲಿ ಪ್ರತ್ಯೇಕವಾಗಿ ನಡೆಸಲಾಗುತ್ತದೆ. ಸ್ಪಷ್ಟವಾದ ಸ್ಥಿರ ಸ್ವತ್ತುಗಳಿಗಾಗಿ ಹೇಳಿರುವ ನೀತಿಗೆ ಅನುಗುಣವಾಗಿ ಹೂಡಿಕೆಯ ಸ್ವತ್ತುಗಳನ್ನು ಬಂಡವಾಳೀಕರಿಸಲಾಗುತ್ತದೆ ಮತ್ತು ಸವಕಳಿ ವಿಧಿಸಲಾಗುತ್ತದೆ (ಅನ್ವಯವಾಗುವಲ್ಲಿ). ಆಸ್ಥಿಗಳ ದುರ್ಬಲತೆಗಾಗಿ ಹೇಳಲಾದ ನೀತಿಗೆ ಅನುಗುಣವಾಗಿ ಹೂಡಿಕೆಯ ಸ್ವತ್ತುಗಳ ದುರ್ಬಲತೆಯನ್ನು ನಿರ್ಧರಿಸಲಾಗುತ್ತದೆ.
2.13	**ಎ. ನೌಕರರ ಸೌಲಭ್ಯಗಳು** ಅಲ್ಪಾವದಿ ನೌಕರರ ಲಾಭವನ್ನು ನೌಕರನ ಸೇವೆಯಿಂದ ಬರುವ ವರಮಾನ, ಸಾಮಾಜಿಕ ಭದ್ರತಾ ಕೊಡುಗೆ,ವರ್ಷದ ಹನ್ನೆರಡು ತಿಂಗಳುಗಳಲ್ಲಿ ಬರಬಹುದಾದಂತಹ (ವಾರ್ಷಿಕ ಪೂರ್ಣ ವೇತನ ರಜೆ ಯಂತಹ) ಸಾಂದರ್ಭಿಕ ರಜಾ ಪರಿಹರ ಹನ್ನೆರಡು ತಿಂಗಳುಗಳಲ್ಲಿ ಹಾಗೂ ಸೇವೆಯ ಕೊನೆಯ ಹಂತದಲ್ಲಿ ದೊರೆಯುವ ಇನಾಮು (ಬೋನಸ್) ಗಳಿಂದ ಹಾಗೂ ವಿತ್ತೀಯವಲ್ಲದ ಮೂಲಗಳಿಂದ ಕಡ್ಡಾಯವಾಗಿ ಕಡಿತಗೊಳಿಸಿ ಕೂಲಂಕುಶವಾಗಿ ಅಂದಾಜಿಸಲಾಗುತ್ತದೆ. **ಬಿ. ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಯೋಜನೆ** ದಿನಾಂಕ 01.04.2006 ರಂದು ಅಥವಾ ತದನಂತರ ಕೆಲಸಕ್ಕೆ ಸೇರಿದ/ಸೇರ್ಪಡುವ ನೌಕರರು/ಅಧಿಕಾರಿಗಳು ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ (ಎನ್.ಡಿ.ಸಿ.ಪಿ.ಎಸ್) ಯೋಜನೆಯಡಿಯಲ್ಲಿ ಬರುತ್ತಾರೆ. ಈ ಯೋಜನೆಯ ಪ್ರಕಾರ ನೌಕರರು/ಅಧಿಕಾರಿಗಳು ಮೂಲವೇತನ ಹಾಗೂ ತುಟ್ಟಿಭತ್ಯೆಯ ಶೇ 10 ರಷ್ಟು ವಂತಿಗೆಯನ್ನು ನೀಡಬೇಕಾಗುತ್ತದೆ. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಆಈ 37 ಪಿಈನ್ 2019 ದಿನಾಂಕ 31.08.2019 ರಲ್ಲಿ 01.04.2019 ರಿಂದ ಅನ್ವಯಿಸುವಂತೆ ಕಂಪನಿಯು 14% ಪ್ರಮಾಣದ ವಂತಿಗೆಯನ್ನು ಭರಿಸಬೇಕಾಗುತ್ತದೆ. ಕೇಂದ್ರಿಯ ದಾಖಲೆ ನಿರ್ವಾಹಣ ಏಜೆನ್ಸಿ ಹಾಗೂ ಪಿಂಚಣಿ ನಿಧಿ ವ್ಯವಸ್ಥಾಪಕರುಗಳ ನೇಮಕಾತಿಯು ಬಾಕಿ ಇರುವ ಪ್ರಯುಕ್ತ ಸದ್ಯಕ್ಕೆ ಸದರಿ ವಂತಿಗೆಯನ್ನು ಕ.ವಿ.ಪ್ರ.ನಿ.ನಿ/ವಿದ್ಯುತ್ ಸರಬರಾಜು ವಿತರಣಾ ಕಂಪನಿಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟಗೆ ಸಂದಾಯ ಮಾಡಲಾಗುತ್ತದೆ. ವಂತಿಗೆ ಹಾಗೂ ವಂತಿಗೆಯಿಂದ ಉದ್ಭವವಾಗುವ ಪ್ರತಿಫಲಗಳನ್ನು ಹಿಂಪಡೆಯದ ಪಿಂಚಣಿ ಟಾಯರ್–1 ಖಾತೆಯಲ್ಲಿ ಜಮೆ ಮಾಡಬೇಕು. ಪಿಂಚಣಿ ಪದ್ದತಿಯ ಟಾಯರ್–1 ರ ಸಾಮಾನ್ಯ ಬಿಟ್ಟುಕೊಡುವ ವಯಸ್ಸು ನಿವೃತ್ತಿಯ ವಯಸ್ಸು ಆಗಿರುತ್ತದೆ. ಬಿಟ್ಟು ಕೊಡುವ ಸಂದರ್ಭದಲ್ಲಿ ನೌಕರನು ವರ್ಷಾಸನವನ್ನು ಖರೀದಿಸಲು ಪಿಂಚಣಿ ಸಂಪತ್ತಿನ ಶೇ 40 ರಷ್ಟನ್ನು ಕಡ್ಡಾಯವಾಗಿ ಹೂಡಿಕೆ ಮಾಡುವುದು ಅವಶ್ಯಕವಾಗಿರುತ್ತದೆ. ನೌಕರರಿಗೆ ಸಂಬಂಧಿಸಿದಂತೆ

ಟಿಪ್ಪಣಿ	ವಿವರಗಳು
	ವರ್ಷಾಸನವು ನೌಕರನ ಹಾಗೂ ಆತನ ಅವಲಂಬಿತ ತಂದೆ ತಾಯಿಗಳು ಹಾಗೂ ಆತನ/ಅವಳ/ಹೆಂಡತಿ/ಗಂಡ ಇವರಿಗೆ ಜೀವನ ಪೂರ್ತಿ ನಿವೃತ್ತಿ ಸಮಯದಲ್ಲಿ ಪಿಂಚಣಿಯ ಅವಕಾಶವು ದೊರಕಿಸಿಕೊಡಬೇಕು. ಉಳಿಕೆ ಪಿಂಚಣಿ ಸಂಪತ್ತಿನ ಮೊತ್ತದ ರಾಶಿಯನ್ನು ನೌಕರನು ಸ್ವೀಕರಿಸಿ ಅದನ್ನು ಯಾವುದೇ ರೀತಿಯಲ್ಲಿ ಉಪಯೋಗಿಸಲು ಮುಕ್ತನಾಗಿರುತ್ತಾನೆ. ವಯೋ ನಿವೃತ್ತಿ ವಯಸ್ಸಿನ ಮುಂಚೆಯೇ ಈ ಯೋಜನೆಯಿಂದ ಹೊರ ಬರುವ ನೌಕರರಿಗೆ ಸಂಬಂಧಿಸಿದಂತೆ ಕಡ್ಡಾಯ ಮಾಶಾಸನವು ಪಿಂಚಣಿ ಸಂಪತ್ತಿನ ಶೇ 80 ರಷ್ಟು ಇರಲೇಬೇಕು. **ಸಿ. ವ್ಯಾಖ್ಯಾನಿಸದ ಸೌಲಭ್ಯ ಯೋಜನೆ** ಕ.ವಿ.ಪ್ರ.ನಿ.ನಿ/ಎಸ್ಕಾಂಗಳ ಪಿಂಚಣಿ ಟ್ರಸ್ಟಗೆ ಆ್ಯಕ್ಚುರಿಯಲ್ ವ್ಯಾಲ್ಯುವೇಶನ್ ಆಧಾರದ ಮೇಲೆ ಪಿಂಚಣಿ ಹಾಗೂ ಉಪದಾನದ ವಂತಿಕೆಯನ್ನು ಸಲ್ಲಿಸಲಾಗುತ್ತಿದೆ. ಅಧಿಸೂಚನೆ ಸಂಖ್ಯೆ ಡಿಇ14 ಪಿ.ಎಸ್.ಆರ್. 2002/31.05.2002 ರ ಪ್ರಕಾರ ಸಂಬಂಧಪಟ್ಟ ನೌಕರದಾರರು ಕಾಲಕಾಲಕ್ಕೆ ನಿವೃತ್ತಿ ಹೊಂದಿದಾಗ ಅವರುಗಳಿಗೆ ಸಂಬಂಧಿಸಿದ ಪಿಂಚಣಿ ಮತ್ತು ಉಪದಾನದ ಪಾವತಿಯ ಜವಾಬ್ದಾರಿಯನ್ನು ಟ್ರಸ್ಟ್ ವಹಿಸಿಕೊಂಡಿದೆ. **(i) ಅಲ್ಪಾವಧಿ ನೌಕರರ ಸೌಲಭ್ಯಗಳು** ಅಲ್ಪಾವಧಿ ನೌಕರರು ಪ್ರಸಕ್ತ ವರ್ಷದಲ್ಲಿ ಸೇವೆ ಸಲ್ಲಿಸಿದ್ದನ್ನು ಗುರುತಿಸಲ್ಪಟ್ಟು, ನೌಕರರು ನೀಡಲ್ಪಟ್ಟ ಸೇವೆಗಳಿಗೆ ಪ್ರತಿಯಾಗಿ ರಿಯಾಯತಿಯಿಲ್ಲದ ಹಣದ ಸೌಲಭ್ಯವನ್ನು ನೀರಿಕ್ಷಿಸಲಾಗಿದೆ. ಈ ಪ್ರಯೋಜನಗಳು ನೌಕರರು ಸಂಬಂಧಿತ ಸೇವೆ ಸಲ್ಲಿಸಿದ ನಂತರ ಹನ್ನೆರಡು ತಿಂಗಳೊಳಗಾಗಿ ಸಂಬವಿಸಬಹುದಾದ ಕಾರ್ಯನಿರ್ವಹಣೆ ಪ್ರೋತ್ಸಾಹ ಹಾಗೂ ಪರಿಹಾರದ ಅನುಪಸ್ಥಿತಿಯನ್ನು ಒಳಗೊಂಡಿರುತ್ತದೆ. ಈ ತರಹದ ಪರಿಹಾರ ಅನುಪಸ್ಥಿತಿಯನ್ನು ಈ ಕೆಳಗಿನಂತೆ ಲೆಕ್ಕೀಕರಿಸಲಾಗಿದೆ. ಅ) ಸಂಗ್ರಹಸಿದ ಪರಿಹಾರ ಅನುಪಸ್ಥಿತಿಯ ಸಂದರ್ಭದಲ್ಲಿ ನೌಕರರು ತಮ್ಮ ಅರ್ಹತೆಯನ್ನು ಭವಿಷ್ಯದ ಪರಿಹಾರದ ಅನುಪಸ್ಥಿತಿಯ ಸಲುವಾಗಿ ಹೆಚ್ಚಿಗೆ ಮಾಡಿದಾಗ. ಬ) ಸಂಗ್ರಹವಾಗದ ಪರಿಹಾರ ಅನುಪಸ್ಥತಿಯ ಸಂದರ್ಭದಲ್ಲಿ ಪರಿಹಾರ ಅನುಪಸ್ಥತಿ ಸಂಭವಿಸಿದಾಗ **(ii) ದೀರ್ಘಾವಧಿ ನೌಕರರ ಸೌಲಭ್ಯಗಳು;** ಆಯುವ್ಯಯ ಪಟ್ಟಿ ತಯಾರಿಸುವ ಸಂದರ್ಭದಲ್ಲಿ ನೌಕರನು ಸಂಭಂಧಿತ ಸೇವೆಯ ಕೊನೆಯ ಅವಧಿಯ ನಂತರ ಹನ್ನೆರಡು ತಿಂಗಳೊಳಗಾಗಿ ನೀರಿಕ್ಷಿಸಲಾದ ಪರಿಹಾರ ಅನುಪಸ್ಥತಿ ಸಂಭವವನ್ನು ಪ್ರಸ್ತುತ ಮೌಲ್ಯದಲ್ಲಿ ಬಗೆಹರಿಸಬಹುದಾದ ನ್ಯಾಯೋಜಿತ ಮೌಲ್ಯ ಕಡಿಮೆ ಮಾಡಿದ ನಂತರ ಹೊಣೆಗಾರಿಕೆಯನ್ನು ಗುರುತಿಸಲಾಗಿದೆ. ಸುಧೀರ್ಘ ಸೇವೆಯ ಪ್ರಶಸ್ತಿಗಳನ್ನು ಆಯವ್ಯಯ ದಿನಾಂಕದಂತೆ ನಿರ್ದಿಷ್ಟ ಪ್ರಯೋಜನ ಬಾದ್ಯತೆಯ ಪ್ರಸ್ತುತ ಮೌಲ್ಯಕ್ಕೆ ಹೊಣೆಗಾರಿಕೆಯೆಂದು ಮಾನ್ಯಮಾಡಲಾಗುತ್ತದೆ.
2.14	**ಪ್ರತ್ಯೇಕ ಭಾಗಗಳ ಬಗ್ಗೆ ವರದಿ ಸಲ್ಲಿಕೆ** ಕಂಪನಿಯು ವಿದ್ಯುತ್ ವಿತರಣೆ ಕಾರ್ಯ ಮಾತ್ರ ನಿರ್ವಹಿಸುತ್ತಿದ್ದು ವ್ಯವಹಾರದಲ್ಲಿ ಇತರೆ ಯಾವುದೇ ಪ್ರತ್ಯೇಕ ಭಾಗಗಳು ಇರುವುದಿಲ್ಲ ಆದ್ದರಿಂದ ಪ್ರತ್ಯೇಕ ಭಾಗಗಳ ಬಗ್ಗೆ ವರದಿ ಸಲ್ಲಿಕೆಯ ನಿಯಮಗಳು ಕಂಪನಿಗೆ ಅನ್ವಯಿಸುವದಿಲ್ಲ.
2.15	**ಪ್ರತಿ ಷೇರಿನ ಗಳಿಕೆ** ಪ್ರತಿ ಷೇರಿನ ಮೂಲ ಗಳಿಕೆಯನ್ನು ತೆರಿಗೆ ನಂತರದ ಲಾಭ/(ನಷ್ಟ) (ಅಸಾಮಾನ್ಯ ಅಂಶಗಳ ತೆರಿಗೆ ನಂತರದ ಪರಿಣಾಮವೇನಾದರು ಇದ್ದರೆ ಅದನ್ನು ಸೇರಿಸಿಕೊಂಡು) ವರ್ಷದ ಅವಧಿಯಲ್ಲಿ ಬಾಕಿ ಇರುವ ಇಕ್ವಿಟಿ ಷೇರುಗಳ ವೇಟೆಡ್ ಸರಾಸರಿ ಸಂಖ್ಯೆಯಿಂದ ಭಾಗಿಸಿ ಲೆಕ್ಕಾಚಾರ ಮಾಡಲಾಗುತ್ತದೆ. ಪ್ರತಿ ಷೇರಿನ

ಟಿಪ್ಪಣಿ	ವಿವರಗಳು
	ಡೈಲ್ಯೂಟೆಡ್ ಗಳಿಕೆಯನ್ನು ಡಿವಿಡೆಂಡ್ ಬಡ್ಡಿ ಹಾಗೂ ಡೈಲ್ಯೂಟಿವ್ ಸಂಭಾವ್ಯ ಇಕ್ವೀಟಿ ಷೇರುಗಳಿಗೆ ಸಂಬಂಧಿಸಿದ ಇತರೆ ಖರ್ಚುಗಳು ಅಥವಾ ಆದಾಯಗಳನ್ನು ಹೊಂದಾಯಿಸಿದ ತೆರಿಗೆ ನಂತರದ ಲಾಭ/(ನಷ್ಟ) (ಅಸಾಮಾನ್ಯ ಅಂಶಗಳ ತೆರಿಗೆ ನಂತರದ ಪರಿಣಾಮವೇನಾದರು ಇದ್ದರೆ ಅದನ್ನು ಸೇರಿಸಿಕೊಂಡು) ಪ್ರತಿ ಷೇರಿನ ಮೂಲ ಗಳಿಕೆಯನ್ನು ಪಡೆಯಲು ಪರಿಗಣಿಸಿರುವ ಇಕ್ವೀಟಿ ಷೇರುಗಳ ವೇಟೆಡ್ ಸರಾಸರಿ ಸಂಖ್ಯೆಗಳಿಂದ ಹಾಗೂ ಡೈಲ್ಯೂಟಿವ್ ಸಾಂಭಾವ್ಯ ಇಕ್ವೀಟಿ ಷೇರುಗಳನ್ನು ಪರಿವರ್ತನೆಗೊಳಿಸಲು ಜಾರಿ ಮಾಡುವ ಇಕ್ವೀಟಿ ಷೇರುಗಳ ವೇಟೆಡ್ ಸರಾಸರಿ ಸಂಖ್ಯೆಗಳಿಂದ ಭಾಗಿಸಿ ಲೆಕ್ಕಾಚಾರ ಮಾಡಲಾಗುತ್ತದೆ. ಸಂಭಾವ್ಯ ಇಕ್ವೀಟಿ ಷೇರುಗಳು ಇಕ್ವೀಟಿ ಷೇರಿಗೆ ಪರಿವರ್ತನೆ ಮಾಡಿದಾಗ ಮುಂದುವರೆದ ಸಾಮಾನ್ಯ ಕಾರ್ಯಾಚರಣೆಗಳಿಂದ ಉಂಟಾಗುವ ಪ್ರತಿ ಷೇರಿನ ನಿವ್ವಳ ಲಾಭದಲ್ಲಿ ಕಡಿಮೆಯಾಗುವುದಾದರೆ ಮಾತ್ರ ಅವುಗಳನ್ನು ಡೈಲ್ಯೂಟಿವ್ ಎಂದು ಪರಿಗಣಿಸಲಾಗುತ್ತದೆ. ಡೈಲ್ಯೂಟಿವ್ ಇಕ್ವೀಟಿ ಷೇರುಗಳನ್ನು ಮುಂದಿನ ದಿನಗಳಲ್ಲಿ ಜಾರಿಮಾಡಿದ್ದನ್ನು ಹೊರತುಪಡಿಸಿ ವರ್ಷದ ಪ್ರಾರಂಭದಲ್ಲಿ ಇರುವಂತೆ ಪರಿವರ್ತಿಸಲಾಗಿದೆ ಎಂದು ಭಾವಿಸಲಾಗುತ್ತದೆ. ಡೈಲ್ಯೂಟಿವ್ ಸಂಭಾವ್ಯ ಇಕ್ವೀಟಿ ಷೇರುಗಳನ್ನು ವಾಸ್ತವವಾಗಿ ನ್ಯಾಯೋಚಿತ ಮೌಲ್ಯದಲ್ಲಿ (ಅಂದರೆ ಬಾಕಿ ಷೇರುಗಳ ಸರಾಸರಿ ಮಾರುಕಟ್ಟೆ ಮೌಲ್ಯ) ಜಾರಿಯಿಂದ ಸ್ವೀಕೃತಿಯಾಗುವ ವರಮಾನಕ್ಕೆ ಹೊಂದಾಣಿಕೆ ಮಾಡಲಾಗುತ್ತದೆ. ಡೈಲ್ಯೂಟಿವ್ ಸಂಭಾವ್ಯ ಇಕ್ವೀಟಿ ಷೇರುಗಳನ್ನು ಪ್ರಸ್ತುತ ಪಡಿಸುವ ಪ್ರತಿಯೊಂದು ಅವಧಿಗೆ ಸ್ವತಂತ್ರವಾಗಿ ನಿರ್ಧರಿಸಲಾಗುತ್ತದೆ. ಇಕ್ವೀಟಿ ಷೇರುಗಳ ಸಂಖ್ಯೆಗಳನ್ನು ಷೇರು ವಿಭಜನೆಗಳು/ವ್ಯತಿರಿಕ್ತ ಷೇರು ವಿಭಜನೆಗಳು ಮತ್ತು ಬೋನಸ್ ಷೇರುಗಳಿಗೆ ಸೂಕ್ತವಾಗಿ ಸರಿ ಹೊಂದಿಸಲಾಗುತ್ತದೆ. ಪ್ರತಿ ಷೇರಿನ ಮೂಲ ಗಳಿಕೆಯನ್ನು ತೆರಿಗೆ ನಂತರದ ಲಾಭ/(ನಷ್ಟ) (ಅಸಾಮಾನ್ಯ ಅಂಶಗಳ ತೆರಿಗೆ ನಂತರದ ಪರಿಣಾಮವೇನಾದರು ಇದ್ದರೆ ಅದನ್ನು ಸೇರಿಸಿಕೊಂಡು) ವರ್ಷದ ಅವಧಿಯಲ್ಲಿ ಬಾಕಿ ಇರುವ ಇಕ್ವೀಟಿ ಷೇರುಗಳ ವೇಟೆಡ್ ಸರಾಸರಿ ಸಂಖ್ಯೆಯಿಂದ ಭಾಗಿಸಿ ಲೆಕ್ಕಾಚಾರ ಮಾಡಲಾಗುತ್ತದೆ.
2.16	**ಆದಾಯದ ಮೇಲಿನ ತೆರಿಗೆ.** ಆದಾಯ ತೆರಿಗೆ ಕಾಯ್ದೆ 1961 ರ ನಿಬಂಧನೆಗಳ ಸ್ವಿಕಾರಾರ್ಹ ಅನುಕೂಲಗಳ ಅಸಮ್ಮತಿಸಿರುವ ವೆಚ್ಚಗಳನ್ನು ಪರಿಗಣನೆಗೆ ತೆಗೆದುಕೊಂಡ ನಂತರ ತೆರಿಗೆ ವಿಧಿಸಬಲ್ಲ ವಾರ್ಷಿಕ ಆದಾಯದ ಮೇಲೆ ಪಾವತಿಸುವ ತೆರಿಗೆಯ ಮೊತ್ತವೇ ಪ್ರಸ್ತುತ ತೆರಿಗೆ. ಭವಿಷ್ಯದಲ್ಲಿನ ಆದಾಯ ತೆರಿಗೆ ಹೊಣೆಗಾರಿಕೆಯ ಹೊಂದಾಣಿಕೆ ರೂಪದಲ್ಲಿ ಸಿಗುವ ಭವಿಷತ್ ಆರ್ಥಿಕ ಲಾಭ ಗಳಿಕೆಗಾಗಿ ತೆರಿಗೆ ಕಾಯ್ದೆಯ ಅನ್ವಯ ಪಾವತಿಸುವ ಕನಿಷ್ಠ ಪರ್ಯಾಯ ತೆರಿಗೆಯನ್ನು ಕಂಪನಿಯು ಮುಂದಿನ ದಿನಗಳಲ್ಲಿ ಸಾಮಾನ್ಯ ಆದಾಯ ತೆರಿಗೆಯನ್ನು ಪಾವತಿಸುವಂತಹ ಮನವರಿಕೆ ಪುರಾವೆಗಳು ಕಂಡು ಬಂದಲ್ಲಿ ಇದನ್ನು ಆಸ್ತಿಯಾಗಿ ಪರಿಗಣಿಸಲಾಗುತ್ತದೆ, ಅಂತೆಯೇ ಮ್ಯಾಟ್‌ನ್ನು ಅದಕ್ಕೆ ಸಂಬಂಧಿತ ಭವಿಷ್ಯತ ಆರ್ಥಿಕ ಲಾಭಗಳು ಕಂಪನಿಗೆ ದೊರಕುವ ಸಂಭವನಿಯತೆಯನ್ನು ಆಧರಿಸಿ ಅಡಾವೆ ಪತ್ರದಲ್ಲಿ ಒಂದು ಆಸ್ತಿಯಾಗಿ ಪರಿಗಣಿಸಲಾಗುತ್ತದೆ, ಮುಂದೂಡಲ್ಪಟ್ಟ ತೆರಿಗೆಯನ್ನು ತೆರಿಗೆ ವಿಧಿಸಬಲ್ಲ ಆದಾಯ ಮತ್ತು ಒಂದು ಅವಧಿಯಲ್ಲಿ ಹುಟ್ಟಿಕೊಂಡು ಮುಂದಿನ ಒಂದು ಅಥವಾ ಹೆಚ್ಚು ತರವಾಯ ಅವಧಿಯಲ್ಲಿ ಪರಾವರ್ತನೆಗೊಳ್ಳುವ ಲೆಕ್ಕೀಕರಿಸಿದ ಆದಾಯಗಳ ನಡುವಿನ ವ್ಯತ್ಯಾಸಗಳನ್ನು ಸಮಯಾಧಾರಿತ ವ್ಯತ್ಯಾಸಗಳ ಮೇರೆಗೆ ಪರಿಗಣಿಸಲಾಗುತ್ತದೆ. ಮುಂದೂಡಲ್ಪಟ್ಟ ತೆರಿಗೆಯನ್ನು ತೆರಿಗೆ ದರಗಳು ಹಾಗೂ ವರದಿಯ ದಿನಾಂಕದಂದು ಜಾರಿಯಲ್ಲಿರುವ ಅಥವಾ ಗಮನಾರ್ಹವಾಗಿ ಜಾರಿಗೊಳಿಸಿದ ತೆರಿಗೆ ಕಾಯ್ದೆಗಳನ್ನು ಬಳಸಿಕೊಂಡು ಅಳೆಯಲಾಗುತ್ತದೆ.
	ಮುಂದೂಡಲ್ಪಟ್ಟ ತೆರಿಗೆ ಆಸ್ತಿಗಳನ್ನು ಭವಿಷ್ಯದಲ್ಲಿ ಸಾಕಷ್ಟು ಪ್ರಮಾಣದ ತೆರಿಗೆ ವಿಧಿಸಬಲ್ಲ ಆದಾಯ ದೊರಕುವ ನಿಶ್ಚಿತತೆಯನ್ನು ಹೊಂದಿರುವ ಮಟ್ಟಿಗೆ ಮಾತ್ರ ಅಂತಹ ಇತರೆ ಅಂಶಗಳನ್ನು ಸಮಾಯಾಧಾರಿತ ವ್ಯತ್ಯಾಸಗಳಿಗೆ ಮಾತ್ರ ಗುರುತಿಸಲ್ಪಡುತ್ತದೆ.

ಟಿಪ್ಪಣಿ	ವಿವರಗಳು
	ಒಂದೇ ರೀತಿಯ ಆಡಳಿತ ತೆರಿಗೆ ಕಾಯ್ದೆಗಳ ಅಡಿಯಲ್ಲಿ ವಿಧಿಸುವ ಆದಾಯ ಮೇಲಿನ ತೆರಿಗೆಗೆ ಹಾಗೂ ಕಂಪನಿಯು ಕಾನೂನು ಬದ್ಧವಾಗಿ ಜಾರಿಗೆಗೊಳಿಸಬಹುದಾದ ಸರಿದೂಗಿಸುವ ಹಕ್ಕನ್ನು ಹೊಂದಿರುವ ಅಂಶಗಳಿಗೆ ಸಂಬಂಧಿಸಿದಲ್ಲಿ ಮುಂದೂಡಲ್ಪಟ್ಟ ತೆರಿಗೆ ಆಸ್ತಿಗಳನ್ನು ಅವುಗಳ ಕೈಗೂಡಿಕತ್ವವನ್ನು ಪ್ರತಿ ಅಢಾವೆ ಪತ್ರದ ದಿನಾಂಕದಂದು ಪರಿಶೀಲಿಸಲಾಗುವುದು.
2.17	**ಸಂಶೋಧನೆ ಹಾಗೂ ಅಭಿವೃದ್ಧಿ ವೆಚ್ಚಗಳು.** ಸಂಶೋಧನೆಗೆ ಸಂಬಂಧಿಸಿದ ಶುಲ್ಕವನ್ನು ಆದಾಯ ಮತ್ತು ಲಾಭದ ಹೇಳಿಕೆಗಳಲ್ಲಿ ವಿಧಿಸಲಾಗುತ್ತದೆ. ಅಭಿವೃದ್ಧಿ ಶುಲ್ಕಗಳನ್ನೂ ಸಹ ಉತ್ಪಾದಿಸಲಾದ ವಸ್ತುವಿನ ಉತ್ಪಾದನೆಯಲ್ಲಿ ಬಳಸಲಾದ ತಾಂತ್ರಿಕ ಕಾರ್ಯಸಾಧ್ಯತೆಯನ್ನಾಧರಿಸಿ ಬೆಲೆ ನಿಷ್ಕರ್ಷಿಸಿ ಆದಾಯ ಮತ್ತು ಲಾಭದ ಹೇಳಿಕೆಗಳಲ್ಲಿ ವಿಧಿಸಲಾಗುತ್ತದೆ. ಉದ್ದೇಶಿತ ಕಾರ್ಯಕ್ಕಾಗಿ ಬಳಸಲು ಉತ್ಪಾದಿಸುತ್ತಿರುವ ವಸ್ತುವಿನ ಉತ್ಪಾದನೆಗೆ ತಗಲುವ ವೆಚ್ಚವು ಸಮಂಜಸ ಹಾಗೂ ಸ್ಥಿರವಾಗಿರುತ್ತದೆ. ಸ್ಥಿರಾಸ್ತಿ ಹಾಗೂ ಚರಾಸ್ತಿಗಳ ನೀತಿಯಲ್ಲಿ ಉತ್ಪಾದನೆಗೋಸ್ಕರ ಕೈಗೊಳ್ಳುವ ಸಂಶೋಧನೆಗೆ ಹಾಗೂ ಅಭಿವೃದ್ಧಿಗಾಗಿ ಬಳಸಲಾಗುವ ಸ್ಥಿರಾಸ್ತಿಯ ಸವಕಳಿಯ ಬಗ್ಗೆ ವಿವರಿಸಲಾಗಿದೆ.
2.18	**ಅವಕಾಶಗಳು ಮತ್ತು ಪ್ರಾಸಂಗಿಕ ಹೊಣೆಗಾರಿಕೆಗಳು** ಹಿಂದಿನ ವ್ಯವಹಾರಗಳ ನಿಮಿತ್ತ ಕಂಪನಿಯು ಪ್ರಸಕ್ತ ಹೊಣೆಗಾರಿಕೆಗಳನ್ನು ಹೊಂದಿರುವ ಪ್ರಯುಕ್ತ ಆ ನಿಮಿತ್ಯವಾಗಿ ಅವಕಾಶವನ್ನು ಸಮ್ಮತಿಸಲಾಗಿದ್ದು. ಅಂತಹ ಹೊಣೆಗಾರಿಕೆಗಳನ್ನು ಇತ್ಯರ್ಥಪಡಿಸಲಿಕ್ಕಾಗಿ ಸಂಪನ್ಮೂಲದ ಲಭ್ಯತೆಯು ಅವಶ್ಯವಾಗಿದ್ದು ಆ ಮಟ್ಟಿಗೆ ಒಂದು ಭರವಸಾಪೂರ್ವಕ ಅಂದಾಜನ್ನು ಒದಗಿಸಬಹುದಾಗಿರುತ್ತದೆ. ಎಲ್ಲಿ ಸಂಭವಿಸಬಹುದಾದ ಅಥವಾ ಪ್ರಸ್ತುತ ಋಣದಿಂದ ಹೊರ ಬೀಳುವ ಸಂಪನ್ಮೂಲಗಳ ಸಂಭವನೀಯತೆ ಹತ್ತಿರವಿದ್ದಾಗ ಅಥವಾ ಎಲ್ಲಿ ನಂಬಲರ್ಹವಾಗಿ ಅಂದಾಜು ಮಾಡಲು ಸಾಧ್ಯವಿಲ್ಲದಿದ್ದಾಗ ಅಲ್ಲಿ ಸಂಭವನೀಯ ಹೊಣೆಗಾರಿಕೆಗಳನ್ನು ಬಹಿರಂಗಪಡಿಸಲಾಗುವುದು.
2.19	**ವಸೂಲಾಗದ ಮತ್ತು ಸಂದೇಹಾಸ್ಪದ ಬಾಕಿಗಳ ಅವಕಾಶ** ವಸೂಲಾಗದ ಮತ್ತು ಸಂದೇಹಾಸ್ಪದ ಬಾಕಿಗಳನ್ನು ಪ್ರತ್ಯೇಕವಾಗಿ ಹಾಗೂ ನಿಜವಾಗಿ ಉಳಿದಿರುವ ವೈಯಕ್ತಿಕ ಸಂಗತಿಗಳ ಆಧಾರವಾಗಿ ಪರಿಗಣಿಸಿ ಅವಕಾಶ ಮಾಡಲಾಗಿದೆ.
2.20	**ಷೇರು ಸಂಬಂಧಿತ ವೆಚ್ಚಗಳು** ಕಂಪನಿ ಕಾಯ್ದೆ 2013 ಕಲಂ 52(2) ರನ್ವಯ ಭದ್ರತಾ ವಿಮೆ ಕಂತು ಖಾತೆಯಲ್ಲಿ ಬಾಕಿ ಪ್ರಮಾಣದಲ್ಲಿ ಬಳಕೆಗೆ ಲಭ್ಯವಿರುವ ಷೇರು ಸಂಬಂಧಿತ ವೆಚ್ಚ ಹಾಗೂ ಮರುಕೊಳ್ಳುವಿಕೆ (ಬಿಡುಗಡೆಯಾಗುವ) ವಿಮೆ ಕಂತುಗಳನ್ನು ಭದ್ರತಾ ವಿಮೆ ಕಂತುಗಳಲ್ಲಿ ಸಮೀಕರಿಸಲಾಗಿರುತ್ತದೆ. ಉಳಿದಂತಹ ಷೇರು ಸಂಬಂಧಿತ ವೆಚ್ಚವನ್ನು ವಾರ್ಷಿಕ ಆದಾಯ ಮತ್ತು ಲಾಭದ ಹೇಳಿಕೆಗಳಲ್ಲಿ ವಿಧಿಸಲಾಗುತ್ತದೆ.

ಟಿಪ್ಪಣಿ 3 : ಷೇರು ಬಂಡವಾಳ

ಕ್ರಮ ಸಂಖ್ಯೆ	ವಿವರಗಳು	ಲೆಕ್ಕ ಶೀರ್ಷಿಕೆ	31.03.2021		31.03.2020	
			ಶೇರುಗಳ ಸಂಖ್ಯೆ	ಮೊತ್ತ ರೂ.ಗಳಲ್ಲಿ	ಶೇರುಗಳ ಸಂಖ್ಯೆ	ಮೊತ್ತ ರೂ.ಗಳಲ್ಲಿ
3-1	ಅಧಿಕೃತ ಪ್ರತಿ ಶೇರಿನ ಮೌಲ್ಯ ರೂ. 10/– ರಂತೆ ಸೂಕ್ತ ಮತದಾನದೊಂದಿಗೆ		2,00,00,00,000	20,00,00,00,000	2,00,00,00,000	20,00,00,00,000
3-2	ವಿತರಿಸಲಾದ ಪ್ರತಿ ಶೇರಿನ ಮೌಲ್ಯ ರೂ. 10/– ರಂತೆ ಸೂಕ್ತ ಮತದಾನದೊಂದಿಗೆ	52.301	1,55,42,37,800	15,54,23,78,000	1,55,42,37,800	15,54,23,78,000
3-3	ಚಂದಾದಾರಿಕೆ ಮತ್ತು ಪೂರ್ತಿ ಪಾವತಿಸಲಾದ ಪ್ರತಿ ಶೇರಿನ ಮೌಲ್ಯ ರೂ. 10/– ರಂತೆ ಸೂಕ್ತ ಮತದಾನದೊಂದಿಗೆ		1,55,42,37,800	15,54,23,78,000	1,55,42,37,800	15,54,23,78,000
Total			**1,55,42,37,800**	**15,54,23,78,000**	**1,55,42,37,800**	**15,54,23,78,000**

ಟಿಪ್ಪಣಿಗಳು :

(i) ವರದಿಯ ಆರಂಭ ಮತ್ತು ಕೊನೆಯಲ್ಲಿ ಷೇರುಗಳ ಸಂಖ್ಯೆ ಮತ್ತು ಪ್ರಮಾಣದ ಸಮನ್ವಯ

ಕ್ರಮ ಸಂಖ್ಯೆ	ವಿವರಗಳು	ಪ್ರಾರಂಭದ ಶಿಲ್ಕು	ಹೊಸ ಸಂಚಿಕೆಯಲ್ಲಿ	ಹೆಚ್ಚುವರಿ	ಇ.ಎಸ್. ಓ.ಪಿ	ಅಂತಿಮ ಶಿಲ್ಕು
	ಇಕ್ವೀಟಿ ಶೇರುಗಳು ಸೂಕ್ತ ಮತದಾನದೊಂದಿಗೆ					
	31 ಮಾರ್ಚ 2021 ಕ್ಕೆ ಕೊನೆಗೊಂಡ ವರ್ಷ					
3 -1-1	ಷೇರುಗಳ ಸಂಖ್ಯೆ	1,55,42,37,800	-	-	-	1,55,42,37,800
3 -1-2	ಮೊತ್ತ ರೂ.	15,54,23,78,000	-	-	-	15,54,23,78,000
3 -1-3	31 ಮಾರ್ಚ 2021 ಕ್ಕೆ ಕೊನೆಗೊಂಡ ವರ್ಷ					
3 -1-4	ಷೇರುಗಳ ಸಂಖ್ಯೆ	1,55,42,37,800	-	-	-	1,55,42,37,800
3 -1-5	ಮೊತ್ತ ರೂ.	15,54,23,78,000	-	-	-	15,54,23,78,000

(ii) 5 % ಕ್ಕೂ ಹೆಚ್ಚು ಷೇರುಗಳನ್ನು ಹೊಂದಿರುವ ಪ್ರತಿ ಷೇರುದಾರರ ವಿವರ

ಕ್ರಮ ಸಂಖ್ಯೆ	ಶೇರು ದರ್ಜೆ	ಲೆಕ್ಕ ಶೀರ್ಷಿಕೆ	31.03.2021		31.03.2020	
			ಶೇರುಗಳ ಸಂಖ್ಯೆ	ಆ ವರ್ಗದ ಹಿಡುವಳಿಯ % ಷೇರುಗಳು	ಶೇರುಗಳ ಸಂಖ್ಯೆ	ಆ ವರ್ಗದ ಹಿಡುವಳಿಯ % ಷೇರುಗಳು
3 -2-1	ಇಕ್ವೀಟಿ ಷೇರುಗಳು ಸೂಕ್ತ ಮತದಾನದೊಂದಿಗೆ ಕರ್ನಾಟಕ ಸರ್ಕಾರ		1,55,42,37,800	99.99%	1,55,42,37,800	99.99%

(iii) ಅಧಿಕೃತ ಷೇರು ಬಂಡವಾಳದ ವಿವರಗಳು

ಕ್ರಮ ಸಂಖ್ಯೆ	ವರ್ಷ	ಅಧಿಕೃತ ಷೇರು ಬಂಡವಾಳ	ಉಲ್ಲೇಖ
1	2002-03	1,00,00,000.00	ಕಂಪನಿಯು ಕರ್ನಾಟಕ ಸರ್ಕಾರದ ಆದೇಶಗಳ ಸಂ. DE 8 PSR 2002 ದಿನಾಂಕ 31.05.2002 ಮತ್ತು DE 48 PSR 2003 ದಿನಾಂಕ 31.05.2003 ರ ಅನುಮೋದನೆಯ ಪ್ರಕಾರ ವರ್ಗಾವಣೆ ಯೋಜನೆಯ ಭಾಗವಾಗಿ ರೂ.1 ಕೋಟಿಯ ಷೇರು ಬಂಡವಾಳದೊಂದಿಗೆ ಏಕೀಕೃತಗೊಂಡಿದೆ.
2	2003-04	1,00,00,000.00	
3	2004-05	2,50,00,00,000.00	2ನೇ ವಾರ್ಷಿಕ ಸರ್ವ ಸಾಧಾರಣ ಸಭೆಯನ್ನು ದಿನಾಂಕ 24ನೇ ಡಿಸೆಂಬರ್ 2004 ರಂದು ಮಧ್ಯಾಹ್ನ 1.00 ಗಂಟೆಗೆ ಹುಬ್ಬಳ್ಳಿಯಲ್ಲಿರುವ ಕಂಪನಿಯ ನೊಂದಾಯಿತ ಕಛೇರಿಯಲ್ಲಿ ನಡೆಸಲಾಗಿದೆ.
4	2005-06	2,50,00,00,000.00	
5	2006-07	2,50,00,00,000.00	
6	2007-08	2,50,00,00,000.00	
7	2008-09	2,50,00,00,000.00	
8	2009-10	2,50,00,00,000.00	
9	2010-11	2,50,00,00,000.00	
10	2011-12	10,00,00,00,000.00	9ನೇ ವಾರ್ಷಿಕ ಸರ್ವ ಸಾಧಾರಣ ಸಭೆಯನ್ನು ದಿನಾಂಕ 28ನೇ ಸೆಪ್ಟೆಂಬರ್ 2011 ರಂದು ಮಧ್ಯಾಹ್ನ 1.00 ಗಂಟೆಗೆ ಹುಬ್ಬಳ್ಳಿಯಲ್ಲಿರುವ ಕಂಪನಿಯ ನೊಂದಾಯಿತ ಕಛೇರಿಯಲ್ಲಿ ನಡೆಸಲಾಗಿದೆ.
11	2012-13	10,00,00,00,000.00	
12	2013-14	10,00,00,00,000.00	
13	2014-15	10,00,00,00,000.00	

ಕ್ರಮ ಸಂಖ್ಯೆ	ವರ್ಷ	ಅಧಿಕೃತ ಷೇರು ಬಂಡವಾಳ	ಉಲ್ಲೇಖ
14	2015-16	10,00,00,00,000.00	
15	2016-17	20,00,00,00,000.00	ಕಂಪನಿಯ ಷೇರುದಾರರ ವಿಶೇಷ ಸಾಧಾರಣ ಸಭೆಯನ್ನು ದಿನಾಂಕ 2ನೇ ಫೆಬ್ರುವರಿ 2017 ರಂದು ಮಧ್ಯಾಹ್ನ 12.00 ಗಂಟೆಗೆ ಹುಬ್ಬಳ್ಳಿಯಲ್ಲಿರುವ ನಿಗಮ ಕಛೇರಿಯಲ್ಲಿ ನಡೆಸಲಾಗಿದೆ.
16	2017-18	20,00,00,00,000.00	
17	2018-19	20,00,00,00,000.00	
18	2019-20	20,00,00,00,000.00	
19	2020-21	20,00,00,00,000.00	

ಕರ್ನಾಟಕ ಸರ್ಕಾರದ ಯೋಜನಾವಾರು ಶೇರು ಬಂಡವಾಳ

ಕ್ರಮ ಸಂಖ್ಯೆ	ಯೋಜನೆ	ಮೊತ್ತ ಕೋಟಿಗಳಲ್ಲಿ
1	ಎನ್.ಜೆ.ವಾಯ್	188.81
2	ಇಕ್ವಿಟಿ ಕೊಡುಗೆ ಕರ್ನಾಟಕ ಸರ್ಕಾರಕ್ಕೆ	1,039.26
3	ಎಸ್.ಡಿ.ಪಿ	125.61
4	ಪ್ರವಾಹ ಪೀಡಿತ	25.43
5	ಯು.ಎನ್.ಐ.ಪಿ	44.00
6	ಎಸ್.ಸಿ.ಪಿ/ಟಿ.ಸಿ.ಪಿ	111.47
7	ಕರ್ನಾಟಕ ರಾಜ್ಯದ ಮುನ್ಸಿಪಲ್ ಕಾರ್ಪೊರೇಶನ್ ಪ್ರದೇಶದಲ್ಲಿ ವಿತರಣೆ ಮತ್ತು ಆಟೊಮೇಷನ್ ವ್ಯವಸ್ಥೆಯನ್ನು ಜಾರಿಗೊಳಿಸುವುದು	4.50
8	ಸಾಫ್ಟ್‌ವೇರ್ ಅಭಿವೃದ್ಧಿ	15.00
9	ನೆಟ್ ವರ್ತ್‌ಗೆ ಹೊಂದಾಣಿಕೆ	0.16
	ಒಟ್ಟು	**1,554.24**

ಹಂಚಿಕೆಗೆ ಬಾಕಿ ಇರುವ ಷೇರು ಅರ್ಜಿ ಹಣವೆಂದರೆ ಕರ್ನಾಟಕ ಸರ್ಕಾರದಿಂದ ಪಡೆದಿರುವ ಷೇರು ಬಂಡವಾಳ

ಕ್ರಮ ಸಂಖ್ಯೆ	ಯೋಜನೆ	ಮೊತ್ತ ಕೋಟಿಗಳಲ್ಲಿ
1	ಇಕ್ವಿಟಿ ಕೊಡುಗೆ ಕರ್ನಾಟಕ ಸರ್ಕಾರಕ್ಕೆ	365.49
2	ಎಸ್.ಡಿ.ಪಿ	95.55
3	ಎಸ್.ಸಿ.ಪಿ/ಟಿ.ಸಿ.ಪಿ	20.55
	ಒಟ್ಟು	**481.59**

ಟಿಪ್ಪಣಿ: ಷೇರು ಹಂಚಿಕೆಗೆ ಬಾಕಿ ಇರುವ ಮೊತ್ತ ರೂ.481.59 ಕೋಟಿಗಳು.

ಟಿಪ್ಪಣಿ 4: ಮೀಸಲು ಮತ್ತು ಅಧಿಕ್ಯ

ಕ್ರಮ ಸಂಖ್ಯೆ	ವಿವರಗಳು	ಲೆಕ್ಕ ಶೀರ್ಷಿಕೆ	31.03.2021	31.03.2020
			ರೂ.	ರೂ.
4-1	**ಸಾಮಗ್ರಿ ಬೆಲೆಯ ವ್ಯತ್ಯಾಸಕ್ಕೆ ಮೀಸಲು**			
	ಆರಂಭದ ಶಿಲ್ಕು	56.610	3,52,39,796	43,74,09,558
	ಸೇರಿಸು : ಪ್ರಸಕ್ತ ವರ್ಷದ ವರ್ಗಾವಣೆ		19,71,218	(40,21,69,762)
	ಅಂತಿಮ ಶಿಲ್ಕು		**3,72,11,014**	**3,52,39,796**
4-2	**ನೆಟವರ್ತ ಪ್ರಸ್ತಾಪ ಹೊಂದಾಣಿಕೆ– ಮೀಸಲು**			
	ಆರಂಭದ ಶಿಲ್ಕು	52.307, 52.308	47,60,89,974	(11,54,30,724)
	ಸೇರಿಸು : ಸೇರಿಸು/ವರ್ಷದಲ್ಲಿಯ ವರ್ಗಾವಣೆ		(21,688)	59,15,20,698
	ಅಂತಿಮ ಶಿಲ್ಕು		47,60,68,286	47,60,89,974
4-3	**ಲಾಭ ಮತ್ತು ನಷ್ಟ ವಿವರಣೆ ಪಟ್ಟಿಯಲ್ಲಿ ಆಧಿಕ್ಯ / ಕೊರತೆ**			
	ಆರಂಭದ ಶಿಲ್ಕು	58.200	(26,37,97,98,167)	(19,55,76,69,153)
	ಸೇರಿಸು : ವರ್ಷದ ಲಾಭ / (ನಷ್ಟ)		(24,90,26,00,214)	(6,82,21,29,014)
	ಅಂತಿಮ ಶಿಲ್ಕು		**(51,28,23,98,381)**	**(26,37,97,98,167)**
	ಒಟ್ಟು		**(50,76,91,19,081)**	**(25,86,84,68,397)**

ಟಿಪ್ಪಣಿ :

1) ಕವಿಪ್ರನಿನಿ ಪುನರ್ ವಿಂಗಡನೆಯ ಪೂರ್ವ ಅವಧಿಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದಿಂದ ಅನುಮೋದನೆಗೆ ಬಾಕಿ ಇರುವ ಕೆಲವೊಂದು ವ್ಯವಹಾರಗಳನ್ನು ನೆಟವರ್ತ ಪ್ರಸ್ತಾಪ ಹೊಂದಾಣಿಕೆಯೆಂದು ಕಂಪನಿಯು ರೂ.47.61 ಕೋಟಿ ಲೆಕ್ಕೀಕರಿಸಿದೆ. ಸುಮಾರು ರೂ. (11.54) ಕೋಟಿಯಷ್ಟು ನೆಟವರ್ತ ಪ್ರಸ್ತಾಪ ಹೊಂದಾಣಿಕೆಯಡಿಯಲ್ಲಿ ಲೆಕ್ಕೀಕರಿಸಿದೆ.

2) ವಸ್ತು ವೆಚ್ಚ ವ್ಯತ್ಯಾಸಕ್ಕಾಗಿ ಮೀಸಲು ಪ್ರಮಾಣಿತ ದರ ಮತ್ತು ವಸ್ತುಗಳ ಖರೀದಿ ದರಗಳ ನಡುವಿನ ವ್ಯತ್ಯಾಸವನ್ನು ಪ್ರತಿನಿಧಿಸುತ್ತದೆ.

ಟಿಪ್ಪಣಿ – 5 : ಧೀರ್ಘಾವಧಿ ಸಾಲಗಳು

ಕ್ರಮ ಸಂಖ್ಯೆ	ವಿವರಗಳು	ಲೆಕ್ಕ ಶೀರ್ಷಿಕೆ	31.03.2021	31.03.2020
			ರೂ.	ರೂ.
5-1	ಎ) ಅವಧಿಯ ಸಾಲಗಳು (ಟಿಪ್ಪಣಿ 1 & 2 ನೋಡಿ)			
	ಬ್ಯಾಂಕಗಳಿಂದ			
	ಭದ್ರತಾ	53.3, 53.9	27,43,68,67,286	93,56,92,756
	ಭದ್ರತಾರಹಿತ	53.3, 53.9	-	-
			27,43,68,67,286	**93,56,92,756**
	ಇತರೆ ಪಕ್ಷಗಳಿಂದ			
	ಭದ್ರತಾ	53.3, 53.9	23,72,39,21,270	26,37,88,36,893
	ಭದ್ರತಾರಹಿತ	53.3, 53.9	19,00,93,06,558	19,01,30,06,558
			42,73,32,27,828	**45,39,18,43,451**
	ಒಟ್ಟು		**70,17,00,95,114**	**46,32,75,36,207**

ಟಿಪ್ಪಣಿ: (1) ಸುರಕ್ಷಿತ ಇತರೆ ದೀರ್ಘಾವಧಿ ಸಾಲಗಳಿಗೆ ಒದಗಿಸಲಾದ ಭದ್ರತಾ ಹಾಗೂ ಮರುಪಾವತಿಗೆ ಸಂಬಂಧಿಸಿದಂತೆ ವಿವರಗಳು

ಕ್ರಮ ಸಂಖ್ಯೆ	ವಿವರಗಳು	31.03.2021		31.03.2020	
		ಭದ್ರತಾ	ಭದ್ರತಾ ರಹಿತ	ಭದ್ರತಾ	ಭದ್ರತಾ ರಹಿತ
		ರೂ.	ರೂ.	ರೂ.	ರೂ.
	ಬ್ಯಾಂಕಗಳಿಂದ ಅವಧಿ ಸಾಲಗಳು– ಸುರಕ್ಷಿತ.				
5 -1-1	ಕೆನರಾ ಬ್ಯಾಂಕನಿಂದ ಸಾಲ,ಹುಬ್ಬಳ್ಳಿ. (53.981)	68,69,57,886	–	93,56,92,756	–
	ಸರ್ಕಾರಿ ಖಾತರಿ ಹೊಂದಿರುವ ಕೋವಿಡ್–19 ಸಾಲಗಳು				
5 -1-2	ಬ್ಯಾಂಕ್ ಆಫ ಇಂಡಿಯಾದಿಂದ ಸಾಲ. (53.988)	9,99,99,63,290	–	–	–
5 -1-3	ಪಂಜಾಬ್ ನ್ಯಾಷನಲ್ ಬ್ಯಾಂಕನಿಂದ ಸಾಲ. (53.989)	6,74,99,46,110			
5 -1-4	ಸ್ಟೇಟ್ ಬ್ಯಾಂಕ್ ಆಫ ಇಂಡಿಯಾದಿಂದ ಸಾಲ. (53.990)	5,00,00,00,000			
5 -1-5	ಕೆನರಾ ಬ್ಯಾಂಕನಿಂದ ಸಾಲ. (53.991)	5,00,00,00,000	–	–	–
	ಒಟ್ಟು ಮೊತ್ತ : ಬ್ಯಾಂಕಗಳಿಂದ ಸಾಲ	**27,43,68,67,286**	–	**93,56,92,756**	–
	ಇತರೆ ಪಕ್ಷಗಳಿಂದ ಅವಧಿ ಸಾಲ:				
5 -1-6	ಪವರ ಫೈನಾನ್ಸ ಕಾರ್ಪೋರೇಷನ್ ಲಿಮಿಟೆಡ್ ನಿಂದ ಸಾಲ– ಆರ್. ಎ.ಪಿ.ಡಿ.ಆರ್.ಪಿ ಯೋಜನೆ. (53.961)	50,68,49,365	–	51,75,67,724	–
5 -1-7	ಗ್ರಾಮೀಣ ವಿದ್ಯುದ್ಧೀಕರಣ ನಿಗಮದಿಂದ ಪಡೆದ ಸಾಲಗಳು : ಕವಿಪ್ರನಿನಿಯಿಂದ ಹುವಿಸಕಂಗಾಗಿ ನಡೆಯುತ್ತೀರುವ ಎಸ್.ಪಿ.ಎ. ಯೋಜನೆಯ ಕೆಲಸಗಳಿಗಾಗಿ (53.314)	18,14,65,50,130	–	20,14,93,42,245	–
5 -1-8	ಪಿ.ಎಂ.ಜಿ.ವೈ ಯೋಜನೆಯ ಕಾಮಗಾರಿಗಳಿಗಾಗಿ ಕವಿಪ್ರನಿನಿ ಮೂಲಕ ಸರಕಾರವು ಬಿಡುಗಡೆ ಮಾಡಿದ ಸಾಲ (53.307)	–	93,06,558	–	1,30,06,558
5 -1-9	ಎ.ಪಿ.ಡಿ.ಆರ್.ಪಿ : ಕವಿಪ್ರನಿನಿಗೆ ಕರ್ನಾಟಕ ಸರ್ಕಾರದ ಸಾಲ (53.350)	10,09,21,366		15,53,21,366	
5 -1-10	ಪವರ ಫೈನಾನ್ಸ ಕಾರ್ಪೋರೇಷನ್ ಲಿಮಿಟೆಡ್ ನಿಂದ ಪಡೆದ ಸಾಲ– ಕ.ವಿ.ಪ್ರ.ನಿ.ನಿ (53.960)	3,25,41,57,452	–	3,88,35,40,902	–
5 -1-11	ವಿದ್ಯುತ್ ಖರೀದಿ ಮತ್ತು ಪ್ರಸರಣಾ ವೆಚ್ಚಗಳಿಗೆ GOK ನಿಂದ ಪಡೆದ ಸಾಲ (53.984)	–	19,00,00,00,000	–	19,00,00,00,000
5 -1-12	ಗ್ರಾಮೀಣ ವಿದ್ಯುದ್ಧೀಕರಣ ನಿಗಮದಿಂದ ಪಡೆದ ಸಾಲ: DDUGJY scheme (53.986)	1,36,42,97,762	–	1,32,84,12,143	–
5 -1-13	ಪವರ ಫೈನಾನ್ಸ ಕಾರ್ಪೋರೇಷನ್ ಲಿಮಿಟೆಡ್ ನಿಂದ ಪಡೆದ ಸಾಲ– IPDS scheme (53.987)	35,11,45,195	–	34,46,52,513	–
	ಒಟ್ಟು	**23,72,39,21,270**	**19,00,93,06,558**	**26,37,88,36,893**	**19,01,30,06,558**

(ii) ನಿರ್ದೇಶಕರು ಅಥವಾ ಇತರರು ಖಾತರಿ ಪಡಿಸಿರುವ ದೀರ್ಘಾವಧಿ ಸಾಲಗಳ ವಿವರಗಳು

ಕ್ರಮ ಸಂಖ್ಯೆ	ವಿವರಗಳು	ಲೆಕ್ಕ ಶೀರ್ಷಿಕೆ	31.03.2021	31.03.2020
5–2–1	ಸರ್ಕಾರದಿಂದ ರೂ.150 ಕೋಟಿಗಳ ಗ್ಯಾರಂಟಿಯನ್ನು ನೀಡಿ ಕೆನರಾ ಬ್ಯಾಂಕಿನಿಂದ ರೂ.200 ಕೋಟಿಯ ಅವಧಿ ಸಾಲವನ್ನು ಪಡೆಯಲಾಗಿದೆ	53.981	68,69,57,886	93,56,92,756
5–2–2	ಕೋವಿಡ್–19 ಸಲುವಾಗಿ ಸರ್ಕಾರಿ ಖಾತರಿ ನೀಡಿ ರೂ. 2675 ಕೋಟಿಗಳಷ್ಟು ವಿವಿಧ ಬ್ಯಾಂಕ್ ಗಳಿಂದ ಸಾಲವನ್ನು ಪಡೆಯಲಾಗಿದೆ.	53.988, 989, 990 & 991	26,74,99,09,400	–
5–2–3	ಎ.ಪಿ.ಡಿ.ಆರ್.ಪಿ : ಕವಿಪ್ರನಿನಿಗೆ ಕರ್ನಾಟಕ ಸರ್ಕಾರದ ಸಾಲ (53.350)	53.350	10,09,21,366	15,53,21,366
5–2–4	ವಿದ್ಯುತ್ ಖರೀದಿಗೆ GOK ನಿಂದ ಪಡೆದ ಸಾಲ (53.984)	53.984	19,00,00,00,000	19,00,00,00,000
	ಒಟ್ಟು		**46,53,77,88,652**	**20,09,10,14,122**

ಟಿಪ್ಪಣಿ:

1) ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 308 ಪಿ.ಎಸ್. ಆರ್. 2020, ಬೆಂಗಳೂರು ದಿನಾಂಕ 01.10.2020 ಮತ್ತು ದಿನಾಂಕ 09.12.2020ರನ್ವಯ ಕೋವಿಡ್–19 ಸಲುವಾಗಿ ಸರ್ಕಾರಿ ಖಾತರಿ ನೀಡಿ ರೂ. 2675 ಕೋಟಿಗಳಷ್ಟು ವಿವಿಧ ಬ್ಯಾಂಕ್ ಗಳಿಂದ ಸಾಲವನ್ನು ಪಡೆಯಲಾಗಿದೆ.

2) ವಿದ್ಯುತ್ ಖರೀದಿ ವೆಚ್ಚವನ್ನು ಭರಿಸಲು ಸರ್ಕಾರದಿಂದ ರೂ. 1900 ಕೋಟಿಗಳ ಬಡ್ಡಿ ರಹಿತ ಸಾಲವನ್ನು ಪಡೆದಿದ್ದು, ಈ ಮೊತ್ತದಲ್ಲಿ ರೂ. 1500 ಕೋಟಿಗಳಿಗೆ 3 ವರ್ಷಗಳು ಹಾಗೂ ರೂ.400 ಕೋಟಿಗಳಿಗೆ 2 ವರ್ಷಗಳ ಅವಧಿಯ Moratorium ಹೊಂದಿದೆ.

(iii) ಈ ಕೆಳಗಿನವುಗಳಿಗೆ ಕಂಪನಿಯು ಸಾಲ ಮರುಪಾವತಿ ಹಾಗೂ ಬಡ್ಡಿ ಪಾವತಿಸುವಲ್ಲಿ ಕರ್ತವ್ಯಲೋಪಕ್ಕೆ ಹೊಂದಿದೆ.

